ಶುಕ್ರವಾರ, ಫೆಬ್ರುವರಿ 11, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 42 | ಪುಟ 14

● www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಸಿನಿಮಾ ಪುರವಣಿ

ಸರಳ, ಸಹಜವಾಗಿ ತೆರೆ ಮೇಲೆ ಕಾಣುತ್ತಿದ್ದ ಅಚ್ಯುತ್ 'ಫೋರ್ ವಾಲ್ಸ್...' ಮಧ್ಯೆ ಕಲರ್‌ಫುಲ್ ಆಗಿ ಕಾಣಿಸಿಕೊಂಡಿದ್ದಾರೆ

ಆಳ-ಅಗಲ ಡಿಜಿಟಲ್ ರೂಪಾಯಿಯತ್ತ ಚಿತ್ತ

ಲಖೀಂಪುರ ಖೇರಿ ಹಿಂಸಾಚಾರ ಪ್ರಕರಣ: ಕೇಂದ್ರ ಸಚಿವರ ಪುತ್ರನಿಗೆ ಜಾಮೀನು 10

ಕೋವಿಡ್: ಸೋಂಕು ದೃಢ ಪ್ರಮಾಣ ಇಳಿಕೆ 10

ಸೆನ್ಸೆಕ್ಸ್	ನಿಫ್ಟಿ	₹/$
58,926 ▲	17,605 ▲	74.94 ▼

ವಿದೇಶಗಳಿಂದ ಬರುವವರಿಗೆ ಹೊಸ ಮಾರ್ಗಸೂಚಿ

ನವದೆಹಲಿ (ಪಿಟಿಐ): ವಿದೇಶಗಳಿಂದ ಭಾರತಕ್ಕೆ ಆಗಮಿಸುವವರಿಗೆ ಕೇಂದ್ರ ಆರೋಗ್ಯ ಸಚಿವಾಲಯವು ಗುರುವಾರ ಹೊಸ ಮಾರ್ಗಸೂಚಿಗಳನ್ನು ಪ್ರಕಟಿಸಿದೆ. ಈ ಹಿಂದೆ ಕಡ್ಡಾಯಗೊಳಿಸಿದ್ದ ಏಳು ದಿನಗಳ 'ಹೋಮ್ ಕ್ವಾರಂಟೈನ್' ಅನ್ನು ರದ್ದುಗೊಳಿಸಲಾಗಿದೆ. ಬದಲಿಗೆ, 14 ದಿನಗಳ ಸ್ವಯಂ ನಿಗಾ ವಹಿಸುವಂತೆ ಸೂಚನೆ ನೀಡಲಾಗಿದೆ. 10

ಒಳ ಪುಟಗಳು

ಮೋದಿಯ ಸಿಬಿಐಗೆ ಹೆದರುವುದಿಲ್ಲ: ರಾಹುಲ್ 9

'ಶ್ರೀರಾಮನ ಫ್ಯಾಕ್ಟರಿಯಿಂದ ಕೇಸರಿ ಶಾಲು ತರಿಸಿದ್ದೇವೆ' 8

ಚಿನಕುರಳಿ

ಪ್ರಕಾಶ್ ಶೆಟ್ಟಿ

ಫೆ.14ರಿಂದ 9–10ನೇ ತರಗತಿ ಶುರು ● ಪರಿಸ್ಥಿತಿ ಆಧರಿಸಿ ಮುಂದಿನ ತೀರ್ಮಾನ–ಬೊಮ್ಮಾಯಿ

ಪಿಯು, ಪದವಿ ಇನ್ನೂ ಅನಿಶ್ಚಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಿಜಾಬ್ ಮತ್ತು ಕೇಸರಿ ಶಾಲು ವಿವಾದದ ಬಗ್ಗೆ ಹೈಕೋರ್ಟ್ ಮಧ್ಯಂತರ ಮೌಖಿಕ ಆದೇಶ ಹೊರಬಿದ್ದ ಬೆನ್ನಲ್ಲೇ 9 ಮತ್ತು 10ನೇ ತರಗತಿಗಳನ್ನು ಇದೇ ಸೋಮವಾರದಿಂದ (ಫೆ.14) ಆರಂಭಿಸಲು ರಾಜ್ಯ ಸರ್ಕಾರ ತೀರ್ಮಾನಿಸಿದೆ. ಆದರೆ, ಪಿಯುಸಿ ಮತ್ತು ಪದವಿ ತರಗತಿಗಳಿಗೆ ರಜೆ ಮುಂದುವರಿಯಲಿದೆ.

ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ಪೂರ್ಣಪೀಠವು ಮಧ್ಯಂತರ ಮೌಖಿಕ ಆದೇಶ ನೀಡಿತು. ಈ ಬೆನ್ನಲ್ಲೇ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಗೃಹ ಸಚಿವ ಆರಗ ಜ್ಞಾನೇಂದ್ರ, ಶಿಕ್ಷಣ ಸಚಿವರಾದ ಸಿ.ಎನ್.ಅಶ್ವತ್ಥನಾರಾಯಣ, ಬಿ.ಸಿ. ನಾಗೇಶ್ ಹಾಗೂ ಹಿರಿಯ ಅಧಿಕಾರಿಗಳ ತುರ್ತುಸಭೆ ನಡೆಸಿ ಈ ನಿರ್ಧಾರ ತೆಗೆದುಕೊಂಡರು.

ಸಭೆಯ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಬೊಮ್ಮಾಯಿ, 'ಮೊದಲ ಹಂತದಲ್ಲಿ ಪ್ರೌಢಶಾಲೆಗಳ ತರಗತಿಗಳನ್ನು ಆರಂಭಿಸಲಾಗುತ್ತದೆ. ಎರಡನೇ ಹಂತದಲ್ಲಿ ಪದವಿಪೂರ್ವ ಕಾಲೇಜು, ಪದವಿ ಹಾಗೂ ಸ್ನಾತಕೋತ್ತರ ತರಗತಿಗಳನ್ನು ಆರಂಭಿಸಲಾಗುವುದು. ಆದರೆ, ದಿನಾಂಕವನ್ನು ಇನ್ನೂ ತೀರ್ಮಾನ ಮಾಡಿಲ್ಲ. ಸೂಕ್ತ ಸಮಯದಲ್ಲಿ ತಿಳಿಸುತ್ತೇವೆ' ಎಂದರು.

'ಪೂರ್ಣ ಪೀಠದ ಮುಂದೆ ಪ್ರತಿ ದಿನ ವಿಚಾರಣೆ ನಡೆಯಲಿದೆ. ಅಲ್ಲಿಯವರೆಗೂ ಎಲ್ಲರೂ ಶಾಂತಿಯನ್ನು ಕಾಪಾಡಬೇಕು ಎಂದು ಮುಖ್ಯ ನ್ಯಾಯಮೂರ್ತಿಯವರು ಹೇಳಿದ್ದಾರೆ. ಅಂತಿಮ ತೀರ್ಪು ಹೊರಬೀಳುವವರೆಗೆ ವಿದ್ಯಾರ್ಥಿಗಳು ಯಾವುದೇ ಧಾರ್ಮಿಕ ಸೂಚಕ ಉಡುಪುಗಳನ್ನು ಹಾಕಿಕೊಳ್ಳಬಾರದು. ತಕ್ಷಣವೇ ತರಗತಿಗಳನ್ನು ಆರಂಭಿಸಬೇಕು. ಶಾಂತಿ–ಸುವ್ಯವಸ್ಥೆ ಕಾಪಾಡಬೇಕು ಎಂದೂ ಹೇಳಿದ್ದಾರೆ. ಅದೇ ಪ್ರಕಾರ ಶಾಲಾ–ಕಾಲೇಜುಗಳಲ್ಲಿ ಶಾಂತಿ ನೆಲೆಸಲು ಕ್ರಮ ತೆಗೆದುಕೊಳ್ಳಲಾಗುವುದು. ಭೇದ ಭಾವ ಇಲ್ಲದೇ ಎಲ್ಲ ವಿದ್ಯಾರ್ಥಿಗಳು ಒಗ್ಗಟ್ಟಿನಿಂದ ಶಾಲಾ–ಕಾಲೇಜುಗಳಿಗೆ ಬರಬೇಕು' ಎಂದು ಬೊಮ್ಮಾಯಿ ಮನವಿ ಮಾಡಿದರು.



ಶಾಲಾ–ಕಾಲೇಜುಗಳಲ್ಲಿ ವಸ್ತ್ರ ಸಂಹಿತೆಗೆ ಸಂಬಂಧಿಸಿದಂತೆ ಯಾರೊಬ್ಬರೂ ಶಾಂತಿ ಕದಡುವ ಮಾತುಗಳನ್ನಾಡದೇ ಸ್ವಯಂ ನಿಯಂತ್ರಣ ಹಾಕಿಕೊಳ್ಳೋಣ. ನ್ಯಾಯಾಲಯದ ಆದೇಶ ಪಾಲಿಸೋಣ

ಬಸವರಾಜ ಬೊಮ್ಮಾಯಿ, ಮುಖ್ಯಮಂತ್ರಿ

ವಿಡಿಯೊ ಸಂವಾದ: 'ಎಲ್ಲ ಜಿಲ್ಲೆಗಳಲ್ಲಿ ಶಾಂತಿ ಸುವ್ಯವಸ್ಥೆ ಕಾಪಾಡುವ ವಿಷಯವಾಗಿ ಶುಕ್ರವಾರ ಎಲ್ಲ ಸಚಿವರು, ಜಿಲ್ಲಾಧಿಕಾರಿಗಳು, ಎಸ್‌ಪಿಗಳು, ಜಿಲ್ಲಾ ಪಂಚಾಯ್ತಿಗಳ ಸಿಇಒಗಳು ಜತೆ ವಿಡಿಯೊ ಸಂವಾದ ನಡೆಸಲಾಗುವುದು. ಜಿಲ್ಲೆಗಳಲ್ಲಿನ ವಾಸ್ತವಿಕ ಸ್ಥಿತಿಯನ್ನು ಪರಿಶೀಲಿಸಿ ಸೂಕ್ತ ನಿರ್ದೇಶನ ನೀಡಲಾಗುವುದು' ಎಂದು ಅವರು ಹೇಳಿದರು.

'ಅಲ್ಲದೇ, ಎಲ್ಲ ಎಸ್‌ಡಿಎಂಸಿಗಳು, ಜಿಲ್ಲಾಧಿಕಾರಿಗಳು, ಎಸ್‌ಪಿಗಳು, ಡಿಡಿಪಿಐಗಳು, ಪಾಲಕರ ಜತೆ ನಿರಂತರ ಸಂಪರ್ಕದಲ್ಲಿರುತ್ತೇವೆ. ಆಯಾ ಸಂದರ್ಭಕ್ಕೆ ತಕ್ಕಂತೆ ಸೂಕ್ತ ತೀರ್ಮಾನಗಳನ್ನು ತೆಗೆದುಕೊಳ್ಳಲಾಗುವುದು' ಎಂದು ಬೊಮ್ಮಾಯಿ ತಿಳಿಸಿದರು.

'ಕಳೆದ ಎರಡು ದಿನಗಳಿಂದ ಮಕ್ಕಳಲ್ಲಿ ಗೊಂದಲ ಕಡಿಮೆ ಆಗಿದೆ. ಯಾವುದೇ ಅಹಿತಕರ ಘಟನೆಗಳೂ ನಡೆದಿಲ್ಲ. ಹೊರಗಿನಿಂದ ಪ್ರಚೋದನಾತ್ಮಕ ಹೇಳಿಕೆಗಳು ಬರುತ್ತಿವೆ. ಅವರೂ ಕೂಡ ಶಾಂತವಾಗಿರಬೇಕು. ಟಿ.ವಿ ಮತ್ತಿತ್ತರ ಕಡೆಗಳಲ್ಲಿ ಬರುತ್ತಿರುವ ದೃಶ್ಯಾವಳಿಗಳು ಹಳೆಯವು. ವಿದ್ಯಾರ್ಥಿಗಳು ಎರಡು ದಿನಗಳಿಂದ ಸಂಯಮದಿಂದ ಇದ್ದಾರೆ. ಅವರಿಗೆ ಪ್ರೀತಿಯಿಂದ ಧನ್ಯವಾದಗಳನ್ನು ಹೇಳುತ್ತೇನೆ' ಎಂದರು.

ಇನ್ನಷ್ಟು ಸುದ್ದಿಗಳು 8

14ಕ್ಕೆ ವಿಚಾರಣೆ ಮುಂದೂಡಿಕೆ

ಬೆಂಗಳೂರು: ಹಿಜಾಬ್‌ಗೆ ಸಂಬಂಧಿಸಿದಂತೆ ದಾಖಲಿಸಲಾಗಿರುವ ರಿಟ್ ಅರ್ಜಿಗಳ ವಿಚಾರಣೆಯನ್ನು ಕರ್ನಾಟಕ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ಪೂರ್ಣಪೀಠ ಗುರುವಾರ ಆರಂಭಿಸಿತು.

ಋತುರಾಜ್ ಅವಸ್ಥಿ, ನ್ಯಾಯಮೂರ್ತಿಗಳಾದ ಕೃಷ್ಣ ಎಸ್.ದೀಕ್ಷಿತ್ ಹಾಗೂ ಖಾಜಿ ಜೈಬುನ್ನೀಸಾ ಮೊಹಿಯುದ್ದೀನ್ ಅವರನ್ನು ಒಳಗೊಂಡ ಮೂವರು ನ್ಯಾಯಮೂರ್ತಿಗಳ ಸಾಂವಿಧಾನಿಕ ಪೂರ್ಣಪೀಠ ಮಧ್ಯಾಹ್ನ 2.40ರಿಂದ 4.45ರವರೆಗೆ ವಿಚಾರಣೆ ನಡೆಸಿತು.

ಅರ್ಜಿದಾರರ ಪರ ಹಿರಿಯ ವಕೀಲ ದೇವದತ್ತ ಕಾಮತ್ ಹಾಗೂ ಸಂಜಯ ಹೆಗ್ಡೆ ಸುದೀರ್ಘ ವಾದ ಮಂಡಿಸಿ, 'ರಾಜ್ಯ ಸರ್ಕಾರ ಇದೇ 5ರಂದು ಹೊರಡಿಸಿರುವ ಆದೇಶದಿಂದಾಗಿ ರಾಜ್ಯದಾದ್ಯಂತ ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ಬೋಧನೆ ಸ್ಥಗಿತಗೊಂಡಿದೆ. ಸರ್ಕಾರದ ಆದೇಶ ಅರ್ಜಿದಾರರ ಮೂಲಭೂತ ಹಕ್ಕಿನ ಉಲ್ಲಂಘನೆಯಾಗಿದೆ' ಎಂದು ವಿವರಿಸಿದರು. ನ್ಯಾಯಪೀಠವು ವಿಚಾರಣೆಯನ್ನು ಇದೇ 14ಕ್ಕೆ ಮುಂದೂಡಿದೆ.

ಮಾಧ್ಯಮಗಳಿಗೆ ವಿನಂತಿ: 'ಈ ಪ್ರಕರಣದಲ್ಲಿ ಕೋರ್ಟ್ ಕಲಾಪದ ಯಾವುದೇ ಮೌಖಿಕ ಅಭಿಪ್ರಾಯಗಳನ್ನು ದಾಖಲಿಸಬಾರದು. ಆದೇಶದ ಪ್ರತಿ ಕೈಸೇರಿದ ನಂತರವೇ ಬರೆಯಿರಿ' ಎಂದು ಪತ್ರಿಕೆ, ಟಿ.ವಿ ಹಾಗೂ ಸಾಮಾಜಿಕ ಮಾಧ್ಯಮಗಳಿಗೆ ವಿನಂತಿ ಮಾಡಿದ ನ್ಯಾಯಪೀಠ, 'ಪ್ರಕರಣದ ವಿಚಾರಣೆಯನ್ನು ಆದಷ್ಟು ಶೀಘ್ರವೇ ಮುಗಿಸಿ ತೀರ್ಪು ನೀಡಲಾಗುವುದು' ಎಂದು ತಿಳಿಸಿದೆ.

ತುರ್ತು ವಿಚಾರಣೆಗೆ 'ಸುಪ್ರೀಂ' ನಕಾರ

ನವದೆಹಲಿ (ಪಿಟಿಐ): ಹಿಜಾಬ್ ವಿವಾದಕ್ಕೆ ಸಂಬಂಧಿಸಿದಂತೆ ಕರ್ನಾಟಕ ಹೈಕೋರ್ಟ್‌ನಲ್ಲಿ ಸಲ್ಲಿಕೆಯಾಗಿರುವ ಅರ್ಜಿಗಳನ್ನು ಸುಪ್ರೀಂಕೋರ್ಟ್‌ಗೆ ವರ್ಗಾಯಿಸುವಂತೆ ಕೋರಿ ಸಲ್ಲಿಕೆಯಾಗಿರುವ ಅರ್ಜಿಯ ತುರ್ತು ವಿಚಾರಣೆಗೆ ನಿರಾಕರಿಸಿರುವ ಸುಪ್ರೀಂಕೋರ್ಟ್, ಈ ಕುರಿತ ಅರ್ಜಿಯನ್ನು ವಿಚಾರಣೆಗೆ ತೆಗೆದುಕೊಳ್ಳುವ ಪಟ್ಟಿಯಲ್ಲಿ ಸೇರಿಸುವುದಾಗಿ ಗುರುವಾರ ತಿಳಿಸಿದೆ.

ಮುಖ್ಯ ನ್ಯಾಯಮೂರ್ತಿ ಎನ್.ವಿ.ರಮಣ ಅವರ ನೇತೃತ್ವದ ಪೀಠವು, ಈ ಕುರಿತು ಕರ್ನಾಟಕ ಹೈಕೋರ್ಟ್‌ನ ವಿಸ್ತೃತ ಪೀಠ ವಿಚಾರಣೆ ಕೈಗೆತ್ತಿಕೊಂಡಿದೆ. ಈ ಹಂತದಲ್ಲಿ ಮಧ್ಯಪ್ರವೇಶ ಏಕೆ ಮಾಡಬೇಕು ಎಂದು ಹೇಳಿತು.

ಸುಪ್ರೀಂಕೋರ್ಟ್‌ನ 9 ನ್ಯಾಯಮೂರ್ತಿಗಳ ಪೀಠದ ಮುಂದೆ ಈ ಕುರಿತ ಎಲ್ಲ ಅರ್ಜಿಗಳನ್ನು ವರ್ಗಾಯಿಸುವಂತೆ ಅರ್ಜಿಯಲ್ಲಿ ಕೋರಿರುವ ಹಿರಿಯ ವಕೀಲ ಕಪಿಲ್ ಸಿಬಲ್ ಅವರು, 'ಈಗಾಗಲೇ ಕರ್ನಾಟಕದಲ್ಲಿ ಶಾಲೆ, ಕಾಲೇಜುಗಳನ್ನು ಮುಚ್ಚಲಾಗಿದೆ. ವಿದ್ಯಾರ್ಥಿನಿಯರ ಮೇಲೆ ಕಲ್ಲೆಸೆಯಲಾಗುತ್ತಿದೆ. ಇದು ದೇಶವ್ಯಾಪಿ ವಿಸ್ತರಣೆಯಾಗುತ್ತಿದೆ' ಎಂದು ಕಳವಳ ವ್ಯಕ್ತಪಡಿಸಿದರು.

ನ್ಯಾಯಮೂರ್ತಿಗಳಾದ ಎ.ಎಸ್.ಬೋಪಣ್ಣ, ಹಿಮಾ ಕೊಹ್ಲಿ ಅವರನ್ನು ಒಳಗೊಂಡಿರುವ ಪೀಠ, ಹೈಕೋರ್ಟ್‌ನ ಪೂರ್ಣಪೀಠ ವಿಚಾರಣೆ ನಡೆಸಲಿ, ಬಳಿಕವೂ ಅಗತ್ಯ ಬಿದ್ದರೆ ಮುಂದೆ ನೋಡೋಣ ಎಂದು ಹೇಳಿತು.

ಮತ್ತೊಂದು ಅರ್ಜಿ: ಹಿಜಾಬ್‌ಗೆ ವಿಷಯದಲ್ಲಿ ಎದುರಾಗಿರುವ ಮೂಲಭೂತ ಹಕ್ಕುಗಳ ಉಲ್ಲಂಘನೆ ತಡೆಯುವಂತ ಕೋರಿ ರಾಷ್ಟ್ರೀಯ ಯುವ ಕಾಂಗ್ರೆಸ್ ಅಧ್ಯಕ್ಷ ಬಿ.ವಿ. ಶ್ರೀನಿವಾಸ್ ಮತ್ತು ಪತ್ರಿಕೋದ್ಯಮದ ವಿದ್ಯಾರ್ಥಿಯೊಬ್ಬರು ಸುಪ್ರೀಂಕೋರ್ಟ್‌ಗೆ ಗುರುವಾರ ಅರ್ಜಿ ಸಲ್ಲಿಸಿದ್ದಾರೆ.

ಭಾರತದ ಅಧಿಕಾರಿಗಳಿಗೆ ಪಾಕ್ ಸಮನ್

ಇಸ್ಲಾಮಾಬಾದ್ (ಪಿಟಿಐ): ಕರ್ನಾಟಕದಲ್ಲಿ ತಲೆದೋರಿರುವ ಹಿಜಾಬ್ ವಿವಾದಕ್ಕೆ ಸಂಬಂಧಿಸಿದಂತೆ ಕಳವಳ ವ್ಯಕ್ತಪಡಿಸಿರುವ ಪಾಕಿಸ್ತಾನ, ಭಾರತದ ರಾಜತಾಂತ್ರಿಕ ಅಧಿಕಾರಿಗಳನ್ನು ವಿದೇಶಾಂಗ ಸಚಿವಾಲಯಕ್ಕೆ ಕರೆಸಿಕೊಂಡು ತನ್ನ ಆತಂಕ ವ್ಯಕ್ತಪಡಿಸಿದೆ. ಭಾರತದಲ್ಲಿ ಮುಸ್ಲಿಮರ ವಿರುದ್ಧ ಧಾರ್ಮಿಕ ಅಸಹಿಷ್ಣುತೆ, ತಾರತಮ್ಯ ಹಾಗೂ ನಕಾರಾತ್ಮಕ ನಿಲುವುಗಳನ್ನು ತೆಗೆದುಕೊಳ್ಳಲಾಗುತ್ತಿದೆ. ಈ ಬಗ್ಗೆ ಪಾಕಿಸ್ತಾನ ಗಂಭೀರವಾಗಿ ಕಳವಳ ವ್ಯಕ್ತಪಡಿಸುತ್ತದೆ ಎಂದು ಭಾರತದ ರಾಜತಾಂತ್ರಿಕ ಅಧಿಕಾರಿಗಳಿಗೆ ತಿಳಿಸಿರುವುದಾಗಿ ಅಲ್ಲಿನ ವಿದೇಶಾಂಗ ಸಚಿವಾಲಯ ಪ್ರಕಟಿಸಿದೆ.

ಭಾರತ ಸರ್ಕಾರವು ಮುಸ್ಲಿಂ ಮಹಿಳೆಯರ ಸುರಕ್ಷತೆ, ಭದ್ರತೆ ಮತ್ತು ಯೋಗಕ್ಷೇಮವನ್ನು ಖಚಿತಪಡಿಸಲು, ಕರ್ನಾಟಕದಲ್ಲಿ ಮಹಿಳೆಯರಿಗೆ ಕಿರುಕುಳ ನೀಡುತ್ತಿರುವವರ ವಿರುದ್ಧ ಗಂಭೀರ ಮತ್ತು ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕು ಎಂದೂ ಒತ್ತಾಯಿಸಿದೆ. ಬುಧವಾರ ಟ್ವೀಟ್ ಮಾಡಿದ್ದ ಪಾಕಿಸ್ತಾನದ ವಿದೇಶಾಂಗ ಸಚಿವ ಶಾ ಮಹಮ್ಮೂದ್ ಖುರೇಷಿ, 'ಮುಸ್ಲಿಂ ಹೆಣ್ಣು ಮಕ್ಕಳನ್ನು ಶಿಕ್ಷಣದಿಂದ ವಂಚಿತರನ್ನಾಗಿಸುವುದು ಮೂಲಭೂತ ಮಾನವ ಹಕ್ಕುಗಳ ಘೋರ ಉಲ್ಲಂಘನೆ' ಎಂದಿದ್ದರು.

ಡಿಜಿಟಲ್ ವೇದಿಕೆ ಮೂಲಕ ಸಾಲ: ನಿಯಮಾವಳಿ ಶೀಘ್ರ

ಮುಂಬೈ (ಪಿಟಿಐ): ಡಿಜಿಟಲ್ ವೇದಿಕೆಗಳ ಮೂಲಕ ಸಾಲ ನೀಡುವುದಕ್ಕೆ ಸಂಬಂಧಿಸಿದಂತೆ ನಿಯಮಾವಳಿಗಳನ್ನು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಶೀಘ್ರದಲ್ಲಿಯೇ ಪ್ರಕಟಿಸಲಿದೆ ಎಂದು ಆರ್‌ಬಿಐ ಡೆಪ್ಯುಟಿ ಗವರ್ನರ್ ಎಂ. ರಾಜೇಶ್ವರ ರಾವ್ ಗುರುವಾರ ತಿಳಿಸಿದರು.

ಆನ್‌ಲೈನ್ ವೇದಿಕೆಗಳು, ಸ್ಮಾರ್ಟ್‌ಫೋನ್ ಆ್ಯಪ್‌ಗಳು ಸೇರಿದಂತೆ ಡಿಜಿಟಲ್ ವೇದಿಕೆಗಳ ಮೂಲಕ ಸಾಲ ನೀಡುವುದಕ್ಕೆ ಸಂಬಂಧಿಸಿದಂತೆ ಆರ್‌ಬಿಐ ರಚಿಸಿದ್ದ ಕಾರ್ಯಕಾರಿ ಸಮಿತಿಯು 2021ರ ನವೆಂಬರ್‌ನಲ್ಲಿ ತನ್ನ ಶಿಫಾರಸುಗಳನ್ನು ಸಲ್ಲಿಸಿದೆ.

ಈ ಶಿಫಾರಸುಗಳ ಬಗ್ಗೆ ಸಾರ್ವಜನಿಕರು ಅಭಿಪ್ರಾಯ ತಿಳಿಸಬೇಕು ಎಂದು ಆರ್‌ಬಿಐ ಕೋರಿತ್ತು. 'ಸಾರ್ವಜನಿಕರಿಂದ ಅಭಿಪ್ರಾಯಗಳನ್ನು ಸ್ವೀಕರಿಸಲಾಗಿದ್ದು, ಅವನ್ನು ಆಧರಿಸಿ ಡಿಜಿಟಲ್ ವೇದಿಕೆಗಳ ಮೂಲಕ ಸಾಲ ನೀಡುವುದಕ್ಕೆ ಸಂಬಂಧಿಸಿದಂತೆ ನಿಯಮಾವಳಿಗಳನ್ನು ರೂಪಿಸುತ್ತೇವೆ. ಆ ಕೆಲಸ ಪ್ರಗತಿಯಲ್ಲಿ ಇದೆ. ನಿಯಮಗಳು ಶೀಘ್ರದಲ್ಲಿಯೇ ಬರಲಿವೆ' ಎಂದು ರಾವ್ ಅವರು ಆರ್‌ಬಿಐನ ಹಣಕಾಸು ನೀತಿ ಸಮಿತಿಯ ಸಭೆಯ ನಂತರ ಸುದ್ದಿಗಾರರಿಗೆ ತಿಳಿಸಿದರು.

ಡಿಜಿಟಲ್ ವೇದಿಕೆಗಳ ಮೂಲಕ ಸಾಲ ವಿತರಣೆ ಮಾಡುವ 600 ಅಕ್ರಮ ಆ್ಯಪ್‌ಗಳು ದೇಶದಲ್ಲಿ ಇವೆ. ಇವು 81 ಬೇರೆ ಬೇರೆ ಆ್ಯಪ್ ಸ್ಟೋರ್‌ಗಳಲ್ಲಿ ಲಭ್ಯವಿವೆ ಎಂದು ಆರ್‌ಬಿಐ ರಚಿಸಿದ್ದ ಕಾರ್ಯಕಾರಿ ಸಮಿತಿ ಹೇಳಿತ್ತು. ಆ್ಯಂಡ್ರಾಯ್ಡ್ ಕಾರ್ಯಾಚರಣೆ ವ್ಯವಸ್ಥೆ ಇರುವ ಸ್ಮಾರ್ಟ್‌ಫೋನ್ ಬಳಕೆ ಮಾಡುವವರಿಗೆ ದೇಶದಲ್ಲಿ ಇಂತಹ ಒಟ್ಟು 1,100 ಆ್ಯಪ್‌ಗಳು ಲಭ್ಯವಿವೆ ಎಂಬ ಮಾತು ಸಮಿತಿಯ ವರದಿಯಲ್ಲಿ ಇದೆ.

ಉತ್ತರ ಪ್ರದೇಶವು ಕೇರಳವಾದರೆ ಉತ್ತಮ: ಪಿಣರಾಯಿ ತಿರುಗೇಟು

ಲಖನೌ (ಪಿಟಿಐ): ಉತ್ತರ ಪ್ರದೇಶವು ಕಾಶ್ಮೀರ, ಕೇರಳ ಅಥವಾ ಪಶ್ಚಿಮ ಬಂಗಾಳದಂತೆ ಆಗುವುದು ಬೇಡದಿದ್ದರೆ ಬಿಜೆಪಿಗೆ ಮತ ಹಾಕಿ ಎಂದು ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಹೇಳಿರುವುದು ಬಿಜೆಪಿಯೇತರ ಪಕ್ಷಗಳ ತೀವ್ರ ಟೀಕೆಗೆ ಕಾರಣವಾಗಿದೆ.

ಉತ್ತರ ಪ್ರದೇಶದಲ್ಲಿ ಮೊದಲ ಹಂತದ ಮತದಾನಕ್ಕೆ ಮುನ್ನಾದಿನ ಆರು ನಿಮಿಷಗಳ ವಿಡಿಯೊವನ್ನು ಟ್ವಿಟರ್‌ನಲ್ಲಿ ಆದಿತ್ಯನಾಥ ಪ್ರಕಟಿಸಿದ್ದಾರೆ.

'ಎಚ್ಚರದಲ್ಲಿ ಇರಿ. ಈ ಬಾರಿ ನೀವು ಎಡವಿದರೆ ಐದು ವರ್ಷದ ಪ್ರಯತ್ನಗಳೆಲ್ಲವೂ ತೊಳೆದು ಹೋಗಲಿದೆ. ಉತ್ತರ ಪ್ರದೇಶವು ಕಾಶ್ಮೀರ, ಕೇರಳ ಅಥವಾ ಪಶ್ಚಿಮ ಬಂಗಾಳ ಆಗಲು ಹೆಚ್ಚು ಹೆಚ್ಚು ಸಮಯ ಬೇಕಿಲ್ಲ' ಎಂದು ವಿಡಿಯೊದಲ್ಲಿ ಅವರು ಹೇಳಿದ್ದಾರೆ.

ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್, ವಿಧಾನಸಭೆಯ ವಿರೋಧ ಪಕ್ಷದ ನಾಯಕ ವಿ.ಡಿ. ಸತೀಶನ್ ಮತ್ತು ಪಶ್ಚಿಮ ಬಂಗಾಳದ ಬಿಜೆಪಿಯೇತರ ಪಕ್ಷಗಳ ಮುಖಂಡರು ಯೋಗಿ ಹೇಳಿಕೆಯನ್ನು ಖಂಡಿಸಿದ್ದಾರೆ. 'ಆದಿತ್ಯನಾಥ ಅವರು ಭಯಪಟ್ಟಂತೆ ಉತ್ತರ ಪ್ರದೇಶವು ಕೇರಳವಾದರೆ, ರಾಜ್ಯಕ್ಕೆ ಉತ್ತಮ ಶಿಕ್ಷಣ, ಆರೋಗ್ಯ ಸೇವೆ, ಸಾಮಾಜಿಕ ಸೌಲಭ್ಯಗಳು, ಉತ್ತಮ ಗುಣಮಟ್ಟದ ಜೀವನ ದೊರೆಯಲಿದೆ' ಎಂದು ಪಿಣರಾಯಿ ವಿಜಯನ್ ಅವರು ಟ್ವೀಟ್ ಮಾಡಿದ್ದಾರೆ.



ಯೋಗಿ ಆದಿತ್ಯನಾಥ

ಪಿಣರಾಯಿ ವಿಜಯನ್

9ನೇ ಪುಟ ನೋಡಿ

ಸುಂದರಂ ಕ್ಲೇಟಾನ್ ಅಧ್ಯಕ್ಷರಾಗಿ ಗೋಪಾಲನ್



ಬೆಂಗಳೂರು: ವಾಹನ ಬಿಡಿಭಾಗ ತಯಾರಿಕೆ ಮತ್ತು ವಿತರಣಾ ಸಮೂಹ ಆಗಿರುವ ಸುಂದರಂ ಕ್ಲೇಟಾನ್ ಗೋಪಾಲನ್ ಲಿಮಿಟೆಡ್‌ನ ಆಡಳಿತ ಮಂಡಳಿಯ ಕಾರ್ಯನಿರ್ವಾಹಕೇತರ ಸ್ವತಂತ್ರ ನಿರ್ದೇಶಕ ಜಿ. ಗೋಪಾಲನ್ ಅವರನ್ನು ಮಂಡಳಿಯ ಅಧ್ಯಕ್ಷರನ್ನಾಗಿ ನೇಮಿಸಲಾಗಿದೆ.

ಈ ನೇಮಕವು ಏಪ್ರಿಲ್ 1ರಿಂದ ಜಾರಿಗೆ ಬರಲಿದೆ. ಗೋಪಾಲನ್ ಅವರು ಕೇಂದ್ರ ವಾಣಿಜ್ಯ ಮತ್ತು ಹಣಕಾಸು ಸಚಿವಾಲಯ ಅಲ್ಲದೆ, ತಯಾರಿಕೆ ಮತ್ತು ಸೇವಾ ವಲಯಗಳಲ್ಲಿ ಸುದೀರ್ಘ ಅವಧಿಗೆ ಸೇವೆ ಸಲ್ಲಿಸಿದ್ದು, ಆಡಳಿತದಲ್ಲಿ ಹೆಚ್ಚಿನ ಅನುಭವವನ್ನು ಹೊಂದಿದ್ದಾರೆ ಎಂದು ಕಂಪನಿಯು ತಿಳಿಸಿದೆ.

ಮಾಜಿ ಸಂಸದ ಅಜಯ್ ಚೌಟಾಲ ಬಿಡುಗಡೆ

ನವದೆಹಲಿ (ಪಿಟಿಐ): ಹತ್ತು ವರ್ಷಗಳ ಸೆರೆವಾಸ ಅವಧಿ ಪೂರ್ಣಗೊಂಡ ಹಿನ್ನೆಲೆಯಲ್ಲಿ ಮಾಜಿ ಸಂಸದ ಅಜಯ್ ಚೌಟಾಲ ಅವರನ್ನು ತಿಹಾರ್ ಜೈಲಿನಿಂದ ಗುರುವಾರ ಬಿಡುಗಡೆ ಮಾಡಲಾಯಿತು.

ಹರಿಯಾಣದಲ್ಲಿ ಶಿಕ್ಷಕರ ನೇಮಕಾತಿ ಅಕ್ರಮ ಪ್ರಕರಣದಲ್ಲಿ ಜನವರಿ 16, 2013ರಂದು ಜೈಲಿಗೆ ಕಳುಹಿಸಲಾಗಿತ್ತು. ತುರ್ತು ಪರೋಲ್ ಮೇಲೆ ಮೇ 14, 2021ರಿಂದ ಹೊರಗಿದ್ದರು. ಶಿಕ್ಷೆ ಪೂರ್ಣಗೊಂಡ ಕಾರಣ ಜೈಲಿಗೆ ಹಾಜರಾಗಿದ್ದು, ಬಿಡುಗಡೆ ಮಾಡಲಾಯಿತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕೆಂಪೇಗೌಡ ಪ್ರತಿಮೆ: ಕಾಮಗಾರಿಗೆ ವೇಗ

ಬೆಂಗಳೂರು: ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಬಳಿ ಕೆಂಪೇಗೌಡ ಪ್ರತಿಮೆ ನಿರ್ಮಾಣದ ಕಾಮಗಾರಿಗೆ ವೇಗ ನೀಡಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

‘ಕಾಮಗಾರಿ ವಿಳಂಬವಾಗಿರುವುದು ನನ್ನ ಗಮನಕ್ಕೆ ಬಂದಿದೆ. ಆದರೆ, ಎಲ್ಲರ ಗಮನ ಸೆಳೆಯುವ ರೀತಿಯ ಪ್ರತಿಮೆ ಸ್ಥಾಪಿಸಲಾಗುವುದು’ ಎಂದು ಅವರು ಗುರುವಾರ ನಾಡಪ್ರಭು ಕೆಂಪೇಗೌಡ ಪಾರಂಪರಿಕ ತಾಣ ಅಭಿವೃದ್ಧಿ ಹಮ್ಮಿಕೊಂಡಿದ್ದ ಲಾಂಛನ ಬಿಡುಗಡೆ ಕಾರ್ಯಕ್ರಮದ ಬಳಿಕ ಸುದ್ದಿಗಾರರಿಗೆ ಹೇಳಿದರು.

ಕೆಂಪೇಗೌಡ ಪ್ರತಿಮೆ ನಿರ್ಮಾಣಕ್ಕೆ ಅನುದಾನದ ಕೊರತೆ ಆಗಿಲ್ಲ. ಈ ಪ್ರತಿಮೆ ಅತ್ಯುತ್ತಮವಾಗಿ ಮೂಡಿ ಬರಬೇಕು. ದೇಶ– ವಿದೇಶಗಳಿಂದ ಬರುವ ಎಲ್ಲರೂ ಇದನ್ನು ವೀಕ್ಷಣೆ ಮಾಡಬೇಕು. ಬಿ.ಎಸ್. ಯಡಿಯೂರಪ್ಪ ಅವಧಿಯಲ್ಲಿ ಈ ಪ್ರತಿಮೆ ಸ್ಥಾಪನೆ ಘೋಷಣೆ ಮಾಡಿದ್ದರು ಎಂದರು.

ಧಾರ್ಮಿಕ ಸ್ಥಳಗಳ ಪ್ರವೇಶಕ್ಕೆ ಅನುಮತಿ

ಬೆಂಗಳೂರು: ಧಾರ್ಮಿಕ ಸ್ಥಳಗಳಿಗೆ ಸಂಬಂಧಿಸಿದಂತೆ ಕೋವಿಡ್ ಮಾರ್ಗಸೂಚಿಯನ್ನು ಪರಿಷ್ಕರಿಸಲಾಗಿದ್ದು, ಧಾರ್ಮಿಕ ಕೇಂದ್ರಗಳಲ್ಲಿನ ಸ್ಥಳಾವಕಾಶಕ್ಕೆ ತಕ್ಕಂತೆ ಸಾರ್ವಜನಿಕರಿಗೆ ಪ್ರವೇಶಕ್ಕೆ ಅನುಮತಿ ನೀಡಲಾಗಿದೆ.

ದೇವಸ್ಥಾನ, ಮಸೀದಿ, ಚರ್ಚ್ ಮತ್ತು ಇತರ ಧಾರ್ಮಿಕ ಸ್ಥಳಗಳಲ್ಲಿ ಅಲ್ಲಿನ ಸ್ಥಳಾವಕಾಶದ ವ್ಯಾಪ್ತಿಗೆ ಅನುಗುಣವಾಗಿ ಪ್ರವೇಶ ನೀಡಬಹುದು. ಆದರೆ, ಅಂತರ ಕಾಯ್ದುಕೊಳ್ಳುವುದು, ಮಾಸ್ಕ್ ಧರಿಸುವುದು ಸೇರಿ ಕೋವಿಡ್‌ನ ಇತರ ಎಲ್ಲ ನಿಯಮಗಳನ್ನು ಪಾಲಿಸುವುದು ಕಡ್ಡಾಯವಾಗಿದೆ. ಕೋವಿಡ್ ಪ್ರಕರಣಗಳು ಕಡಿಮೆ ಆದ ಕಾರಣ ಚಿತ್ರಮಂದಿರ, ಈಜುಕೊಳ, ಯೋಗ ಕೇಂದ್ರ ಮತ್ತು ಜಿಮ್‌ಗಳನ್ನು ಪೂರ್ಣ ಪ್ರಮಾಣದಲ್ಲಿ ಆರಂಭಿಸಲು ಈಗಾಗಲೇ ಅನುಮತಿ ನೀಡಲಾಗಿದೆ.

ಬಿಬಿಎಂಪಿಯಿಂದ ವಿವರಣೆ ಕೇಳಿದ ನಗರಾಭಿವೃದ್ಧಿ ಇಲಾಖೆ

ಅನುದಾನ ಖಾತರಿ ಇಲ್ಲದೆಯೇ ಟೆಂಡರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯಾವ ಅನುದಾನದಡಿ ಕಾಮಗಾರಿ ನಡೆಸಲಾಗುತ್ತದೆ ಎಂಬ ಖಾತರಿ ಇಲ್ಲದೆಯೇ ಮಹದೇವಪುರ ವಲಯದಲ್ಲಿ ಕಾಮಗಾರಿಯೊಂದಕ್ಕೆ ಟೆಂಡರ್ ಕರೆದಿರುವ ಬಗ್ಗೆ ನಗರಾಭಿವೃದ್ಧಿ ಇಲಾಖೆಯು ಬಿಬಿಎಂಪಿಯಿಂದ ವಿವರಣೆ ಕೇಳಿದೆ.

ಪಾಲಿಕೆ ವ್ಯಾಪ್ತಿಯ 110 ಹಳ್ಳಿಗಳ ರಸ್ತೆ ದುರಸ್ತಿ ಮತ್ತು ಅಭಿವೃದ್ಧಿ ಕಾಮಗಾರಿಗಳ ಕ್ರಿಯಾಯೋಜನೆ ಅಡಿ, ‘ಕುಡಿಯುವ ನೀರು ಪೂರೈಕೆ ಹಾಗೂ ಒಳಚರಂಡಿ ಕೊಳವೆಮಾರ್ಗದ ಅಳವಡಿಕೆಗಾಗಿ ಜಲಮಂಡಳಿಯು ಕತ್ತರಿಸಿದ್ದ ರಸ್ತೆಗಳ ದುರಸ್ತಿ’ಗೆ ₹ 71.50 ಕೋಟಿ ವೆಚ್ಚದ ಟೆಂಡರ್ ಕರೆದಿದೆ. ಇದಕ್ಕೆ ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆಯನ್ನೂ ಪಡೆದಿಲ್ಲ. ಈ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ ಹಾಗೂ ಟೆಂಡರ್‌ಗೆ ಅನುಮೋದನೆ ನೀಡುವಂತೆ ಕೋರಿ ಪಾಲಿಕೆಯ ಮುಖ್ಯ ಆಯುಕ್ತರು 2021ರ ಡಿ.18ರಂದು ನಗರಾಭಿವೃದ್ಧಿ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗೆ (ಎಸಿಎಸ್) ಪತ್ರ ಬರೆದಿದ್ದರು. ಈ ಪ್ರಸ್ತಾವನೆಗೆ ಸಂಬಂಧಿಸಿ ಕೆಲವು ವಿವರಣೆಗಳನ್ನು ಕೇಳಿ ನಗರಾಭಿವೃದ್ಧಿ ಇಲಾಖೆಯ ಎಸಿಎಸ್ ಫೆ.2ರಂದು ಬಿಬಿಎಂಪಿ ಮುಖ್ಯ ಆಯುಕ್ತರಿಗೆ ಪತ್ರ ಬರೆದಿದ್ದಾರೆ.

ಮಹದೇವಪುರ ವಲಯದ 110 ಹಳ್ಳಿಗಳಲ್ಲಿ ಜಲಮಂಡಳಿಯವರು ಕೊಳವೆಗಳ ಅಳವಡಿಕೆ ಸಲುವಾಗಿ ಅಗೆದ ರಸ್ತೆಗಳ ದುರಸ್ತಿಗೆ ₹ 10 ಕೋಟಿ ಮೊತ್ತದ ಕ್ರಿಯಾಯೋಜನೆಗೆ 2021ರ ಏ.29ರಂದು ಸರ್ಕಾರ ಅನುಮೋದನೆ ನೀಡಿತ್ತು. ಆ ಪ್ರಕಾರ, ಮಹದೇವಪುರ ರಸ್ತೆ ಮೂಲಸೌಕರ್ಯ ವಿಭಾಗ ಕೈಗೊಂಡಿದ್ದ ರಸ್ತೆ ದುರಸ್ತಿಗೆ ಸಂಬಂಧಿಸಿದ ಐದು ಕಾಮಗಾರಿಗಳ ಅನುಮೋದಿತ ಮೊತ್ತದಲ್ಲಿ ₹ 4.26 ಕೋಟಿ ಉಳಿತಾಯವಾಗಿದೆ. ಇದನ್ನು ಬಳಸಿ ಮತ್ತೆ ಐದು ರಸ್ತೆಗಳ ದುರಸ್ತಿ ಕಾಮಗಾರಿಗಳನ್ನು ₹ 12.53 ಕೋಟಿ ವೆಚ್ಚದಲ್ಲಿ ಕೈಗೆತ್ತಿಕೊಳ್ಳುವ ಬಗ್ಗೆ ಆ ಪತ್ರದಲ್ಲಿ ಬಿಬಿಎಂಪಿ ಪ್ರಸ್ತಾಪಿಸಿತ್ತು.

ಈ ಕಾಮಗಾರಿಗಳ ಅನುಷ್ಠಾನಕ್ಕೆ ಇನ್ನೂ ₹ 8.27 ಕೋಟಿ ಅನುದಾನದ ಕೊರತೆ ಇದೆ. ಇದನ್ನು ಯಾವ ರೀತಿ ಭರಿಸಲಾಗುವುದು ಎಂಬ ಬಗ್ಗೆ ಬಿಬಿಎಂಪಿ ಕಳುಹಿಸಿದ್ದ ಪ್ರಸ್ತಾವನೆಯಲ್ಲಿ ಉಲ್ಲೇಖವೇ ಇಲ್ಲ. ಇದರ ಮಾಹಿತಿ ಒದಗಿಸುವಂತೆ ಎಸಿಎಸ್ ಸೂಚಿಸಿದ್ದಾರೆ.

ಈ ಹಿಂದೆ ಮಂಜೂರಾಗಿದ್ದ ಐದು ಕಾಮಗಾರಿಗಳಿಗೆ ಬದಲಿಯಾಗಿ ಜಲಮಂಡಳಿಯವರು ಸಲ್ಲಿಸಿದ ಪಟ್ಟಿಯನ್ವಯ ಐದು ಕಾಮಗಾರಿಗಳನ್ನು ನಡೆಸಲು ಬಿಬಿಎಂಪಿ ತೀರ್ಮಾನಿಸಿ, ಟೆಂಡರ್ ಕೂಡಾ ಆಹ್ವಾನಿಸಿದೆ. ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ ಅನುಮೋದನೆ ಪಡೆಯುವ ಬದಲು ಬಿಬಿಎಂಪಿ ಹಂತದಲ್ಲೇ ತೀರ್ಮಾನ ಕೈಗೊಂಡ ಬಗ್ಗೆಯೂ ಎಸಿಎಸ್ ಸ್ಪಷ್ಟನೆ ಕೋರಿದ್ದಾರೆ.

ಈ ಬದಲಿ ಕಾಮಗಾರಿಗಳಿಗೆ ಘಟನೋತ್ತರ ಅನುಮೋದನೆ ಕೋರಲಾಗಿದೆ ಎಂದು ಬಿಬಿಎಂಪಿ ಪತ್ರದಲ್ಲಿ ತಿಳಿಸಿದೆ. ಆದರೆ, ಈ ಬಗ್ಗೆ ಇದುವರೆಗೂ ಯಾವುದೇ ಪ್ರಸ್ತಾವ ಬಿಬಿಎಂಪಿಯಿಂದ ಬಂದಿಲ್ಲ ಎಂದೂ ಎಸಿಎಸ್ ಅವರು ಪತ್ರದಲ್ಲಿ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ರಸ್ತೆ ದುರಸ್ತಿ ಹೊಸ ಕಾಮಗಾರಿಗಳು	ಮೊತ್ತ (₹ ಕೋಟಿ)
ಕರಿಯಮ್ಮ ಅಗ್ರಹಾರ ರಸ್ತೆ	1.65
ನ್ಯೂ ಹೊರೈಜಾನ್ ಕಾಲೇಜು ರಸ್ತೆ ಮತ್ತು ಭೋಗನಹಳ್ಳಿ ರಸ್ತೆ	1.30
ಕಸವನಹಳ್ಳಿ ರಸ್ತೆ ಮತ್ತು ರಿಲಯಬಲ್ ಲೈಫ್‌ಸ್ಟೈಲ್ ಮುಖ್ಯ ರಸ್ತೆ	1.63
ಬೈರತಿ ಕಾಲೊನಿ ರಸ್ತೆ	3.15
ಸರ್ಜಾಪುರ ರಸ್ತೆ (ಇಬ್ಬಲೂರು ಜಂಕ್ಷನ್‌ನಿಂದ ಕಾರ್ಮೆಲ್‌ರಾಂವರೆಗೆ)	4.80

‘ಉಳಿತಾಯದ ಮೊತ್ತದಿಂದ ಬದಲಿ ಕಾಮಗಾರಿ’

‘ಜಲಮಂಡಳಿಯವರು ಕೊಳವೆಗಳನ್ನು ಅಳವಡಿಸುವ ಮಾರ್ಗಗಳಲ್ಲಿ ಕೆಲವೊಂದು ಬದಲಾವಣೆ ಮಾಡಿದ್ದರಿಂದ ನಾವು ಕ್ರಿಯಾಯೋಜನೆಯಲ್ಲಿ ಗುರುತಿಸಿದ್ದ ಕೆಲವು ಕಾಮಗಾರಿಗಳಲ್ಲೂ ಮಾರ್ಪಾಡು ಮಾಡಬೇಕಾಯಿತು. ಇದರಿಂದ ಕೆಲವು ಕಾಮಗಾರಿಗಳ ಮೊತ್ತದಲ್ಲಿ ಉಳಿತಾಯವಾಗಿದೆ. ಅದನ್ನೇ ಬಳಸಿ ಐದು ಬದಲಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಿದ್ದೇವೆ. ಇದಕ್ಕೆ ಹೆಚ್ಚುವರಿ ಅನುದಾನದ ಅಗತ್ಯ ಇಲ್ಲ’ ಎಂದು ರಸ್ತೆ ಮೂಲಸೌಕರ್ಯ ವಿಭಾಗದ ಮಹದೇವಪುರ ವಲಯದ ಕಾರ್ಯಪಾಲಕ ಎಂಜಿನಿಯರ್ ಎಂ.ಬಿ. ಜಯಶಂಕರ ರೆಡ್ಡಿ ಸ್ಪಷ್ಟಪಡಿಸಿದರು.

‘ಮೆಟ್ರೊ ಕಾಮಗಾರಿ ಸಲುವಾಗಿ ಈ ಪ್ರದೇಶದ ಕೆಲವು ಕಡೆ ರಸ್ತೆಗಳನ್ನು ತುರ್ತಾಗಿ ದುರಸ್ತಿಪಡಿಸಬೇಕಾಯಿತು. ಮಳೆಯ ಕಾರಣದಿಂದ ಕೆಲವು ಕಡೆ ತುರ್ತು ಕಾಮಗಾರಿ ಕೈಗೊಳ್ಳಬೇಕಾಯಿತು. ಹಾಗಾಗಿ ನಗರಾಭಿವೃದ್ಧಿ ಇಲಾಖೆಯ ಅನುಮೋದನೆ ಪಡೆಯದೆಯೇ ಟೆಂಡರ್ ಕರೆದಿದ್ದೇವೆ. ಇದಕ್ಕೆ ಮುಖ್ಯ ಆಯುಕ್ತರಿಂದ ಅನುಮೋದನೆ ಪಡೆದಿದ್ದೇವೆ. ನಗರಾಭಿವೃದ್ಧಿ ಇಲಾಖೆ ವಿವರಣೆ ಕೇಳಿರುವುದು ನಿಜ. ಇದಕ್ಕೆ ಸೂಕ್ತ ವಿವರಣೆ ಸಲ್ಲಿಸಿದ್ದೇವೆ’ ಎಂದರು.

ನಾಡಪ್ರಭು ಕೆಂಪೇಗೌಡ ಬಡಾವಣೆ: ಮುಖ್ಯಮಂತ್ರಿ ಬೊಮ್ಮಾಯಿ ಭರವಸೆ

ವರ್ಷದೊಳಗೆ ಬಾಕಿ ಕಾಮಗಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ನಿರ್ಮಿಸುತ್ತಿರುವ ನಾಡಪ್ರಭು ಕೆಂಪೇಗೌಡ ಬಡಾವಣೆಯಲ್ಲಿ ಮೂಲಸೌಕರ್ಯ ಅಭಿವೃದ್ಧಿಗೆ ಸಂಬಂಧಿಸಿದ ಬಾಕಿ ಕಾಮಗಾರಿಗಳನ್ನು ಈ ವರ್ಷಾಂತ್ಯದೊಳಗೆ ಪೂರ್ಣಗೊಳಿಸಲು ಕ್ರಮಕೈಗೊಳ್ಳುವುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭರವಸೆ ನೀಡಿದ್ದಾರೆ.

ನಾಡಪ್ರಭು ಕೆಂಪೇಗೌಡ ಬಡಾವಣೆ ನಿವೇಶನದಾರರ ಮುಕ್ತವೇದಿಕೆಯ ಪದಾಧಿಕಾರಿಗಳು ಮುಖ್ಯಮಂತ್ರಿಯವರನ್ನು ಬುಧವಾರ ಭೇಟಿಯಾಗಿ ಬಡಾವಣೆಯ ಸಮಸ್ಯೆಗಳ ಬಗ್ಗೆ ಗಮನ ಸೆಳೆದರು.

‘ಬಡಾವಣೆಯಲ್ಲಿ ಬಾಕಿ ಇರುವ ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಳಿಸಬೇಕು. ಬಡಾವಣೆ ಮೂಲಕ ಹಾದುಹೋಗುವ ಪ್ರಮುಖ ರಸ್ತೆಯ ಇಕ್ಕೆಲಗಳಲ್ಲಿ ಬುಲೇವಾರ್ಡ್ ನಿರ್ಮಿಸುವ ಪ್ರಸ್ತಾವ ಕೈಬಿಡಬಾರದು. ಹೆಚ್ಚುವರಿ ಕಾಮಗಾರಿಗಳಿಗೆ ಅಗತ್ಯ ಅನುದಾನ ಒದಗಿಸುವ ಮೂಲಕ ಬಡಾವಣೆಯ ಮೂಲಸೌಕರ್ಯ ಅಭಿವೃದ್ಧಿ ಕಾಮಗಾರಿಗಳನ್ನು ಆದಷ್ಟು ಬೇಗ ಪೂರ್ಣಗೊಳಿಸಬೇಕು. ವಿದ್ಯುತ್ ಸಂಪರ್ಕ ಕಾಮಗಾರಿಗಳನ್ನು ಆದ್ಯತೆ ಮೇರೆಗೆ ಕೈಗೊಳ್ಳಬೇಕು. ಬಡಾವಣೆಯಲ್ಲಿ ಮನೆ ನಿರ್ಮಿಸುವುದಕ್ಕೆ ಪೂರಕ ವಾತಾವರಣ ಕಲ್ಪಿಸಬೇಕು’ ಎಂದು ಮುಕ್ತ ವೇದಿಕೆಯ ಪದಾಧಿಕಾರಿಗಳು ಮುಖ್ಯಮಂತ್ರಿಯವರನ್ನು ಕೋರಿದರು.

ಮುಕ್ತ ವೇದಿಕೆ ಅಧ್ಯಕ್ಷ ಎನ್. ಶ್ರೀಧರ್, ಕಾರ್ಯದರ್ಶಿ ಅಶೋಕ ಹಾಗೂ ಜಂಟಿ ಕಾರ್ಯದರ್ಶಿ ಎ.ಎಸ್.ಸೂರ್ಯಕಿರಣ್ ಅವರು ಪದಾಧಿಕಾರಿಗಳ ನಿಯೋಗದಲ್ಲಿದ್ದರು.

ನಾಡಪ್ರಭು ಕೆಂಪೇಗೌಡ ಬಡಾವಣೆಯ ನಿವೇಶನದಾರರ ಮುಕ್ತವೇದಿಕೆ ಪದಾಧಿಕಾರಿಗಳು ಮುಖ್ಯಮಂತ್ರಿ ಬೊಮ್ಮಾಯಿ ಅವರನ್ನು ಭೇಟಿಯಾಗಿ ಬಡಾವಣೆ ಸಮಸ್ಯೆಗಳ ಬಗ್ಗೆ ಗಮನ ಸೆಳೆದರು. ಮುಕ್ತವೇದಿಕೆಯ ಕಾರ್ಯದರ್ಶಿ ಅಶೋಕ, ಜಂಟಿ ಕಾರ್ಯದರ್ಶಿ ಸೂರ್ಯಕಿರಣ್ ಹಾಗೂ ಅಧ್ಯಕ್ಷ ಎನ್.ಶ್ರೀಧರ್ ಇದ್ದಾರೆ

ಬ್ಯಾಂಕಿಂಗ್ ಪರೀಕ್ಷೆಗೆ ತರಬೇತಿ

ಬೆಂಗಳೂರು: ಕೃಷಿಕ್ ಸರ್ವೋದಯ ಫೌಂಡೇಷನ್ ಸಂಸ್ಥೆಯು ಐ.ಎ.ಎಸ್, ಕೆ.ಎ.ಎಸ್ ಹಾಗೂ ಬ್ಯಾಂಕಿಂಗ್ ಪರೀಕ್ಷೆಗೆ ಆನ್‌ಲೈನ್ ಮತ್ತು ಭೌತಿಕ (ಆಫ್‌ಲೈನ್) ತರಬೇತಿಗೆ ಅರ್ಜಿಗಳನ್ನು ಆಹ್ವಾನಿಸಿದೆ.

ಹೆಸರು ನೋಂದಣಿಗೆ ಇದೇ 21 ಕಡೆಯ ದಿನಾಂಕ. ಆಸಕ್ತ ಅಭ್ಯರ್ಥಿಗಳು ವಿವರಕ್ಕೆ ನಂ.15, 2ನೇ ಮಹಡಿ, ಹಳೆ ವಿಮಾನ ನಿಲ್ದಾಣ ರಸ್ತೆ, ಕೋಡಿಹಳ್ಳಿ, ಬೆಂಗಳೂರು ಈ ವಿಳಾಸಕ್ಕೆ ಅಥವಾ ಇ ಮೇಲ್ ವಿಳಾಸ ksfbngalore@gmail.comಗೆ ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಸಂಪರ್ಕಕ್ಕೆ: 080 25202299, 7625000990

ಸುದ್ದಿ 2 ನಿಮಿಷ

ಪದವಿ ಪರೀಕ್ಷೆ ಮುಂದೂಡುವಂತೆ ಕೋರಿ ಸರ್ಕಾರಕ್ಕೆ ಪತ್ರ

ಬೆಂಗಳೂರು: ಕೋವಿಡ್ ಮತ್ತು ಓಮೈಕ್ರಾನ್ ಸೋಂಕು ಹೆಚ್ಚಳ ಹಾಗೂ ಅತಿಥಿ ಉಪನ್ಯಾಸಕರ ಮುಷ್ಕರದಿಂದ ಬೋಧನಾ ಕಾರ್ಯ ಅಪೂರ್ಣವಾಗಿರುವ ಕಾರಣ ಪದವಿ ಕೋರ್ಸ್‌ಗಳ ಸೆಮಿಸ್ಟರ್ ಪರೀಕ್ಷೆಯನ್ನು ಕನಿಷ್ಠ ಒಂದು ತಿಂಗಳು ಮುಂದೂಡುವಂತೆ ಕೋರಿ ಉನ್ನತ ಶಿಕ್ಷಣ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗೆ ಕಾಲೇಜು ಶಿಕ್ಷಣ ಇಲಾಖೆ ಆಯುಕ್ತ ಪಿ. ಪ್ರದೀಪ್ ಅವರು ಗುರುವಾರ ಪತ್ರ ಬರೆದಿದ್ದಾರೆ.

‘ಕೆಲವು ವಿಶ್ವವಿದ್ಯಾಲಯಗಳು ಈಗಾಗಲೇ ಸೆಮಿಸ್ಟರ್ ಪರೀಕ್ಷೆಯ ವೇಳಾಪಟ್ಟಿ ಪ್ರಕಟಿಸಿವೆ. ಆದರೆ, ಬೋಧನಾ ಕಾರ್ಯ ಇನ್ನೂ ಮುಗಿದಿಲ್ಲ. ಹೀಗಾಗಿ, ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಪರೀಕ್ಷೆ ಮುಂದೂಡುವಂತೆ ರಾಜ್ಯದ ಎಲ್ಲ ವಿಶ್ವವಿದ್ಯಾಲಯಗಳಿಗೂ ನಿರ್ದೇಶಿಸಬೇಕು' ಎಂದು ಅವರು ಮನವಿ ಮಾಡಿದ್ದಾರೆ.

ಬಹುತೇಕ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಪಾಠ– ಪ್ರವಚನ ಮುಗಿಯುವ ಮೊದಲೇ ಮೊದಲ ಸೆಮಿಸ್ಟರ್ ಪೂರ್ಣಗೊಳಿಸಿ, ಪರೀಕ್ಷೆಗಳನ್ನು ನಡೆಸಲು ಮುಂದಾದ ಬಗ್ಗೆ ‘ಪ್ರಜಾವಾಣಿ’ಯ ಫೆ.6ರ ಸಂಚಿಕೆಯಲ್ಲಿ ‘ಪಾಠವೇ ಮುಗಿದಿಲ್ಲ: ಪರೀಕ್ಷೆಗೆ ಆತುರ’ ಶೀರ್ಷಿಕೆಯಲ್ಲಿ ವಿಶೇಷ ವರದಿ ಪ್ರಕಟವಾಗಿತ್ತು.

ಮಾರ್ಚ್‌ಗೆ 900 ಮನೆಗಳ ಹಸ್ತಾಂತರ



ಯಲಹಂಕ: ಯಲಹಂಕ ವಿಧಾನಸಭಾ ಕ್ಷೇತ್ರದಲ್ಲಿ ರಾಜೀವ್ ಗಾಂಧಿ ವಸತಿ ನಿಗಮ ನಿರ್ಮಿಸುತ್ತಿರುವ 900 ಮನೆಗಳನ್ನು ಮಾರ್ಚ್ ಮೊದಲ ವಾರದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಫಲಾನುಭವಿಗಳಿಗೆ ವಿತರಣೆ ಮಾಡಲಿದ್ದಾರೆ ಎಂದು ವಸತಿ ಸಚಿವ ವಿ.ಸೋಮಣ್ಣ ಹೇಳಿದರು.

ಸಾದೇನಹಳ್ಳಿ, ಅಗ್ರಹಾರ ಪಾಳ್ಯ ಮತ್ತು ಪಿಲ್ಲಹಳ್ಳಿ ಗ್ರಾಮಗಳಲ್ಲಿ ‘ಮುಖ್ಯಮಂತ್ರಿಗಳ ಒಂದು ಲಕ್ಷ ಬಹುಮಹಡಿ ವಸತಿ ಯೋಜನೆ’ಯಡಿ ನಿರ್ಮಿಸುತ್ತಿರುವ ಮನೆಗಳ ಪ್ರಗತಿ ಪರಿಶೀಲನೆ ನಡೆಸಿದ ಅವರು, ‘ಯಡಿಯೂರಪ್ಪನವರು ಮುಖ್ಯಮಂತ್ರಿಯಾದ ನಂತರ ನಗರ ಜಿಲ್ಲೆಯಲ್ಲಿ 535 ಎಕರೆ ಪ್ರದೇಶವನ್ನು ಸ್ವಾಧೀನಪಡಿಸಿಕೊಂಡಿದ್ದು, 46 ಸಾವಿರ ಮನೆಗಳ ನಿರ್ಮಾಣ ಕಾರ್ಯ ಕೈಗೆತ್ತಿಕೊಳ್ಳಲಾಗಿದೆ. ಮೊದಲಹಂತದಲ್ಲಿ ಯಲಹಂಕ ಕ್ಷೇತ್ರದ 3 ಸ್ಥಳಗಳಲ್ಲಿ 900 ಮನೆಗಳನ್ನು ನಿರ್ಮಿಸುವ ಕಾರ್ಯ ಅತಿಶೀಘ್ರದಲ್ಲಿ ಪೂರ್ಣಗೊಳ್ಳಲಿದೆ’ ಎಂದರು. ಶಾಸಕ ಎಸ್.ಆರ್. ವಿಶ್ವನಾಥ್, ರಾಜಾನುಕುಂಟೆ ಗ್ರಾಮ ಪಂಚಾಯಿತಿ ಅಧ್ಯಕ್ಷ ಈರಣ್ಣ, ಮಂಡಳಿಯ ವ್ಯವಸ್ಥಾಪಕ ನಿರ್ದೇಶಕ ಡಾ.ಎಸ್.ಬಸವರಾಜು, ಮುಖ್ಯ ಎಂಜಿನಿಯರ್ ಸಣ್ಣಚಿತ್ತಯ್ಯ ಮತ್ತಿತರರು ಉಪಸ್ಥಿತರಿದ್ದರು.

ಕೋವಿಡ್: 52 ಸಾವಿರ ಸಕ್ರಿಯ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಗುರುವಾರ 5,019 ಮಂದಿ ಕೋವಿಡ್ ಪೀಡಿತರಾಗಿರುವುದು ದೃಢಪಟ್ಟಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆ 52 ಸಾವಿರಕ್ಕೆ ಇಳಿಕೆಯಾಗಿದೆ.

ಒಂದು ದಿನದ ಅವಧಿಯಲ್ಲಿ 1.17 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ಸೋಂಕು ದೃಢ ಪ್ರಮಾಣ ಶೇ 4.25 ರಷ್ಟು ವರದಿಯಾಗಿದೆ. ಈವರೆಗೆ ವರದಿಯಾದ ಒಟ್ಟು ಪ್ರಕರಣಗಳ ಸಂಖ್ಯೆ 39.17 ಲಕ್ಷಕ್ಕೆ ಏರಿಕೆಯಾಗಿದೆ.

9 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಮೂರು ಅಂಕಿ, 20 ಜಿಲ್ಲೆಗಳಲ್ಲಿ ಎರಡು ಅಂಕಿಯಲ್ಲಿ ಇದೆ. ಬೆಂಗಳೂರಿನಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಮತ್ತಷ್ಟು ಇಳಿಕೆ ಕಂಡಿದ್ದು, 2,315 ಮಂದಿ ಸೋಂಕಿತರಾಗಿದ್ದಾರೆ. ಮೈಸೂರಿನಲ್ಲಿ 261, ತುಮಕೂರಿನಲ್ಲಿ 234 ಹಾಗೂ ಬಳ್ಳಾರಿಯಲ್ಲಿ 220 ಮಂದಿ ಕೋವಿಡ್ ಪೀಡಿತರಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 200ಕ್ಕಿಂತ ಕಡಿಮೆ ಇವೆ.

ಸೋಂಕಿತರಲ್ಲಿ ಬೆಂಗಳೂರಿನಲ್ಲಿ 5,739 ಮಂದಿ ಸೇರಿದಂತೆ ರಾಜ್ಯದಲ್ಲಿ 13,923 ಮಂದಿ ಚೇತರಿಸಿಕೊಂಡಿದ್ದಾರೆ. ರಾಜ್ಯದಲ್ಲಿ ಈವರೆಗೆ ಗುಣಮುಖರಾದವರ ಒಟ್ಟು ಸಂಖ್ಯೆ 38.25 ಲಕ್ಷಕ್ಕೆ ತಲುಪಿದೆ.

ಕೊರೊನಾ ಸೋಂಕಿತರಲ್ಲಿ 39 ಮಂದಿ ಮೃತಪಟ್ಟಿರುವುದು ದೃಢಪಟ್ಟಿದೆ. ಬೆಂಗಳೂರಿನಲ್ಲಿ 17 ಮಂದಿ, ತುಮಕೂರಿನಲ್ಲಿ ಐದು, ದಕ್ಷಿಣ ಕನ್ನಡದಲ್ಲಿ ಮೂವರು, ಮೈಸೂರು ಹಾಗೂ ಧಾರವಾಡದಲ್ಲಿ ತಲಾ ಇಬ್ಬರು ಸಾವಿಗೀಡಾಗಿದ್ದಾರೆ.

ಈವರೆಗೆ ಕೋವಿಡ್‌ಗೆ ಸಾವಿಗೀಡಾದವರ ಒಟ್ಟು ಸಂಖ್ಯೆ 39,534ಕ್ಕೆ ತಲುಪಿದೆ





ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಭೂಮಾಪನ ಶುಲ್ಕ ಇಳಿಸಿದ ಸರ್ಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭೂಮಾಪನ, 11–ಇ ನಕ್ಷೆ, ಭೂ ಪರಿವರ್ತನೆ ಮತ್ತು ತತ್ಕಾಲ್ ಪೋಡಿಗೆ ಶುಲ್ಕ ಹೆಚ್ಚಳ ಮಾಡಿದ್ದ ಕಂದಾಯ ಇಲಾಖೆ, ಮತ್ತೊಮ್ಮೆ ಪರಿಷ್ಕರಿಸಿ ಶುಲ್ಕ ಕಡಿಮೆ ಮಾಡಿ ಆದೇಶ ಹೊರಡಿಸಿದೆ.

11–ಇ ನಕ್ಷೆ, ಭೂ ಪರಿವರ್ತನೆ ಮತ್ತು ತತ್ಕಾಲ್ ಪೋಡಿಗೆ ಗ್ರಾಮೀಣ ಪ್ರದೇಶದಲ್ಲಿ ಎರಡು ಎಕರೆಗೆ ₹2,000 ಹಾಗೂ ನಂತರದ ಪ್ರತಿ ಎಕರೆಗೆ ₹400 ರಂತೆ ಗರಿಷ್ಠ ₹4,000 ನಿಗದಿ ಮಾಡಿತ್ತು. ಸಾರ್ವಜನಿಕ ವಿರೋಧ ವ್ಯಕ್ತವಾಗಿರುವ ಬೆನ್ನಲ್ಲೇ, ಅದನ್ನು ಕಡಿಮೆ ಮಾಡಿರುವ ಕಂದಾಯ ಇಲಾಖೆ, ಎರಡು ಎಕರೆಗೆ ₹1,500 ಹಾಗೂ ಪ್ರತಿ ಎಕರೆಗೆ ₹400 ರಂತೆ ನಿಗದಿ ಮಾಡಿದೆ. ಆದರೆ, ಗರಿಷ್ಠ ಮಿತಿಯನ್ನು ನಿಗದಿ ಮಾಡಿಲ್ಲ.

ನಗರ ಪ್ರದೇಶದಲ್ಲಿ ಎರಡು ಎಕರೆವರೆಗೂ ₹2,500 ಮತ್ತು ನಂತರದ ಪ್ರತಿ ಎಕರೆಗೆ ₹1,000 ದಂತೆ ಗರಿಷ್ಠ ₹5,000ದವರೆಗೆ ಶುಲ್ಕ ವಿಧಿಸಲು ಅನುಮತಿ ನೀಡಲಾಗಿತ್ತು. ಪರಿಷ್ಕರಣೆ ಆದೇಶದಲ್ಲಿ ನಗರ ಪ್ರದೇಶದ ಶುಲ್ಕದಲ್ಲಿ ಬದಲಾವಣೆ ಆಗಿಲ್ಲ. ಆದರೆ, ಗರಿಷ್ಠ ಮಿತಿ ಕೈಬಿಡಲಾಗಿದೆ.

ಹದ್ದುಬಸ್ತು ಅರ್ಜಿ ಶುಲ್ಕ ಗ್ರಾಮೀಣ ಪ್ರದೇಶದಲ್ಲಿ ಎರಡು ಎಕರೆವರೆಗೆ ₹1,500 ಹಾಗೂ ನಂತರದ ಪ್ರತಿ ಎಕರೆಗೆ ₹300ರಂತೆ ಗರಿಷ್ಠ ₹3,000 ನಿಗದಿ ಮಾಡಿತ್ತು. ಅದನ್ನು ಪರಿಷ್ಕರಿಸಿ ಎರಡು ಎಕರೆವರೆಗೂ ₹500 ನಂತರದ ಪ್ರತಿ ಎಕರೆಗೆ ₹300 ನಿಗದಿ ಮಾಡಲಾಗಿದೆ. ನಗರ ಪ್ರದೇಶದಲ್ಲಿ ಹದ್ದುಬಸ್ತು ಅರ್ಜಿಗೆ ಎರಡು ಎಕರೆವರೆಗು ₹2,000 ನಂತರ ಪ್ರತಿ ಎಕರೆಗೆ ₹400 ರಂತೆ ಗರಿಷ್ಠ ₹4,000 ನಿಗದಿ ಮಾಡಲಾಗಿತ್ತು. ಇದರಲ್ಲಿ ಯಾವುದೇ ಬದಲಾವಣೆ ಮಾಡಿಲ್ಲ. ಆದರೆ, ಗ್ರಾಮೀಣ ಮತ್ತು ನಗರ ಪ್ರದೇಶ ಎರಡೂ ಕಡೆ ಗರಿಷ್ಠ ಮಿತಿ ಕೈಬಿಡಲಾಗಿದೆ.

ಹಾಜರಾತಿ: ಮಲ್ಯಗೆ ಕಡೇ ಅವಕಾಶ

ನವದೆಹಲಿ(ಪಿಟಿಐ): ನ್ಯಾಯಾಂಗ ನಿಂದನೆ ಪ್ರಕರಣದಲ್ಲಿ ವ್ಯಕ್ತಿಗತವಾಗಿ ಹಾಜರಾಗಲು ಉದ್ಯಮಿ ವಿಜಯ್ ಮಲ್ಯ ಅವರಿಗೆ ಸುಪ್ರೀಂ ಕೋರ್ಟ್ ಕಡೆಯ ಅವಕಾಶವನ್ನು ನೀಡಿದೆ.

ಸುಮಾರು ₹ 9000 ಕೋಟಿಯಷ್ಟು ಬ್ಯಾಂಕ್ ಸಾಲವನ್ನು ಸುಸ್ತಿ ಉಳಿಸಿಕೊಂಡಿರುವ ಪ್ರಕರಣದಲ್ಲಿ, ವ್ಯಕ್ತಿಗತವಾಗಿ ಅಥವಾ ತಮ್ಮ ವಕೀಲರ ಮೂಲಕ ಹಾಜರಾಗಬೇಕು ಎಂದು ಸುಪ್ರೀಂ ಕೋರ್ಟ್ ತಾಕೀತು ಮಾಡಿದೆ.

ಮಲ್ಯ ಅವರಿಗೆ ಈ ಸಂಬಂಧ ಈಗಾಗಲೇ ಹಲವು ಅವಕಾಶ ನೀಡಲಾಗಿದೆ. ಅಲ್ಲದೆ, ನವೆಂಬರ್ 30, 2021ರಂದು ನೀಡಿದ ಆದೇಶದಲ್ಲಿ ಸ್ಪಷ್ಟ ನಿರ್ದೇಶನವನ್ನು ನೀಡಲಾಗಿತ್ತು ಎಂದು ಕೋರ್ಟ್ ಉಲ್ಲೇಖಿಸಿತು.

ನ್ಯಾಯಮೂರ್ತಿಗಳಾದ ಯು.ಯು.ಲಲಿತ್, ಎಸ್.ರವೀಂದ್ರ ಭಟ್, ಪಿ.ಎಸ್.ನರಸಿಂಹ ಅವರಿದ್ದ ಪೀಠವು, ವಿಚಾರಣೆಯನ್ನು ಎರಡು ವಾರಕ್ಕೆ ಮುಂದೂಡಿದರು. ನ.30ರ ಆದೇಶದಂತೆ ಅವರು ಹಾಜರಾಗಬೇಕು. ಇಲ್ಲದಿದ್ದರೆ ಈ ಪ್ರಕರಣಕ್ಕೆ ತಾರ್ಕಿಕ ಅಂತ್ಯ ನೀಡಲಾಗುವುದು ಎಂದೂ ಪೀಠ ಹೇಳಿತು.

ಸಂಕ್ಷಿಪ್ತ ಸುದ್ದಿ

ನೀಟ್: ಪರಿಶ್ರಮ ಅಕಾಡೆಮಿ ಉತ್ತಮ ಸಾಧನೆ

ಬೆಂಗಳೂರು: ‘ನೀಟ್’ ಮೊದಲ ಸುತ್ತಿನ ಕೌನ್ಸೆಲಿಂಗ್‌ನಲ್ಲಿ ಪರಿಶ್ರಮ ನೀಟ್ ಅಕಾಡೆಮಿಯ 240 ವಿದ್ಯಾರ್ಥಿಗಳ ಪೈಕಿ 217 ವಿದ್ಯಾರ್ಥಿಗಳು ಉಚಿತ ಸರ್ಕಾರಿ ವೈದ್ಯಕೀಯ ಸೀಟುಗಳನ್ನು ಪಡೆದುಕೊಂಡಿದ್ದಾರೆ.

ಈ ಸಾಧನೆಗೆ ಶ್ರಮಿಸಿದ ಸಿಬ್ಬಂದಿ, ಮಾರ್ಗದರ್ಶಕರು ಮತ್ತು ವಿದ್ಯಾರ್ಥಿಗಳಿಗೆ ಸಂಸ್ಥಾಪಕ ಮತ್ತು ವ್ಯವಸ್ಥಾಪಕ ನಿರ್ದೇಶಕ ಪ್ರದೀಪ್ ಈಶ್ವರ್ ಹಾಗೂ ಕಲಿಕಾ ಮುಖ್ಯಸ್ಥ ಹನುಮಂತರಾವ್ ಅಭಿನಂದನೆ ಸಲ್ಲಿಸಿದ್ದಾರೆ.

ಆರು ಮಂದಿಗೆ ಕಸಾಪ ದತ್ತಿ ಪ್ರಶಸ್ತಿ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ನೀಡುವ ‘ಪ್ರೊ. ಸಿ.ಎಚ್. ಮರಿದೇವರು ಪ್ರತಿಷ್ಠಾನ ದತ್ತಿ ಪ್ರಶಸ್ತಿ’ಗೆ ತುಮಕೂರಿನ ಶಿಕ್ಷಣತಜ್ಞ ಜಿ. ಸೀತಾರಾಮ್ ಸೇರಿದಂತೆ ಆರು ಮಂದಿ ಆಯ್ಕೆಯಾಗಿದ್ದಾರೆ.

ಸಾಹಿತಿ ಎಚ್.ಎಸ್. ಸತ್ಯನಾರಾಯಣ (ಚಿಕ್ಕಮಗಳೂರು), ರಂಗಭೂಮಿ ಕಲಾವಿದ ಶಂಕರ ಭಟ್ಟ (ಉತ್ತರ ಕನ್ನಡ), ಕೃಷಿ ತಜ್ಞೆ ಎನ್.ಆರ್. ನಾಗವೇಣಿ (ಚಿತ್ರದುರ್ಗ), ಕನ್ನಡಪರ ಹೋರಾಟಗಾರ ಜಿ. ಗುರುಪ್ರಸಾದ್ (ಬೆಂಗಳೂರು) ಹಾಗೂ ಕ್ರೀಡಾಪಟು ಮಹಾಂತೇಶ ಮಾಡಳ್ಳಿ (ಗದಗ) ಅವರೂ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ನೇತೃತ್ವದ ಸಮಿತಿಯು ಸಾಹಿತ್ಯ, ಕ್ರೀಡೆ ಸೇರಿದಂತೆ ವಿವಿಧ ಕ್ಷೇತ್ರಗಳ ಅನುಸಾರ ಈ ಆಯ್ಕೆಗಳನ್ನು ಮಾಡಿದೆ. ಪ್ರಶಸ್ತಿಯು ತಲಾ ₹ 15 ಸಾವಿರ ನಗದು ಹಾಗೂ ಫಲಕ ಒಳಗೊಂಡಿದೆ ಎಂದು ಪರಿಷತ್ತಿನ ಗೌರವ ಕಾರ್ಯದರ್ಶಿ ನೇ.ಭ. ರಾಮಲಿಂಗ ಶೆಟ್ಟಿ ತಿಳಿಸಿದ್ದಾರೆ.

ಪರಸ್ಪರ ಅಂತರ ಕಾಯ್ದುಕೊಳ್ಳಿ

ಇಡೀ ರಾಜ್ಯಕ್ಕೆ ಬಿಜೆಪಿಯವರು ವಿಷ ಹಾಕಿದ್ದಾರೆ- ಸಿದ್ದರಾಮಯ್ಯ ಕಿಡಿ

ಯುವ ಕಾಂಗ್ರೆಸ್ ಅಧ್ಯಕ್ಷರಾಗಿ ನಲಪಾಡ್ ಪದಗ್ರಹಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಯುವ ಕಾಂಗ್ರೆಸ್ ನೂತನ ಅಧ್ಯಕ್ಷರಾಗಿ ಮೊಹಮ್ಮದ್ ನಲಪಾಡ್ ಗುರುವಾರ ಅಧಿಕಾರ ಸ್ವೀಕರಿಸಿದರು.

ಕೆಪಿಸಿಸಿ ಕಚೇರಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮತ್ತು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ನಲಪಾಡ್ ಅವರಿಗೆ ಯುವ ಕಾಂಗ್ರೆಸ್ ಧ್ವಜ ನೀಡಿದರು.

ಈ ವೇಳೆ ಮಾತನಾಡಿದ ಸಿದ್ದರಾಮಯ್ಯ, ‘ಚುನಾವಣೆಗೆ ವರ್ಷ ಇರುವಾಗಲೇ ಬಿಜೆಪಿಯವರು ಹಿಜಾಬ್ ವಿಚಾರ ಮುಂದಿಟ್ಟು ಮಕ್ಕಳ ಮನಸ್ಸಿನಲ್ಲಿ ದ್ವೇಷ ತುಂಬಿ, ಸಮಾಜ ಒಡೆಯಲು ಹೊರಟಿದ್ದಾರೆ. ಸಂಘ ಪರಿವಾರದವರು ಕೇವಲ ಉಡುಪಿ, ಮಂಗಳೂರು ಅಷ್ಟೇ ಅಲ್ಲ, ಇಡೀ ರಾಜ್ಯಕ್ಕೆ ವಿಷ ಹಾಕಿದ್ದಾರೆ, ಬೆಂಕಿ ಹಚ್ಚಿದ್ದಾರೆ’ ಎಂದು ಕಿಡಿಕಾರಿದರು.

‘ಜನರ ಗಮನ ಬೇರೆಡೆಗೆ ಸೆಳೆಯಲು ಹಿಜಾಬ್ ಹಾಕುವುದನ್ನೇ ವಿವಾದವಾಗಿ ಮಾಡಿ ಮತ ಕ್ರೋಢೀಕರಣಕ್ಕೆ ಬಿಜೆಪಿಯವರು ದುಷ್ಟ ಪ್ರಯತ್ನ ಮಾಡುತ್ತಿದ್ದಾರೆ. ನಾವು ಶಾಲೆ, ಕಾಲೇಜಿಗೆ ಹೋಗುವಾಗ ಕೇಸರಿ ಶಾಲು ಧರಿಸಿ ಬಂದಿದ್ದನ್ನು ನಾನೆಲ್ಲೂ ನೋಡಿರಲಿಲ್ಲ. ಆದರೆ, ಈಗ ಸಂಘ ಪರಿವಾರದವರು ತಾವೇ ಖರೀದಿ ಮಾಡಿ ವಿದ್ಯಾರ್ಥಿಗಳಿಗೆ ಕೇಸರಿ ಶಾಲು ಧರಿಸಿಕೊಂಡು ಹೋಗುವಂತೆ ಒತ್ತಡ ಹಾಕುತ್ತಿದ್ದಾರೆ. ಅಂಥವರ ವಿರುದ್ಧ ಕಾನೂನು ಕ್ರಮ ಜರುಗಿಸಬೇಕು' ಎಂದು ಆಗ್ರಹಿಸಿದರು.

ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮಾತನಾಡಿ, ‘ಯಶಸ್ಸು ಸಾಧಿಸಬೇಕಾದರೆ ಧರ್ಮರಾಯನ ಧರ್ಮ ಇರಬೇಕು. ಕರ್ಣನ ದಾನತ್ವ, ಅರ್ಜುನನ ಗುರಿ, ವಿಧುರನ ನೀತಿ, ಭೀಮನ ಬಲ, ಕೃಷ್ಣನ ತಂತ್ರ ಇರಬೇಕಂತೆ. ಅದೇ ರೀತಿ ನೀವು ಯಶಸ್ಸು ಸಾಧಿಸಬೇಕಾದರೆ ಅನೇಕ ಗುಣಗಳನ್ನು ರೂಢಿಸಿಕೊಳ್ಳಬೇಕು. ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ತರುವುದು, ರಾಹುಲ್ ಗಾಂಧಿ ಅವರನ್ನು 2024ರಲ್ಲಿ ಪ್ರಧಾನಿಯಾಗಿ ಮಾಡುವುದು ಗುರಿಯಾಗಿರಬೇಕು’ ಎಂದು ಯುವ ಕಾಂಗ್ರೆಸ್ ಕಾರ್ಯಕರ್ತರಿಗೆ ಮನವಿ ಮಾಡಿದರು.

ರಾಷ್ಟ್ರೀಯ ಯುವ ಕಾಂಗ್ರೆಸ್ ಅಧ್ಯಕ್ಷ ಬಿ.ವಿ. ಶ್ರೀನಿವಾಸ್ ಮಾತನಾಡಿ, ‘ಬಿಜೆಪಿಯವರು ಕಾಂಗ್ರೆಸ್ ಮುಕ್ತ ಭಾರತ ಎಂದು ಹೇಳುತ್ತಿದ್ದಾರೆ. ಎಲ್ಲಿಯವರೆಗೆ ಸೂರ್ಯ, ಚಂದ್ರ ಇರುತ್ತಾರೋ ಅಲ್ಲಿಯವರೆಗೆ ಕಾಂಗ್ರೆಸ್ ಪಕ್ಷ ಇರುತ್ತದೆ’ ಎಂದರು.

ಅಧಿಕಾರ ಸ್ವೀಕರಿಸಿದ ಬಳಿಕ ಮಾತನಾಡಿದ ನಲಪಾಡ್, ‘ಕಳೆದ ವರ್ಷ ಫಲಿತಾಂಶ ಬಂದರೂ ಇವತ್ತು ಅಧಿಕಾರ ಸ್ವೀಕಾರ ಮಾಡುತ್ತಿದ್ದೇನೆ. ಕಳೆದ ಒಂದು ವರ್ಷದಲ್ಲಿ ಯುವ ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕಾಗಿ ಛಲ ತೊಟ್ಟಿದ್ದೆ. ಯೂತ್ ಕಾಂಗ್ರೆಸ್ ಅನ್ನು ಯಾವ ದಿಕ್ಕಿನಲ್ಲಿ ಕೊಂಡೊಯ್ಯಬೇಕೆಂಬ ಕಾರ್ಯಸೂಚಿ ನನ್ನಲ್ಲಿದೆ’ ಎಂದರು.

‘ನನ್ನಿಂದ ಒಂದು ತಪ್ಪು ಆಗಿತ್ತು. ಯುವ ಕಾಂಗ್ರೆಸ್ ಚುನಾವಣೆಯಲ್ಲಿ ಗೆದ್ದರೂ ಅಧಿಕಾರ ಸಿಗದಿದ್ದಾಗ ತಪ್ಪು ಅರಿವಾಯಿತು. ಆದರೆ, ನಿಮ್ಮ ಮನೆ ಮಗನಾಗಿ ತಪ್ಪು ಕ್ಷಮಿಸಬೇಕು’ ಎಂದು ಮನವಿ ಮಾಡಿದರು.

ರಾಜ್ಯ ಯುವ ಕಾಂಗ್ರೆಸ್ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡ ಮೊಹಮ್ಮದ್ ನಲಪಾಡ್ ಅವರಿಗೆ ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಮತ್ತು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ಯುವ ಕಾಂಗ್ರೆಸ್ ಧ್ವಜ ನೀಡಿದರು. ಯುವ ಕಾಂಗ್ರೆಸ್ ರಾಷ್ಟ್ರೀಯ ಅಧ್ಯಕ್ಷ ಬಿ.ವಿ. ಶ್ರೀನಿವಾಸ್, ಕೆಪಿಸಿಸಿ ಕಾರ್ಯಾಧ್ಯಕ್ಷರಾದ ಸಲೀಂ ಅಹ್ಮದ್, ಆರ್. ಧ್ರುವನಾರಾಯಣ ಇದ್ದರು ಪ್ರಜಾವಾಣಿ ಚಿತ್ರ

ಮತ್ತೆ ಅಸಮಾಧಾನ ಬಹಿರಂಗ

ಮೊಹಮ್ಮದ್ ನಲಪಾಡ್ ಅವರಿಗೆ ಅಧಿಕಾರ ಹಸ್ತಾಂತರಿಸಬೇಕಿದ್ದ ಯುವ ಕಾಂಗ್ರೆಸ್ ನಿಕಟಪೂರ್ವ ಅಧ್ಯಕ್ಷ ರಕ್ಷಾ ರಾಮಯ್ಯ ಗೈರಾಗಿದ್ದರು. ಈ ಮೂಲಕ, ಯುವ ಕಾಂಗ್ರೆಸ್‌ನಲ್ಲಿ ಅಸಮಾಧಾನ ಮತ್ತೊಮ್ಮೆ ಬಹಿರಂಗಗೊಂಡಿದೆ.

ಯುವ ಕಾಂಗ್ರೆಸ್ ಅಧ್ಯಕ್ಷ ಸ್ಥಾನ ವಿಚಾರದಲ್ಲಿ ನಲಪಾಡ್ ಹಾಗೂ ರಕ್ಷಾ ರಾಮಯ್ಯ ನಡುವೆ ಭಿನ್ನಾಭಿಪ್ರಾಯ ತಲೆದೋರಿತ್ತು. ಯುವ ಕಾಂಗ್ರೆಸ್ ಚುನಾವಣೆಯಲ್ಲಿ ನಲಪಾಡ್ ಅವರಿಗೆ ಹೆಚ್ಚಿನ ಮತ ಬಂದಿದ್ದರೂ ಅಧ್ಯಕ್ಷ ಸ್ಥಾನ ಸಿಕ್ಕಿರಲಿಲ್ಲ. ಚುನಾವಣೆಯಲ್ಲಿ ನಕಲಿ ಮತದಾನ ಮಾಡಲಾಗಿದೆ ಎಂಬ ಶಂಕೆಯೂ ವ್ಯಕ್ತವಾಗಿತ್ತು. ಮತ್ತೊಂದೆಡೆ ನಲಪಾಡ್ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಾಗಿದ್ದ ಕಾರಣ ಕಾಂಗ್ರೆಸ್ ಮುಖಂಡರು ರಕ್ಷಾ ರಾಮಯ್ಯಗೆ ಅಧಿಕಾರ ನೀಡಿದ್ದರು. ಆ ಬಳಿಕ ನಡೆದ ‘ಸಂಧಾನ’ ಸೂತ್ರದಂತೆ, ಇದೀಗ ನಲಪಾಡ್ ಅವರು ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ್ದಾರೆ.

KSBCL ಕರ್ನಾಟಕ ರಾಜ್ಯ ಪಾನೀಯ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ದಿಮೆ)
4ನೇ ಮಹಡಿ, ಟಿಟಿಎಂಸಿ ಬಿಲ್ಡಿಂಗ್ 'ಎ' ಬ್ಲಾಕ್, ಬಿಎಂಟಿಸಿ, ಕೆ.ಹೆಚ್. ರಸ್ತೆ, ಶಾಂತಿನಗರ, ಬೆಂಗಳೂರು–560 027. ಫೋ: 22483636/38/39 ಫ್ಯಾಕ್ಸ್:22483645/22113106
ಸಂಖ್ಯೆ: ADM1-027/Tender/Security/Corrigendum/2021/ Date: 10.02.2022

ಟೆಂಡರ್ ಪ್ರಕಟಣೆ

Sub: Amendment/Addendum/Corrigendum to Tender Notification No. ADM1-027/Tender/Security/2022-23 Dtd: 12.01.2022

ನಿಗಮಕ್ಕೆ ಭದ್ರತಾ ಸಿಬ್ಬಂದಿ ಮತ್ತು ಬೆಂಗಾವಲು ಭದ್ರತಾ ಸಿಬ್ಬಂದಿಯ ಸೇವೆಯನ್ನು ಒದಗಿಸುವ ಸಂಬಂಧ ದಿನಾಂಕ: 13.01.2022 ರಂದು ಈ ಪತ್ರಿಕೆಯಲ್ಲಿ ನೀಡಲಾಗಿದ್ದ ನಿಗಮದ ಪ್ರಕಟಣೆ ಸಂಖ್ಯೆ:ADM1-027/Tender/Security/2022-23 Date: 12.01.2022ನ್ನು ದಯವಿಟ್ಟು ಗಮನಿಸುವುದು.

ಆಡಳಿತಾತ್ಮಕ ಕಾರಣಗಳಿಂದಾಗಿ ಬಿಡ್ಡುದಾರರು ಬಿಡ್ ದಾಖಲೆಗಳನ್ನು ಅಪ್‌ಲೋಡ್ ಮಾಡಲು ನಿಗದಿಪಡಿಸಿದ್ದ ಕೊನೆಯ ದಿನಾಂಕವನ್ನು ದಿನಾಂಕ: 19.02.2022ರ ಸಂಜೆ 5:30 ಗಂಟೆಯವರೆಗೆ ವಿಸ್ತರಿಸಲಾಗಿದೆ. ಈ ಸಂಬಂಧ ಪರಿಷ್ಕೃತ ಕಾಲಕ್ರಮ, ಭದ್ರತಾ ಸಿಬ್ಬಂದಿ ಮತ್ತು ಬೆಂಗಾವಲು ಸಿಬ್ಬಂದಿಗಳ ಎರಡೂ ಬಿಡ್ ದಾಖಲೆಗಳಿಗೆ ನೀಡಿರುವ ತಿದ್ದುಪಡಿ / ಸೇರ್ಪಡೆ (Revised calender of events, Amendments / Addendums / Corrigendum) ವಿವರಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಪ್ರಕಟಿಸಲಾಗಿರುತ್ತದೆ. ಈ ಸಂಬಂಧ ಹೆಚ್ಚಿನ ಮಾಹಿತಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್ https://eproc.karnataka.gov.in ಮತ್ತು ksbcl.com ನ್ನು ಸಂಪರ್ಕಿಸುವುದು. ಪರಿಷ್ಕೃತ ಟೆಂಡರ್ ಕಾಲಕ್ರಮ ಈ ಕೆಳಗಿನಂತಿರುತ್ತದೆ.

1) ಬಿಡ್ಡುಗಳನ್ನು ಅಪ್‌ಲೋಡ್ ಮಾಡಲು ಕೊನೆಯ **ದಿನಾಂಕ: 19.02.2022ರ ಸಂಜೆ 5:30 ರವರೆಗೆ.** 2) ತಾಂತ್ರಿಕ ಬಿಡ್ಡುಗಳನ್ನು ತೆರೆಯುವ **ದಿನಾಂಕ: 21.02.2022ರಂದು ಬೆಳಿಗ್ಗೆ 11:30ರ ನಂತರ.** 3) ಆರ್ಥಿಕ ಬಿಡ್ಡುಗಳನ್ನು ತೆರೆಯುವ **ದಿನಾಂಕ: 28.02.2022 ರಂದು ಬೆಳಿಗ್ಗೆ 11:30ರ ನಂತರ.**

ವಾಸಾಸಂಇ/ಬೆಂನ/ಜಿಎ/3332/2021–22 ಸಹಿ/– ಕಾರ್ಯನಿರ್ವಾಹಕ ನಿರ್ದೇಶಕರು (ಹ&ಆ)

ಕೋವಿಡ್–19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಟಿವಿಸಿಸಿ ಸಿಇ, ಎಇಇ ಲೋಪ– ಲೋಕಾಯುಕ್ತ ತನಿಖೆಯಿಂದ ಅಕ್ರಮವಾಗಿರುವುದು ಬಹಿರಂಗ

ತಪಾಸಣೆ ನಡೆಸದೆ ಬಿಲ್ ಪಾವತಿಗೆ ಶಿಫಾರಸು!

• ರಾಜೇಶ್ ರೈ ಚಟ್ಲ

ಆರ್. ಆರ್. ನಗರ ಮೊಗೆದಷ್ಟು ಅಕ್ರಮ

ಬೆಂಗಳೂರು: ಹಣಕಾಸು ಹಗರಣ, ಅವ್ಯವಹಾರಗಳನ್ನು ಪತ್ತೆ ಹಚ್ಚುವ ಉದ್ದೇಶದಿಂದ ಬಿಬಿಎಂಪಿಯಲ್ಲಿ ಮುಖ್ಯ ಆಯುಕ್ತರ ತಾಂತ್ರಿಕ ಮತ್ತು ಜಾಗೃತ ಕೋಶ (ಟಿವಿಸಿಸಿ) ಸ್ಥಾಪಿಸಲಾಗಿದೆ. 'ಕಾಮಗಾರಿಗಳನ್ನು ಅನುಷ್ಠಾನವೇ ಮಾಡದಿದ್ದರೂ, ಅವು ಅನುಷ್ಠಾನ ಆಗಿವೆ' ಎಂದು ಟಿವಿಸಿಸಿ ಅಧಿಕಾರಿಗಳು ವರದಿ ನೀಡುವ ಮೂಲಕ ಬಿಲ್ ಪಾವತಿಗೆ ಸಹಕರಿಸಿರುವುದು ಲೋಕಾಯುಕ್ತ ತನಿಖೆಯಲ್ಲಿ ಗೊತ್ತಾಗಿದೆ.

ಆರ್.ಆರ್. ನಗರ ವಿಧಾನಸಭಾ ಕ್ಷೇತ್ರದಲ್ಲಿ ಮುಖ್ಯಮಂತ್ರಿ ನವ ನಗರೋತ್ಥಾನ ಅನುದಾನದ ಅಡಿಯಲ್ಲಿ ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಗಮ (ಕೆಆರ್‌ಐಡಿಎಲ್) ಅನುಷ್ಠಾನಗೊಳಿಸಿದ ಕಾಮಗಾರಿಗಳಲ್ಲಿನ ಅಕ್ರಮಗಳ ತನಿಖೆ ನಡೆಸಿದ್ದ ಲೋಕಾಯುಕ್ತ ನ್ಯಾಯಮೂರ್ತಿ (ಜನವರಿ 26ರಂದು ನಿವೃತ್ತರಾಗಿದ್ದಾರೆ) ಪಿ. ವಿಶ್ವನಾಥ ಶೆಟ್ಟಿ, ಸರ್ಕಾರಕ್ಕೆ ಸಲ್ಲಿಸಿರುವ ವರದಿಯಲ್ಲಿ ಅಧಿಕಾರಿಗಳ ಕರ್ತವ್ಯಲೋಪವನ್ನು ಎತ್ತಿ ತೋರಿಸಿದ್ದಾರೆ.

'ಬಿಬಿಎಂಪಿಯ ಹಣ ದುರ್ಬಳಕೆ ಆಗದಂತೆ ನಿಗಾ ವಹಿಸುವುದು ಟಿವಿಸಿಸಿ ಕರ್ತವ್ಯ. ಆದರೆ, ಈ ಕೋಶ ತನ್ನ ಕರ್ತವ್ಯ ನಿರ್ವಹಿಸುವಲ್ಲಿ ಸಂಪೂರ್ಣ ವಿಫಲವಾಗಿದೆ' ಎಂದು ವರದಿಯಲ್ಲಿ ಉಲ್ಲೇಖಿಸಿದ್ದಾರೆ.

ಆರ್.ಆರ್. ನಗರ ವಿಧಾನಸಭಾ ಕ್ಷೇತ್ರದಲ್ಲಿ ಕೆಆರ್‌ಐಡಿಎಲ್ ಅನುಷ್ಠಾನಗೊಳಿಸಿದ 116 ಕಾಮಗಾರಿಗಳೂ ಸೇರಿ ಒಟ್ಟು 269 ಕಾಮಗಾರಿಗಳ ಸ್ಥಳ ತಪಾಸಣೆ ನಡೆಸಿ, ವರದಿ ನೀಡಲು ಬಿಬಿಎಂಪಿ ಮುಖ್ಯ ಆಯುಕ್ತರು ತಾಂತ್ರಿಕ ಮತ್ತು ಜಾಗೃತ ಕೋಶಕ್ಕೆ (ಟಿವಿಸಿಸಿ) ಸೂಚಿಸಿದ್ದರು.

'ಅಳತೆ ಪುಸ್ತಕದಲ್ಲಿ (ಎಂ.ಬಿ) ದಾಖಲಿಸಿದಷ್ಟು ಪ್ರಮಾಣದಲ್ಲಿ ಕಾಮಗಾರಿ ಅನುಷ್ಠಾನಗೊಳ್ಳದೇ ಇದ್ದರೂ, ಟಿವಿಸಿಸಿ ಮುಖ್ಯ ಎಂಜಿನಿಯರ್ (ಸಿಇ) ದೊಡ್ಡಯ್ಯ ಮತ್ತು ಸಹಾಯಕ ಕಾರ್ಯಪಾಲಕ ಎಂಜಿನಿಯರ್ (ಎಇಇ) ಸತೀಶ್ ಅವರು 'ಅನುಷ್ಠಾನಗೊಂಡಿದೆ' ಎಂದು ವರದಿ ನೀಡಿದ್ದಾರೆ. ಕೆಲವು ಕಾಮಗಾರಿಗಳು ಅನುಷ್ಠಾನವೇ ಆಗಿಲ್ಲ. ಆ ಮೂಲಕ, ಇಬ್ಬರೂ ನಕಲಿ ವರದಿ ನೀಡಿರುವುದು ಮೇಲ್ನೋಟಕ್ಕೆ ಗೊತ್ತಾಗುತ್ತಿದೆ' ಎಂದು ತನಿಖಾ ವರದಿಯಲ್ಲಿ ಹೇಳಲಾಗಿದೆ.

'ಕೆಆರ್‌ಐಡಿಎಲ್ ಅನುಷ್ಠಾನಗೊಳಿಸಿದ್ದ ಕಾಮಗಾರಿಗಳ ಬಿಲ್ ಪಾವತಿಯನ್ನು ಬಿಬಿಎಂಪಿ ತಡೆಹಿಡಿದಿತ್ತು. ಆದರೆ, ಈ ಕಾಮಗಾರಿಗಳ ಪೈಕಿ ಮುಖ್ಯಮಂತ್ರಿಗಳ ನವ ನಗರೋತ್ಥಾನ ಅನುದಾನದ ಅಡಿಯಲ್ಲಿ ನಿಗಮ ಅನುಷ್ಠಾನಗೊಳಿಸಿದ 269 ಕಾಮಗಾರಿಗಳ ಸ್ಥಳ ತಪಾಸಣೆ ನಡೆಸಿ, ವರದಿ ನೀಡಲು ಬಿಬಿಎಂಪಿಯು ಟಿವಿಸಿಸಿಗೆ ವಹಿಸಿದ್ದು, ಅಲ್ಲಿಂದ ವರದಿ ಪಡೆಯಲಾಗಿದೆ' ಎಂದು ಪಾಲಿಕೆ ಆಯುಕ್ತರು 2020ರ ಜುಲೈ6ರಂದು ನಿಗಮದ ವ್ಯವಸ್ಥಾಪಕ ನಿರ್ದೇಶಕರಿಗೆ ಪತ್ರ ಬರೆದಿದ್ದರು. ಕಾಮಗಾರಿ ಅನುಷ್ಠಾನಗೊಳಿಸದೆ ಹಣ ಪಾವತಿಯಾಗಿದೆ ಎಂಬ ವಿಷಯದ ವಿಚಾರಣೆ ವೇಳೆ ನಿಗಮ ಸಲ್ಲಿಸಿದ ಕಡತದಲ್ಲಿ ಈ ಪತ್ರವೂ ಇತ್ತು. ಅದರರ್ಥ, ಕಾಮಗಾರಿ ಅನುಷ್ಠಾನಗೊಂಡಿರುವ ಬಗ್ಗೆ ಟಿವಿಸಿಸಿ ದೃಢಪಡಿಸಿದ ಬಳಿಕವಷ್ಟೇ ಹಣ ಪಾವತಿಗೆ ಆಗಿದೆ ಎಂಬ ಅಂಶವೂ ಈ ವರದಿಯಲ್ಲಿದೆ.

ಲೋಕಾಯುಕ್ತಕ್ಕೆ ಉತ್ತರಿಸಿರುವ ದೊಡ್ಡಯ್ಯ ಮತ್ತು ಸತೀಶ್, 'ಕಾಮಗಾರಿಗಳ ಬಿಲ್‌ಗಳ ಆನ್‌ಲೈನ್ ಪಾವತಿಗೂ ಮೊದಲು ಆ ಬಿಲ್‌ಗಳನ್ನು ಕಾರ್ಯಪಾಲಕ ಎಂಜಿನಿಯರ್‌ಗಳು ತಪಾಸಣೆಗಾಗಿ ಟಿವಿಸಿಸಿಗೆ ಸಲ್ಲಿಸುತ್ತಾರೆ. ಕಾಮಗಾರಿ ಗುಣಮಟ್ಟದಿಂದ ಕೂಡಿದೆಯೇ ಎಂದು ಕೋಶವು ಪರಿಶೀಲಿಸುತ್ತದೆ. ಆ ಬಳಿಕ, ಆನ್‌ಲೈನ್ ಮೂಲಕ ಹಣ ಪಾವತಿಸಲಾಗುತ್ತದೆ. ಕೋಶದ ಪರಿಶೀಲನೆಯ ಬಳಿಕವೇ ಹಣ ಪಾವತಿಗೆ ಬಿಲ್‌ಗಳು ಮುಖ್ಯ ಲೆಕ್ಕ ಪರಿಶೋಧಕರಿಗೆ ಹೋಗಿವೆ' ಎಂದು ಸಮರ್ಥನೆ ನೀಡಿದ್ದರು.

ಮತ್ತೊಂದೆಡೆ, ಈ ಇಬ್ಬರೂ 'ಸಂಬಂಧಿಸಿದ ಕಾರ್ಯಪಾಲಕ ಎಂಜಿನಿಯರ್‌ಗಳು ಆನ್‌ಲೈನ್ ಮೂಲಕ ಕಾಮಗಾರಿಗಳ ದಾಖಲೆಗಳನ್ನು ಸಲ್ಲಿಸುತ್ತಾರೆ. ಈ ಪೈಕಿ, ಶೇ 10ರಷ್ಟು ಕಾಮಗಾರಿಗಳನ್ನು ಮಾತ್ರ ಆನ್‌ಲೈನ್ ಮೂಲಕ ಕೋಶಕ್ಕೆ ಸಲ್ಲಿಸಲಾಗುತ್ತದೆ. ಉಳಿದ ಕಡತಗಳನ್ನು ನೇರವಾಗಿ ಮುಖ್ಯ ಲೆಕ್ಕಪರಿಶೋಧಕರಿಗೆ ಕಳುಹಿಸಲಾಗುತ್ತದೆ. ಈ ಶೇ 10ರಷ್ಟು ಕಾಮಗಾರಿಗಳನ್ನು ಮಾತ್ರ ಕೋಶ ತಪಾಸಣೆ ನಡೆಸುತ್ತದೆ. ನಮಗೆ ಕಳುಹಿಸಿದ ಶೇ 10ರಷ್ಟು ಕಾಮಗಾರಿಗಳಲ್ಲಿ ಮಾತ್ರ ಗುಣಮಟ್ಟದ ಕೆಲಸ ಆಗಿದೆಯೇ, ಟೆಂಡರ್‌ನಲ್ಲಿ ಇರುವಂತೆ ಅಳತೆಯಲ್ಲಿ ಇದೆಯೇ ಎಂದು ಪರಿಶೀಲಿಸಲಾಗಿದೆ' ಎಂದು ತಿಳಿಸಿದ್ದಾರೆ.

ಈ ಅಧಿಕಾರಿಗಳ ಹೇಳಿಕೆಯಲ್ಲೇ ದ್ವಂದ್ವ ಇದೆ. ಶೇ 10ರಷ್ಟು ಕಾಮಗಾರಿಗಳನ್ನೂ ಅವರು ತಪಾಸಣೆ ಮಾಡಿಲ್ಲ ಎನ್ನುವ ಅಂಶ ಲೋಕಾಯುಕ್ತ ವರದಿಯಲ್ಲಿದೆ.

ಸ್ವಚ್ಛ-ಸುಂದರ ಬೆಂಗಳೂರಿನತ್ತ ನಮ್ಮ ನಡೆ

ಪ್ರಜಾವಾಣಿ ಸ್ವಚ್ಛ ಬೆಂಗಳೂರು

ವೆಬಿನಾರ್

ವಿಷಯ: ಘನ ತ್ಯಾಜ್ಯ ನಿರ್ವಹಣೆ

ಇಂದು ಸಂಜೆ: 4.30ಕ್ಕೆ

ಮುಖ್ಯ ಅತಿಥಿಗಳು

- ಗೌರವ್ ಗುಪ್ತ, ಆಯುಕ್ತರು, ಬಿಬಿಎಂಪಿ
- ವಿಲ್ಮಾ ರೋಡ್ರಿಗಸ್, ಸಿಇಒ, ಸಾಹಸ್ ಜೀರೋ ವೇಸ್ಟ್
- ಸಂಧ್ಯಾ ನಾರಾಯಣ್, ಸದಸ್ಯೆ ಎಸ್‌ಡಬ್ಲ್ಯುಎಂಆರ್‌ಟಿ
- ಸರ್ಫರಾಜ್ ಖಾನ್, ಜಂಟಿ ಆಯುಕ್ತರು (ಎಸ್‌ಡಬ್ಲ್ಯುಎಂ) ಬಿಬಿಎಂಪಿ
- ರತ್ನ ವಿ, ಆಫೀಸ್ ಬೇರರ್ ಬಿಬಿಎಂಪಿ ಪೌರಕಾರ್ಮಿಕರ ಸಂಘ
- ಶ್ರೀನಿವಾಸ್ ಅಲವಿಲ್ಲಿ, ನಾಗರೀಕ ವಿಭಾಗದ ಮುಖ್ಯಸ್ಥರು, ಜನಾಗ್ರಹ, ಮಾಡರೇಟರ್

ಇಂದೇ ಹೆಸರು ನೋಂದಾಯಿಸಿಕೊಳ್ಳಿ

bit.ly/PVBengaluru

701 ದಿನ ಹೋರಾಟ: ಕೊನೆಯುಸಿರೆಳೆದ ಬಾಲಕಿ

ರೈಚಲ್ ಪ್ರಿಶಾ

ಬೆಂಗಳೂರು: ತಲೆ ಮೇಲೆ ಕೊಂಬೆ ಬಿದ್ದು ಪ್ರಜ್ಞೆ ಕಳೆದುಕೊಂಡು 701 ದಿನ ಸಾವು ಬದುಕಿನ ನಡುವೆ ಹೋರಾಡುತ್ತಿದ್ದ ಬಾಲಕಿ ರೈಚಲ್ ಪ್ರಿಶಾ (8), ಚಿಕಿತ್ಸೆಗೆ ಸ್ಪಂದಿಸದೇ ಮಣಿಪಾಲ್ ಆಸ್ಪತ್ರೆಯಲ್ಲಿ ಗುರುವಾರ ಕೊನೆಯುಸಿರೆಳೆದಿದ್ದಾಳೆ.

'ಎರಡನೇ ತರಗತಿಯಲ್ಲಿ ಓದುತ್ತಿದ್ದ ಪ್ರಿಶಾ, ಪರೀಕ್ಷಾ ಪ್ರವೇಶ ಪತ್ರ ತರಲೆಂದು 2020ರ ಮಾರ್ಚ್ 11ರಂದು ತಂದೆ ರಾಜು ಜೊತೆ ಬೈಕ್‌ನಲ್ಲಿ ಶಾಲೆಯತ್ತ ಹೊರಟಿದ್ದಳು. ಕೌದೇನಹಳ್ಳಿ ಮುಖ್ಯರಸ್ತೆಯಲ್ಲಿ ಅರಳಿ ಮರದ ದೊಡ್ಡ ಕೊಂಬೆಯೊಂದು ಆಕೆಯ ತಲೆ ಮೇಲೆ ಬಿದ್ದಿತ್ತು' ಎಂದು ಕೆ.ಆರ್. ಪುರ ಪೊಲೀಸರು ಹೇಳಿದರು.

'ತೀವ್ರವಾಗಿ ಗಾಯಗೊಂಡಿದ್ದ ಪ್ರಿಶಾ, ಕೋಮಾ ಸ್ಥಿತಿಗೆ ತಲುಪಿದ್ದಳು. ಆರಂಭದಲ್ಲಿ ಕೋಶಿಷ್ ಆಸ್ಪತ್ರೆಗೆ ಕರೆದೊಯ್ಯಲಾಗಿತ್ತು. ಹೆಚ್ಚಿನ ಚಿಕಿತ್ಸೆಗಾಗಿ ಮಣಿಪಾಲ್ ಆಸ್ಪತ್ರೆಗೆ ದಾಖಲಿಸಲಾಗಿತ್ತು. ತಲೆಯ ಚಿಪ್ಪಿಗೆ ಪೆಟ್ಟು ಬಿದ್ದು, ಊದಿಕೊಂಡಿತ್ತು'

'ಪ್ರಿಶಾ ಸ್ಥಿತಿ ಕೆಲದಿನಗಳಿಂದ ಹದಗೆಟ್ಟಿತ್ತು. ಗುರುವಾರ ಬೆಳಿಗ್ಗೆ ಆಕೆ ತೀರಿಕೊಂಡಿದ್ದಾಳೆ.' ಎಂದೂ ತಿಳಿಸಿದರು.

20ಕ್ಕೆ ಉಚಿತ ಹೃದಯ ಪರೀಕ್ಷೆ

ಬೆಂಗಳೂರು: ಉದಯಭಾನು ಕಲಾ ಸಂಘವು 33ನೇ ಉಚಿತ ಹೃದಯ ಪರೀಕ್ಷೆ ಮತ್ತು ಸಲಹಾ ಶಿಬಿರವನ್ನು ಇದೇ 20ರಂದು ಬೆಳಿಗ್ಗೆ 10 ರಿಂದ 12 ಗಂಟೆವರೆಗೆ ಹಮ್ಮಿಕೊಂಡಿದೆ.

ಕೆಂಪೇಗೌಡನಗರದಲ್ಲಿರುವ ಕಲಾ ಸಂಘದ ಸುವರ್ಣ ಭವನ ಆರೋಗ್ಯ ಪಾಲನಾ ಕೇಂದ್ರದಲ್ಲಿ ಈ ಶಿಬಿರ ನಡೆಯಲಿದೆ. ಎಸ್.ಎಸ್. ಸ್ಪರ್ಶ್ ಆಸ್ಪತ್ರೆಯ ತಜ್ಞ ವೈದ್ಯರು ಶಿಬಿರ ನಡೆಸಿಕೊಡಲಿದ್ದಾರೆ ಎಂದು ಸಂಘದ ಸಂಸ್ಥಾಪನಾ ಗೌರವ ಕಾರ್ಯದರ್ಶಿ ಎಂ. ನರಸಿಂಹ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಂಪರ್ಕಕ್ಕೆ: 080 2660 9343 ಅಥವಾ 26601831

ನಗರದಲ್ಲಿ ಇಂದು

ಪಂ. ಶೇಷಗಿರಿ ಹಾನಗಲ್ ಅವರ ಜನ್ಮಶತಮಾನೋತ್ಸವ ಸಮಾರಂಭ: ಉದ್ಘಾಟನೆ: ಪಂ. ವಿನಾಯಕ ತೊರವಿ, ಮುಖ್ಯ ಅತಿಥಿಗಳು: ಚಿರಂಜೀವಿ ಸಿಂಗ್, ಪಂ. ರವೀಂದ್ರ ಯಾವಗಲ್, ಅಧ್ಯಕ್ಷತೆ: ಆನೂರು ಅನಂತಕೃಷ್ಣ ಶರ್ಮ, ಆಯೋಜನೆ: ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ, ಸ್ಥಳ: ಡಾ. ಅಶ್ವಥ್ ಕಲಾ ಭವನ, ಎನ್.ಆರ್. ಕಾಲೊನಿ, ಸಂಜೆ 6.30

ಉಪನ್ಯಾಸ: 'ಡಾ. ಸಿದ್ಧಲಿಂಗಯ್ಯನವರ ಹೋರಾಟ ಮತ್ತು ಕಾವ್ಯದ ಅನನ್ಯತೆ', ಉಪನ್ಯಾಸಕರು: ಪ್ರೊ.ಎಂ.ಎಸ್. ಶೇಖರ್, ಗಾಯನ: ಬಾನಂದೂರು ಕೆಂಪಯ್ಯ, ಸಿ.ಎಂ. ನರಸಿಂಹಮೂರ್ತಿ, ನಿರ್ವಹಣೆ: ಎಚ್. ಲಕ್ಷ್ಮೀನಾರಾಯಣಸ್ವಾಮಿ, ಆಯೋಜನೆ: ಸಿದ್ಧಲಿಂಗಯ್ಯ ಸ್ಮಾರಕ ಪ್ರತಿಷ್ಠಾನ, ಸಂಜೆ 7 (ಆನ್‌ಲೈನ್ ಕಾರ್ಯಕ್ರಮ)

ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಸ್ಪರ್ಧೆ: ಎಚ್‌ಡಿಕೆ

ಪ್ರಜಾವಾಣಿ ವಾರ್ತೆ

ಮೈಸೂರು: 'ಮುಂದಿನ ವಿಧಾನಸಭೆ ಚುನಾವಣೆಗೆ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಸ್ಪರ್ಧಿಸುತ್ತೇನೆ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಹೇಳಿದರು.

ನಗರದಲ್ಲಿ ಅವರು ಗುರುವಾರ ಸುದ್ದಿಗಾರರೊಡನೆ ಮಾತನಾಡುವ ಸಂದರ್ಭದಲ್ಲಿ ಕಾರ್ಯಕರ್ತರೊಬ್ಬರು, 'ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಯಾರು ಸ್ಪರ್ಧಿಸುತ್ತಾರೆ' ಎಂದು ಕೇಳಿದಾಗ, 'ನಾನೇ ಈ ಕ್ಷೇತ್ರಕ್ಕೆ ಬರುತ್ತೇನೆ' ಎಂದು ಹೇಳಿ ಅಚ್ಚರಿ ಮೂಡಿಸಿದರು.

'ಕುಟುಂಬ ರಾಜಕಾರಣದ ಹೆಸರಿನಲ್ಲಿ ನಮ್ಮ ವಿರುದ್ಧ ನಡೆಯುತ್ತಿರುವ ಅಪಪ್ರಚಾರದಿಂದ ದೂರವಾಗುವ ಸಲುವಾಗಿಯೇ, ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಅನಿತಾ ಕುಮಾರಸ್ವಾಮಿ ಸ್ಪರ್ಧಿಸುವುದು ಬೇಡ ಎಂದು ಚರ್ಚಿಸಿದ್ದೇವೆ. ಚುನಾವಣೆ ಘೋಷಣೆ ನಂತರ ಅಂತಿಮ ತೀರ್ಮಾನ ಕೈಗೊಳ್ಳಲಾಗುವುದು' ಎಂದರು.

ವೇದಿಕೆಯಲ್ಲಿ ವಾಕ್ಸಮರ: ಭಾಷಣ ಮಾಡದೆ ಹೊರನಡೆದ ಸಚಿವ, ಶಾಸಕ

ಉದ್ಘಾಟನೆಗಾಗಿ ಕಿತ್ತಾಡಿದ ಎಂಟಿಬಿ– ಶರತ್

ಪ್ರಜಾವಾಣಿ ವಾರ್ತೆ

ಹೊಸಕೋಟೆ: ಗ್ರಾಮ ಪಂಚಾಯಿತಿ ನೂತನ ಕಟ್ಟಡ ಹಾಗೂ ಡಿಜಿಟಲ್ ಗ್ರಂಥಾಲಯ ಉದ್ಘಾಟನೆ ವಿಚಾರವಾಗಿ ಗುರುವಾರ ಶಾಸಕ ಶರತ್ ಬಚ್ಚೇಗೌಡ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಉಸ್ತುವಾರಿ ಸಚಿವ ಎಂ.ಟಿ.ಬಿ. ನಾಗರಾಜ್ ಮಧ್ಯೆ ಮಾತಿನ ಚಕಮಕಿ ನಡೆಯಿತು.

ಅನುಗೊಂಡನಹಳ್ಳಿ ಹೋಬಳಿ ಮುತ್ಸಂದ್ರ ಗ್ರಾಮ ಪಂಚಾಯಿತಿ ನೂತನ ಕಟ್ಟಡ, ಡಿಜಿಟಲ್ ಗ್ರಂಥಾಲಯವನ್ನು ಶಾಸಕ ಶರತ್ ಬಚ್ಚೇಗೌಡ ಉದ್ಘಾಟಿಸುವ ಮೂಲಕ ಶಿಷ್ಟಾಚಾರ ಉಲ್ಲಂಘಿಸಿದ್ದಾರೆ ಎಂದು ಸಚಿವ ಎಂ.ಟಿ.ಬಿ. ನಾಗರಾಜ್ ಆಕ್ಷೇಪ ವ್ಯಕ್ತಪಡಿಸಿದರು. ಇದರಿಂದಾಗಿ ಕೆಲ ಕಾಲ ವೇದಿಕೆಯಲ್ಲಿ ಗೊಂದಲದ ವಾತಾವರಣ ಸೃಷ್ಟಿಯಾಗಿತ್ತು.

ನೂತನ ಕಟ್ಟಡದ ಟೇಪ್ ಕತ್ತರಿಸಲು ಮುಂದಾದ ಶಾಸಕ ಶರತ್ ಅವರಿಗೆ 'ಬಚ್ಚೇಗೌಡರ ಕಾಲದಿಂದಲೂ ನಿಮ್ಮದು ಇದೇ ಆಗಿ ಹೋಯಿತು' ಎಂದು ನಾಗರಾಜ್ ಕೋಪದಿಂದ ಹೇಳಿದರು. ಇದರಿಂದ ಕೆರಳಿದ ಶರತ್, 'ನನ್ನ ಬಗ್ಗೆ ಮಾತನಾಡಿ. ನನ್ನ ತಂದೆಯ ಬಗ್ಗೆ ಯಾಕೆ ಮಾತನಾಡುತ್ತೀರ' ಎಂದು ಏರುಧ್ವನಿಯಲ್ಲಿ ಪ್ರಶ್ನಿಸಿದರು. ಆಗ ಇಬ್ಬರ ನಡುವೆ ಮಾತಿನ ಚಕಮಕಿ ಆರಂಭವಾಯಿತು. ಪೊಲೀಸರು ಮಧ್ಯ ಪ್ರವೇಶಿಸಿ ಪರಿಸ್ಥಿತಿ ವಿಕೋಪಕ್ಕೆ ಹೋಗುವುದನ್ನು ತಡೆದರು.

ನಂತರ ನಡೆದ ವೇದಿಕೆ ಕಾರ್ಯಕ್ರಮದಲ್ಲೂ ಸಚಿವ ಮತ್ತು ಶಾಸಕರ ವಾಕ್ಸಮರ ಮುಂದುವರೆಯಿತು. 'ಮೊದಲು ನೀವೇ ಮಾತನಾಡಿ' ಎಂದು ಪರಸ್ಪರ ಕೋಪದಿಂದ ಹೇಳಿ ಇಬ್ಬರೂ ಭಾಷಣ ಮಾಡದೆ ತೆರಳಿದರು.

'ಸಚಿವ ಎಂ.ಟಿ.ಬಿ ನಾಗರಾಜ್ ಉದ್ಘಾಟನೆ ಸಂದರ್ಭದಲ್ಲಿ ವೈಯಕ್ತಿಕ ತೇಜೋವಧೆಯ ಮಾತನಾಡಿದರು. ನನ್ನ ತಂದೆಯ ಬಗ್ಗೆ ಕೀಳಾಗಿ ಮಾತನಾಡಿದ್ದನ್ನು ನಾನು ಪ್ರಶ್ನಿಸಲೇ ಬೇಕಾಗಿತ್ತು' ಎಂದು ಶರತ್ ಬಚ್ಚೇಗೌಡ ತಮ್ಮ ನಡೆಯನ್ನು ಸಮರ್ಥಿಸಿಕೊಂಡರು.

'ಸರ್ಕಾರದ ಪರವಾಗಿ ನಾನು ಉದ್ಘಾಟಕನಾಗಿ ಬಂದಿದ್ದೇನೆ. ಶಾಸಕರು ಅಧ್ಯಕ್ಷತೆ ವಹಿಸಿದ್ದಾರೆಯೇ ಹೊರತು ಉದ್ಘಾಟಕರಲ್ಲ. ನಮ್ಮ ಸರ್ಕಾರದ ಕಾಮಗಾರಿಗಳನ್ನೆಲ್ಲಾ ಇವರೇ ಉದ್ಘಾಟಿಸುತ್ತಾರೆ' ಎಂದು ಎಂ.ಟಿ.ಬಿ ನಾಗರಾಜ್ ಪ್ರತಿಕ್ರಿಯಿಸಿದರು.

'ಬಚ್ಚೇಗೌಡ ಕುಟುಂಬದಿಂದ ಗೂಂಡಾಗಿರಿ'

ಬೆಂಗಳೂರು: 'ಶಿಷ್ಟಾಚಾರದ ಪ್ರಕಾರ ಉಸ್ತುವಾರಿ ಸಚಿವರು ಗ್ರಾಮ ಪಂಚಾಯಿತಿ ನೂತನ ಕಟ್ಟಡ, ಡಿಜಿಟಲ್ ಗ್ರಂಥಾಲಯ ಉದ್ಘಾಟಿಸಬೇಕಿತ್ತು. ಆದರೆ, ಉಸ್ತುವಾರಿ ಸಚಿವ ಡಾ.ಕೆ. ಸುಧಾಕರ್ ಬಂದಿರಲಿಲ್ಲ. ಉಸ್ತುವಾರಿ ಇಲ್ಲದೇ ಇದ್ದರೆ ಸಚಿವನಾಗಿ ನಾನು ಉದ್ಘಾಟಿಸಬೇಕಿತ್ತು. ಆದರೆ, ಅದಕ್ಕೆ ಅವಕಾಶವನ್ನೇ ಕೊಡಲಿಲ್ಲ' ಎಂದು ಪೌರಾಡಳಿತ ಸಚಿವ ಎಂ.ಟಿ.ಬಿ ನಾಗರಾಜ್ ಕಿಡಿಕಾರಿದರು.

ಸುದ್ದಿಗಾರರ ಜೊತೆ ಗುರುವಾರ ಮಾತನಾಡಿದ ಅವರು, 'ಬಚ್ಚೇಗೌಡ ಕುಟುಂಬದರು ಹೊಸಕೋಟೆ ಕ್ಷೇತ್ರವನ್ನು ಬಿಹಾರ ರೀತಿ ಮಾಡಿದ್ದರು. ಅವರಿಂದ ಭೀತರಾಗಿ ಎಷ್ಟೋ ಜನರು ಊರು ತೊರೆದಿದ್ದಾರೆ. ಕೆರೆ, ಸ್ಮಶಾನ ಹೀಗೆ ಎಲ್ಲ ಜಾಗವನ್ನೂ ಕಬಳಿಸಿದ್ದಾರೆ. ಆ ಬಗ್ಗೆ ಮಾತನಾಡಲು ನಾನು ದಾಖಲೆ ಸಹಿತ ಸಿದ್ಧ' ಎಂದರು.

'ಮೊದಲು ಹೊಸಕೋಟೆ ಗೂಂಡಾ ತಾಲ್ಲೂಕು ಆಗಿತ್ತು. ಚುನಾವಣೆ ಸಂದರ್ಭದಲ್ಲಿ ಮಾಡಬಾರದ್ದನ್ನು ಮಾಡುತ್ತಿದ್ದರು. ಅವರು ಎಷ್ಟೋ ಕೊಲೆಗಳನ್ನು ಮಾಡಿದ್ದಾರೆ. ನಾನು ಬಂದ ಮೇಲೆ ಹೊಸಕೋಟೆ ತಾಲ್ಲೂಕು ಶಾಂತಿಯುತವಾಗಿದೆ' ಎಂದರು.

ಡಿಜಿಟಲ್ ಗ್ರಂಥಾಲಯ ಉದ್ಘಾಟನೆ ವೇಳೆ ಟೇಪ್ ಕತ್ತರಿಸುವ ವಿಚಾರವಾಗಿ ಸಚಿವ ಹಾಗೂ ಶಾಸಕರ ಮಧ್ಯೆ ವಾಕ್ಸಮರ ನಡೆಯಿತು

ಅಪಘಾತದಲ್ಲಿ ದವಡೆಗೆ ಸಿಲುಕಿದ ಕಟ್ಟಿಗೆ ತುಂಡು

ಕುಣಿಗಲ್: ತಾಲ್ಲೂಕಿನ ಬಿದನಗೆರೆ ಯೂಟರ್ನ್ ಬಳಿ ಗುರುವಾರ ರಾತ್ರಿ ಸಂಭವಿಸಿದ ರಸ್ತೆ ಅಪಘಾತದಲ್ಲಿ ವ್ಯಕ್ತಿಯ ದವಡೆಗೆ ಕಟ್ಟಿಗೆ ತುಂಡು ಸಿಲುಕಿ, ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ತೆಗೆಯಲಾಗದೆ ಬೆಂಗಳೂರಿನ ಆಸ್ಪತ್ರೆಗೆ ದಾಖಲಾಗಿದ್ದಾರೆ.

ಬೆಂಗಳೂರಿನ ಮಾದನಾಯಕನಹಳ್ಳಿಯ ಹರ್ಷ (28) ತಾಯಿ ಶಿವಮ್ಮ ಮತ್ತು ಪತ್ನಿ ಮತ್ತು ಮಕ್ಕಳೊಂದಿಗೆ ದೇವಾಲಯಗಳಿಗೆ ಭೇಟಿ ನೀಡಿ ಕಾರಿನಲ್ಲಿ ಬೆಂಗಳೂರಿಗೆ ವಾಪಸ್ ಆಗುತ್ತಿದ್ದರು. ಆಗ ಕಾರು ಚಾಲಕನ ನಿಯಂತ್ರಣ ತಪ್ಪಿ ರಸ್ತೆ ಬದಿಯ 20 ಅಡಿ ಆಳಕ್ಕೆ ಬಿದ್ದಿದೆ. ಹರ್ಷ ಅವರು ತೆಂಗಿನ ತೋಟದಲ್ಲಿ ಬಿದ್ದ ರಭಸಕ್ಕೆ ಕಟ್ಟಿಗೆಯ ತುಂಡು ದವಡೆಗೆ ಸಿಲುಕಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಕಸಾಪ ಕಾರ್ಯಕಾರಿ ಸಮಿತಿಗೆ ನೇಮಕ

ಬೆಂಗಳೂರು: ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕಾರಿ ಸಮಿತಿಯ ಪ್ರಮುಖ ಹುದ್ದೆಗಳಿಗೆ ಒಂಬತ್ತು ಮಂದಿಯನ್ನು ನೇಮಕ ಮಾಡಲಾಗಿದೆ.

ಗೌರವ ಕಾರ್ಯದರ್ಶಿಯಾಗಿ ಎಲ್.ಹರ್ಷ, ಡಾ.ಹಂ.ಗು.ರಾಜೇಶ್, ಗೌರವ ಕೋಶಾಧ್ಯಕ್ಷ ಹುದ್ದೆಗೆ ಎ.ಎಸ್.ನಾಗರಾಜಸ್ವಾಮಿ, ಮಹಿಳಾ ಸಾಹಿತಿ ಪ್ರತಿನಿಧಿಗಳಾಗಿ ಇಂದಿರಾ ಶರಣ ಜಮ್ಮಲದಿನ್ನಿ, ವಿಜಯಲಕ್ಷ್ಮಿ ಸತ್ಯಮೂರ್ತಿ, ಪರಿಶಿಷ್ಟ ಜಾತಿ ಪ್ರತಿನಿಧಿಗಳಾಗಿ ಎಸ್.ತಿಮ್ಮಯ್ಯ, ಸಿ.ಮುನಿಕೃಷ್ಣ, ಪರಿಶಿಷ್ಟ ಪಂಗಡ ಪ್ರತಿನಿಧಿಯಾಗಿ ವಿ.ರಾಮಕೃಷ್ಣ, ಸಂಘ-ಸಂಸ್ಥೆಗಳ ಪ್ರತಿನಿಧಿಯಾಗಿ ಎ.ವಿ. ಗಿರೀಶ (ಮಾಗಡಿ ಗಿರೀಶ) ಅವರನ್ನು ನೇಮಕ ಮಾಡಲಾಗಿದೆ ಎಂದು ಜಿಲ್ಲಾ ಕಸಾಪ ಅಧ್ಯಕ್ಷ ಎಂ. ಪ್ರಕಾಶಮೂರ್ತಿ ತಿಳಿಸಿದ್ದಾರೆ.

ಆರೋಗ್ಯ ಇಲಾಖೆ ನೌಕರರ ಮುಷ್ಕರ ಫೆ.14ರಿಂದ

ಬೆಂಗಳೂರು: ಸಮಾನ ವೇತನ, ಸೇವಾ ಭದ್ರತೆ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಆರೋಗ್ಯ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ಗುತ್ತಿಗೆ, ಹೊರಗುತ್ತಿಗೆ ನೌಕರರು ಇದೇ 14ರಿಂದ ಮುಷ್ಕರ ನಡೆಸಲು ನಿರ್ಧರಿಸಿದ್ದಾರೆ.

ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಇಲಾಖೆ ಗುತ್ತಿಗೆ ಹಾಗೂ ಹೊರಗುತ್ತಿಗೆ ನೌಕರರ ಸಂಘದ ನೇತೃತ್ವದಲ್ಲಿ ಮುಷ್ಕರ ನಡೆಯಲಿದೆ. 'ನೌಕರರ ಕುಂದುಕೊರತೆಗಳ ಬಗ್ಗೆ ನಿವೃತ್ತ ಐಎಎಸ್ ಅಧಿಕಾರಿ ಪಿ.ಎನ್. ಶ್ರೀನಿವಾಸಾಚಾರಿ ಅಧ್ಯಕ್ಷತೆಯ ಮಾನವ ಸಂಪನ್ಮೂಲ ಸಮಿತಿಯು ಸರ್ಕಾರಕ್ಕೆ ಈಗಾಗಲೇ ವರದಿ ಸಲ್ಲಿಸಿದೆ. ಇದನ್ನು ಅನುಷ್ಠಾನಗೊಳಿಸಲು ಹಲವಾರು ಬಾರಿ ಮನವಿ ಸಲ್ಲಿಸಲಾಗಿದೆ. ವರ್ಗಾವಣೆ, ಆರೋಗ್ಯ ಮತ್ತು ಜೀವ ವಿಮೆ ಸೇರಿದಂತೆ 14 ಪ್ರಮುಖ ಬೇಡಿಕೆಗಳನ್ನು ಈಡೇರಿಸುವಂತೆ ಹಲವಾರು ಬಾರಿ ಹೋರಾಟ ನಡೆಸಿದ್ದೇವೆ. ಆದರೆ, ಇದಕ್ಕೆ ಸರ್ಕಾರ ಸ್ಪಂದಿಸಿಲ್ಲ' ಎಂದು ಸಂಘದ ರಾಜ್ಯ ಘಟಕದ ಅಧ್ಯಕ್ಷ ವಿಶ್ವಾರಾಧ್ಯ ಎಚ್.ವೈ. ತಿಳಿಸಿದ್ದಾರೆ.

'ಇದೇ 14ರಿಂದ ಕಪ್ಪು ಪಟ್ಟಿ ಧರಿಸಿ ಮುಷ್ಕರ ನಡೆಸುತ್ತೇವೆ. ರಾಷ್ಟ್ರೀಯ ಕಾರ್ಯಕ್ರಮದ ವರದಿಗಳನ್ನು ನಿಲ್ಲಿಸಲಾಗುವುದು. ಫೆ.21ರಿಂದ ಎರಡನೇ ಹಂತದಲ್ಲಿ ಧರಣಿ ಮುಷ್ಕರ ಮಾಡಲಾಗುವುದು' ಎಂದು ಪ್ರಕಟಣೆಯಲ್ಲಿ ಆಗ್ರಹಿಸಿದ್ದಾರೆ.

SBI
ಭಾರತೀಯ ಸ್ಟೇಟ್ ಬ್ಯಾಂಕ್
ಕೇಂದ್ರ ನೇಮಕಾತಿ ಮತ್ತು ಪದೋನ್ನತಿ ವಿಭಾಗ ಕಾರ್ಪೊರೇಟ್ ಸೆಂಟರ್, ಮುಂಬೈ
ದೂರವಾಣಿ: 022-22820427; ಫ್ಯಾಕ್ಸ್: 022-22820411

ನಿಯಮಿತ/ಗುತ್ತಿಗೆ ಆಧಾರದ ಮೇಲೆ ಸ್ಪೆಷಲಿಸ್ಟ್ ವರ್ಗದ ಅಧಿಕಾರಿಗಳ ನೇಮಕಾತಿ

ನಿಯಮಿತ/ಗುತ್ತಿಗೆ ಆಧಾರದ ಮೇಲೆ ಈ ಕೆಳಗಿನ ಹುದ್ದೆಗಳಿಗೆ ಭಾರತೀಯ ನಾಗರಿಕರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ:

ಕ್ರ. ಸಂ.	ಹುದ್ದೆ	ಹೋಲಿಸಬಹುದಾದ ಸ್ಕೇಲ್/ಗ್ರೇಡ್	ಹುದ್ದೆಯ ಸ್ವರೂಪ	ಖಾಲಿ ಹುದ್ದೆ	ಜಾಹೀರಾತು ಸಂಖ್ಯೆ.
1	ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್	SMGS-IV	ಗುತ್ತಿಗೆ ಆಧಾರ	01	CRPD/SCO/ 2021-22/25
2	ಅಸಿಸ್ಟೆಂಟ್ ಮ್ಯಾನೇಜರ್ (ನೆಟ್‌ವರ್ಕ್ ಸೆಕ್ಯುರಿಟಿ ವಿಶೇಷಜ್ಞರು)	JMGS-I	ನಿಯಮಿತ	15	CRPD/SCO/ 2021-22/26
3	ಅಸಿಸ್ಟೆಂಟ್ ಮ್ಯಾನೇಜರ್ (ರೌಟಿಂಗ್ ಮತ್ತು ಸ್ವಿಚಿಂಗ್)	JMGS-I		33	
4	ಅಸಿಸ್ಟೆಂಟ್ ವೈಸ್ ಪ್ರೆಸಿಡೆಂಟ್ (ಮಾರ್‌ಕಾಮ್)	SMGS-IV	ಗುತ್ತಿಗೆ ಆಧಾರ	02	CRPD/SCO/ 2021-22/27
5	ಸೀನಿಯರ್ ಎಕ್ಸಿಕ್ಯೂಟಿವ್ (ಡಿಜಿಟಲ್ ಮಾರ್ಕೆಟಿಂಗ್)	MMGS-II		01	
6	ಸೀನಿಯರ್ ಎಕ್ಸಿಕ್ಯೂಟಿವ್ (ಸಾರ್ವಜನಿಕ ಸಂಪರ್ಕ)	MMGS-II		01	

ಅರ್ಹತಾ ಮಾನದಂಡ (ವಯಸ್ಸು, ವಿದ್ಯಾರ್ಹತೆ, ಅನುಭವ, ಉದ್ಯೋಗ ವಿವರ ಇತ್ಯಾದಿ), ಅಗತ್ಯ ಶುಲ್ಕಗಳು ಮತ್ತು ಇತರ ವಿವರಗಳು ಬ್ಯಾಂಕ್ ವೆಬ್‌ಸೈಟ್: https://bank.sbi/web/careers ಅಥವಾ https://www.sbi.co.in/ web/careers ನಲ್ಲಿ ಮೇಲೆ ತಿಳಿಸಿದ ಸಂಖ್ಯೆಯ ಅಡಿಯಲ್ಲಿ ವಿವರವಾದ ಜಾಹೀರಾತು ಲಭ್ಯವಿದೆ. ಜೊತೆಗೆ ಅರ್ಜಿಯನ್ನು ಆನ್ ಲೈನಿನಲ್ಲಿ ಸಲ್ಲಿಸಲು ಹಾಗು ಅರ್ಜಿ ಶುಲ್ಕವನ್ನು ಪಾವತಿಸಲು ಒಂದು ಲಿಂಕ್ ಸಹ ನೀಡಲಾಗಿದೆ. ಅರ್ಜಿ ಸಲ್ಲಿಸುವ ಮತ್ತು ಶುಲ್ಕವನ್ನು ಪಾವತಿಸುವ ಮೊದಲು ಅಭ್ಯರ್ಥಿಗಳು ತಮ್ಮ ಅರ್ಹತೆ ಮತ್ತು ಇತರ ವಿವರಗಳನ್ನು ಖಾತ್ರಿಪಡಿಸುವ ವಿವರವಾದ ಜಾಹೀರಾತನ್ನು ಓದಿಕೊಳ್ಳಲು ಸೂಚಿಲಾಗಿದೆ.

- **ಆನ್‌ಲೈನ್ ಅರ್ಜಿ ಸಲ್ಲಿಸುವ ಮತ್ತು ಶುಲ್ಕಪಾವತಿಸುವ ದಿನಾಂಕ :** 05.02.2022 **ರಿಂದ** 25.02.2022

ಯಾವುದೇ ವಿಚಾರಣೆಗಳಿದ್ದಲ್ಲಿ ದಯಮಾಡಿ ಈ ಲಿಂಕ್ ಮೂಲಕ ನಮಗೆ ಬರೆಯಿರಿ: **"CONTACT US" —> "Post Your Query"** ಇದು ಬ್ಯಾಂಕ್‌ನ ವೆಬ್‌ಸೈಟ್‌ನಲ್ಲಿ ಲಭ್ಯವಿದೆ.

ಸ್ಥಳ : ಮುಂಬೈ
ದಿನಾಂಕ : 05.02.2022

ಪ್ರಧಾನ ವ್ಯವಸ್ಥಾಪಕರು

ಮಾಗಡಿ ರಸ್ತೆಯಲ್ಲಿ ಗುಂಡಿ ಮುಚ್ಚುವ ಕಾಮಗಾರಿ ಆರಂಭ

ಶಿಕ್ಷಕಿ ಬಲಿ ಬಳಿಕ ರಸ್ತೆಗೆ ತೇಪೆ

• ವಿಜಯಕುಮಾರ್ ಎಸ್.ಕೆ.

ಮಾಗಡಿ ರಸ್ತೆಯಯಲ್ಲಿ ಗುಂಡಿ ಮುಚ್ಚುವ ಕಾಮಗಾರಿಗೆ ಚಾಲನೆ ನೀಡಲಾಗಿದೆ –ಪ್ರಜಾವಾಣಿ ಚಿತ್ರ/ಪ್ರಶಾಂತ್ ಎಚ್‌ಜಿ.

ಬೆಂಗಳೂರು: ರಸ್ತೆ ಗುಂಡಿಗೆ ಶಿಕ್ಷಕಿ ಬಲಿಯಾದ ಬಳಿಕ ಮಾಗಡಿ ರಸ್ತೆಗೆ ತೇಪೆ ಹಾಕುವ ಕೆಲಸವನ್ನು ಬಿಬಿಎಂಪಿ ಆರಂಭಿಸಿದೆ. ಕಾವೇರಿ ನೀರಿನ ಪೈಪ್‌ಲೈನ್ ಮತ್ತು ಒಳಚರಂಡಿ ಪೈಪ್‌ಲೈನ್‌ಗೆ ಅಗೆದಿದ್ದ ಜಾಗವನ್ನಷ್ಟೇ ಮುಚ್ಚುವ ಕಾಮಗಾರಿ ನಡೆಯುತ್ತಿದೆ.

ನಗರದ ವಾಹನ ದಟ್ಟಣೆ ರಸ್ತೆಗಳಲ್ಲಿ ಮಾಗಡಿ ರಸ್ತೆಯೂ ಒಂದು. ಟೋಲ್‌ಗೇಟ್‌ನಿಂದ ಆರಂಭವಾಗುವ ಈ ರಸ್ತೆಯನ್ನು ನೈಸ್ ರಸ್ತೆ ತನಕ ಬಿಬಿಎಂಪಿ ನಿರ್ವಹಿಸುತ್ತಿದೆ. ಕಾಮಾಕ್ಷಿಪಾಳ್ಯ ಮತ್ತು ಸುಂಕದಕಟ್ಟೆ ತನಕ ಉತ್ತಮವಾದ ರಸ್ತೆ ಇದೆ. ಸುಂಕದಕಟ್ಟೆ ದಾಟಿದ ಕೂಡಲೇ ಆರು ಪಥದ ರಸ್ತೆ ಮಾಯವಾಗುತ್ತದೆ. ಹೆಜ್ಜೆ ಹೆಜ್ಜೆಗೂ ಗುಂಡಿಗಳಿದ್ದು, ಅಲ್ಲಲ್ಲಿ ಕೆಲವು ಗುಂಡಿಗಳನ್ನು ಮುಚ್ಚಿದ್ದರೆ, ಹಲವು ಗುಂಡಿಗಳು ಹಾಗೇ ಇವೆ.

‘ಒಳಚರಂಡಿ ಮತ್ತು ಕಾವೇರಿ ನೀರಿನ ಪೈಪ್‌ಲೈನ್ ಅಳವಡಿಕೆ ಕಾಮಗಾರಿಗೆ ರಸ್ತೆಯ ಎರಡೂ ಬದಿಯಲ್ಲಿ ಉದ್ದಕ್ಕೂ ಅಗೆದು ಮಣ್ಣು ಮುಚ್ಚಲಾಗಿದೆ. ರಸ್ತೆ ಅಗೆದು ಕಾಮಗಾರಿ ನಿರ್ವಹಿಸುವ ಜಲಮಂಡಳಿಗೆ ವಾಹನ ಸಂಚಾರಕ್ಕೆ ಯೋಗ್ಯವಾಗುವಂತೆ ಸಮರ್ಪಕವಾಗಿ ಮುಚ್ಚುವ ಸೌಜನ್ಯ ಇಲ್ಲ. ಇದರಿಂದಾಗಿ ರಸ್ತೆಯಲ್ಲಿ ಸಾವು–ನೋವುಗಳು ಸಂಭವಿಸುತ್ತಿವೆ’ ಎನ್ನುತ್ತಾರೆ ಸ್ಥಳೀಯರು.

‘ಬ್ಯಾಡರಹಳ್ಳಿ ಬಳಿ ಶಿಕ್ಷಕಿ ಶರ್ಮಿಳಾ ಅವರು ಇದೇ ರೀತಿಯ ಗುಂಡಿಯಿಂದಾಗಿ ರಸ್ತೆಗೆ ಬಿದ್ದಾಗ ಅವರ ಮೇಲೆ ಲಾರಿ ಹರಿದು ಕಳೆದ ಭಾನುವಾರ ಮೃತಪಟ್ಟರು. ಅದಕ್ಕೂ ಮುನ್ನ ಪೊಲೀಸ್ ಸಿಬ್ಬಂದಿಯೊಬ್ಬರು ಸೇರಿ ಇಬ್ಬರು ಅಪಘಾತಕ್ಕೀಡಾಗಿ ಮೃತಪಟ್ಟಿದ್ದಾರೆ. ಅಪಘಾತಕ್ಕೆ ರಸ್ತೆ ಗುಂಡಿಗಳೇ ಕಾರಣವಾಗಿದ್ದರೂ, ಗುಂಡಿ ಕಾರಣವಲ್ಲ ಎಂದು ಅಧಿಕಾರಿಗಳು ವಾದಿಸುತ್ತಾರೆ. ರಸ್ತೆ ಅಭಿವೃದ್ಧಿಪಡಿಸಲು ಹಲವು ಬಾರಿ ಮನವಿ ಮಾಡಿದ್ದರೂ ವರ್ಷಗಟ್ಟಲೆಯಿಂದ ಹಾಗೇ ಉಳಿಸಿಕೊಂಡಿದೆ. ದೂಳು ಬರುತ್ತದೆ ಎಂಬ ಕಾರಣಕ್ಕೆ ಅಂಗಡಿ ಮಳಿಗೆ ನಡೆಸುವರೇ ಹಣ ಕೊಟ್ಟು ಪ್ರತಿನಿತ್ಯ ರಸ್ತೆಗೆ ನೀರು ಹಾಕಿಸುತ್ತಿದ್ದೆವು’ ಎಂದು ಬ್ಯಾಡರಹಳ್ಳಿಯ ರವಿ ಹೇಳಿದರು.

‘ಈಗ ತೇಪೆ ಹಾಕುವ ಕೆಲಸವನ್ನು ಬಿಬಿಎಂಪಿ ಆರಂಭಿಸಿದೆ. ಪೈಪ್‌ಲೈನ್ ಕಾಮಗಾರಿಗೆ ಅಗೆದಿದ್ದ ಜಾಗವನ್ನಷ್ಟೇ ಮುಚ್ಚಲಾಗುತ್ತಿದೆ. ಅಕ್ಕಪಕ್ಕದಲ್ಲಿ ರಸ್ತೆ ಅಭಿವೃದ್ಧಿಪಡಿಸುವ ಗೋಜಿಗೆ ಹೋಗುತ್ತಿಲ್ಲ. ಒಮ್ಮೆ ಪೂರ್ಣ ಪ್ರಮಾಣದಲ್ಲಿ ರಸ್ತೆ ಅಭಿವೃದ್ಧಿಪಡಿಸಿದ್ದರೆ ವಾಹನ ಸವಾರರ ಪ್ರಯಾಸ ತಪ್ಪುತ್ತಿತ್ತು. ಗುಂಡಿ ಮುಚ್ಚುವ ಕೆಲಸವನ್ನಾದರೂ ಮೊದಲೇ ಮಾಡಿದ್ದರೆ ಜೀವಗಳು ಉಳಿಯುತ್ತಿದ್ದವು’ ಎಂದರು.

‘ತುಮಕೂರು ರಸ್ತೆಯನ್ನು ನೈಸ್ ರಸ್ತೆ ಮೂಲಕ ಸಂಪರ್ಕಿಸುವವರಿಗೆ ಈ ರಸ್ತೆಯೇ ಪರ್ಯಾಯ ಮಾರ್ಗ. ನಗರದಲ್ಲಿ ಸಂಚಾರ ದಟ್ಟಣೆ ನಡುವೆ ಸಿಲುಕುವ ಬದಲು ಮಾಗಡಿ ರಸ್ತೆ, ನೈಸ್ ರಸ್ತೆ ಮೂಲಕ ತುಮಕೂರು ರಸ್ತೆ ಕಡೆಗೆ ಹೋಗಲು ಈ ಮಾರ್ಗವನ್ನು ಬಹುತೇಕ ವಾಹನ ಸವಾರರು ಆಯ್ಕೆ ಮಾಡಿಕೊಳ್ಳುತ್ತಾರೆ. ಈ ರಸ್ತೆಯನ್ನು ಸರ್ಕಾರ ಸಮರ್ಪಕವಾಗಿ ಅಭಿವೃದ್ಧಿಪಡಿಸಬೇಕು’ ಎಂದರು.

ಹೊರ ವಲಯ ಒಳ ಬೇಗುದಿ

‘ದುರಸ್ತಿ ಕಾರ್ಯ ಆರಂಭ’

‘ಸದ್ಯಕ್ಕೆ ರಸ್ತೆ ನಿರ್ವಹಣೆ ಜವಾಬ್ದಾರಿಯನ್ನು ಬಿಬಿಎಂಪಿಯೇ ನಿರ್ವಹಿಸಲಿದ್ದು, ಗುಂಡಿ ಮುಚ್ಚುವ ಕಾಮಗಾರಿ ಆರಂಭಿಸಲಾಗಿದೆ’ ಎಂದು ಬಿಬಿಎಂಪಿ ಮುಖ್ಯ ಎಂಜಿನಿಯರ್ (ರಸ್ತೆ ಮೂಲ ಸೌಕರ್ಯ) ಬಿ.ಎಸ್. ಪ್ರಹ್ಲಾದ್ ತಿಳಿಸಿದರು.

‘ಗುಂಡಿ ಮುಚ್ಚುವ ಜತೆಗೆ ಯಾರೂ ರಸ್ತೆ ಅಗೆಯದಂತೆ ನೋಡಿಕೊಳ್ಳುವುದು, ಪಕ್ಕದ ಚರಂಡಿಗಳಲ್ಲಿ ಹೂಳು ತುಂಬಿಕೊಂಡಿದ್ದರೆ ಸರಿಪಡಿಸುವುದು ಸೇರಿ ಕನಿಷ್ಠ ನಿರ್ವಹಣೆ ಮಾಡಲಾಗುವುದು’ ಎಂದರು.

‘ಎಸ್‌ಬಿಎಂ ಹೌಸಿಂಗ್’ ಅಕ್ರಮ: 320 ಮಂದಿಗೆ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ದಿ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಆಫೀಸರ್ಸ್ ಹೌಸಿಂಗ್ ಕೋ ಆಪರೇಟಿವ್ ಸೊಸೈಟಿ’ ಹೆಸರಿನಲ್ಲಿ ನಿವೇಶನ ಅಭಿವೃದ್ಧಿಪಡಿಸುವ ಆಮಿಷವೊಡ್ಡಿ ಹಣ ಪಡೆದು ವಂಚಿಸಿರುವ ಬಗ್ಗೆ ಜೆ.ಪಿ.ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಎಸ್‌ಬಿಎಂ (ಸ್ಟೇಟ್ ಬ್ಯಾಂಕ್ ಆಫ್ ಮೈಸೂರು) ನಿವೃತ್ತ ವ್ಯವಸ್ಥಾಪಕ ಎ.ವಿ. ಸತ್ಯನಾರಾಯಣ ಎಂಬುವರು ವಂಚನೆ ಬಗ್ಗೆ ದೂರು ನೀಡಿದ್ದಾರೆ. ಆರೋಪಿಗಳು ಎನ್ನಲಾದ ಕಿಶೋರ್, ಜಿ.ವಿ. ಅಜಿತ್‌ಪ್ರಸಾದ್, ಟಿ.ಎಸ್. ರಾಜಣ್ಣ, ಕೆ. ಜನಾರ್ದನ್, ಶೈಲಜಾ ಕುಮಾರಿ ಹಾಗೂ ಇತರರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಆರೋಪಿಗಳು ಹಾಗೂ ಇತರರು ಸೇರಿಕೊಂಡು ‘ದಿ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಆಫೀಸರ್ಸ್ ಹೌಸಿಂಗ್ ಕೋ ಆಪರೇಟಿವ್ ಸೊಸೈಟಿ’ ಹುಟ್ಟು ಹಾಕಿದ್ದರು. ಬ್ಯಾಂಕ್ ಉದ್ಯೋಗಿಗಳಿಗೆ ಕಡಿಮೆ ದರದಲ್ಲಿ ನಿವೇಶನ ಕೊಡುವುದಾಗಿ ಆಮಿಷವೊಡ್ಡಿದ್ದರು.’

‘ದೂರುದಾರ ಸತ್ಯನಾರಾಯಣ ಸೇರಿ 320 ಮಂದಿಯನ್ನು ಸಂಪರ್ಕಿಸಿದ್ದ ಆರೋಪಿಗಳು, ‘ಜಿ.ಪಿ. ಗೋಲ್ಡನ್ ಹೋಮ್ಸ್ ಪ್ರಾಪರ್ಟಿ ಕಂಪನಿ ಜೊತೆ ಸೇರಿ ದೇವನಹಳ್ಳಿ ತಾಲ್ಲೂಕಿನ ಸಿಂಗರಹಳ್ಳಿ ಗ್ರಾಮದ ಬಳಿ ಹೊರ ಬಡಾವಣೆ ನಿರ್ಮಿಸಲಾಗುತ್ತಿದೆ. ಬ್ಯಾಂಕ್ ಉದ್ಯೋಗಿಗಳಿಗಾಗಿ, ಪ್ರತಿ ಚದರ್ ಅಡಿಗೆ ₹ 550 ದರ ನಿಗದಿ ಮಾಡಲಾಗಿದೆ’ ಎಂದಿದ್ದರು. ಅದನ್ನು ನಂಬಿದ್ದ ದೂರುದಾರ ಹಾಗೂ ಇತರರು, ಹಣ ನೀಡಿ ನಿವೇಶನ ಕಾಯ್ದಿರಿಸಿದ್ದರು’ ಎಂದೂ ಪೊಲೀಸ್ ಮೂಲಗಳು ತಿಳಿಸಿವೆ.

‘ಹಲವು ವರ್ಷವಾದರೂ ಬಡಾವಣೆ ಅಭಿವೃದ್ಧಿಯಾಗಿಲ್ಲ. ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರದ ಅನುಮೋದನೆಯೂ ಬಡಾವಣೆಗೆ ಸಿಕ್ಕಿಲ್ಲ. ಆಸ್ತಿಯ ಮದರ್ ಡೀಡ್ ಸಹ ಕಾನೂನುಬದ್ಧವಿಲ್ಲ. ಇದೇ ಕಾರಣಕ್ಕೆ ಬಡಾವಣೆಯ ಭೂ ಪರಿವರ್ತನೆ ಆದೇಶಗಳನ್ನೂ ಬೆಂಗಳೂರು ಗ್ರಾಮಾಂತರ ಜಿಲ್ಲಾಧಿಕಾರಿ ರದ್ದುಪಡಿಸಿದ್ದಾರೆ. ನಿವೇಶನ ಆಮಿಷವೊಡ್ಡಿ ಆರೋಪಿಗಳು, 320 ಮಂದಿಯಿಂದ ಹಣ ಪಡೆದು ವಂಚಿಸಿದ್ದಾರೆ. ಈ ಸಂಗತಿ ದೂರಿನಲ್ಲಿದೆ’ ಎಂದೂ ಪೊಲೀಸ್ ಮೂಲಗಳು ವಿವರಿಸಿವೆ.

‘ದೂರಿನನ್ವಯ ದಾಖಲೆಗಳ ಪರಿಶೀಲನೆ ನಡೆಯುತ್ತಿದೆ. ಸದ್ಯದಲ್ಲೇ ಆರೋಪಿಗಳಿಗೆ ನೋಟಿಸ್ ನೀಡಿ, ಮುಂದಿನ ಕಾನೂನು ಕ್ರಮ ಕೈಗೊಳ್ಳಲಾಗುವುದು’ ಎಂದೂ ಹೇಳಿವೆ.

ಈಶ್ವರಪ್ಪ ವಿರುದ್ಧ ದೇಶದ್ರೋಹ ಪ್ರಕರಣ ದಾಖಲಿಸಿ: ಮಹದೇವಪ್ಪ

ಪ್ರಜಾವಾಣಿ ವಾರ್ತೆ

ಎಚ್‌.ಸಿ. ಮಹದೇವಪ್ಪ

ಬೆಂಗಳೂರು: ರಾಷ್ಟ್ರ ಧ್ವಜದ ಮಹತ್ವ ಮತ್ತು ಇತಿಹಾಸ ತಿಳಿಯದೇ ಕೇಸರಿ ಧ್ವಜವನ್ನೇ ರಾಷ್ಟ್ರ ಧ್ವಜ ಮಾಡಲು ಹೊರಟಿರುವ ಸಚಿವ ಕೆ.ಎಸ್. ಈಶ್ವರಪ್ಪ ವಿರುದ್ಧ ಅವರ ಮೇಲೆ ಪೊಲೀಸರು ದೇಶದ್ರೋಹದ ಪ್ರಕರಣ ದಾಖಲಿಸಬೇಕು ಎಂದು ಕಾಂಗ್ರೆಸ್ ಮುಖಂಡ ಎಚ್‌.ಸಿ. ಮಹದೇವಪ್ಪ ಆಗ್ರಹಿಸಿದ್ದಾರೆ.

‘ಮುಂದಿನ ಐವತ್ತು–ನೂರು ವರ್ಷಗಳಲ್ಲಿ ಕೇಸರಿ ಧ್ವಜ ರಾಷ್ಟ್ರ ಧ್ವಜವಾಗಬಹುದು’ ಎಂದು ಈಶ್ವರಪ್ಪ ಬುಧವಾರ ಹೇಳಿದ್ದರು. ಇದಕ್ಕೆ ಪ್ರತಿಕ್ರಿಯಿಸಿರುವ ಮಹದೇವಪ್ಪ, ಸಂವಿಧಾನ ಬದ್ಧವಾದ ರಾಷ್ಟ್ರೀಯ ಚಿಹ್ನೆಗಳನ್ನು ಅಗೌರವದಿಂದ ಕಾಣುತ್ತಿರುವ ಅವರ ವಿರುದ್ಧ ವಿಧಾನಸಭಾ ಅಧ್ಯಕ್ಷರು ಸದನದ ಒಳಗೆ ಕಠಿಣ ಕ್ರಮ ಜರುಗಿಸಲಿ ಎಂದು ಅವರು ಆಗ್ರಹಿಸಿದ್ದಾರೆ.

ಚುನಾವಣೆ ಹತ್ತಿರ ಬಂದರೆ ಬಿಜೆಪಿಗರಿಗೆ ದೇಶವೂ ಮುಖ್ಯವಲ್ಲ, ಜನರೂ ಮುಖ್ಯವಲ್ಲ ಎಂಬಂತಾಗಿದೆ. ಇವರೊಳಗೆ ಸದಾ ಒಬ್ಬ ದೇಶದ್ರೋಹಿ ಅಡಗಿರುತ್ತಾನೆ ಎನ್ನುವುದಕ್ಕೆ ಈಶ್ವರಪ್ಪನವರ ಈ ಮಾತುಗಳೇ ಸಾಕ್ಷಿಯಾಗಿವೆ. ಸಂವಿಧಾನಕ್ಕೆ ದುರುದ್ದೇಶಪೂರ್ವಕವಾಗಿಯೇ ಅಗೌರವ ಸೂಚಿಸುವ ಇಂತಹ ವ್ಯಕ್ತಿಗಳು ಜನಪ್ರತಿನಿಧಿ ಸ್ಥಾನದಲ್ಲಿರುವುದು ನಮ್ಮ ಪ್ರಜಾಪ್ರಭುತ್ವದ ದುರ್ದೈವ ಎಂದು ಅವರು ಹೇಳಿದ್ದಾರೆ.

‘ನಮ್ಮ ಸ್ವತಂತ್ರ ದೇಶದ ಸಮಗ್ರತೆ ಮತ್ತು ಐಕ್ಯತೆಯ ಸಂಕೇತವಾಗಿರುವ ರಾಷ್ಟ್ರ ಧ್ವಜದ ಅವಹೇಳನ, ಅಗೌರವ ಮತ್ತು ಅಪನಂಬಿಕೆಯು ರಾಷ್ಟ್ರದ್ರೋಹ’ ಎಂದು ಅವರು ಪ್ರತಿಪಾದಿಸಿದ್ದಾರೆ.

‘ಬೆಂಗಳೂರು ಸೇರಿ ಆರು ಜಿಲ್ಲೆಗಳಲ್ಲಿ ಮಾದಕ ವಸ್ತುಗಳ ಅಧಿಕ ಬಳಕೆ’

ನವದೆಹಲಿ: ಅತ್ಯಧಿಕವಾಗಿ ಮಾದಕ ವಸ್ತುಗಳ ಬಳಕೆಯಾಗುತ್ತಿರುವ ಜಿಲ್ಲೆಗಳು ಎಂದು ಕೇಂದ್ರ ಸರ್ಕಾರವು ಒಟ್ಟು 272 ಜಿಲ್ಲೆಗಳನ್ನು ಗುರುತಿಸಿದೆ. ಈ ಪಟ್ಟಿಯಲ್ಲಿ ಬೆಂಗಳೂರು ಸೇರಿದಂತೆ ಕರ್ನಾಟಕದ ಆರು ಜಿಲ್ಲೆಗಳಿವೆ.

ಕೋಲಾರ, ಮೈಸೂರು, ಕೊಡಗು, ಉಡುಪಿ ಮತ್ತು ರಾಮನಗರ, ಕೇಂದ್ರ ಗುರುತಿಸಿರುವ ರಾಜ್ಯದ ಇತರೆ ಜಿಲ್ಲೆಗಳು ಎಂದು ಸಾಮಾಜಿಕ ನ್ಯಾಯ ಖಾತೆ ರಾಜ್ಯ ಸಚಿವ ಎ.ನಾರಾಯಣಸ್ವಾಮಿ ರಾಜ್ಯಸಭೆಯಲ್ಲಿ ತಿಳಿಸಿದರು.

ಬಿಜೆಪಿಯ ಕೆ.ಸಿ.ರಾಮಮೂರ್ತಿ ಅವರ ಪ್ರಶ್ನೆಗೆ ಉತ್ತರಿಸಿದ ಅವರು, ಈ ಜಿಲ್ಲೆಗಳಲ್ಲಿ ‘ನಶೆ ಮುಕ್ತ ಭಾರತ ಅಭಿಯಾನ’ವನ್ನು ಜಾರಿಗೊಳಿಸಲಾಗುತ್ತಿದೆ ಎಂದು ಸಚಿವರು ತಿಳಿಸಿದರು.

ಈ ಅಭಿಯಾನದಡಿ ಮಾದಕವಸ್ತು ವ್ಯಸನಿಗಳನ್ನು ಗುರುತಿಸಿ ಸ್ವಯಂಸೇವಕರು ಸಮಾಲೋಚನೆ ನಡೆಸಲಿದ್ದು, ಅವರನ್ನು ವ್ಯಸನ ಮುಕ್ತರಾಗಿಸಲು ಒತ್ತು ನೀಡುವರು. ಈ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಸೇವಾ ಸಂಸ್ಥೆಗಳೂ ಈ ಕಾರ್ಯಕ್ಕೆ ನೆರವಾಗಲಿವೆ. ಸಹಜ ಜೀವನಕ್ಕೆ ಮರಳುವಂತೆ ವ್ಯಸನಿಗಳಿಗೆ ಚಿಕಿತ್ಸೆ ನೀಡಲಾಗುತ್ತದೆ ಎಂದರು.

ಪತ್ರಕರ್ತೆ ಹೆಸರಿನಲ್ಲಿದ್ದ ಹಣ ಜಪ್ತಿ

ನವದೆಹಲಿ (ಪಿಟಿಐ): ದೇಣಿಗೆ ಮೊತ್ತವನ್ನು ವೈಯಕ್ತಿಕ ಉದ್ದೇಶಕ್ಕೆ ಬಳಸಿದ್ದ ಪ್ರಕರಣಕ್ಕೆ ಸಂಬಂಧಿಸಿ ಜಾರಿ ನಿರ್ದೇಶನಾಲಯ ಪತ್ರಕರ್ತೆ ರಾಣಾ ಅಯೂಬ್ ಅವರಿಗೆ ಸೇರಿದ್ದ ₹1.77 ಕೋಟಿ ಮೊತ್ತವನ್ನು ಜಪ್ತಿ ಮಾಡಿದೆ. ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆ ಅಡಿ ಪತ್ರಕರ್ತೆ, ಆಕೆಯ ಕುಟುಂಬ ಸದಸ್ಯರ ಹೆಸರಿನಲ್ಲಿ ನಿಶ್ಚಿತ ಠೇವಣಿ ಮತ್ತು ಇತರೆ ಖಾತೆಗಳಲ್ಲಿದ್ದ ಹಣವನ್ನು ಜಪ್ತಿ ಮಾಡಲಾಗಿದೆ.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

BUILDERS ESSENTIAL

Water Proofing Materials

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

RENTAL PROPERTIES

Accommodation Available

Commercial

COMMERCIAL, INDEPENDENT office space of 1500 sft on Ist floor availableat Anandnagar, Bangalore. Tenants directly contact 9845012704. No brokers

COMMERCIAL SPACE for Rent at Prime location in RR Nagar,BEML 3rd Stage. Contact: 94484 79324

House

RMV SECOND Stage Three BHK Bungalow HIG 349, Fifth Main, 89000/- Rent Contact: 9341833353, 26713802,

1 BHK 2 BHK Veg Only 10 Cross Margosa Road Malleswaream Opp. Kamakshi Silk: 7259808481

Accommodation Wanted

Flat

MNC CLIENT looking for large 3 B/R FLAT For Rent at Sadashivanagar/ Malleshwaram contact Bharadwaj Estates: 9845019934.

REAL ESTATE BUYING

General

General

WE DO RERA Consulting/ Registrations Services, Approvals/Sanctions from Local Body Authority, Marketable Title, Project Approvals from Banks across Karnataka. Verna Developers, MG-Road, Bengaluru. 9916310226/ 9620253180.

REAL ESTATE SELLING

Flat

Marathahalli

PRESTIGE JADE PAVILION, Gated Community with Club House, Semi furnished unit with Garden View, 3 BHK, Area- 1933 sft is available for resale. For details call:- 9945039194.

PRESTIGE JADE PAVILION, Semi furnished unit, 3 BHK, Area- 1933 sft for resale with all amenities. For details call:- Mr. Jibran- 9945039194

Whitefield

PRESTIGE LAKESIDE HABITAT, 2.5 & 3 BHK apartments available for resale in Varthur. Call:- 9900078809

Wilson Garden

WILSON GARDEN 7th Cross, 3BHK Luxury flat for sale, 1650 sftwith high-end interior, With 2 carpark 500 mtrs from Metro station, 2.40 Crores. Call: 8884855000.

Vijayanagar

FLAT FOR SALE: 10 Years old Cupboard & Kitchen Cabinet Marble and Teak-Door 1st Floor 3-Flats Available. Size: 1054X5000=53 Lakhs, Size: 922X5000=46 Lakhs at Pipeline road, Vijayanagar. Contact: 9110432149.

Sites

Kanakapura Road

SITES FOR SALE BMRD approved Layout, Near Harohalli towards Maralawadi Road, Near Kanakapura. Contacted by: R & K Land Developers Pvt. Ltd., Ph: No. 9845186655, 9731249455

Nagarabhavi

SALE NAGARBAVI, ITI, Chandra Layout BDA 30x40 Ground Parking, Lift, Room 1st, 2nd, 3rd, Triplex 4 BHK Fully Furnished, Italian Marble: 9663746333/ 9449812176

House

Jayanagar

SALE, JAYANAGAR 9th Block,30x40, Semi-commercial South facing, 3 floors building, 60'Road, excellent location, 3,50,00,000/- Genuine buyers Call.,Owner Kumar- 9980056670.

PUBLIC NOTICE

FORM No. VI (Rule 26) Notice of Writ Appeal IN THE HIGH COURT OF KARNATAKA AT BENGALURU

WRIT APPEAL NO 1685 / 2018 (L-TER) (SUBSTITUTED SERVICE OF NOTICE BY WAY OF PAPER PUBLICATION VIDE COURT ORDER DATED 31.01.2022 TO THE RESPONDENT)

Appellant
THE MANAGEMENT OF M/S STUMPP SCHUELE AND SOMAPPA SPRINGS PVT LTD NO. 139/2, HOSUR ROAD, KORAMANGALA, BENGALURU-560095 NOW REP BY ITS CHIEF FINANCE OFFICER, SRI. G V KRISHNA KUMAR. BY SRI SOMASHEKAR FOR S.N.MURTHY ASSOCIATES ADVOCATE FOR APPELLANT
Vs
Respondent
TO: SRI U MALLIKARJUNA S/o. VEERANNA, AGED ABOUT 64 YEARS R/AT NO. 61, 1ST MAIN ROAD, 5TH CROSS, NANJAPPA LAYOUT, ADUGODI, BENGLAURU - 560 030.

Whereas, a Writ Appeal filed by the above named appellant U/S 4 of Karnataka High Court Act 1961, praying to set aside the order dated 04.04.2018, in W.P.No.8167/2009 and the copy annexed hereunto, has been registered and admitted by this court.

Notice is hereby given to you that if you wish to contest the Writ Appeal, you may enter appearance on **16.03.2022 at 10.30 A.M.** before this Court either in person or by an Advocate appointed by you in that behalf and take such part in the proceedings as you may be advised.

Take further notice that in default of your appearance within the time prescribed the Writ appeal will be heard and determined in your absence on any subsequent date and no further notice in relation thereto will be given to you.

Issued under my hand and the seal of this court on MONDAY 31st day of January 2022.
By order of the Court
Sd/- Assistant Registrar

PUBLIC NOTICE

This is to inform the General Public that my clients intends to purchase the schedule property from **Mr. ZAMEER PASHA S/o. Mr. Pyare Jan.** If any person/ persons or institutions have got any right or interest in the Schedule property may lodge their claim with the undersigned within **10 days** from the date of publication of this notice along with documentary proof. On expiry of the above period my client will complete the sale transaction with the above owner as if no claims are there on the Schedule property.

SCEHDULE PROPERTY

All that piece & parcel of the Property bearing portion of **Commercial Site No.1 Old V.P. Khata No.434, Bommanahalli Nagarasabha Khata No.327, New Bommanahalli Nagarasabaha khata, No.411, Property No.38/6/1, situated at Hosur Road, Garvebhavipalya Village, Hongasandra Dhakale, Begur Hobli, Bangalore South Taluk,** now coming under the limits of **Bruhat Bangalore Maha Nagara Palike Ward No.190** and assigned **New BBMP Khata No.523/527/527/38/6/1, No.527, Hosapalya Layout, Garvebhavipalya, Bangalore Measuring: East to West: 41-0 Feet, North to South: 49-0 Feet, Totally measuring: 2009 square feet., Bounded on the**
East by: Private Property,
West by: Hosur Road,
North by: Site No.2,
South by: Remaining portion of Site No.1.

(K.S. VIJAYA), Advocate,
No.3/2, 3rd Main Road, Chamarajpet, Bangalore- 560018.
Mob: 9448613617/ 9845380979

ಕ್ಲಾಸಿಫೈಡ್ಸ್ WEEKEND CORNER

Prime Land / Building REQUIRED

A reputed organization is looking for Independent Land or building with rental income.
Budget: 20 to 50 crores.
Interested Sellers shall apply with all the details and supporting documents within 10 days from the date of this publication, to:
Box No. JA335
C/o Deccan Herald,
No.75, M.G. Road,
Bengaluru - 560 001.

SALE From 5th to 12th Feb 2022
ANAND JOHNSON The entire world of lingerie..
VESTS-BRIEF-BRA-PANTY-SLIPS-TOWELS
Wallets, Ladies Fancy Bags & Clutches
FLAT 25% OFF
Only @ BRIGHTWAYS WHOLESALERS Since 1957
AVENUE ROAD Ph: 080-22237504 Mob: 9742202223
Shop Online @ www.brightways.in
OPEN ON SUNDAY ALSO

ಹಿಯರಿಂಗ್ ಹೆಲ್ಥ್ ಕೇರ್ ಕ್ಲಿನಿಕ್

ರಿಚಾರ್ಜೆಬಲ್ ಶ್ರವಣ ಸಾಧನಗಳ ಮೇಲೆ 25% ರಿಯಾಯಿತಿ 28ನೇ ಫೆಬ್ರವರಿವರೆಗೆ

ನಿಮ್ಮ ಮನೆಯಲ್ಲಿ ನಿಮ್ಮ ಅನುಕೂಲಕ್ಕೆ ಅನುಗುಣವಾಗಿ ಶ್ರವಣ ಪರೀಕ್ಷೆ

- ಅಗೋಚರ ಶ್ರವಣ ಸಾಧನಗಳು ಲಭ್ಯ
- ಮೊಬೈಲ್ ಕನೆಕ್ಟಿವಿಟಿ
- ಎಕ್ಸ್‌ಚೇಂಜ್ ಆಫರ್ಸ್ ಉಪಲಬ್ಧ

HHCC HEARING HEALTH CARE CLINIC OREVA CHAIN OF HEARING CLINICS

20+ ವರ್ಷಗಳ ಅತ್ಯುತ್ತಮ ಸಾಧನೆ

“ಅತ್ಯಾಧುನಿಕ ಉಪಕರಣಗಳಿಂದ ಶ್ರವಣ ಪರೀಕ್ಷೆ ಮಾಡಲಾಗುತ್ತದೆ”

ಬೆಂಗಳೂರು ಮತ್ತು ಕರ್ನಾಟಕದಾದ್ಯಂತ ಶಾಖೆಗಳಿವೆ. ನಿಮ್ಮ ಸಮೀಪದ ಶಾಖೆ ತಿಳಿಯಲು ಸಂಪರ್ಕಿಸಿ.
99456 11100 www.hearingc.com

JANATHA EDUCATION SOCIETY®
Open Auction Sale of College Buses

An Open Public Auction sale of following vehicles on **AS IS WHERE IS BASIS** will be conducted on Saturday, 12/02/2022 at 12 noon. Interested parties may participate in the bidding. Vehicles will be sold to the highest bidder -
For further details Contact Sri Joseph, Transport Supervisor
Ph : 7625013738| 7625013637 | 080-23371952

SL.No	Regd.No of Vehicle	Vehicle Make	Model
1	KA-41-A-4338	Eicher 40 Seater	2012
2	KA-41-A-5304	Eicher 40 Seater	2012
3	KA-41-9383	Tata Marco Polo 40 seater	2010
4	KA-41-9386	Tata Marco Polo 40 seater	2010
5	KA-41-7171	Swaraj Mazda 40 seater	2009

Address: Janatha Education Society, Vivekananda College Premises, Dr.Rajkumar Road, Next to Orion Mall, Rajajinagar 2nd Stage, Bengaluru-560 055
H.C. Balakrishna, Hon'ble President | Dr. C.N. Manche Gowda Hon. Secretary

OPPORTUNITY FOR Retired Officials, Bankers, NRI, Teachers, Professionals, Homemakers, CAs. Earn salary + Incentives. 8095301555

Graphic Designers

WANTED DTP Operator/ Graphic Designer Corel Draw, Illustrator & Photoshop for a Pvt Limited Company in around Rajajinagar Contact: 23307910/ 9108458798

Multiple Vacancy

REQ, TEAM-LEADER, Telecaller, Backend & Field executive for For Banking Loan collection (salary upto 20,000 to 25,000). direct recruitment to company Contact:- 9620206756, 9620200756.

Part-Time Jobs

REPUTED MNC Company Will Provide Work From Home, Earn 30 to 35K Malleswaram 7019215243/ 9886641282

Walk-in

ITI/ DIPLOMA/ B.E Fresher/ failed/ retired with good salary Contact 9113007837

BUSINESS

Business Offers

Finance

NRI'S INVESTMENT And Finance Available On Low Interest Against Properties, Land & Building, Sites, Flats, Converted& Agriculture Lands Call: 7411265189

FINANCE AGAINST Land & Building Properties Industries Schools Hospitals Projects& NRI Funds 7358729820

JOB OPPORTUNITIES

Accounts & Finance

WANTED FEMALE Office Assistant Knowing Accounts with Tally Having Fluency In English & Hindi In & Around Rajajinagar Contact: 9108458798/ 23384085

General

CLINICAL SALES Associates for leading Laboratory Device Co. M/F ....UG/G/PG with good communication Cell: 9833024719

PROPERTY To Place your Classified Ads Contact: 9880856233

DH DECCAN HERALD ಪ್ರಜಾವಾಣಿ
BOOK YOUR REAL ESTATE
Classified Advertisement In Deccan Herald & Prajavani
SATURDAY & SUNDAY COMBO OFFER

Ordinary Per word	Bold Per word	Ordinary Semi Display Per word	Bold Semi Display Per word	Single Col CD Per sqcm
80	125	95	155	570

For More Details Contact:
Ph:080- 45557160 | 163 | 164 | M: 9880856233 | 9731810277 | 9901641752 | 9845114560 | 9886213331
dhclassifieds@deccanherald.co.in www.dhclassifieds.com
condition apply*

PERSONAL

Change of Name

I, SUGANDHA.S.PATTANSHETTI, Sharanand. Kamalapur. Sugandha, Sugandha.A. Puttanshetti, Sugandhi A Pattanshetti, Sugandha Sharanand, Sugandha.S.Kamalapur, Sugandha.S.Pattanshetti, Sugandha.S, Sugandha.S.K, Sugandha Pattanshetti, Sugandha.S.Pattanshetti, Sugandha Pattanshetti all are the one and same person aged about 59 years D/o. Allappa S.Pattanshetti, Residing at 14th D Cross, 2nd Phase, W C Road, Mahalakshmipuram Layout, Bangalore- 560086 have Changed my name to SUGANDHA.A.PATTANSHETTI Vide Affidavit Dated: 09/02/2022 sworn before notary J.Anand Kumar

I, ZAREENA.S, residing at Bengaluru-19, have changed my name as SAANVI, vide affidavit dated 10/2/2022 before Notary K.S.Bammappanavar, Bengaluru

KUMARI SWETA, Wife/o, JC331547H, SUB MAJ, NIRANJAN KUMAR YADAV, Vill- Chhotigovindpur, Jamalpur, Munger, Bihar, have changed name from KUMARI SWETA to SWETA DEVI, 10/02/2022, Notary K.V. Mani, Bangalore.

SANCHITA BACHHAR NEEDHALI, Wife/o, 14833804M, SEP /MT, BABLU BACHHAR, Vill- Merudandi, Basirhat, North 24 Parganas, West Bengal, have changed name from SANCHITA BACHHAR NEEDHALI to SANCHITA BACHHAR, 10/02/2022, Notary K.V. Mani, Bangalore.

I, N. SHARMITHA VARUN MANDAL, aged 28 years, W/o. Varun R. Mandal, R/at No. 22, 1st Floor, RMV Extension, Dollars Colony, 1st Main, Tank Bund Road, Bangalore 560094, after my marriage my name should be included as N. SHARMITHA VARUN MANDAL vide affidavit dated 09.02.2022 before Notary H.H. Nagaraj, Bengaluru.

I, ARYAN SHARMA, residing at No. 1006, Godrej Anandam, Model Mill Compound, near Ganeshpeth Police Station, Nagpur - 440018, have changed my name to ARYAN JAGDISH SHARMA vide affidavit dated 10.02.2022 before Notary Chandrashekaraiah. S, Bangalore. Henceforth I shall be known as ARYAN JAGDISH SHARMA.

I REHANA BEGUM H residing at No 102, 11th cross, 1st main road, Gangondanahalli Bengaluru-560039. I have changed my daughter name from SHARIBA KOUSAR KUNNUR to SHARIBA KOUSAR vide affidavit Dt 04-02-2022 sworn before notary K.S. GIRIDHAR, Bengaluru.

I, LATHIEF PASHA MEHKRI S/o. Sirajuddin Mekry R/a #42, 3rd Floor, 18th Cross Road, J.P.Nagar 5th Phase, Bangalore South, Bangalore- 560078 Have Changed My Name to LATHIF PASHA MEKRY vide Affidavit Dated: 08.02.2022 Before Notary D.K. Rameshappa, Bangalore-11.

ANU PRIYA, Daughter/o, JC331547H, SUB MAJ, NIRANJAN KUMAR YADAV, Vill- Chhotigovindpur, Jamalpur, Munger, Bihar, changed name from ANU PRIYA to ANUPRIYA KUMARI, 10/02/2022, Notary K.V. Mani, Bangalore.

Lost

DOCUMENT LOST
I, **Mohammed Tanseer,** S/o.Late Mohammed Usman Residing at No 2/17, Jamiya Masjid Road, RMV 2nd Stage, Bhoopasandra, Bangalore-560 094. Have Lost Documents 1) GPA Copy of my Mother 2) Death Certificate of my Father 3) Voter ID Card 4) Pan Card 5) Ration Card (while Transit)
Finders Please Contact: 8453634422.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

ಕರ್ನಾಟಕ ಸರ್ಕಾರ

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ ಲೋಕೋಪಯೋಗಿ ಇಲಾಖೆ ವಿಭಾಗ, ಮಂಡ್ಯ

ಸಂ: 14/2021-2022 ದಿನಾಂಕ: 09-02-2022

ಮಂಡ್ಯ ಜಿಲ್ಲೆಯ ರಸ್ತೆ ಸಂಚಾರಿ ಗಣತಿ ಕಾಮಗಾರಿಗಾಗಿ ಅಲ್ಪಾವಧಿ ಟೆಂಡರ್ ಪ್ರಕಟಣೆ

ಐಟಂವಾರು ದರದ ಟೆಂಡರ್‌ನ್ನು ಕೆಳಗೆ ಕಾಣಿಸಿದ ಕಾಮಗಾರಿಗಾಗಿ ಅರ್ಹ ಗುತ್ತಿಗೆದಾರರಿಂದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ KW-2 ರ ಏಕಲಕೋಟೆ ಪದ್ಧತಿಯಲ್ಲಿ ಆಹ್ವಾನಿಸಲಾಗಿದೆ.

ಅರ್ಹ ಗುತ್ತಿಗೆದಾರರು ಇ- ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **https://www.eproc.karnataka.gov.in** ಮುಖಾಂತರ ಟೆಂಡರ್ ದಾಖಲಾತಿಗಳನ್ನು ದಿನಾಂಕ 10-02-2022 ರಿಂದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಟೆಂಡರ್ ವಿಚಾರಣೆ ದಿನಾಂಕ 17-02-2022 ಸಂಜೆ 4.00 ಗಂಟೆವರೆಗೆ, ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ 18-02-2022 ಸಂಜೆ 4.30 ಗಂಟೆವರೆಗೆ, ಆರ್ಥಿಕ ಬಿಡ್ ತೆರೆಯಲು ದಿನಾಂಕ 16-02-2022 ಸಂಜೆ 5.00 ಗಂಟೆಗೆ ಅಥವಾ ನಂತರದ ಕೆಲಸದ ದಿನಗಳು ಟೆಂಡರ್ ಪ್ರಕ್ರಿಯೆ ಬಿಲೆ ಇ-ಪೋರ್ಟಲ್ ರಂತೆ ಕಾಲಮಿತಿ: ಮಳೆಗಾಲ ಸೇರಿ 2 ದಿನಗಳು ಒಟ್ಟು (1ಎಂದು) ಕಾಮಗಾರಿಯ ಸ್ಥೂಲ ಗುಣ್ಣ ಟೆಂಡರ್ ಗಿಟ್ಟ ಮೊತ್ತ ರೂ. 48.00 ಲಕ್ಷಗಳು ಇ.ಎಂ.ಡಿ ಬಿಲೆ ಇ-ಪೋರ್ಟಲ್‌ರಂತೆ ಕೆಲಸಗಳ ವಿವರ, ಅಂದಾಜು ಮೊತ್ತ, ಇ.ಎಂ.ಡಿ. ಮೊತ್ತ ಮುಂತಾದ ಮಾಹಿತಿಗಳನ್ನು ಸದರಿ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದು.

ಸಹಿ/- ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ
ಲೋಕೋಪಯೋಗಿ ಇಲಾಖೆ ವಿಭಾಗ, ಮಂಡ್ಯ

ಕರ್ನಾಟಕ ಸರ್ಕಾರ

ಲೋಕೋಪಯೋಗಿ ಇಲಾಖೆ
(www.kpwd.gov.in)

ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಬೆಂಗಳೂರು ವಿಭಾಗ, 2ನೇ ಮಹಡಿ, ಲೋ.ಇ. ಪೂರಕ ಕಟ್ಟಡ, ಕೆ.ಆರ್.ವೃತ್ತ, ಬೆಂಗಳೂರು. 560001.
ದೂರವಾಣಿ ಸಂಖ್ಯೆ: 080-22133370 ಫ್ಯಾಕ್ಸ್: 080-22133365
Email ID: eepwdbngdn@yahoo.com E-Portal : https://eproc.karnataka.gov.in

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 25/2021-22
ದಿನಾಂಕ: 10.02.2022

ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಬೆಂಗಳೂರು ವಿಭಾಗ, ಬೆಂಗಳೂರು ರವರು ಕರ್ನಾಟಕ ರಾಜ್ಯಪಾಲರ ಪರವಾಗಿ ಕೆ.ಟಿ.ಪಿ.ಪಿ. 2000 ರಡ್ಡಯ ಮತ್ತು ಸ್ಟಾಂಡರ್ ಟೆಂಡರ್ ಡಾಕ್ಯುಮೆಂಟ್ ನಿಯಮದಂತೆ ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಣಿ ಮಾಡಿದ ಅರ್ಹ ಟೆಂಡರ್‌ದಾರರಿಂದ ಎರಡು ಲಕೋಟೆ ಪದ್ಧತಿಯ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಬೆಂಗಳೂರು ವಿಭಾಗ ವ್ಯಾಪ್ತಿಯ ನಂ.1 ದಕ್ಷಿಣ ತಾಲ್ಲೂಕಿನ 9 ಸಂಖ್ಯೆಯ (ರೂ. 60 ರಿಂದ 99.75 ಲಕ್ಷಗಳ) ಕಾಮಗಾರಿಗಳಿಗೆ ಟೆಂಡರ್ ಪ್ರಕಟಣೆಯನ್ನು ಹೊರಡಿಸಿದ್ದು, ಕಾಮಗಾರಿಯ ವಿವರಗಳನ್ನು ಮೇಲ್ಕಂಡ ಕಛೇರಿಯ ವಿಳಾಸದಲ್ಲಿ ಪಡೆಯಬಹುದಾಗಿರುತ್ತದೆ. ಟೆಂಡರ್ ಪ್ರಕ್ರಿಯೆ ಈ ಕೆಳಕಂಡಂತೆ ದಿನಾಂಕಗಳನ್ನು ನಿಗದಿಪಡಿಸಲಾಗಿದೆ.

ಕಾಮಗಾರಿಗಳ ಇ.ಎಂ.ಡಿ ಮೊತ್ತವನ್ನು ಮತ್ತು ಟೆಂಡರ್ ಪ್ರೊಸೆಸಿಂಗ್ ಶುಲ್ಕವನ್ನು ಇ-ಪೋರ್ಟಲ್‌ನಲ್ಲಿ ಸೂಚಿಸಲಾಗಿದೆ.

1) ಟೆಂಡರ್ ಡಾಕ್ಯುಮೆಂಟ್‌ಗಳನ್ನು ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಲು ನಿಗದಿಪಡಿಸಿರುವ ದಿನಾಂಕ: 10.02.2022 ರಿಂದ.

2) ಟೆಂಡರ್‌ಗಳನ್ನು ಆನ್‌ಲೈನ್ ನಲ್ಲಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿ: 17.02.2022 ಸಂಜೆ 4.00 ಗಂಟೆಯವರೆಗೆ.

3) ಟೆಂಡರ್‌ಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಮೂಲಕ ತೆರೆಯುವ ದಿನಾಂಕ 18.02.2022 ಸಂಜೆ 4.30 ಗಂಟೆಗೆ ಅಥವಾ ಮುಂದೆ ತಿಳಿಸಬಹುದಾದ ದಿನಾಂಕ ಮತ್ತು ಸಮಯ. ಹೆಚ್ಚಿನ ವಿವರಗಳಿಗಾಗಿ ಈ ಕಛೇರಿಯನ್ನು ಸಂಪರ್ಕಿಸುವುದು.

ಸಹಿ/-
ಕಾರ್ಯಪಾಲಕ ಅಭಿಯಂತರರು
ಲೋ.ಇ, ಬೆಂಗಳೂರು ವಿಭಾಗ, ಬೆಂಗಳೂರು.

DIPR/DDU/Zen/R.O:3322/2021-22

ಕೋವಿಡ್-19 ಲಕ್ಷಣಗಳು ಇದೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

MANGALURU SMART CITY

ಮಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್

ವಿಳಾಸ: ಎಮ್.ಜಿ. ರಸ್ತೆ, ಲಾಲ್‌ಭಾಗ್, ಮಂಗಳೂರು-575003, ದಕ್ಷಿಣ ಕನ್ನಡ, ಕರ್ನಾಟಕ.
CIN: U74999KA2017PLC102010 Phone: 0824-2986321
Email id: smartcitymangaluru@gmail.com Website: www.mangalurusmartcity.net

UDD/2021-22/OW/WORK_INDENT 1524
ಮತ್ತು **UDD/2021-22/EL/WORK_INDENT 1525 Date: 09/02/2022**
ಜಾಹೀರಾತು ಸಂ: 123/2021-22

ಮಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್‌ನ ಯೋಜನೆಯಾದ "ಪ್ರಾಮಿನೇಡ್ ಡೆವಲಪ್‌ಮೆಂಟ್ ಆಫ್ ವಾಟರ್‌ಫ್ರಂಟ್ ಪ್ರಾಜೆಕ್ಟ್ ಫಾರ್ ಮಂಗಳೂರು ಸ್ಮಾರ್ಟ್ ಸಿಟಿ ಹಂತ-2A (Civil, Landscaping & Irrigation Plumbing Works)" ಮತ್ತು "ಪ್ರಾಮಿನೇಡ್ ಡೆವಲಪ್‌ಮೆಂಟ್ ಆಫ್ ವಾಟರ್‌ಫ್ರಂಟ್ ಪ್ರಾಜೆಕ್ಟ್ ಫಾರ್ ಮಂಗಳೂರು ಸ್ಮಾರ್ಟ್ ಸಿಟಿ ಹಂತ-2B (Electrical Works)" ಯೋಜನೆಗಾಗಿ ಟೆಂಡರ್ ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳನ್ನು **http://www.eproc.karnataka.gov.in** ಯಿಂದ ಪಡೆಯಬಹುದಾಗಿದೆ.

ಸಹಿ/- ಕಾರ್ಯಪಾಲಕ ಅಭಿಯಂತರರು
ಮಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್

DIPR/ADM/MCA/978/21-22 dt.10.2.2022

ಕಾರ್ಯನಿರ್ವಾಹಕ ಇಂಜಿನೀಯರರು, ಬಾ.ಪ.ಅ.ಪ್ರಾ ವಿಭಾಗ ನಂ.02, ಬಾಗಲಕೋಟೆ

ನಂ.ಕಾನಿಇಂ/ಬಾ.ಪ.ಅ.ಪ್ರಾ/ವಿ-2/ಟೆಂಡರ ನಂ.3/2021-22/3615
ದಿನಾಂಕ:10.02.2022

ಅಲ್ಪಾವಧಿ ಟೆಂಡರ್ ಪ್ರಕಟಣೆ.
(ಇ-ಪ್ರೋಕ್ಯೂರ್‌ಮೆಂಟ್ ಮುಖಾಂತರ)

ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರದ ಅಡಿಯಲ್ಲಿನ ಕಾಮಗಾರಿಗಳಿಗೆ ಅರ್ಹ ನೊಂದಾಯಿತ ಗುತ್ತಿಗೆದಾರರಿಂದ ಶೇಕಡಾವಾರು ಟೆಂಡರನ್ನು ಇ-ಪ್ರೋಕ್ಯೂರ್‌ಮೆಂಟ್ ಮುಖಾಂತರ ಆಹ್ವಾನಿಸಲಾಗಿದೆ. ಟೆಂಡರ್‌ಗಿಟ್ಟ ಮೊತ್ತವು ರೂ. 72.39 ರಿಂದ 221.77 ಲಕ್ಷಗಳ ಇರುತ್ತದೆ.

ಸದರಿ ಕಾಮಗಾರಿಗಳ ಟೆಂಡರಿನಲ್ಲಿ ಭಾಗವಹಿಸಲು ಇಚ್ಛಿಸುವವರು ಟೆಂಡರ್ ವಿವರ ಹಾಗೂ ಕಾಮಗಾರಿಗಳ ವಿವರಗಳಿಗಾಗಿ ಇ-ಪ್ರೋಕ್ಯೂರ್‌ಮೆಂಟ್ ವೆಬ್‌ಸೈಟ್ www.eproc.karnataka.gov.in ಮೂಲಕ ವೀಕ್ಷಿಸಬಹುದು. ದಿನಾಂಕ:28.02.2022 ಸಂಜೆ 5.00 ಘಂಟೆ ವರೆಗೆ ಟೆಂಡರ್‌ಗಳನ್ನು ಸಲ್ಲಿಸಬಹುದಾಗಿದೆ. ದಿನಾಂಕ: 03.03.2022 ರಂದು ಬೆಳಿಗ್ಗೆ 11.00 ಘಂಟೆ (ಸಾಧ್ಯವಾದಲ್ಲಿ) ತಾಂತ್ರಿಕ ಬಿಡ್‌ಗಳನ್ನು ತೆರೆಯಲಾಗುವುದು. ಹೆಚ್ಚಿನ ವಿವರಗಳಿಗಾಗಿ ಕಛೇರಿಯ ಅವಧಿಯಲ್ಲಿ ದೂರವಾಣಿ ಸಂಖ್ಯೆ 08354-297054 ಸಂಪರ್ಕಿಸಬಹುದಾಗಿದೆ.

ಸಹಿ/-ಕಾರ್ಯನಿರ್ವಾಹಕ ಇಂಜಿನೀಯರರು,
ಬಾ.ಪ.ಅ.ಪ್ರಾ.ವಿಭಾಗ ನಂ.2,ಬಾಗಲಕೋಟೆ

DIPR/BGK/RO-NO-557/MCA/2021-22

ಕರ್ನಾಟಕ ಸರ್ಕಾರ

ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಹಾಸನ ವಿಭಾಗ, ಹಾಸನ

ಸಂ:ಕಾ.ಇಂ/ಲೋ.ಇ ॥ ಹಾವಿ:ಹಾಸನ/ಜೆಇ-4 /2021-22 ದಿನಾಂಕ:09.02.2022

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 38/2021-22
ದಿನಾಂಕ 09.02.2022

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 1999 ಹಾಗೂ ನಿಯಮಗಳು 2000 ರಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್-ಕೆ.ಡಬ್ಲ್ಯೂ- 2,3 & 4 ನಿಯಮದನ್ವಯ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಅರ್ಹ ದರ್ಜೆ ಗುತ್ತಿಗೆದಾರರಿಂದ ಹಾಗೂ ಕರ್ನಾಟಕ ರಾಜ್ಯದಲ್ಲಿ ಹತ್ತು ವರ್ಷಕ್ಕಿಂತ ಕಡಿಮೆ ಇಲ್ಲದಂತೆ ವಾಸವಿರುವ ಪರಿಶಿಷ್ಟ ಜಾತಿ ಅರ್ಹ ದರ್ಜೆ ಗುತ್ತಿಗೆದಾರರಿಂದ ಹಾಸನ ವಿಭಾಗ ವ್ಯಾಪ್ತಿಯ ತಾಲ್ಲೂಕುಗಳಲ್ಲಿನ ಲೋಕೋಪಯೋಗಿ ಇಲಾಖೆಯ ಒಟ್ಟು 07 ಸಂಖ್ಯೆ ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದೆ. ಅವುಗಳಲ್ಲಿ 01 ಸಂಖ್ಯೆ ಕಾಮಗಾರಿಯನ್ನು ಪರಿಶಿಷ್ಟ ಜಾತಿ ಗುತ್ತಿಗೆದಾರರಿಗೆ ಮೀಸಲಿರಿಸಲಾಗಿದೆ. ಸದರಿ ಟೆಂಡರ್‌ನಲ್ಲಿನ ಗರಿಷ್ಠ ಟೆಂಡರ್ ಮೊತ್ತ ರೂ.175.00 ಲಕ್ಷ ಹಾಗೂ ಕನಿಷ್ಠ ಟೆಂಡರ್ ಮೊತ್ತ ರೂ. 30.00 ಲಕ್ಷ. ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕಡೆಯ ದಿನಾಂಕ. 02.03.2022 16.00ಗಂಟೆ. ಹೆಚ್ಚಿನ ವಿವರಗಳಿಗಾಗಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ http://www.eproc.karnataka.gov.in ಮೂಲಕ ನೋಡಬಹುದು ಅಥವಾ ಈ ಕಛೇರಿಯ ಸಹಾಯಕ ದೂರವಾಣಿ ಸಂಖ್ಯೆ: 08172-268437 ರಿಂದ ಕಛೇರಿಯ ವೇಳೆಯಲ್ಲಿ ಮಾಹಿತಿ ಪಡೆಯಬಹುದಾಗಿರುತ್ತದೆ.

ಸಹಿ/- ಕಾರ್ಯಪಾಲಕ ಇಂಜಿನಿಯರ್,
ಲೋಇ ಹಾಸನ ವಿಭಾಗ, ಹಾಸನ.

ವಾಸಾಸಂ/ಹಿ/ಹಾಸನ/ಎಂಸಿಎ/740/2021-22

‘ಬಸ್ ಪ್ರಯಾಣ ದರ ಏರಿಕೆ ಇಲ್ಲ’

ಬೆಂಗಳೂರು: ರಾಜ್ಯ ಸಾರಿಗೆ ಸಂಸ್ಥೆಗಳ ಬಸ್ ಪ್ರಯಾಣ ದರ ಹೆಚ್ಚಳ ಮಾಡುವ ಉದ್ದೇಶ ಸರ್ಕಾರಕ್ಕಿಲ್ಲ ಎಂದು ಸಾರಿಗೆ ಸಚಿವ ಬಿ.ಶ್ರೀರಾಮುಲು ತಿಳಿಸಿದರು.

ಈಗಾಗಲೇ ವೋಲ್ವೊ ಬಸ್ ಪ್ರಯಾಣ ದರವನ್ನು ಇಳಿಕೆ ಮಾಡಲಾಗಿದೆ ಎಂದು ಅವರು ಗುರುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ಕೋವಿಡ್ ಮತ್ತು ಆರ್ಥಿಕ ಹಿಂಜರಿತದಿಂದಾಗಿ ಪ್ರಯಾಣದ ದರ ಏರಿಕೆ ಮಾಡುವ ಚಿಂತನೆ ನಡೆದಿತ್ತು.

‘ಸಾರಿಗೆ ಸಂಸ್ಥೆಗಳ ಮುಷ್ಕರದಲ್ಲಿ ಭಾಗಿಯಾಗಿದ್ದ ನೌಕರರನ್ನು ವಜಾ ಮಾಡಲಾಗಿತ್ತು. ಅವರಲ್ಲಿ ಇಂದು 100 ನೌಕರರನ್ನು ಮರು ನೇಮಕ ಮಾಡಿದ್ದು, ಶುಕ್ರವಾರ 200 ನೌಕರರನ್ನು ಸೇರಿಸಿಕೊಳ್ಳಲಾಗುವುದು. ಈ ತಿಂಗಳೊಳಗೆ 700 ನೌಕರರ ಮರು ನೇಮಕಾತಿ ಆಗಲಿದೆ’ ಎಂದರು.

‘ಮುಷ್ಕರದಲ್ಲಿ 1,610 ನೌಕರರು ಭಾಗವಹಿಸಿದ್ದರು. ಮರು ನೇಮಕಕ್ಕೆ ಕಾನೂನಿನಲ್ಲಿ ಅವಕಾಶವಿಲ್ಲದಿದ್ದರೂ ನೌಕರರ ಕುಟುಂಬಗಳ ಸಂಕಷ್ಟ ನೋಡಿ ಈ ಕ್ರಮಕೈಗೊಳ್ಳಲಾಗುತ್ತಿದೆ’ ಎಂದರು.

ಮುಂದಿನ ದಿನಗಳಲ್ಲಿ ನೌಕರರು ಮುಷ್ಕರ, ಪ್ರತಿಭಟನೆಯಲ್ಲಿ ಭಾಗವಹಿಸಿದರೆ ಶಾಶ್ವತವಾಗಿ ನೌಕರಿ ಕಳೆದು ಕೊಳ್ಳಬೇಕಾಗುತ್ತದೆ ಎಂದೂ ಸಚಿವರು ಎಚ್ಚರಿಕೆ ನೀಡಿದರು.

ರಾಯಚೂರಿನ ಡಾ.ಬಿ.ಆರ್. ಅಂಬೇಡ್ಕರ್ ವೃತ್ತದಲ್ಲಿ ದಲಿತ ಸಂಘಟನೆಗಳ ಒಕ್ಕೂಟದವರು ಶಪಥದೊಂದಿಗೆ ಸಂವಿಧಾನ ಪೀಠಿಕೆ ಪುನರುಚ್ಚರಿಸಿದರು

ರಾಯಚೂರು ಬಂದ್ ಯಶಸ್ವಿ

ಪ್ರಜಾವಾಣಿ ವಾರ್ತೆ

ರಾಯಚೂರು: ಅಂಬೇಡ್ಕರ್ ಭಾವಚಿತ್ರ ತೆರವು ಪ್ರಕರಣಕ್ಕೆ ಸಂಬಂಧಿಸಿದಂತೆ ನ್ಯಾಯಾಧೀಶ ಮಲ್ಲಿಕಾರ್ಜುನ ಗೌಡ ಅವರ ವಿರುದ್ಧ ಕ್ರಮಕ್ಕೆ ಒತ್ತಾಯಿಸಿ ದಲಿತ ಸಂಘಟನೆಗಳ ಒಕ್ಕೂಟವು ಕರೆ ನೀಡಿದ್ದ ಎರಡನೇ ಬಾರಿಯ ‘ರಾಯಚೂರು ಬಂದ್’ಗೆ ಗುರುವಾರ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಯಿತು.

ಪ್ರಗತಿಪರ ಸಂಘಟನೆಗಳು, ತರಕಾರಿ ವ್ಯಾಪಾರಿಗಳ ಸಂಘ, ಕನ್ನಡಪರ ಸಂಘ, ಡಾ.ರಾಜಕುಮಾರ್ ಅಭಿಮಾನಿಗಳ ಸಂಘ ಸೇರಿ 30ಕ್ಕೂ ಹೆಚ್ಚು ಸಂಘಟನೆಗಳು ಬೆಂಬಲಿಸಿದ್ದವು. ಸರ್ಕಾರಿ ಬಸ್‌ಗಳ ಸಂಚಾರ ಇರಲಿಲ್ಲ. ಪೆಟ್ರೋಲ್ ಬಂಕ್ ಬಂದ್ ಆಗಿದ್ದವು. ಖಾಸಗಿ ಶಾಲೆಗಳು ರಜೆ ಘೋಷಿಸಿದ್ದವು.

ಕ್ರಮಕ್ಕೆ ಆಗ್ರಹಿಸಿ ಮುಂದಿನ ದಿನಗಳಲ್ಲಿ ಜೈಲ್ ಭರೋ, ಪಾದಯಾತ್ರೆ ನಡೆಸಲಿದ್ದೇವೆ ಎಂದು ಪ್ರತಿಭಟನಕಾರರು ಹೇಳಿದರು. ಧರಣಿ ಸ್ಥಳಕ್ಕೆ ಬಂದು ಜಿಲ್ಲಾಧಿಕಾರಿ ಡಾ.ಅವಿನಾಶ್ ಮೆನನ್ ಅವರು ಮನವಿ ಸ್ವೀಕರಿಸಿದರು.

ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ

ನಂ 10, 3ನೇ ಮಹಡಿ, ಖಾದಿ ಭವನ, ಜಸ್ಮಾದೇವಿ ಭವನ ರಸ್ತೆ, ವಸಂತನಗರ, ಬೆಂಗಳೂರು-560052.
ದೂರವಾಣಿ ಸಂಖ್ಯೆ: 080- 22250017 /22250018 ಇ-ಮೇಲ್ mdkmvstdc@gmail.com
WEB: http://www.karnataka.gov.in/kmvstdcl/Pages/home.aspx

ತಿದ್ದುಪಡಿ

No.MDKMVSTDC/GKS/LIS/CR/2021-22/2747 Date: 10.02.2022

ಈ ಪತ್ರಿಕೆಯಲ್ಲಿ ದಿನಾಂಕ: 03.02.2022 ರಂದು ಪ್ರಕಟಗೊಂಡ ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂ: No.MDKMVSTDC/GKS/LIS/CR/2021-22/2570 Date: 29.01.2022 ರಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಗುತ್ತಿಗೆದಾರರಿಗೆ ಶೇ.1ರಷ್ಟು ಇ.ಎಂ.ಡಿ ಮೊತ್ತ ಮತ್ತು ಇತರೆ ಗುತ್ತಗೆದಾರರು ಶೇ.2ರಷ್ಟು ಇ.ಎಂ.ಡಿ ಮೊತ್ತ ಸಲ್ಲಿಸಬೇಕಾಗಿರುತ್ತದೆ ಹಾಗೂ ಮುಂದೂಡಿಕೆ/ತಿದ್ದುಪಡಿಗಳನ್ನು ಇ-ಪೋರ್ಟಲ್‌ನಲ್ಲಿ ಪ್ರಕಟಿಸಲಾಗುವುದು ಎಂದು ಓದುಕೊಳ್ಳುವುದು.

ಸಹಿ/-
ಪ್ರಧಾನ ವ್ಯವಸ್ಥಾಪಕರು

ವಾ.ಸಾ.ಸಂ.ಇ/ಬೆಂ.ನಗರ/3316/ಆಕಾರ್/2021-22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ

ಕಾರ್ಯನಿರ್ವಾಹಕ ನಿರ್ದೇಶಕರು(ಬೆಂಘತ್ಯಾನಿನಿ), 2ನೇ ಮಹಡಿ,
ಯುಎನ್‌ಐ ಕಟ್ಟಡ, ತಿಮ್ಮಯ್ಯ ರಸ್ತೆ, ಬೆಂಗಳೂರು-560 056

ಸಂ: ಕಾಪಾಅ/ಬೆಂಘತ್ಯಾನಿನಿ/ಟೆಂಡ್/02/2021-22 ದಿನಾಂಕ: 10.02.2022

ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)
(ಜಿಒಕೆ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಘನತ್ಯಾಜ್ಯ ನಿರ್ವಹಣೆ, ಇವರು ಅರ್ಹ ನೋಂದಾಯಿತ ಗುತ್ತಿಗೆದಾರು / ಸಂಸ್ಥೆಗಳಿಂದ ಕೆಳಕಂಡ ಕಾಮಗಾರಿಗಾಗಿ ಟೆಂಡರನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ	ಕಾಮಗಾರಿಯ ವಿವರ	ಅಂದಾಜು ಯೋಜನಾ ವೆಚ್ಚ (ರೂ. ಲಕ್ಷಗಳಲ್ಲಿ)	ಇ.ಎಂ.ಡಿ. (ರೂ. ಲಕ್ಷಗಳಲ್ಲಿ)	ಕಾಮಗಾರಿ ಪೂರ್ಣಗೊಳಿಸುವ ಅವಧಿ
1	ಮಾವಳ್ಳಿಪುರಂ ಸ್ಥಾವರದಿಂದ ಮಿಟ್ಟಗಾನಹಳ್ಳಿಗೆ ಇನರ್ಟ್‌ಗಳನ್ನು ಸ್ಥಳಾಂತರಿಸುವುದು.	1104.40	ರೂ. 1.00 ಲಕ್ಷ ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಮತ್ತು ರೂ. 14.00 ಲಕ್ಷಗಳು ಬ್ಯಾಂಕ್ ಗ್ಯಾರಂಟಿ ಮುಖಾಂತರ	6 ತಿಂಗಳು

1) ಪೂರ್ವಾರ್ಹತಾ ಡಾಕ್ಯುಮೆಂಟ್‌ಗಳು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ದೊರೆಯುವ ದಿನಾಂಕ: **16.02.2022ರಿಂದ 03.03.2022ರ ಸಂಜೆ 4.00 ಗಂಟೆಯವರೆಗೆ.** 2) ಪೂರ್ವಭಾವಿ ಸಭೆ: **23.02.2022ರ ಸಂಜೆ 3.00 ಗಂಟೆಗೆ.** 3) ಟೆಂಡರ್ ಡಾಕ್ಯುಮೆಂಟ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : **03.03.2022ರ ಸಂಜೆ 4.00 ಗಂಟೆಯವರೆಗೆ** 4) ತಾಂತ್ರಿಕ- ವಾಣಿಜ್ಯಕ ಟೆಂಡರ್‌ಗಳನ್ನು ತೆರೆಯುವ ದಿನಾಂಕ: **05.03.2022ರ ಸಂಜೆ 4.30 ಗಂಟೆಯ** ನಂತರ. ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್: **www.eproc.karnataka.gov.in** ನಲ್ಲಿ ಲಾಗಿನ್ ಮಾಡಿ ಪಡೆಯಬಹುದು ಅಥವಾ ಕೆಳಸಹಿದಾರರ ಕಛೇರಿಯನ್ನು ಸಂಪರ್ಕಿಸಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು, ಬೆಂಘತ್ಯಾನಿನಿ.

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಲೋ.ಇ ವಿಭಾಗ, ಶಿವಮೊಗ್ಗ.

ಸಂಖ್ಯೆ :ಕಾಪಾಅ/ಶಿವಿಶಿ/ಜೆಇ-2/ಐಎಫ್‌ಟಿ-41/2021-22
ದಿನಾಂಕ: 07.02.2022

ಟೆಂಡರ್ ಪ್ರಕಟಣೆ

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ಅರ್ಹ ನೊಂದಾಯಿತ 2ನೇ ದರ್ಜೆ ಹಾಗೂ ಮೇಲ್ಪಟ್ಟ ಗುತ್ತಿಗೆದಾರರಿಂದ ಇ-ಪ್ರಕ್ಯೂರಮೆಂಟ್ ಪೋರ್ಟಲ್ (http://eproc. karnataka.gov.in) ಮೂಲಕ ಈ ಕೆಳಕಂಡ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿದೆ.

ನಬಾರ್ಡ್-27 ಯೋಜನೆ

1. Construction of Bridge at km 164.474 (166.10) in SH-01 Highway connecting Padubedri with Chikalaguda in Sagar Taluk of Shimoga District. (Indent No:147673) Estimated Cost Rs.242.00 Lakhs

ಟೆಂಡರ್ ದಾಖಲಾತಿಗಳನ್ನು ಡೌನ್‌ಲೋಡ್ ಮಾಡಲು ಮತ್ತು ಸಲ್ಲಿಸಲು : ದಿನಾಂಕ:08-02-2022 ರಿಂದ 24-02-2022 ರವರೆಗೆ, ಕಾಮಗಾರಿ ಪೂರ್ಣಗೊಳಿಸಲು ಕಾಲಾವಧಿ 11 ತಿಂಗಳು (ಮಳೆಗಾಲ ಸೇರಿ) ಹೆಚ್ಚಿನ ವಿವರಗಳಿಗೆ ಸದರಿ ಕಛೇರಿಯಿಂದ (ದೂರವಾಣಿ 08182-274942) ಹಾಗೂ ಸಹಾಯಕ ದೂರವಾಣಿ ಸಂಖ್ಯೆ: 080-23010900 / 080-23010901 ರಿಂದ ಮಾಹಿತಿ ಪಡೆಯಬಹುದು.

ಸಹಿ/- ಕಾ.ಇಂ, ಲೋ.ಇ ಶಿವಮೊಗ್ಗ ವಿಭಾಗ, ಶಿವಮೊಗ್ಗ.

ವಾ.ಸಾ.ಸಂ.ಇ/ಶಿ/ನಂ-61/02/ಎಂಸಿಎ/21-22/1213

ಕರ್ನಾಟಕ ಸರ್ಕಾರ

(ಕೃಷಿ ಇಲಾಖೆ)

ಕೃಷಿ ಆಯುಕ್ತಾಲಯ, ಶೇಷಾದ್ರಿ ರಸ್ತೆ, ಬೆಂಗಳೂರು-1

ಸಂ: ಉಕೃನಿ (ರಗೊ&ಸಾಗೊ/ಇ-ಟೆಂಡರ್/68/2021-22 ದಿನಾಂಕ: 03.02.2022

ಇ-ಟೆಂಡರ್ ಪ್ರಕಟಣೆ

ವಿಷಯ: 2022-23ನೇ ಸಾಲಿನ ಇಲಾಖೆಯ ಕಾರ್ಯಕ್ರಮಗಳಿಗೆ ಬೇಕಾಗುವ ವಿವಿಧ ಜೈವಿಕ ಗೊಬ್ಬರಗಳು, ಹಸಿರೆಲೆ ಗೊಬ್ಬರ ಬೀಜಗಳು, ಲಘುಪೋಷಕಾಂಶಗಳು, ಲಘುಪೋಷಕಾಂಶ ಮಿಶ್ರಣಗಳು, ಜಿಪ್ಸಂ, ಕೃಷಿ ಸುಣ್ಣ, ಡೊಲೊಮೈಟ್, ಸಾವಯವ ಗೊಬ್ಬರಗಳು ಮತ್ತು ಸಿಟಿ ಕಾಂಪೋಸ್ಟ್ (Bulk supply) ಸರಬರಾಜು ಪಡೆಯಲು ಇ-ಟೆಂಡರ್ ಆಹ್ವಾನಿಸುವ ಬಗ್ಗೆ.

* * * * * * *

2022-23ನೇ ಸಾಲಿಗೆ ಕೃಷಿ ಇಲಾಖೆಯ ವಿವಿಧ ಯೋಜನೆಗಳಡಿಯಲ್ಲಿ ಕ್ಯಾರಿಯರ್ ಬೇಸ್ಡ್ ಜೈವಿಕ ಗೊಬ್ಬರಗಳು, ದ್ರವರೂಪದ ಜೈವಿಕ ಗೊಬ್ಬರಗಳು, VAM ಜೈವಿಕ ಗೊಬ್ಬರಗಳು, ಹಸಿರೆಲೆ ಗೊಬ್ಬರ ಬೀಜಗಳು (ಡಯಾಂಚಾ, ಸನ್‌ಹೆಂಪ್, ಪಿಳ್ಳೆಪಿಸರೆ, ಹುರುಳಿ ಮತ್ತು ಅಲಸಂದೆ), ಸತುವಿನ ಸಲ್ಫೇಟ್ (21.0% & 33.0%), ಬೋರಾಕ್ಸ್ (10.5% & 14.5%), ಫೆರಸ್ ಸಲ್ಫೇಟ್ (19%), ಮೆಗ್ನಿಷಿಯಂ ಸಲ್ಫೇಟ್ (9.5%, ಲಘುಪೋಷಕಾಂಶ ಮಿಶ್ರಣಗಳು, ಜಿಪ್ಸಂ, ಕೃಷಿ ಸುಣ್ಣ, ಡೊಲೊಮೈಟ್, ಎರೆಹುಳು ಗೊಬ್ಬರ, ಸಾವಯವ ಗೊಬ್ಬರ, ರಂಜಕಯುಕ್ತ ಸಾವಯವ ಗೊಬ್ಬರ, ಖಾದ್ಯವಲ್ಲದ ಎಣ್ಣೆ ರಹಿತ ಬೇವಿನ ಬೀಜ ಹಿಂಡಿ ಗೊಬ್ಬರ ಮತ್ತು ಸಿಟಿ ಕಾಂಪೋಸ್ಟ್ (Bulk supply) ಗಳನ್ನು ಸರಬರಾಜು ಪಡೆಯಲು ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ತಾಂತ್ರಿಕ ಮತ್ತು ವಾಣಿಜ್ಯ ಬಿಡ್‌ಗಳನ್ನು ನೋಂದಾಯಿತ ಉತ್ಪಾದಕರು / ಅಧಿಕೃತ ವಿತರಕರಿಂದ ಅಲ್ಪಾವಧಿ ಇ-ಟೆಂಡರ್ ಆಹ್ವಾನಿಸಲಾಗಿದೆ. ಈ ಪರಿಕರಗಳು ಇಲಾಖೆಯ ವಿವಿಧ ಯೋಜನೆಗಳಡಿಯಲ್ಲಿ ರಾಜ್ಯದ ರೈತರಿಗೆ ವಿತರಿಸಲು ಅವಶ್ಯವಿರುತ್ತವೆ.

ಟೆಂಡರ್ ದಾಖಲೆಗಳನ್ನು e-Procurement portal https://eproc.karnataka.gov.in ನಲ್ಲಿ ಪಡೆಯಬಹುದು. ಸರಬರಾಜು ಮಾಡುವ ಪ್ರತಿ ಪರಿಕರಕ್ಕೆ ಟೆಂಡರ್‌ನಲ್ಲಿ ರೂ.18,000/- ರಿಂದ ನಿರ್ದಿಷ್ಟಪಡಿಸಿದ ಇ.ಎಂ.ಡಿ ಮೊತ್ತವನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ನೇರವಾಗಿ ಆನ್‌ಲೈನ್‌ನಲ್ಲಿ ಕ್ರೆಡಿಟ್ ಕಾರ್ಡ್-ವೀಸಾ ಅಥವಾ ಡೆಬಿಟ್ ಕಾರ್ಡ್-ವೀಸಾ ಅಥವಾ ಮಾಸ್ಟರ್ ಕಾರ್ಡ್, ಇ-ಪೇಮೆಂಟ್, ನ್ಯಾಷನಲ್ ಎಲೆಕ್ಟ್ರಾನಿಕ್ ಫಂಡ್ ಟ್ರ್ಯಾನ್ಸ್‌ಫರ್ (NEFT/RTGS), ಬ್ಯಾಂಕ್ ಕೌಂಟರ್ ನಲ್ಲಿ ಪಾವತಿ - (ICICI ಬ್ಯಾಂಕ್ ನಲ್ಲಿ ಮಾತ್ರ) ಇ.ಎಂ.ಡಿ ಮೊತ್ತದ ಪಾವತಿಯೊಂದಿಗೆ ಇ-ಟೆಂಡರ್‌ಗಳನ್ನು ಸಲ್ಲಿಸಬೇಕು. ಆನ್‌ಲೈನ್ ಮೂಲಕ ಅಪ್‌ಲೋಡ್ ಮಾಡಲಾದ ಎಲ್ಲಾ ದಾಖಲಾತಿಗಳ ಪ್ರತಿಯನ್ನು ಕಡ್ಡಾಯವಾಗಿ ತಾಂತ್ರಿಕ ಬಿಡ್‌ನ್ನು ತೆರೆಯುವ ಒಂದು ದಿನ ಮುಂಚಿತವಾಗಿ ಉಪ ಕೃಷಿ ನಿರ್ದೇಶಕರು, ರಸಗೊಬ್ಬರ ಮತ್ತು ಸಾವಯವ ಗೊಬ್ಬರ ವಿಭಾಗ, ಕೃಷಿ ಆಯುಕ್ತಾಲಯ, ಶೇಷಾದ್ರಿ ರಸ್ತೆ, ಬೆಂಗಳೂರು ಇವರಿಗೆ ಸಲ್ಲಿಸಬೇಕು.

ಟೆಂಡರ್ ಅರ್ಜಿಯನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ದಿನಾಂಕ: 09.03.2022 ರ ಸಂಜೆ 5.00 ಗಂಟೆಯೊಳಗೆ ಭರ್ತಿ ಮಾಡಬೇಕು. ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡದಿರುವ ದಾಖಲಾತಿಗಳನ್ನು ಮುದ್ದಾಂ ಮುಖಾಂತರ ಸಲ್ಲಿಸಿದಲ್ಲಿ ಅಂಗೀಕರಿಸುವುದಿಲ್ಲ. ಟೆಂಡರ್ ಪರಿಶೀಲನಾ ಸಮಿತಿಯು ದಿನಾಂಕ: 11.03.2022 ರಂದು ಬೆಳಿಗ್ಗೆ 11.00 ಗಂಟೆಗೆ ತಾಂತ್ರಿಕ ಬಿಡ್‌ಗಳನ್ನು "ಸಂಭ್ರಮ ಸಭಾಂಗಣ" ಕೃಷಿ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು 560001 ಇಲ್ಲಿ ತೆರೆಯಲಾಗುವುದು. ವಾಣಿಜ್ಯ ಬಿಡ್ ತೆರೆಯುವ ದಿನಾಂಕವನ್ನು ನಂತರ ತಿಳಿಸಲಾಗುವುದು.

ಟೆಂಡರ್‌ನ ಒಟ್ಟು ಅಂದಾಜು ವೆಚ್ಚ: ರೂ.50.00 ಕೋಟಿ.

ಸಹಿ/-
ಕೃಷಿ ನಿರ್ದೇಶಕರು

ವಾ.ಸಾ.ಸಂ.ಇ/ಬೆಂ.ನಗರ/3303/ಆಕಾರ್/2021-22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಖಾದಿ ಮತ್ತು ಗ್ರಾಮೋದ್ಯೋಗ ಆಯೋಗ

ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಉದ್ದಿಮೆಗಳ ಮಂತ್ರಾಲಯ, ಭಾರತ ಸರ್ಕಾರ
ಮಲ್ಟಿ ಡಿಸಿಪ್ಲಿನರಿ ಟ್ರೈನಿಂಗ್ ಸೆಂಟರ್(MDTC), ವಿಜಿನಾಪುರ, ಎಫ್‌ಸಿಐ ಗೋಡೌನ್ ಹತ್ತಿರ, ದೂರವಾಣಿನಗರ,ಬೆಂಗಳೂರು-560 016,

ಸರ್ಕಾರದ ಸರ್ಟಿಫಿಕೇಟ್ ಕೋರ್ಸ್- ಟೈಲರಿಂಗ್ ಮತ್ತು ಎಂಬ್ರಾಯಿಡರಿ ತರಬೇತಿ ಕಾರ್ಯಕ್ರಮ
14.02.2022 ರಿಂದ 13.05.2022

ಟೈಲರಿಂಗ್ ಮತ್ತು ಎಂಬ್ರಾಯಿಡರಿ ಕೋರ್ಸ್‌ನಲ್ಲಿ 10 ವಿಧದ ಸಲ್ವಾರ್ ಕಮೀಜ್‌ಗಳಿಗೆ ಟೈಟ್ ಫಿಟ್ಟಿಂಗ್, ಫ್ಲೇರ್ಡ್, ಅನಾರ್ಕಲಿ, ಪ್ರಿನ್ಸೆಸ್ ಕಟ್, ಕಲಿದಾರ್ ಕಮೀಜ್ ಇತ್ಯಾದಿ ಮತ್ತು ಬ್ಲೌಸ್, ಪೆಟಿಕೋಟ್‌ಗಳು, ಫ್ರಾಕ್‌ಗಳು, ಸಮವಸ್ತ್ರಗಳು ಮುಂತಾದವುಗಳ ತಯಾರಿಕೆಗೆ 3 ತಿಂಗಳ ಅವಧಿಯ ಶುಲ್ಕ ಆಧಾರಿತ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಪಿಎಂಇಜಿಪಿ ಅಡಿಯಲ್ಲಿ 25 ಲಕ್ಷದವರೆಗಿನ ಯೋಜನಾ ವೆಚ್ಚದೊಂದಿಗೆ 35% ವರೆಗೆ ವರ್ಗವಾರು ಸಬ್ಸಿಡಿಯೊಂದಿಗೆ ಆರ್ಥಿಕ ಸಹಾಯದ ಬಗ್ಗೆ ಮಾಹಿತಿಯನ್ನು ಸಹ ಒದಗಿಸಲಾಗುತ್ತದೆ. ಹೆಚ್ಚಿನ-ಮಾಹಿತಿಗಾಗಿ ಸಂಪರ್ಕಿಸಿ: 080-25650285, 8299377420, 8294217711.

ಸಹಿ/- ನಿರ್ದೇಶಕರು / ಪ್ರಾಂಶುಪಾಲರು

ಕಾವೇರಿ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಹೇಮಾವತಿ ನಾಲಾ ತನಿಖಾ ವಿಭಾಗ, ಹೆಬ್ಬೂರು-572 120 ತುಮಕೂರು ಜಿಲ್ಲೆ.
ಫೋನ್ ನಂ.0816-2957008 ಇ-ಮೇಲ್:eehebbur1@gmail.com

ಸಂಖ್ಯೆ:04/2021-22 ದಿನಾಂಕ: 07.02.2022

ಅಲ್ಪಾವಧಿ ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ/ ಪಿಡಬ್ಲ್ಯೂಡಿ, ಮೈಸೂರು/ಬೆಂಗಳೂರು ಇವರ ಪರವಾಗಿ ನೊಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ **16** ಕಾಮಗಾರಿಗಳಿಗೆ ಅಲ್ಪಾವಧಿ ಟೆಂಡರ್ ಅನ್ನು ಇ-ಪ್ರಕ್ಯೂರ್‌ಮೆಂಟ್ ಮೂಲಕ ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳನ್ನು ಈ ಕಛೇರಿಯಲ್ಲಿ ಹಾಗೂ ಅಂತರ್ಜಾಲದ ಮೂಲಕ ವೆಬ್ ಸೈಟ್ ವಿಳಾಸ www.eproc. karnataka.gov.in ರಲ್ಲಿ ಪಡೆಯಬಹುದು.

ಸಹಿ/- ಕಾರ್ಯಪಾಲಕ ಇಂಜಿನಿಯರ್,
ಹೇಮಾವತಿ ನಾಲಾ ತನಿಖಾ ವಿಭಾಗ, ಕಾ.ನೀ.ನಿ.ನಿ, ಹೆಬ್ಬೂರು

DIPR/TUM/633/MCA/2021-22

ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ

4ನೇ ಮಹಡಿ, ಕೃಷಿ ಭವನ, ನೃಪತುಂಗ ರಸ್ತೆ, ರಾಣಿ ಚೆನ್ನಮ್ಮ ವೃತ್ತ, ಬೆಂಗಳೂರು - 560 001. ದೂರವಾಣಿ ಸಂಖ್ಯೆ: 080-22115290 / 92.
E-mail: kscpcr@gmail.com

ಸಂಖ್ಯೆ : ಕರಾಮಹರಆ/ಬೆಂ/ವಕೀ-ಶೀಘ್ರ/ಬಾಹ್ಯ-ಮೂ/ನೇ/2021-22/2468 ದಿನಾಂಕ: 08/02/2022

ಪತ್ರಿಕಾ ಪ್ರಕಟಣೆ

ವಿಷಯ:- ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗಕ್ಕೆ ನುರಿತ ವಕೀಲರನ್ನು ಮತ್ತು ಶೀಘ್ರಲಿಪಿಗಾರರನ್ನು ನಿಗದಿತ ಗೌರವಧನದ ಅಡಿ ಹೊರಗುತ್ತಿಗೆ ಆಧಾರದಡಿ ನೇಮಕ ಮಾಡಿಕೊಳ್ಳುವ ಕುರಿತು.

ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ, ಬೆಂಗಳೂರು ಇಲ್ಲಿ ದಾಖಲಾಗುವ ಪ್ರಕರಣಗಳು ಹಾಗೂ ರಾಜ್ಯ ಉಚ್ಚನ್ಯಾಯಾಲಯದಲ್ಲಿ ದಾಖಲಾಗುವ ಪ್ರಕರಣಗಳನ್ನು ಪ್ರತಿನಿಧಿಸುವ ಸಲುವಾಗಿ ಇಬ್ಬರು ವಕೀಲರು ಹಾಗೂ ಒಬ್ಬರು ಶೀಘ್ರಲಿಪಿಗಾರರನ್ನು ಹೊರಗುತ್ತಿಗೆ ಆಧಾರದಡಿ ಮಾಹೆಯಾನ ವಕೀಲರಿಗೆ ರೂ.30,000-00 ಹಾಗೂ ಶೀಘ್ರಲಿಪಿಗಾರರಿಗೆ ರೂ.20,000-00 ನಿಗದಿತ ಗೌರವಧನದಡಿ 2021-22 ಹಾಗೂ 2022-23ನೇ ಸಾಲಿಗೆ ನೇಮಕ ಮಾಡಿಕೊಳ್ಳಲು ಅರ್ಜಿಯನ್ನು ಆಹ್ವಾನಿಸಲಾಗಿರುತ್ತದೆ. ಆಸಕ್ತರು ನಿಗದಿತ ನಮೂನೆಯಲ್ಲಿ ದಿನಾಂಕ: 23/02/2022 ರಂದು ಸಂಜೆ 05 ಗಂಟೆ ಒಳಗಾಗಿ ಅರ್ಜಿಯನ್ನು ಸಲ್ಲಿಸುವುದು.

ಅರ್ಜಿಯನ್ನು ಆಯೋಗದ ವೆಬ್‌ಸೈಟ್ kscpcr.karnataka.gov.in ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು ಅಥವಾ ಆಯೋಗದ ಕಚೇರಿಯಲ್ಲಿ ಕೆಲಸದ ದಿನಗಳಲ್ಲಿ ಪಡೆಯಬಹುದು. ಭರ್ತಿ ಮಾಡಿದ ಅರ್ಜಿಯನ್ನು ಮೊಹರು ಲಕೋಟೆಯಲ್ಲಿ ಈ ಕೆಳಕಂಡ ವಿಳಾಸಕ್ಕೆ ನಿಗದಿತ ಅವಧಿ ಒಳಗಾಗಿ ಸಲ್ಲಿಸಬೇಕು.

ಕಾರ್ಯದರ್ಶಿ
ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ, ಬೆಂಗಳೂರು
4ನೇ ಮಹಡಿ, ಕೃಷಿ ಭವನ, ನೃಪತುಂಗ ರಸ್ತೆ, ರಾಣಿ ಚೆನ್ನಮ್ಮ ವೃತ್ತ,
ಬೆಂಗಳೂರು - 560 001.

ಹೆಚ್ಚಿನ ಮಾಹಿತಿಗಾಗಿ ಆಯೋಗದ ವೆಬ್‌ಸೈಟ್ kscpcr.karnataka.gov.in ಹಾಗೂ ದೂರವಾಣಿ ಸಂಖ್ಯೆ 080-22115290/92 ಮೂಲಕ ಸಂಪರ್ಕಿಸಬಹುದು

ಸಹಿ/- ಕಾರ್ಯದರ್ಶಿ
ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ,
ಬೆಂಗಳೂರು

ವಾ.ಸಾ.ಸಂ.ಇ/ಬೆಂ.ನಗರ/3309/ಆಕಾರ್/2021-22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ

ಆಯುಕ್ತರವರ ಕಛೇರಿ, ಬಳ್ಳಾರಿ ಮಹಾನಗರಪಾಲಿಕೆ,

ಬಳ್ಳಾರಿ ಗಡಿಗಿ ಚೆನ್ನಪ್ಪ ವೃತ್ತ (ರಾಯಲ್ ಸರ್ಕಲ್) ಬಳ್ಳಾರಿ-583101.
ದೂರವಾಣಿ ಸಂಖ್ಯೆ : 08392-273479/278168 ಫ್ಯಾಕ್ಸ್: 08392-273477
ವೆಬ್‌ಸೈಟ್: www.ballaricity.mrc.gov.in ಇ-ಮೇಲ್: bellarycommissioner@yahoo.co.in

ಸಂಖ್ಯೆ: ಮನಪಾಬ/ತಾಂ/ಎಂ.ಜಿ.ಎನ್.ವಿ.ವೈ/ಪ್ಯಾ-1,5,7/2021-22
ದಿನಾಂಕ:08.02.2022

ಟೆಂಡರ್‌ಗಾಗಿ ಆಹ್ವಾನ (ಎಂ.ಜಿ.ಎನ್.ವಿ.ವೈ) ಕಾಲ್-2
ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಆದ್ಯಾದೇಶ 1999-2000ರ ಪ್ರಕಾರ ಆಕ್ಟ್ 2000ರ ನಿಯಮದಂತೆ 2020-21ನೇ ಸಾಲಿನ ಬಳ್ಳಾರಿ ಮಹಾನಗರಪಾಲಿಕೆವತಿಯಿಂದ ಮಹಾತ್ಮಗಾಂಧಿ ನಗರ ವಿಕಾಸ ಯೋಜನೆಗಾಗಿ (ಎಂ.ಜಿ.ಎನ್.ವಿ.ವೈ) ಅನುದಾನದಲ್ಲಿ 01 ಪ್ಯಾಕೇಜ್‌ನ ಒಟ್ಟು 04 ಕಾಮಗಾರಿಗಳಿಗೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್‌ನ ಕೆ.ಡಬ್ಲ್ಯೂ-4 ರಂತೆ ಇ-ಪ್ರಕ್ಯೂರ್‌ಮೆಂಟ್ ಮುಖಾಂತರ ಟೆಂಡರ್‌ನ್ನು ಅಹ್ವಾನಿಸಲಾಗಿರುತ್ತದೆ. ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ದರ್ಜೆ ಗುತ್ತಿಗೆದಾರರು ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ https:eproc.karnataka.gov.in ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿದ್ದು, ಹೆಚ್ಚಿನ ವಿವರಗಳಿಗೆ ಈ ಕಛೇರಿಂಯು www.ballaricity.mrc.gov.in ವೆಬ್‌ಸೈಟ್‌ನಲ್ಲಿ ನೋಡಬಹುದು.

01 ಇ-ಟೆಂಡರ್ ಅರ್ಜಿ ಡೌನ್‌ಲೋಡ್ ಮಾಡುವ ಪ್ರಾರಂಭ ದಿನಾಂಕ : **10.02.2022 - 10.00 AM.** 02 ಪೂರ್ವಭಾವಿ ಸಭೆ ದಿನಾಂಕ : **15.02.2022 - 12.30 PM.** 03 ಇ-ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ ಮತ್ತು ವೇಳೆ : **25.02.2022 - 17.30 PM.** 04 ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ : **28.02.2022 - 11.00 AM.** 05 ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ : **03.03.2022 - 11.00 AM**

ಪ್ಯಾಕೇಜ್ ಸಂಖ್ಯೆ: 1. **ಕಾಮಗಾರಿಗಳ ಸಂಖ್ಯೆ:** 4. **ಇಂಡೆಂಟ್ ಸಂಖ್ಯೆ:** DMA/ 2021-22/RD/ Work_Indent 123041/Call-2. **ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ):** 464.50. **ಕಾಮಗಾರಿ ಪೂರ್ಣಗೊಳಿಸುವ ಅವಧಿ:** 10 ತಿಂಗಳು (ಮಳೆಗಾಲ ಸೇರಿ)

ಲೊಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರು ವೆಬ್‌ಸೈಟ್ https:eproc.karnataka.gov.in ನಲ್ಲಿ ಇ-ಡೆಂಡರ್‌ಗಾಗಿ ಭಾಗವಹಿಸಬಹುದು ಹಾಗೂ ವಿವರಗಳನ್ನು ಪಡೆಯಬಹುದಾಗಿದೆ. ಹೆಚ್ಚಿನ ವಿವರಗಳಿಗೆ ಕಛೇರಿಯ ದೂರವಾಣಿ ಸಂಖ್ಯೆ: 08392-273479 ರಿಂದ ಮಾಹಿತಿ ಪಡೆಯಬಹುದು.

ಸಹಿ/-ಆಯುಕ್ತರು, ಬಳ್ಳಾರಿ ಮಹಾನಗರ ಪಾಲಿಕೆ, ಬಳ್ಳಾರಿ

ಡಿಐಪಿಆರ್/ಬಳ್ಳಾರಿ/740/ಎಂಸಿಎ/2021-22

18-02-2022 ರಿಂದ ಅಮೋಘ ಪ್ರಾರಂಭ

ಕೆ.ಜಿ.ರಸ್ತೆ-ಬೆಂಗಳೂರು : **ಭೂಮಿಕಾ** DTS

ರಾಜಾಜಿನಗರ : **ನವರಂಗ್** DTS
ಕತ್ರಿಗುಪ್ಪೆ : **ಕಾಮಾಕ್ಯ** DTS
ಜೆ.ಪಿ.ನಗರ : **ಸಿದ್ದೇಶ್ವರ** DTS
ಅವಲಹಳ್ಳಿ : **ವೆಂಕಟೇಶ್ವರ** DTS
ಚಿಕ್ಕಲಸಂದ್ರ : **ಬಾಲಾಜಿ** DTS

PVR CINEMAS: ORION RAJAJINAGAR, OLD MADRAS ROAD, GT MALL - MAGADI ROAD, VAISHNAVI SAPPHIRE, MSR ELEMENTS MALL, PHONIEX MALL, SPIRIT MALL, ARENA MALL

INOX LIVE the MOVIE: MANTRI MALL, NEIGHBOURHOOD MALL, SWAGATH, GARUDA MALL-MG ROAD, GALLERIA MALL - YELAHANKA, GARUDA-YELAHANKA

Cinépolis: MEENAKSHI MALL, ETA, C SHANTHINIKETHAN, C SJR

GOPALAN CINEMAS: ARCH - MYSORE ROAD, LAGECY MALL, INNOVATION, GRAND MALL

CARNIVAL CINEMAS

ಮೈಸೂರು : **ಅಡೋ** DTS, DRC CINEMAS, sathyam CINEMAS, PVR CINEMAS, MYSURU VISION CINEMAS
ಮಂಡ್ಯ : **ಮಹಾವೀರ** DTS
ಹಾಸನ : **ಪಿಕ್ಚರ್ ಪ್ಯಾಲೇಸ್** DTS
ಹುಬ್ಬಳಿ : Cinépolis
ಗುಲ್ಬರ್ಗ : PVR CINEMAS, SHETTY'S MULTIPLEX, MUKTA CINEMAS
ಶಿವಮೊಗ್ಗ : BIG Cinemas
ಮಂಗಳೂರು : Bharath Cinemas, PVR CINEMAS, Cinépolis
ಉಡುಪಿ-ಮಣಿಪಾಲ್ : Bharath Cinemas
ಕುಂದಾಪುರ : BIG Cinemas
ಹಾಗೂ ರಾಜ್ಯಾದ್ಯಂತ

ಕಲರ್‌ಫುಲ್ ಅಚ್ಯುತಣ್ಣ

ಅಚ್ಯುತ್ ಕುಮಾರ್

'ನನ್ನ ಹೆಣ್ಣುಮಕ್ಕಳಿಗೆ ನಾನೇ ಗಾಡು, ನಾನೇ ಗಾರ್ಡು' ಎಂದು ಡೈಲಾಗ್ ಹೊಡೆಯುತ್ತಾ 'ಫೋರ್ ವಾಲ್ಸ್ ಆ್ಯಂಡ್ ಟು ನೈಟೀಸ್'ನಲ್ಲಿ ವರ್ಣಮಯವಾಗಿ ಕಾಣಿಸಿಕೊಂಡಿದ್ದಾರೆ ಅಚ್ಯುತ್ ಕುಮಾರ್. ಬಣ್ಣ ಬಣ್ಣದ ಬಟ್ಟೆ ತೊಟ್ಟು ಮೆರೆಯುವ ಬಾಲ್ಯದ ಆಸೆ ಈಗ ಈಡೇರಿದೆ ಎಂಬ ಖುಷಿಯಿದೆಯಂತೆ ಅವರಿಗೆ. ಹೊಸ ಲುಕ್ ಹಾಗೂ ಚಿತ್ರದಲ್ಲಿ ಏನಿದೆ ಎಂಬುದನ್ನು ಅಚ್ಯುತಣ್ಣ ತೆರೆದಿಟ್ಟದ್ದು ಹೀಗೆ.

ಅಭಿಲಾಷ್ ಪಿ.ಎಸ್.

ಪೋಷಕ ಪಾತ್ರ, ಖಳ ನಟನಾಗಿ ಹಲವು ಭಿನ್ನ ಪಾತ್ರಗಳಲ್ಲಿ ಬಹಳ ಸರಳವಾಗಿ, ಸಹಜವಾಗಿ ಕಾಣಿಸಿಕೊಳ್ಳುತ್ತಿದ್ದ ನಟ ಅಚ್ಯುತ್ ಕುಮಾರ್ ಇದೀಗ ಬಣ್ಣಬಣ್ಣದ ಧಿರಿಸಿನಲ್ಲಿ ಮೊದಲ ಬಾರಿಗೆ ತೆರೆಯ ಮೇಲೆ ಕಾಣಿಸಿಕೊಳ್ಳಲಿದ್ದಾರೆ.

ಎಸ್.ಎಸ್. ಸಜ್ಜನ್ ನಿರ್ದೇಶನದ 'ಫೋರ್ ವಾಲ್ಸ್ ಆ್ಯಂಡ್ ಟು ನೈಟೀಸ್' ಚಿತ್ರದಲ್ಲಿ ಬೆಲ್‌ಬಾಟಂ ಪ್ಯಾಂಟು, ಬಣ್ಣ ಬಣ್ಣದ ಶರ್ಟ್‌ನಲ್ಲಿ ಮಿಂಚುವ ಚಿರಯುವಕನಾಗಿ, ಮಧ್ಯವಯಸ್ಕನಾಗಿ, ಕುಟುಂಬದ ಹೊಣೆ ಹೊತ್ತ ತಂದೆಯಾಗಿ ಮೂರು ಶೇಡ್‌ಗಳಲ್ಲಿ ಅಚ್ಯುತ್ ಕುಮಾರ್ ನಟಿಸಿದ್ದಾರೆ. ಈ ಚಿತ್ರಕ್ಕೆ ಇವರೇ 'ಹೀರೊ' ಎಂದಿದೆ ಚಿತ್ರತಂಡ.

ತಮ್ಮ ಪಾತ್ರದ ಕುರಿತು 'ಸಿನಿಮಾ ಪುರವಣಿ' ಜೊತೆ ಮಾತಿಗಿಳಿದ ಅಚ್ಯುತ್ ಕುಮಾರ್ ತಮ್ಮ ಯೌವನದ ಕಾಲವನ್ನು ನೆನಪಿಸಿಕೊಂಡರು. 'ಈ ಕಥೆಯಲ್ಲಿ ಮೂರು ಕಾಲಘಟ್ಟದ ಪಾತ್ರ ಬರುತ್ತದೆ. ಯುವಕನಾಗಿ, ಪ್ರೀತಿಸಿ ಮದುವೆಯಾಗುವ ಮಧ್ಯವಯಸ್ಕನಾಗಿ ಹಾಗೂ 58-60 ವಯಸ್ಸಿನ ತಂದೆಯ ಪಾತ್ರದಲ್ಲಿ ನಾನು ಕಾಣಿಸಿಕೊಳ್ಳುತ್ತೇನೆ. ಈ ಚಿತ್ರದಲ್ಲಿ ಸ್ವಲ್ಪ ಕಲರ್‌ಫುಲ್ ಆಗಿ ಮೊದಲ ಬಾರಿ ಕಾಣಿಸಿಕೊಳ್ಳುತ್ತಿದ್ದೇನೆ. 80ರ ದಶಕದಲ್ಲಿ ಬೆಲ್‌ಬಾಟಂ ಪ್ಯಾಂಟ್ ಹಾಕಿಕೊಳ್ಳುತ್ತಿದ್ದರು. ಈಗಿನ ಯುವಜನತೆಗೆ ಇದು ರೆಟ್ರೊ ಲುಕ್. ನಮಗದು ವಾಸ್ತವ. ನಾವು ಆಗಲೇ ಅಂಥ ಪ್ಯಾಂಟ್ ಹಾಕಿದ್ದೆವು. ಆದರೆ ಈ ರೀತಿ ಕಲರ್‌ಕಲರ್ ಶರ್ಟ್ ಹಾಕಿಕೊಂಡಿರಲಿಲ್ಲ. ಈ ರೀತಿ ಸ್ಟೈಲಿಶ್ ಆಗಿ ಡ್ರೆಸ್ ಮಾಡಿರುವವರನ್ನು ನೋಡಿದ್ದೆವು. ಈ ರೀತಿ ಶರ್ಟ್ ಬೇಕು ಎಂದರೆ ಮನೆಯಲ್ಲಿ ತಲೆ ಮೇಲೆ ಹೊಡೆಯುತ್ತಿದ್ದರು. ಆ ಕಾಲದಲ್ಲಿ, ವರ್ಷಕ್ಕೆ ಎರಡು ಜೊತೆ ಬಟ್ಟೆ ಕೊಡಿಸಿದರೆ ಮುಗಿಯಿತು. ಈಗ ಮತ್ತದೇ ಧಿರಿಸು ಧರಿಸಿದಾಗ ಹಳೆಯ ಕಾಲವನ್ನು ಜ್ಞಾಪಿಸಿಕೊಂಡಂತಾಯಿತು. ಈ ರೀತಿ ಬಟ್ಟೆ ಹಾಕಿಕೊಳ್ಳಬೇಕು ಎನ್ನುವ ಆ ಕಾಲದ ಆಸೆ ಈಗ ಈಡೇರಿದೆ'.

'ಚಿತ್ರದಲ್ಲಿ, ಹೆಣ್ಣುಮಕ್ಕಳನ್ನು ಕಣ್ಣಲ್ಲಿ ಕಣ್ಣಿಟ್ಟು ಕಾಪಾಡುವ ತಂದೆಯ ಪಾತ್ರ ನನ್ನದು. ಬಹಳ ಜವಾಬ್ದಾರಿಯುತವಾಗಿ ಮಕ್ಕಳನ್ನು ಕಾಪಾಡಿಕೊಂಡು ಜೀವನ ನಿರ್ವಹಣೆ ಮಾಡುವ ತಂದೆ ಆತ. 'ನನ್ನ ಹೆಣ್ಣುಮಕ್ಕಳಿಗೆ ನಾನೇ ಗಾಡು, ನಾನೇ ಗಾರ್ಡು'- ಈ ಡೈಲಾಗ್ ನನ್ನ ಪಾತ್ರದ ವಿವರಣೆಯನ್ನು ನೀಡುತ್ತದೆ. ಇದಕ್ಕೊಂದು ಕಾರಣವಿರುತ್ತದೆ. ಅದೇ ಚಿತ್ರದ ಕಥೆ. ಯಾವುದೇ ಮನೆಯಲ್ಲಾದರೂ ತಂದೆ ಇದೇ ರೀತಿ ಇರುತ್ತಾನೆ. ಹೆಣ್ಣುಮಕ್ಕಳಿದ್ದರೆ ಜವಾಬ್ದಾರಿ ಇನ್ನೂ ಹೆಚ್ಚು'.

'ಕಥೆಯ ಶೀರ್ಷಿಕೆಯನ್ನು ಸಜ್ಜನ್ ಮೊದಲ ಬಾರಿ ಹೇಳಿದಾಗ, 'ಯಾವುದೋ ಇದು ಪೋಲಿ ಸಿನಿಮಾ ಶೀರ್ಷಿಕೆ ಇದ್ದ ಹಾಗೆ ಇದೆ, ನಾನು ಮಾಡಲ್ಲ' ಎಂದಿದ್ದೆ. ಸಜ್ಜನ್ ಅವರು ನನಗೆ ಮೊದಲು ಹೇಳಿದ್ದೇ ಶೀರ್ಷಿಕೆ, ಆಮೇಲೆ ಕಥೆ ಹೇಳಿದರು. ಶೀರ್ಷಿಕೆ ಸಜ್ಜನ್ ಅವರ ಫಸ್ಟ್ ಕಾರ್ಡ್. ಮೊದಲು ಶೀರ್ಷಿಕೆ ಹೇಳಿಯೇ ಹೆದರಿಸಿದ್ದರು. ಕಥೆ ಹೇಳಿದ ಮೇಲೆ ಕೊಂಚ ಬದಲಾವಣೆ ಮಾಡಿಕೊಂಡು ಪಾತ್ರ ಮಾಡಲು ಒಪ್ಪಿಕೊಂಡೆ. ಕಥೆ ಜೊತೆಗೆ ಪಯಣ ಬೆಳೆಸುತ್ತಾ ಶೀರ್ಷಿಕೆ ಸೂಕ್ತವೆಂಬಂತೆ ಅನಿಸಿತು' ಎನ್ನುತ್ತಾರೆ ಅಚ್ಯುತ್ ಕುಮಾರ್.

ಸದ್ಯ, ರಿಷಬ್ ಶೆಟ್ಟಿ ನಿರ್ದೇಶನದ 'ಕಾಂತಾರ', ದರ್ಶನ್ ನಟನೆಯ 'ಕ್ರಾಂತಿ', ಜಗ್ಗೇಶ್ ನಟನೆಯ 'ರಾಘವೇಂದ್ರ ಸ್ಟೋರ್ಸ್' ಹೀಗೆ ಸಾಲು ಸಾಲು ಸಿನಿಮಾಗಳ ಚಿತ್ರೀಕರಣದಲ್ಲಿ ಅಚ್ಯುತ್ ಕುಮಾರ್ ಅವರು ತೊಡಗಿಸಿಕೊಂಡಿದ್ದಾರೆ. ಫೆ.18ರಂದು ತೆರೆ ಕಾಣುತ್ತಿರುವ 'ಬೈ ಟು ಲವ್' ಚಿತ್ರದಲ್ಲೂ ತಂದೆಯ ಪಾತ್ರದಲ್ಲಿ ಅಚ್ಯುತ್ ಕುಮಾರ್ ಅವರು ಕಾಣಿಸಿಕೊಳ್ಳುತ್ತಿದ್ದು, 'ಸಾಲು ಸಾಲು ತಂದೆ ಪಾತ್ರಗಳಾಯಿತು, ಸ್ವಲ್ಪ ದಿನ ಬಿಟ್ಟು ನೋಡಿ ಕೇಡಿ ಪಾತ್ರಗಳಲ್ಲಿ ಕಾಣಿಸಿಕೊಳ್ಳಲಿದ್ದೇನೆ' ಎಂದು ನಗುತ್ತಾ ಮಾತಿಗೆ ವಿರಾಮವಿಟ್ಟರು.

'ಬಹುಕೃತ ವೇಷ' ತೊಟ್ಟ ವೈಷ್ಣವಿ ಗೌಡ

ಕಿರುತೆರೆಯಲ್ಲಿ 'ಅಗ್ನಿಸಾಕ್ಷಿ' ಧಾರಾವಾಹಿ ಮೂಲಕ ಕನ್ನಡದ ಪ್ರೇಕ್ಷಕರಿಗೆ ಪರಿಚಯವಾಗಿ ಬಿಗ್‌ಬಾಸ್ ರಿಯಾಲಿಟಿ ಶೋದಲ್ಲಿ ಭಾಗವಹಿಸಿ ಕನ್ನಡಿಗರಿಗೆ ಮತ್ತಷ್ಟು ಹತ್ತಿರವಾಗಿದ್ದ ನಟಿ ವೈಷ್ಣವಿ ಗೌಡ, ಇದೀಗ ಚಂದನವನದಲ್ಲಿ ತಲ್ಲೀನರಾಗಿದ್ದಾರೆ. 'ಬಹುಕೃತ ವೇಷಂ' ಎಂಬ ಶೀರ್ಷಿಕೆಯ ಸೈಕಾಲಾಜಿಕಲ್ ಥ್ರಿಲ್ಲರ್ ಕಥಾಹಂದರ ಹೊಂದಿರುವ ಸಿನಿಮಾದಲ್ಲಿ ನಾಯಕಿಯಾಗಿ ವೈಷ್ಣವಿ ಕಾಣಿಸಿಕೊಳ್ಳಲಿದ್ದಾರೆ.

ಈ ಹಿಂದೆ 'ಗೌಡ್ರುಸೈಕಲ್' ಎಂಬ ಗ್ರಾಮೀಣ ಸೊಗಡಿನ ಚಿತ್ರವನ್ನು ಮಾಡಿದ್ದ ತಂಡದ ಬಹುತೇಕರು ಸೇರಿ ತಯಾರಿಸಿರುವ ಸಿನಿಮಾವೇ 'ಬಹುಕೃತ ವೇಷಂ'. ವೈಷ್ಣವಿ ಗೌಡ ಹಾಗೂ 'ಗೌಡ್ರುಸೈಕಲ್' ಚಿತ್ರದ ನಾಯಕ ಶಶಿಕಾಂತ್ ಚಿತ್ರದ ಮುಖ್ಯಭೂಮಿಕೆಯಲ್ಲಿದ್ದಾರೆ. 'ಗೌಡ್ರುಸೈಕಲ್' ಚಿತ್ರ ನಿರ್ದೇಶಿಸಿದ್ದ ಪ್ರಶಾಂತ್ ಕೆ. ಎಳ್ಳಂಪಳ್ಳಿ ಅವರೇ ಈ ಚಿತ್ರವನ್ನೂ ನಿರ್ದೇಶಿಸಿದ್ದಾರೆ. ಚಿತ್ರದ ಟ್ರೇಲರ್ ಇತ್ತೀಚೆಗೆ ಬಿಡುಗಡೆಯಾಗಿದೆ. ಫೆ.18ಕ್ಕೆ ಈ ಸಿನಿಮಾ ತೆರೆಕಾಣಲಿದೆ.

'ನನ್ನದು 2 ಶೇಡ್ ಇರುವ ಪಾತ್ರ. 'ಡಿಲೇರಿಯಂ ಫೋಬಿಯಾ' ಎನ್ನುವ ಕಾಯಿಲೆಯ ಮೇಲೆ ಮಾಡಿರುವ ಚಿತ್ರವಿದು. ಕಥೆ ಬರೆಯುವಾಗಲೇ ನಾಯಕಿಯ ಪಾತ್ರಕ್ಕೆ ವೈಷ್ಣವಿ ಗೌಡ ಅವರೇ ಸೂಕ್ತ ಅಂದುಕೊಂಡಿದ್ದೆವು. ಚಿತ್ರದ ಪ್ರೀಕ್ಲೈಮ್ಯಾಕ್ಸ್‌ನಲ್ಲಿ ನಾಲ್ಕೂವರೆ ನಿಮಿಷದ ಒಂದೇ ದೃಶ್ಯವಿದೆ. ಇದರಲ್ಲಿ ವೈಷ್ಣವಿ ಅವರು ಅದ್ಭುತವಾಗಿ ನಟಿಸಿದ್ದಾರೆ. 70 ದಿನಗಳ ಕಾಲ ಚಿತ್ರೀಕರಣ ಮಾಡಿದ್ದೇವೆ' ಎಂದರು ಶಶಿಕಾಂತ್. ಎಚ್. ನಂದ ಹಾಗೂ ಡಿ.ಕೆ.ರವಿ ಅವರು ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ. ವೈಶಾಖ್ ವಿ.ಭಾರ್ಗವ್ ಈ ಚಿತ್ರದ ನಾಲ್ಕು ಹಾಡುಗಳಿಗೆ ಸಂಗೀತ ಸಂಯೋಜನೆ ಮಾಡಿದರೆ, ಕಿರಣ್ ಕೃಷ್ಣಮೂರ್ತಿ ಅವರು ಚಿತ್ರಕ್ಕೆ ಹಿನ್ನೆಲೆ ಸಂಗೀತ ನೀಡಿದ್ದಾರೆ.

ಚಿತ್ರಮಂದಿರಗಳು ಹೌಸ್‌ಫುಲ್!

ರಾಚೆಲ್ ಡೇವಿಡ್

ಒಪ್ಪಂದ
ಅರ್ಜುನ್ ಸರ್ಜಾ
ರಾಧಿಕಾ ಕುಮಾರಸ್ವಾಮಿ

ಕನ್ನಡ ಸಿನಿ ಪ್ರೇಕ್ಷಕರಿಗೆ ಮತ್ತೆ ಸಿನಿಮಾ ಹಬ್ಬ ಆರಂಭವಾಗಿದೆ. ಚಿತ್ರಮಂದಿರಗಳು ಪ್ರೇಕ್ಷಕರಿಂದ ಹೌಸ್‌ಫುಲ್ ಆಗುತ್ತಿವೆಯೋ ಇಲ್ಲವೋ ತಿಳಿದಿಲ್ಲ. ಆದರೆ ಇನ್ನು ಪ್ರತಿ ಶುಕ್ರವಾರ ಚಿತ್ರಮಂದಿರಗಳಂತೂ ಸಿನಿಮಾಗಳಿಂದ ತುಂಬಿಕೊಳ್ಳಲಿದೆ. ಇಂದು (ಫೆ.11) ಆರು ಸಿನಿಮಾಗಳು ತೆರೆ ಕಾಣುತ್ತಿವೆ.

ಈ ಪೈಕಿ ಡಾರ್ಲಿಂಗ್ ಕೃಷ್ಣ, ರಾಚೆಲ್ ಡೇವಿಡ್, ಮಿಲನ ನಾಗರಾಜ್ ಅಭಿನಯದ 'ಲವ್ ಮಾಕ್ಟೇಲ್-2' ಮೇಲೆ ಪ್ರೇಕ್ಷಕರ ನಿರೀಕ್ಷೆ ಹೆಚ್ಚಿದೆ. ಮೊದಲ ಭಾಗ ಹಿಟ್ ಆಗಿರುವುದೇ ಇದಕ್ಕೆ ಕಾರಣ. ಡಾರ್ಲಿಂಗ್ ಕೃಷ್ಣ ಹಾಗೂ ಅವರ ಪತ್ನಿ, ನಟಿ ಮಿಲನಾ ನಾಗರಾಜ್ ಅವರೇ ಈ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ. 'ನಿಧಿ'ಯನ್ನು ಕಳೆದುಕೊಂಡ 'ಆದಿ'ಯ ಕಥೆ ಎರಡನೇ ಭಾಗದಲ್ಲಿ ಸಾಗುತ್ತದೆ. 'ಎರಡನೇ ಭಾಗದಲ್ಲಿ ನಿಧಿ ಪಾತ್ರ ಇರುತ್ತದೆ. ಆದಿ ನೆನಪುಗಳಲ್ಲಿ ನಿಧಿ ಜೀವಂತವಾಗಿರುತ್ತಾಳೆ ಎಂದಿದೆ ಚಿತ್ರತಂಡ.

ಇದೇ ಮೊದಲ ಬಾರಿಗೆ ನಟ ಅಚ್ಯುತ್ ಕುಮಾರ್ ನಾಯಕರಾಗಿ ನಟಿಸಿರುವ 'ಫೋರ್ ವಾಲ್ಸ್' ಕೂಡಾ ಇಂದು ತೆರೆ ಕಾಣುತ್ತಿದೆ. ಎಸ್.ಎಸ್. ಸಜ್ಜನ್, ಈ ಚಿತ್ರಕ್ಕೆ ಕಥೆ ಬರೆದು ನಿರ್ದೇಶನ ಮಾಡಿದ್ದಾರೆ. ಅಚ್ಯುತ್ ಕುಮಾರ್, ಮೂರು ಶೇಡ್‌ಗಳಲ್ಲಿ ಚಿತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಫೆ.11ರಂದೇ ಎಸ್.ಎಸ್. ರವಿಗೌಡ ಹಾಗೂ 'ಬಿಗ್‌ಬಾಸ್' ಖ್ಯಾತಿಯ ದಿವ್ಯ ಸುರೇಶ್ ಅಭಿನಯಿಸಿರುವ 'ರೌಡಿ ಬೇಬಿ' ತೆರೆ ಕಾಣಲಿದೆ.

ಕೆಲ ವರ್ಷಗಳ ಹಿಂದೆ 'ಕಾಂಟ್ರ್ಯಾಕ್ಟ್' ಎಂಬ ಶೀರ್ಷಿಕೆಯಡಿ ಆರಂಭವಾಗಿದ್ದ ನಟ ಅರ್ಜುನ್ ಸರ್ಜಾ ಹಾಗೂ ನಟಿ ರಾಧಿಕಾ ಕುಮಾರಸ್ವಾಮಿ ಅಭಿನಯದ ಸಿನಿಮಾ ಇದೀಗ 'ಒಪ್ಪಂದ' ಎಂಬ ಬದಲಾದ ಶೀರ್ಷಿಕೆಯಲ್ಲಿ ತೆರೆ ಕಾಣುತ್ತಿದೆ. ಸಂಜಯ್ ಗೊಡಾವತ್ ಅರ್ಪಿಸುವ ಎಸ್.ಎಫ್. ಎಂಟರ್‌ಟೈನರ್ ಲಾಂಛನದಲ್ಲಿ ಫರ್ಹಿನ್ ಅವರು ನಿರ್ಮಾಣದ ಈ ಚಿತ್ರವನ್ನು ಎಸ್.ಎಸ್. ಸಮೀರ್ ನಿರ್ದೇಶಿಸಿದ್ದಾರೆ.

ಶಾಂಡಿಲ್ಯ(ಹರ್ಷ ಬಿ.ಟಿ.) ನಿರ್ದೇಶನದ ಗೋವಿಂದ, ನಿರೋಷ, ಚಿರಾಗ್, ಕಾವ್ಯ ಮತ್ತಿತರರು ಅಭಿನಯಿಸಿರುವ 'ಪ್ರೀತಿಗಿಬ್ಬರು' ಸಿನಿಮಾ, ಅಭಿನವ್ ಸ್ಟುಡಿಯೋಸ್ ಲಾಂಛನದಲ್ಲಿ ಅಭಿಲಾಷ್ ಚಕ್ಲಾ ಹಾಗೂ ನವಾಜಿತ್ ಬಲ್ಲರ್ ನಿರ್ಮಿಸಿರುವ, ಕುಮಾರ ದತ್ ನಿರ್ದೇಶನದ ಸಿನಿಮಾ 'ಇದೇ ಅಂತರಂಗ ಶುದ್ಧಿ'ಯೂ ಇಂದು ಬಿಡುಗಡೆಯಾಗುತ್ತಿದೆ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

❦ ಸುಭಾಷಿತ ❦
ಪ್ರೀತಿಯನ್ನು ಯಾರು ಬಯಸುತ್ತಾರೋ ಅವರು ಮೊದಲು ಪ್ರೀತಿಯನ್ನು ನೀಡಬೇಕು.
-ಸಂತ ಕಬೀರ

ಕೆಆರ್‌ಐಡಿಎಲ್: ಅಕ್ರಮಕ್ಕೆ ಲಗಾಮು ಹಾಕುವ ಇಚ್ಛಾಶಕ್ತಿ ಪ್ರದರ್ಶಿಸಿ

ಸರ್ಕಾರದ ಕಾಮಗಾರಿ ಗುತ್ತಿಗೆಯ ಟೆಂಡರ್‌ನಲ್ಲಿ ಶೇಕಡ 40ರಷ್ಟು ಮೊತ್ತ ಲಂಚಕ್ಕೆ ಬಳಕೆಯಾಗುತ್ತದೆ ಎಂದು ಗುತ್ತಿಗೆದಾರರ ಸಂಘದವರು ಪ್ರಧಾನಮಂತ್ರಿಗೆ ದೂರು ಸಲ್ಲಿಸಿದ್ದು ಕೆಲವು ತಿಂಗಳ ಹಿಂದೆ ದೊಡ್ಡ ಸದ್ದು ಮಾಡಿತ್ತು. ಈ ಆರೋಪ ಹಸಿಯಾಗಿರುವಾಗಲೇ ಕಾಮಗಾರಿಗಳನ್ನು ನಡೆಸದೇ ₹118 ಕೋಟಿಗೂ ಹೆಚ್ಚು ಮೊತ್ತದ ಬಿಲ್ ಪಾವತಿ ಮಾಡಿ, ಅಕ್ರಮ ನಡೆಸಿರುವುದು ಪತ್ತೆಯಾಗಿದೆ. ನ್ಯಾಯಮೂರ್ತಿ ಪಿ. ವಿಶ್ವನಾಥ ಶೆಟ್ಟಿ ಅವರು ಲೋಕಾಯುಕ್ತ ಸ್ಥಾನದಿಂದ ನಿವೃತ್ತಿಯಾಗುವ ಮೂರು ದಿನಗಳ ಮುನ್ನ ಸರ್ಕಾರಕ್ಕೆ ವರದಿಯೊಂದನ್ನು ಸಲ್ಲಿಸಿದ್ದಾರೆ. ಸಾರ್ವಜನಿಕರ ತೆರಿಗೆ ಹಣವನ್ನು ಹೇಗೆಲ್ಲ ಲೂಟಿ ಮಾಡಲಾಗುತ್ತಿದೆ ಎಂಬುದಕ್ಕೆ ಇದೊಂದು ಅಧಿಕೃತ ದಾಖಲೆ. ತೋಟಗಾರಿಕೆ, ಯೋಜನೆ ಮತ್ತು ಸಾಂಖ್ಯಿಕ ಸಚಿವ ಮುನಿರತ್ನ ಅವರು ಪ್ರತಿನಿಧಿಸುವ ರಾಜರಾಜೇಶ್ವರಿನಗರ ಕ್ಷೇತ್ರದಲ್ಲಿಯೇ ಇಂತಹ ಅಡಾವುಡಿ ನಡೆದಿದೆ. ಯೋಜನಾ ಇಲಾಖೆಯ ಹೊಣೆ ಹೊತ್ತ ಸಚಿವರ ಕ್ಷೇತ್ರದಲ್ಲೇ ಹೀಗೆ ಅಕ್ರಮ ನಡೆದಿರುವುದು ಭ್ರಷ್ಟಾಚಾರ ತಡೆಯುವಲ್ಲಿ ಸರ್ಕಾರಕ್ಕೆ ಇಚ್ಛಾಶಕ್ತಿ ಇದೆಯೇ ಎಂಬ ಪ್ರಶ್ನೆಯನ್ನೂ ಹುಟ್ಟಿಸುತ್ತದೆ. ಕ್ಷೇತ್ರ ವ್ಯಾಪ್ತಿಯಲ್ಲಿ ನಿರ್ವಹಿಸಲಾದ 126 ಕಾಮಗಾರಿಗಳ ಪೈಕಿ 10 ಪುನರಾವರ್ತನೆಯಾಗಿವೆ. ಎರಡು ಕಾಮಗಾರಿಗಳ ಅನುಷ್ಠಾನದಲ್ಲಿ ಲೋಪ ಕಂಡುಬಂದಿಲ್ಲ. 114 ಕಾಮಗಾರಿಗಳಲ್ಲಿ ಹೆಚ್ಚಿನವು ನಡೆದೇ ಇಲ್ಲ; ಕೆಲವು ನಡೆದಿದ್ದರೂ ಅಲ್ಪಸ್ವಲ್ಪ, ಮತ್ತೆ ಹಲವು ಕಳಪೆ ಎಂದು ಲೋಕಾಯುಕ್ತ ವರದಿ ಹೇಳಿದೆ. ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಗಮ (ಕೆಆರ್‌ಐಡಿಎಲ್) ನಿರ್ವಹಿಸಿರುವ ಕಾಮಗಾರಿಯಲ್ಲಿ ಭಾರಿ ಅಕ್ರಮ ನಡೆದಿದೆ ಎಂದೂ ವರದಿ ಉಲ್ಲೇಖಿಸಿದೆ. ಬಿಬಿಎಂಪಿಯು ಯಾವುದೇ ಕಾಮಗಾರಿಯನ್ನು ಇನ್ನು ಮುಂದೆ ನಿಗಮಕ್ಕೆ ವಹಿಸಕೂಡದು ಹಾಗೂ ಇಲ್ಲಿಯವರೆಗೆ ನಿರ್ವಹಿಸಿರುವ ಅಥವಾ ಅನುಷ್ಠಾನ ಹಂತದಲ್ಲಿರುವ ಕಾಮಗಾರಿಗಳ ಶೇ 10ರಷ್ಟು ಕಾಮಗಾರಿಗಳ ಸಮೀಕ್ಷೆಗೆ ಉನ್ನತಾಧಿಕಾರಿ ನೇತೃತ್ವದಲ್ಲಿ ತಜ್ಞರ ಸಮಿತಿ ರಚಿಸಬೇಕು ಎಂದು ಲೋಕಾಯುಕ್ತರು ಶಿಫಾರಸು ಮಾಡಿದ್ದಾರೆ. ಕಾಮಗಾರಿಗಳನ್ನು ನಡೆಸದೇ ದುಡ್ಡು ಹೊಡೆಯುವ ವ್ಯವಸ್ಥಿತ ಜಾಲವೊಂದನ್ನು ಲೋಕಾಯುಕ್ತರು ಬಯಲಿಗೆ ತಂದಿದ್ದಾರೆ. ಗುಣಮಟ್ಟದ ಕಾಮಗಾರಿ ನಡೆಸದೇ ಸಾರ್ವಜನಿಕರ ಹಣವನ್ನು ಲೂಟಿ ಮಾಡುವ ಚಾಳಿ ಅನೇಕ ದಶಕಗಳಿಂದ ಚಾಲ್ತಿಯಲ್ಲಿದೆ. ಕೆಆರ್‌ಐಡಿಎಲ್ ನಡೆಸಿರುವ ಭ್ರಷ್ಟಾಚಾರವೆಂಬ ಬೃಹತ್ ಬೆಟ್ಟದ ಒಂದು ಕೊರಕಲನ್ನಷ್ಟೇ ಈ ವರದಿ ಪತ್ತೆ ಹಚ್ಚಿದೆ. ರಾಜ್ಯದ ವಿವಿಧ ವಿಧಾನಸಭಾ ಕ್ಷೇತ್ರಗಳಲ್ಲಿ ನಿಗಮ ನಡೆಸಿದ ಕಾಮಗಾರಿಗಳನ್ನು ಪರಿಶೋಧನೆಗೆ ಒಳಪಡಿಸಿದರೆ ಸಾರ್ವಜನಿಕರ ತೆರಿಗೆ ಹಣ ಹೇಗೆ ಪೋಲಾಗಿದೆ ಎಂಬುದು ಬಹಿರಂಗವಾಗಲಿದೆ.

ಈ ರೂಪದಲ್ಲಿ ಈ ನಿಗಮವನ್ನು ಉಳಿಸಿಕೊಳ್ಳಬೇಕಾದ ಅಗತ್ಯ ಇದೆಯೇ?

ನಿಗಮದ ಇತಿಹಾಸ ಕೆದಕಿದರೆ ಅಕ್ರಮದ ಗಬ್ಬು ವಾಸನೆ ಬರುತ್ತದೆ. ರಾಜ್ಯದಲ್ಲಿ ಕಳಪೆ ಕಾಮಗಾರಿ ನಡೆಸಿದ, ಕಾಮಗಾರಿ ನಡೆಸದೇ ಬಿಲ್ ಮಾಡುತ್ತಿದ್ದ ಭೂಸೇನಾ ನಿಗಮಕ್ಕೆ ಭಾರಿ ವಿರೋಧ ಎದುರಾಯಿತು. 2009ರಲ್ಲಿ ಈ ನಿಗಮದ ಹೆಸರು ಕೆಆರ್‌ಐಡಿಎಲ್ ಎಂದು ಬದಲಾಯಿತು. ಹೆಸರು ಬದಲಾಯಿತೇ ವಿನಾ ನಿರ್ವಹಿಸುವ ಕೆಲಸದಲ್ಲಿ ಗುಣಾತ್ಮಕ ಬದಲಾವಣೆ ಹಾಗೂ ಹಣ ಉಳಿತಾಯವೇನೂ ಸಾಧ್ಯವಾಗಲಿಲ್ಲ. ಕಾಮಗಾರಿಗಳನ್ನು ನಿರ್ವಹಿಸುವ ಮೂಲಕ ಸ್ಥಳೀಯ ನಿರುದ್ಯೋಗಿಗಳಿಗೆ ಕೆಲಸವನ್ನು ಒದಗಿಸಿ, ಗ್ರಾಮೀಣ ಜನರ ಆರ್ಥಿಕ ಪರಿಸ್ಥಿತಿಯನ್ನು ಬಲಗೊಳಿಸುವುದು ಸಂಸ್ಥೆಯ ಉದ್ದೇಶ ಎಂದು ಕೆಆರ್‌ಐಡಿಎಲ್ ಹೇಳಿಕೊಂಡಿದೆ. ಕಾಮಗಾರಿಗಳನ್ನು ಸಂಸ್ಥೆಯು ನೇರವಾಗಿಯೇ ನಿರ್ವಹಿಸುವುದರಿಂದ, ಮಧ್ಯವರ್ತಿಗಳು ಹಾಗೂ ಗುತ್ತಿಗೆದಾರರನ್ನು ದೂರವಿಟ್ಟು, ಯೋಜನೆಗಳಿಗೆಂದು ಮೀಸಲಿಟ್ಟ ಹಣದ ಪೂರ್ಣ ಫಲವನ್ನು ಗ್ರಾಮೀಣ ಜನರಿಗೆ ತಲುಪಿಸುವುದು ತನ್ನ ಆಶಯ ಎಂದೂ ಸಂಸ್ಥೆ ಬಿಂಬಿಸಿಕೊಂಡಿದೆ. ರಾಜ್ಯದ ವಿವಿಧ ಕಡೆ ಕಾಮಗಾರಿ ನಿರ್ವಹಿಸುವುದಾಗಿ ಹೇಳಿಕೊಳ್ಳುವ ಸಂಸ್ಥೆಯಲ್ಲಿ ಒಟ್ಟು ಸಿಬ್ಬಂದಿ ಸಂಖ್ಯೆ 848 ಮಾತ್ರ. ಅದರಲ್ಲಿ 315 ಮಂದಿ ನುರಿತ ಸಿಬ್ಬಂದಿ ಇದ್ದರೆ, 533 ಲಿಪಿಕ ಸಿಬ್ಬಂದಿ ಇದ್ದಾರೆ. ಕಾಮಗಾರಿಯ ಮೇಲ್ವಿಚಾರಣೆ ನಡೆಸುವ, ಪರಿಶೀಲಿಸುವ ಗೋಜಿಗೆ ಹೋಗುವವರು ಇಲ್ಲ. ಅವೆಲ್ಲವನ್ನೂ ತಟಸ್ಥ ಸಂಸ್ಥೆ ಮೂಲಕವೇ ಪರಿಶೀಲಿಸಲಾಗುತ್ತದೆ. 'ಕೆಆರ್‌ಐಡಿಎಲ್ ಯಾವುದೇ ಕಾಮಗಾರಿಯನ್ನು ನಿರ್ವಹಿಸುವುದಿಲ್ಲ. ವಿವಿಧ ಇಲಾಖೆಗಳ ಕಾಮಗಾರಿಯನ್ನು ತನ್ನ ಹೆಸರಿಗೆ ಹಂಚಿಕೆ ಮಾಡಿಸಿಕೊಂಡು ಜನಪ್ರತಿನಿಧಿಗಳ ಆಪ್ತರಿಗೆ ನೀಡುವ ದಲ್ಲಾಳಿ ಕೆಲಸವನ್ನಷ್ಟೇ ಇದು ಮಾಡುತ್ತದೆ' ಎಂಬ ಆಪಾದನೆ ಲಾಗಾಯ್ತಿನಿಂದಲೂ ಇದೆ. ಜನಪ್ರತಿನಿಧಿಗಳು, ಅಧಿಕಾರಿಗಳು, ಸಮಾಲೋಚಕರು, ತಟಸ್ಥ ಸಂಸ್ಥೆ, ಗುತ್ತಿಗೆದಾರರಿಗೆ ಸಾರ್ವಜನಿಕರ ಹಣವನ್ನು ದುರ್ಬಳಕೆ ಮಾಡಲು ಅವಕಾಶ ಮಾಡಿಕೊಡುವ ಕಳ್ಳಕಿಂಡಿಯಂತೆ ಇದು ಕಾರ್ಯನಿರ್ವಹಿಸುತ್ತದೆ. ರಾಜ್ಯ ಸರ್ಕಾರದಲ್ಲಿ ಕಾಮಗಾರಿ ನಿರ್ವಹಿಸಲು ಲೋಕೋಪಯೋಗಿ ಇಲಾಖೆ, ಜಲಸಂಪನ್ಮೂಲ ಇಲಾಖೆ, ಪಂಚಾಯತ್ ರಾಜ್ ಇಲಾಖೆಯ ಎಂಜಿನಿಯರಿಂಗ್ ವಿಭಾಗ, ಆರೋಗ್ಯ ಇಲಾಖೆಯಲ್ಲೂ ಪ್ರತ್ಯೇಕ ವಿಭಾಗವೇ ಇದೆ. ಹೀಗಿರುವಾಗ, ದಲ್ಲಾಳಿ ಕೆಲಸ ಮಾಡಲು, ಕಾಮಗಾರಿ ನಿರ್ವಹಿಸದೇ ಹಣ ಕೊಳ್ಳೆ ಹೊಡೆಯಲು ಕೆಆರ್‌ಐಡಿಎಲ್ ಅಗತ್ಯವಿದೆಯೇ ಎಂಬ ಪ್ರಶ್ನೆಗೆ ಆಳುವವರೇ ಉತ್ತರ ಕೊಡಬೇಕು. ₹2 ಕೋಟಿವರೆಗಿನ ಕಾಮಗಾರಿಗಳನ್ನು ಟೆಂಡರ್ ಕರೆಯದೇ ನಿರ್ವಹಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಕಾಯ್ದೆಯ ಸೆಕ್ಷನ್ 4ರ ಅಡಿ ವಿನಾಯಿತಿ ನೀಡಲು ಬಿ.ಎಸ್.ಯಡಿಯೂರಪ್ಪ ಮುಖ್ಯಮಂತ್ರಿ ಆಗಿದ್ದಾಗ ನಿರ್ಧಾರ ತೆಗೆದುಕೊಳ್ಳಲಾಗಿತ್ತು. ₹50 ಲಕ್ಷದವರೆಗಿನ ಕಾಮಗಾರಿಗಳ ಗುತ್ತಿಗೆ ಟೆಂಡರ್‌ನಲ್ಲಿ ಪರಿಶಿಷ್ಟ ಜಾತಿ–ಪಂಗಡದ ಗುತ್ತಿಗೆದಾರರಿಗೆ ಮೀಸಲಾತಿ ನೀಡಬೇಕು ಎಂಬ ನಿಯಮ ರಾಜ್ಯದಲ್ಲಿ ಜಾರಿಯಲ್ಲಿದೆ. ಮೀಸಲಾತಿ ತಪ್ಪಿಸುವ ಜತೆಗೆ ಕೆಆರ್‌ಐಡಿಎಲ್‌ಗೆ ಕಾಮಗಾರಿಯನ್ನು ನೇರವಾಗಿ ವಹಿಸಲು ಈ ನಿಯಮವನ್ನು ಸರ್ಕಾರ ಜಾರಿಗೆ ತಂದಿದೆ ಎಂಬ ಆರೋಪವನ್ನು ಪರಿಶಿಷ್ಟ ಸಮುದಾಯದ ಗುತ್ತಿಗೆದಾರರು ಮಾಡಿದ್ದರು. ₹2 ಕೋಟಿವರೆಗಿನ ಕಾಮಗಾರಿಗಳನ್ನು ಕೆಆರ್‌ಐಡಿಎಲ್‌ಗೆ ವಹಿಸಿದರೆ ಕಾಮಗಾರಿ ನಿರ್ವಹಿಸದೇ ಹಣ ಹೊಡೆಯಲು ಸಾಧ್ಯ ಎಂಬುದು ಜನಪ್ರತಿನಿಧಿ–ಅಧಿಕಾರಿ–ಗುತ್ತಿಗೆದಾರರ ಕೂಟಕ್ಕೆ ಗೊತ್ತಿದೆ. ಕೆಆರ್‌ಐಡಿಎಲ್‌ಗೆ ಕಾಮಗಾರಿ ವಹಿಸುವುದು ಬೇಡ ಎಂದು ಲೋಕಾಯುಕ್ತರು ಶಿಫಾರಸು ಮಾಡಿದ್ದಾರೆ. ಕಾಮಗಾರಿಯನ್ನೇ ಮಾಡದೆ ಜನರ ಹಣವನ್ನು ಸಲೀಸಾಗಿ ನುಂಗುವುದಕ್ಕಾಗಿಯೇ ಇರುವಂತಿರುವ ಕೆಆರ್‌ಐಡಿಎಲ್ ಅನ್ನು ಶಾಶ್ವತವಾಗಿ ಮುಚ್ಚಿದರೆ ಸಮಾಜಕ್ಕಾಗಲೀ ಸರ್ಕಾರಕ್ಕಾಗಲೀ ನಷ್ಟವಿಲ್ಲ. ಸರ್ಕಾರ ಈ ಬಗ್ಗೆ ಆಲೋಚಿಸಲು ಇದು ಸಕಾಲ.

ದಿನದ ಟ್ವೀಟ್

ಸುರಕ್ಷತೆ ಆದ್ಯತೆಯಾಗಲಿ

ಅಫ್ಗಾನಿಸ್ತಾನದಲ್ಲಿ ಕಾಣೆಯಾಗಿರುವ ಮಹಿಳಾ ಹೋರಾಟಗಾರರ ಯೋಗಕ್ಷೇಮದ ಬಗ್ಗೆ ನನಗೆ ಹೆಚ್ಚು ಆತಂಕವಾಗುತ್ತಿದೆ. ಹಲವಾರು ಮಂದಿ 'ಕಣ್ಮರೆಯಾಗಿದ್ದಾರೆ', ಕೆಲವರ ಬಗ್ಗೆ ವಾರಗಟ್ಟಲೆಯಿಂದ ಯಾವುದೇ ಸುದ್ದಿ ಕೇಳಿಬರುತ್ತಿಲ್ಲ. ಅವರೆಲ್ಲರ ಸುರಕ್ಷತೆಯನ್ನು ಖಚಿತ ಪಡಿಸಿಕೊಳ್ಳಲು ತಾಲಿಬಾನ್‌ಗೆ ನಾನು ಬಲವಾಗಿ ಆಗ್ರಹಿಸುತ್ತೇನೆ.

ಆ್ಯಂಟೊನಿಯೊ ಗುಟೆರಸ್, ವಿಶ್ವಸಂಸ್ಥೆಯ ಮಹಾಪ್ರಧಾನ ಕಾರ್ಯದರ್ಶಿ

ಕಿಡಿನುಡಿ

ಬಿಜೆಪಿ ಅಧಿಕಾರಕ್ಕೆ ಬರದಿದ್ದರೆ ಉತ್ತರಪ್ರದೇಶವು ಕಾಶ್ಮೀರ, ಬಂಗಾಳ ಅಥವಾ ಕೇರಳವಾಗಿ ಬದಲಾಗುತ್ತದೆ ಎಂದು ಮತದಾರರಿಗೆ ಯೋಗಿ ಆದಿತ್ಯನಾಥ ಹೇಳಿದ್ದಾರೆ. ಹಾಗಾದರೆ ಉತ್ತರಪ್ರದೇಶವು ಎಷ್ಟು ಅದೃಷ್ಟಶಾಲಿ! ಕಾಶ್ಮೀರದ ಸೌಂದರ್ಯ, ಬಂಗಾಳದ ಸಂಸ್ಕೃತಿ ಮತ್ತು ಕೇರಳದ ಶಿಕ್ಷಣವು ಈ ಪ್ರದೇಶದಲ್ಲಿ ಬೆರಗುಗೊಳಿಸುವ ಸಾಧನೆಗಳಿಗೆ ಕಾರಣವಾಗುತ್ತವೆ. ಉತ್ತರ ಪ್ರದೇಶ ಅದ್ಭುತ: ಅಲ್ಲಿನ ಸರ್ಕಾರದ ಬಗ್ಗೆ ಮರುಕ ಇದೆ.

ಶಶಿ ತರೂರ್, ಕಾಂಗ್ರೆಸ್ ಮುಖಂಡ

25 ವರ್ಷಗಳ ಹಿಂದೆ
ಮಂಗಳವಾರ, 11-2-1997

• **ಆಲಮಟ್ಟಿ: ಬಸು ಮಧ್ಯಸ್ಥಿಕೆ**

ಹೈದರಾಬಾದ್, ಫೆ. 10 (ಪಿಟಿಐ)– ಕರ್ನಾಟಕ ಮತ್ತು ಆಂಧ್ರ ಪ್ರದೇಶಗಳ ನಡುವಿನ ಆಲಮಟ್ಟಿ ಅಣೆಕಟ್ಟು ವಿವಾದ ಇತ್ಯರ್ಥ ಕುರಿತಂತೆ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಜ್ಯೋತಿ ಬಸು ಅವರು ಮಧ್ಯಸ್ಥಿಕೆ ವಹಿಸಲಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡುತ್ತಿದ್ದ ಆಂಧ್ರದ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಅವರು ಇಂದು ಈ ವಿಷಯ ಪ್ರಕಟಿಸಿದರು.

ಆಲಮಟ್ಟಿ ಕುರಿತ ತಜ್ಞರ ಸಮಿತಿ, ವಿವಾದದ ಇತ್ಯರ್ಥಕ್ಕಾಗಿ ರಚಿಸಲಾಗಿರುವ ಸಂಯುಕ್ತರಂಗ ಮುಖ್ಯಮಂತ್ರಿಗಳ ಸಮಿತಿಯ ಮುಖ್ಯಸ್ಥ ಜ್ಯೋತಿ ಬಸು ಅವರಿಗೆ ಈಗಾಗಲೇ ವರದಿ ಸಲ್ಲಿಸಿದೆ.

50 ವರ್ಷಗಳ ಹಿಂದೆ
ಶುಕ್ರವಾರ, 11-2-1972

• **ಕೇಂದ್ರ– ರಾಜ್ಯ ಬಾಂಧವ್ಯ ಮರು ಹೊಂದಾಣಿಕೆಗೆ ಜನಸಂಘದ ವಾಗ್ದಾನ**

ನವದೆಹಲಿ, ಫೆ. 10– ಕೇಂದ್ರ– ರಾಜ್ಯ ಬಾಂಧವ್ಯದ ಮರು ಹೊಂದಾಣಿಕೆಯನ್ನು, ಮುಖ್ಯವಾಗಿ ಆರ್ಥಿಕ ವಿಷಯಗಳಲ್ಲಿ ಮರು-ಹೊಂದಾಣಿಕೆಯನ್ನು ಮಾಡಿಸುವುದಾಗಿ ಜನಸಂಘವು ತನ್ನ ಚುನಾವಣೆ ಪ್ರಣಾಳಿಕೆಯಲ್ಲಿ ವಾಗ್ದಾನ ಮಾಡಿದೆ.

ಕೇಂದ್ರ– ರಾಜ್ಯ ಬಾಂಧವ್ಯಗಳಿಗೆ ಸಂಬಂಧಿಸಿದ ಎಲ್ಲ ವಿಷಯಗಳ ಬಗ್ಗೆ ಸರ್ಕಾರಕ್ಕೆ ಸಲಹೆ ಮಾಡಲು ಸಂವಿಧಾನ 263ನೇ ವಿಧಿಯ ಪ್ರಕಾರ ಅಂತರರಾಜ್ಯ ಮಂಡಳಿಯೊಂದನ್ನು ಪಕ್ಷವು ರಚಿಸುವುದು ಎಂದು ಜನಸಂಘದ ಅಧ್ಯಕ್ಷ ಅಟಲ್ ಬಿಹಾರಿ ವಾಜಪೇಯಿ ಅವರು ಬಿಡುಗಡೆ ಮಾಡಿದ ಚುನಾವಣೆ ಪ್ರಣಾಳಿಕೆಯಲ್ಲಿ ತಿಳಿಸಲಾಗಿದೆ.

ಕಲ್ಲಿದ್ದಲು ಸ್ಥಾವರದ ಹಾರುಬೂದಿಗೇನೋ ಕಿಮ್ಮತ್ತು ಬಂತು. ಆದರೆ ಕಾರ್ಬನ್ ಡೈ ಆಕ್ಸೈಡ್‌ಗೆ?

ಹಾರುಬೂದಿಯ ಹಾರಾಟಕ್ಕೆ ಕಡಿವಾಣ

ವಿಶ್ಲೇಷಣೆ

ಟಿ.ಆರ್.ಅನಂತರಾಮು

ಭಾರತದ ಶೇಕಡ 70ರಷ್ಟು ಭಾಗ ವಿದ್ಯುತ್ ಉತ್ಪಾದನೆಯಾಗುತ್ತಿರುವುದು ಕಲ್ಲಿದ್ದಲು ಬಳಸುವ ಉಷ್ಣಸ್ಥಾವರಗಳಿಂದ ಎಂದು ಇದೀಗ ಇಂಟರ್ ನ್ಯಾಷನಲ್ ಎನರ್ಜಿ ಏಜೆನ್ಸಿಯು ಸಮೀಕ್ಷಾ ವರದಿಯನ್ನು ನೀಡಿದೆ. ಆದರೆ ಇದು ಪ್ರಗತಿಯ ಅಳತೆಗೋಲಾಗ ಬೇಕಿಲ್ಲ. ಬದಲು ಕಳವಳದ ಸಂಗತಿ. ವಿದ್ಯುತ್ ಬೇಕು, ಎರಡು ಮಾತಿಲ್ಲ. ಇದಕ್ಕಾಗಿಯೇ ದೇಶದಲ್ಲಿ 191 ಉಷ್ಣ ಸ್ಥಾವರ ಘಟಕಗಳು ಹಗಲಿರುಳು ಕಾರ್ಯಶೀಲವಾಗಿವೆ.

ಈ ಮೂಲದಿಂದ 2.13 ಲಕ್ಷ ಮೆಗಾವಾಟ್ ವಿದ್ಯುತ್ ಉತ್ಪಾದನೆಯಾಗುತ್ತಿದೆ. ಇದಕ್ಕಾಗಿ ಬಳಕೆಯಾಗುತ್ತಿರುವ ಕಲ್ಲಿದ್ದಲು 6,720 ಲಕ್ಷ ಟನ್ನು. ಸಾಮಾನ್ಯವಾಗಿ ಪರಿಸರ ಚಿಂತಕರ ಹೊರತು ಉಳಿದವರಿಗೆ ಇದರ ಹಿಂದಿರುವ ಮತ್ತೊಂದು ಸತ್ಯ ತಿಳಿಯದು. ಪ್ರತೀ ಟನ್ನು ಕಲ್ಲಿದ್ದಲು ಉರಿಸಿದಾಗಲೆಲ್ಲ ವಾಯುಗೋಳಕ್ಕೆ ಅದರ ಎರಡರಷ್ಟು ಪ್ರಮಾಣದ ಕಾರ್ಬನ್ ಡೈ ಆಕ್ಸೈಡ್ ಸೇರುತ್ತದೆ. ದೊಡ್ಡ ಮೊತ್ತದ ಸಲ್ಫರ್ ಡೈ ಆಕ್ಸೈಡ್ ಮತ್ತು ಕಾರ್ಬನ್ ಕಣ ಜೊತೆಗೂಡಿ 'ಮಾಲಿನ್ಯಸ್ನೇಹಿ'ಯಾಗಿ ಮನುಷ್ಯರ ಬದುಕನ್ನೇ ಅಲ್ಲಾಡಿಸುತ್ತಿವೆ. ಈಗ ಅದೇ ಲೆಕ್ಕವನ್ನು ಇನ್ನೊಂದು ಕೋನದಲ್ಲಿ ನೋಡಿದಾಗ, 6,720 ಲಕ್ಷ ಟನ್ನು ಕಲ್ಲಿದ್ದಲು ಉರಿಸಿದಾಗ ಅದರಿಂದ 2,220 ಲಕ್ಷ ಟನ್ನು ಹಾರುಬೂದಿ ಉತ್ಪಾದನೆಯಾಗುತ್ತದೆ. ಇದರ ನಿರ್ವಹಣೆ ಹೇಗೆ ಎಂದು ಹಸಿರು ನ್ಯಾಯಮಂಡಳಿ ಕೇಳುತ್ತಿದೆ.

ಕಲ್ಲಿದ್ದಲು ಉರಿಸಿದಾಗಲೆಲ್ಲ ಹೊರಬೀಳುವ ಹಾರುಬೂದಿಯನ್ನು ತಡೆಯಲು ಸದ್ಯಕ್ಕೆ ಯಾವ ತಂತ್ರಜ್ಞಾನದಿಂದಲೂ ಸಾಧ್ಯವಿಲ್ಲ. ಬೂದಿ ಹಾರಾಡದಂತೆ, ಸುತ್ತಣ ಫಲವತ್ತು ಭೂಮಿ ಹಾಳಾಗದಂತೆ, ಜಲಮೂಲ ಮಾಲಿನ್ಯವಾಗದಂತೆ ನಿರ್ವಹಿಸುವ ಹೊಣೆ ಸ್ಥಾವರಗಳ ಆಡಳಿತ ವರ್ಗಕ್ಕೆ ಸೇರಿದ್ದು. 'ಕಾನೂನು ಇರುವುದೇ ಮುರಿಯಲೆಂದು' ಎಂದು ಉಷ್ಣಸ್ಥಾವರಗಳನ್ನು ನಿರ್ವಹಿಸುವವರು ವರ್ತಿಸಿದ್ದರಿಂದಲೇ ಹಸಿರು ನ್ಯಾಯಮಂಡಳಿಯು ಕಾನೂನನ್ನು ಬಿಗಿಗೊಳಿಸ ಬೇಕಾಯಿತು.

ಇದಕ್ಕೊಂದು ಗಾಸಿಗೊಳಿಸುವ ಹಿನ್ನೆಲೆಯೂ ಇದೆ. ಸಾಮಾನ್ಯವಾಗಿ ಯಾವುದೇ ಉಷ್ಣಸ್ಥಾವರದಲ್ಲಿ ಉತ್ಪತ್ತಿಯಾಗುವ ಬೂದಿಯನ್ನು ಕೆಸರು ಮಾಡಿ, ಹತ್ತಿರದಲ್ಲೇ ನಿರ್ಮಿಸಿದ ಏರಿ ಒಡ್ಡುಗಳಲ್ಲಿ ಸಂಗ್ರಹಿಸುವುದುಂಟು. ಎಲ್ಲ ಸ್ಥಾವರಗಳಲ್ಲೂ ಇದು ಕಡ್ಡಾಯ. ಇದೇನೂ ದೊಡ್ಡ ತಂತ್ರಜ್ಞಾನ ಬೇಡುವುದಿಲ್ಲ. ಆದರೆ ಕಟ್ಟೆಗಳೂ ತುಂಬಿಬರುತ್ತವೆ. 2000ದಲ್ಲಿ ಮಧ್ಯ ಪ್ರದೇಶದ ಸಿಂಗ್ರೋಲಿ ಎಂಬ ಬಳಿ ಬೂದಿಕಟ್ಟೆಯ ಏರು ಒಡೆದು ಮಳೆಗಾಲದಲ್ಲಿ ನದಿಯಾಗಿ ಹರಿದಾಗ, ಮಕ್ಕಳೂ ಸೇರಿದಂತೆ ಆರು ಮಂದಿ ಸತ್ತರು. ಬೆಳೆದು ನಿಂತಿದ್ದ ಬೆಳೆಯೆಲ್ಲ ನಾಶವಾಗಿ ಹಲವು ಕೋಟಿ ರೂಪಾಯಿಗಳ ನಷ್ಟವಾಯಿತು. ನ್ಯಾಯಮಂಡಳಿಯು ಪ್ರವೇಶಿಸಲೇ ಬೇಕಾಯಿತು. ಸಂತ್ರಸ್ತರ ಕುಟುಂಬಕ್ಕೆ ಪರಿಹಾರ ಸಿಕ್ಕಿತು. ಆದರೆ ಬೂದಿಯ ನಿರ್ವಹಣೆಗೆ ಪರಿಹಾರ ಇರಲಿಲ್ಲ. ಕೇಂದ್ರ ಸರ್ಕಾರಕ್ಕೆ ನೋಟಿಸ್ ಹೋಯಿತು. ತತ್‌ಕ್ಷಣ ಸರ್ಕಾರದ ಕಾರ್ಯದರ್ಶಿಗಳ ಮಟ್ಟದಲ್ಲಿ ಸಮಿತಿ ರಚಿಸಬೇಕು, ಬೂದಿಯನ್ನು ವೈಜ್ಞಾನಿಕವಾಗಿ ಹೇಗೆ ವಿಲೇವಾರಿ ಮಾಡುತ್ತೀರಿ ಎಂಬ ನೀಲನಕ್ಷೆಯನ್ನು ಕೊಡಬೇಕು ಎಂದು ಕೇಳಿದೆ. ಹಾಲಿ, ಭಾರತದ ಎಲ್ಲ ಸ್ಥಾವರಗಳಿಂದ ಸಂಚಯನವಾಗಿರುವ ಬೂದಿ 16.70 ಕೋಟಿ ಟನ್ನು. ಒಟ್ಟಿಗೇ ರಾಶಿ ಹಾಕಿದರೆ ಬಹುಶಃ ನಂದಿ ಬೆಟ್ಟದಷ್ಟು ಎತ್ತರವಾಗಬಹುದು. ಇದೇ ಜನವರಿಯಲ್ಲಿ ನ್ಯಾಯಮಂಡಳಿ ನೋಟಿಸ್ ಜಾರಿ ಮಾಡಿದೆ. ಸ್ಥಾವರಗಳ ಆಡಳಿತವರ್ಗ ಉಪೇಕ್ಷಿಸಿದರೆ ಕೋಟ್ಯಂತರ ರೂಪಾಯಿ ಜುಲ್ಮಾನೆ ತೆರಬೇಕಾಗಬಹುದು.

ಸದ್ಯದಲ್ಲಿ ಭಾರತ ಅಡಕತ್ತರಿಗೆ ಸಿಕ್ಕಿಹಾಕಿಕೊಂಡಿದೆ. ನಮ್ಮಲ್ಲಿ 34,400 ಕೋಟಿ ಟನ್ನು ಕಲ್ಲಿದ್ದಲು ಭೂಒಡಲಿನಲ್ಲಿದೆ. ಇದನ್ನು ಅಮೂಲ್ಯ ಸಂಪತ್ತೆಂದು ಭಾವಿಸಿ ಬೀಗಬೇಕಾಗಿಲ್ಲ. ಏಕೆಂದರೆ ಪ್ಯಾರಿಸ್‌ನಲ್ಲಿ ನಡೆದ ಒಪ್ಪಂದಕ್ಕೆ ಭಾರತ ಬದ್ಧವಾಗಲೇಬೇಕು. ಮುಂದಿನ 30 ವರ್ಷಗಳ ಒಳಗಾಗಿ ವಾಯುಗೋಳದ ಉಷ್ಣತೆಯನ್ನು 1 ಡಿಗ್ರಿ ಸೆ. ಕಡಿಮೆಗೊಳಿಸಲೇಬೇಕು. ಆದರೆ ಹೆಚ್ಚು ಗೊಂದಲವಿರುವುದು ಇರುವ 191 ಉಷ್ಣ ವಿದ್ಯುತ್ ಸ್ಥಾವರ ಘಟಕಗಳನ್ನು ಹಂತಹಂತವಾಗಿ ಮುಚ್ಚಿ, ಆ ಜಾಗದಲ್ಲಿ ನವೀಕರಿಸಬಹುದಾದ ಶಕ್ತಿಮೂಲ ತರುವ ಯೋಜನೆಯಲ್ಲಿ. ಇದು ಸುಲಭದ ಮಾತಲ್ಲ. ಉಷ್ಣ ಸ್ಥಾವರಗಳ ಮೇಲೆ ಭಾರತ ವಿಪರೀತವಾಗಿ ಅವಲಂಬಿಸಿದೆ. ಕಳೆದ ಅಕ್ಟೋಬರ್‌ನಲ್ಲೇ ಕಲ್ಲಿದ್ದಲು ಪೂರೈಕೆಯ ಬಗ್ಗೆ ದೇಶದಾದ್ಯಂತ ಚರ್ಚೆಯಾಗಿತ್ತು. ಭಾರತದ ಮುಕ್ಕಾಲು ಪಾಲು ಉಷ್ಣಸ್ಥಾವರಗಳಲ್ಲಿ ಕಲ್ಲಿದ್ದಲ ಸಂಗ್ರಹ ಒಂದು ವಾರಕ್ಕಷ್ಟೇ ಸಾಕಾಗುತ್ತಿತ್ತು. ಒಂದೆಡೆ ಕೋವಿಡ್ ಲಗ್ಗೆ, ಇನ್ನೊಂದು ಕಡೆ ಅತಿವೃಷ್ಟಿ, ಕಲ್ಲಿದ್ದಲ ಗಣಿಗಾರಿಕೆ ಗಣನೀಯವಾಗಿ ಕುಸಿದಿತ್ತು. ಇದರ ಜೊತೆಗೆ ಆರು ದೇಶಗಳಿಂದ ಭಾರತ ಕಲ್ಲಿದ್ದಲನ್ನು ಆಮದು ಮಾಡಿಕೊಳ್ಳುತ್ತಿದೆ. ಅವೂ ಏಕಾಏಕಿ ಕಲ್ಲಿದ್ದಲ ಬೆಲೆಯನ್ನು ಶೇ 50ರಷ್ಟು ಏರಿಸಿದವು. ಪರಿಣಾಮ, ದೇಶದಾದ್ಯಂತ ವಿದ್ಯುತ್ ಪೂರೈಕೆಯ ಬಗ್ಗೆ ಕಳವಳ ಶುರುವಾಯಿತು. ಭಾರತ ಶೇ 22ರಷ್ಟು ಭಾಗ ಕಲ್ಲಿದ್ದಲನ್ನು ಆಮದು ಮಾಡಿಕೊಳ್ಳುತ್ತಿದೆ. ಎಂಥ ಸ್ಥಿತಿ!

ರಾಜಸ್ಥಾನವು ಉಷ್ಣಸ್ಥಾವರಗಳ ಮೇಲೆ ₹ 40,000 ಕೋಟಿ ಬಂಡವಾಳ ಹಾಕಿದೆ. 4,300 ಮೆಗಾವಾಟ್ ಶಕ್ತಿ ಅದರ ಉತ್ಪಾದನೆಯ ಗುರಿ. ಆದರೆ ರಾಜ್ಯದಲ್ಲಿ ಕಲ್ಲಿದ್ದಲು ಸಂಪನ್ಮೂಲವಿಲ್ಲ. ಛತ್ತೀಸಗಡವನ್ನು ಅವಲಂಬಿಸಬೇಕು. ಅಲ್ಲಿ ಪರಿಸರ ಕಾನೂನನ್ನು ಪರಿಪಾಲಿಸುವಲ್ಲಿ ಎಲ್ಲವೂ ಗೊಂದಲ. ಹೀಗಾಗಿ ಅದು ಒಪ್ಪಂದವನ್ನು ಪೂರೈಸಲಾಗಲಿಲ್ಲ. ಪರಿಣಾಮ, ರಾಜಸ್ಥಾನ ದಿನಕ್ಕೆ 14 ಗಂಟೆ ವಿದ್ಯುತ್ ಕಡಿತವನ್ನು ಎದುರಿಸಬೇಕಾಯಿತು. ಕೊನೆಗೆ ಕೇಂದ್ರವೇ ದಿನಕ್ಕೆ 28,000 ಟನ್ನು ಕಲ್ಲಿದ್ದಲನ್ನು ಒದಗಿಸಿ ರಾಜಸ್ಥಾನದ ಸಂಕಷ್ಟವನ್ನು ನಿವಾರಿಸಬೇಕಾಯಿತು. ಕಲ್ಲಿದ್ದಲು ಅವಲಂಬನೆಯಿಂದ ಆದ ಫಜೀತಿ ಇದು. ಕಲ್ಲಿದ್ದಲಿಗೆ ಇಷ್ಟೆಲ್ಲ ಮಹತ್ವವಿದ್ದಾಗ ಪೂರೈಕೆ, ಬಳಕೆಯಲ್ಲಿ ಹಾರಾಟ, ಚೀರಾಟ, ದೂರು ಇರುವಾಗ ಬೂದಿಯ ಉತ್ಪಾದನೆ ಹೇಗೆ ಸ್ಥಗಿತವಾದೀತು? 'ನಮಗೆ ಕರೆಂಟ್ ಬೇಕು, ಬೂದಿ ಸಮಸ್ಯೆಯನ್ನು ನೀವು ಪರಿಹಾರ ಮಾಡಿ' ಎಂಬುದು ಎಲ್ಲ ರಾಜ್ಯಗಳಂತೆ ರಾಜಸ್ಥಾನದ ನಿಲುವು ಕೂಡ.

ಹಾರುಬೂದಿಯೇನೂ ಗೊಬ್ಬರಕ್ಕೆ ಬರುವುದಿಲ್ಲ. ಹಾಗಿದ್ದಿದ್ದರೆ ಒಂದು ಕೆ.ಜಿ. ಬೂದಿಯೂ ಸ್ಥಾವರದಲ್ಲಿ ಉಳಿಯುತ್ತಿರಲಿಲ್ಲ. ಜನ ಮುಗಿಬಿದ್ದು ಬಾಚಿಬಿಡುತ್ತಿದ್ದರು. ನಿಸರ್ಗ ಈ ವಿಚಾರದಲ್ಲಿ ರಿಯಾಯಿತಿಯನ್ನೇನೂ ತೋರಿಲ್ಲ. ಕಲ್ಲಿದ್ದಲು ಉರಿದಾಗ ವಿಷಕಾರಿ ಭಾರಧಾತುಗಳು ಕೆಳಸ್ತರದ ಬೂದಿಯಲ್ಲಿರುತ್ತವೆ. ಮೇಲುಸ್ತರದಲ್ಲೂ ಹೆಚ್ಚಿನ ಪಾಲು ಸಿಲಿಕ ಮತ್ತು ಅಲ್ಯುಮಿನಿಯಂ ಬೆರೆತಿರುತ್ತದೆ. ಇವೇನೂ ನೀರಿನಲ್ಲಿ ಕರಗುವುದಿಲ್ಲ. ಸೂಕ್ಷ್ಮ ಕಣಗಳಾಗಿ ಗಾಳಿಯಲ್ಲಿ ಹಾರುತ್ತವೆ. ಸಮಸ್ಯೆಯ ಮೂಲ ಇರುವುದೇ ಇಲ್ಲಿ. ಆದರೆ ಎಂಜಿನಿಯರ್‌ಗಳು ಬಹುಬೇಗ ಬೂದಿಯ ಗುಣವನ್ನು ಅರ್ಥಮಾಡಿಕೊಂಡರು. ಕಾಂಕ್ರೀಟಿಗೆ ಬಳಸಿದರೆ ಇನ್ನಷ್ಟು ದೃಢತೆ ಬರುತ್ತದೆ ಎನ್ನುವುದನ್ನು ಕಂಡುಕೊಂಡರು. ಇಟ್ಟಿಗೆ ರೂಪದಲ್ಲಿ ಬಳಸಬಹುದೆಂದು ತೋರಿಸಿಕೊಟ್ಟರು. ಹಾಗೆಯೇ ಮನೆಗಳ ಹಾಸುಗಳಲ್ಲೂ ಚಪ್ಪಡಿಯಾಗಿ ಇವು ಉಪಯುಕ್ತ ಎನ್ನುವುದನ್ನು ತಿಳಿಸಿದರು. ಈ ಕಾರಣದಿಂದಾಗಿಯೇ ದೇಶದಲ್ಲಿ ವಾರ್ಷಿಕ 6,720 ಲಕ್ಷ ಟನ್ನು ಕಲ್ಲಿದ್ದಲನ್ನು ಉರಿಸಿ, ಅದರಿಂದ ಬಂದ 2,220 ಲಕ್ಷ ಟನ್ನು ಬೂದಿಯಲ್ಲಿ ಶೇ 92 ಭಾಗ ನಿರ್ಮಾಣಕ್ಕೆ ಬಳಕೆಯಾಗುತ್ತಿದೆ. ಅಷ್ಟರಮಟ್ಟಿಗೆ ಹಾರುಬೂದಿಯ ಅವಾಂತರ ಕಡಿಮೆಯಾಗಿದೆ.

1,720 ಮೆಗಾವಾಟ್ ಸಾಮರ್ಥ್ಯದ ರಾಯಚೂರು ಉಷ್ಣಸ್ಥಾವರ ಪ್ರತಿವರ್ಷ 15 ಲಕ್ಷ ಟನ್ನು ಬೂದಿಯನ್ನು ಉತ್ಪಾದಿಸುತ್ತಿದೆ. ಈಗ ಬೂದಿಗೆ ಬೇಡಿಕೆ ಹೆಚ್ಚಾಗಿದೆ. 93 ಕಂಪನಿಗಳು ಗುತ್ತಿಗೆ ತೆಗೆದುಕೊಂಡಿವೆ. ಬೂದಿ ಈಗ ಈ ಸ್ಥಾವರದ ಮಟ್ಟಿಗೆ ಆದಾಯದ ಬಾಬತ್ತು ಕೂಡ. ಇಲ್ಲಿನ ಬೂದಿಯನ್ನು ಪಡೆಯಲು ರಾಜಕೀಯ ಧುರೀಣರ ಶಿಫಾರಸುಗಳಿಗೂ ಗುತ್ತಿಗೆದಾರರು ಮೊರೆಹೋಗಿದ್ದಾರೆ.

ನಾವು ನೆನಪಿನಲ್ಲಿಡಲೇಬೇಕು. ನೂರು ಟನ್ನು ಕಲ್ಲಿದ್ದಲು ಉರಿದಾಗ, 35 ಟನ್ನು ಹಾರುಬೂದಿ ಉತ್ಪಾದನೆಯಾಗುತ್ತದೆ. ಬೂದಿಗೇನೋ ಕಿಮ್ಮತ್ತು ಬಂತು. ಆದರೆ ಜಗತ್ತು ವಾರ್ಷಿಕ 370 ಕೋಟಿ ಟನ್ನು ಕಾರ್ಬನ್ ಡೈ ಆಕ್ಸೈಡನ್ನು ಇಂಥ ಸ್ಥಾವರಗಳಿಂದ ಉತ್ಪತ್ತಿ ಮಾಡುತ್ತಿದೆ! ಅದಕ್ಕೆಲ್ಲಿ ಗಿರಾಕಿಗಳು?

ಚುರುಮುರಿ



ಮನೆ ಮನೆ ಕಥೆ!

• ಬಿ.ಎನ್.ಮಲ್ಲೇಶ್

'ಗುರೂ... ಇನ್ಮೇಲೆ ಸರ್ಕಾರಿ ನೌಕರರು ಆಫೀಸ್‌ಗೆ ಬರ್ತಿದ್ದಂಗೆ ತಮ್ಮ ಜೇಬಲ್ಲಿ ಎಷ್ಟು ರೊಕ್ಕದಾವೆ ಅಂತ ಎಣಿಸಿ ಬಾಗಲಲ್ಲೇ ಲೆಕ್ಕ ಬರೆಸ್ಬೇಕಂತೆ ಹೌದಾ?' ತೆಪರೇಸಿಯನ್ನ ಗುಡ್ಡೆ ಕೇಳಿದ.

'ಹೌದಂತೆ, ಲಂಚ ಹೊಡಿಯಾದು ತಡಿಯೋಕೆ ಗೌರ್ಮೆಂಟ್‌ನೋರು ಈ ರೂಲ್ಸ್ ಮಾಡಿದಾರಂತೆ...'

'ನೀನೊಳ್ಳೆ, ಲಂಚನ ಆಫೀಸ್‌ನಾಗೇ ಹೊಡೀಬೇಕೇನು? ಸಂಜಿಮುಂದ ಕ್ಯಾಂಟೀನ್‌ನಾಗೆ ಇಸ್ಕಂಡ್ರಾತು, ಇಲ್ಲ ಮನಿಗೆ ಬಾ ಅಂದ್ರಾತು, ಇಲ್ಲ ರಾತ್ರಿ ಎಲ್ಲಾದ್ರು ಸಿಗು ಅಂದ್ರೆ ಮುಗೀತಪ...' ಗುಡ್ಡೆ ನಕ್ಕ.

'ದೊಡ್ಡವಲ್ಲಲೆ, ನೂರಿನ್ನೂರು ಟೇಬಲ್‌ನಲ್ಲೇ ಸೆಟ್ಲ್ ಆಗ್ತಾವಲ್ಲ, ಅವು ನಿಲ್ತಾವೆ ಅಂತ ಈ ರೂಲ್ಸು'.

'ಓಕೆ, ಈಗ ನಮ್ ಜೇಬಲ್ಲಿ ಜಾಸ್ತಿ ರೊಕ್ಕ ಇದ್ವು ಅಂತ ಸುಳ್ಳೇ ನಾವೇ ಆಫೀಸ್ ಬುಕ್ಕಲ್ಲಿ ಬರೆದ್ರಾತು'.

'ಯಾರಾದ್ರು ಬರ್ಕೋಳೋನು ಇದ್ರೆ?'

'ಅವನಿಗೇ ಲಂಚ ಕೊಟ್ಟು, ಜಾಸ್ತಿ ಬರಿಯಲೇ ಅಂದ್ರಾತು'.

'ನೀನೂ ಪಾಕಡ ಬಿಡಲೆ, ಮೊನ್ನಿ ಏನಾತು ಗೊತ್ತಾ? ಜುಗ್ಗ ನಮ್ ಕಡೆಮನಿ ಕೊಟ್ರ ಅದಾನಲ್ಲ, ಆಫೀಸ್‌ನಲ್ಲಿ ನನ್ ಹತ್ರ ಎಂಟುನೂರು ರುಪಾಯಿ ಅದಾವೆ ಬರ್ಕಳ್ರಿ ಅಂದನಂತೆ. ಎಣಿಸಿದಾಗ ಇದ್ದದ್ದು ಬರೀ ಐನೂರಂತೆ. ಅಯ್ಯೋ ನಿನ್ನೆ ಇದ್ದ ರೊಕ್ಕ ಎಲ್ಲೋದ್ವು, ನಾ ಎಲ್ಲೂ ಖರ್ಚು ಮಾಡಿಲ್ಲ ಅಂತ ಗೋಳಾಡಿದ್ನಂತೆ'.

'ಸರಿ ಮುಂದ?'

'ಆಫೀಸ್ ಬಾಸು ಅವನನ್ನ ಕರೆದು 'ನಿನ್ ಜೇಬಿನಾಗಿದ್ದ ರೊಕ್ಕ ಎಲ್ಲೋದ್ವು ಅಂತ ನಂಗೊತ್ತು, ನಿನ್ ಹೆಂಡ್ತಿ ಎತ್ತಿರ್ತಾಳೆ ಹೋಗಿ ಕೇಳು ಅಂದ್ರಂತೆ'.

'ಅಲೆ ಇವ್ನ, ಕೊಟ್ರನ ಹೆಂಡ್ತಿ ರೊಕ್ಕ ಎತ್ತಿದ್ದು ಅವನ ಬಾಸ್‌ಗೆ ಹೆಂಗ್ ಗೊತ್ತಾತಂತೆ?'

'ಕೊಟ್ರನೂ ಅದ್ನೇ ಕೇಳಿದ್ನಂತೆ. ಅದ್ಕೆ ಬಾಸು, ಇದು ಮನೆ ಮನೆ ಕಥೆ ಕಣಯ್ಯ, ನನ್ ಹೆಂಡ್ತಿನೂ ಅದೇ ಮಾಡೋದು ಅಂದ್ರಂತೆ!'

ಸಂಗತ

ಮಹಿಳಾ ವಿಜ್ಞಾನಿ: ನಿಮಗೆಷ್ಟು ಗೊತ್ತು?

ಮಹಿಳೆಯರ ಸಾಧನೆಗೆ ವಿಜ್ಞಾನರಂಗ ಮಣೆ ಹಾಕುತ್ತಿಲ್ಲ ಎಂಬ ಆರೋಪವಿದೆ

• ಪೂರ್ಣಪ್ರಜ್ಞ

ಯಾವುದೇ ಶಾಲೆ ಕಾಲೇಜಿನ ಮಕ್ಕಳನ್ನು ಅವರಿಗೆ ಗೊತ್ತಿರುವ ನಾಲ್ಕೈದು ವಿಜ್ಞಾನಿಗಳ ಹೆಸರು ಹೇಳಿ ಎಂದು ಕೇಳಿನೋಡಿ. ಬಹುತೇಕರು ನ್ಯೂಟನ್, ಡಾರ್ವಿನ್, ರಾಮನ್, ಐನ್‌ಸ್ಟೀನ್, ಎಡಿಸನ್‌ರ ಹೆಸರುಗಳನ್ನು ತಡಮಾಡದೇ ಹೇಳುತ್ತಾರೆ. ಅಪರೂಪಕ್ಕೆಂಬಂತೆ ಮೇಡಂ ಕ್ಯೂರಿ ಅವರ ಹೆಸರೂ ಕೇಳಿಬರುತ್ತದೆ. ಹೆಚ್ಚೆಂದರೆ ಕ್ಯೂರಿ ಅವರ ಮಗಳು ಐರೀನ್ ಬಗ್ಗೆಯೂ ಮಾತು ಬರಬಹುದು. ಅಲ್ಲಿಂದಾಚೆಗೆ ಮಕ್ಕಳಿಗೆ ಯಾವ ಮಹಿಳಾ ವಿಜ್ಞಾನಿಯ ಹೆಸರೂ ತಿಳಿದಿರುವುದಿಲ್ಲ.

ಪದ್ಮಶ್ರೀ ಪ್ರಶಸ್ತಿ ಪಡೆದ ಮೊದಲ ಭಾರತೀಯ ಸಸ್ಯಶಾಸ್ತ್ರಜ್ಞೆ ಜಾನಕಿ ಅಮ್ಮಾಳ್, ಮೂರ್ಛೆರೋಗಕ್ಕೆ ಮದ್ದು ಕಂಡುಹಿಡಿದ ಅಸೀಮಾ ಚಟರ್ಜಿ, ನರ ವಿಜ್ಞಾನಕ್ಕೆ ಕೊಡುಗೆ ನೀಡಿದ ಶುಭಾ ತೊಲೆ, ಎಲ್ಲ ಋತುಮಾನಗಳಿಗೂ ಸಲ್ಲುವ ಬೀಜ ಸಂಸ್ಕರಿಸಿದ ಪರಮ್‌ಜೀತ್ ಖುರಾನ, ಡಾರ್ಕ್ ಲೇಡಿ ಆಫ್ ಡಿಎನ್‌ಎ ಎಂದು ಖ್ಯಾತರಾದ ಚೀನಾದ ಚಿಯೆನ್ ಶಿಂಗ್‌ವು, ನೊಬೆಲ್ ಪ್ರಶಸ್ತಿ ವಿಜೇತೆ ಡೊರೋಥಿ ಹಾಡ್ಕಿನ್, ಯುರೋಪಿನ ಮೇರಿ ಕ್ಯೂರಿ ಲೈಸ್ ಮಿಟ್ನರ್, ಗಣಿತಜ್ಞೆ ಮಂಗಳಾ ನಾರಳೀಕರ್, ಅನೀಮಿಯಾಕ್ಕೆ ಮದ್ದು ಹುಡುಕಿದ ವೈದ್ಯೆ ಫ್ರೀಡಾ ರಾಬಿನ್ಸ್, ನ್ಯೂಕ್ಲಿಯರ್ ಕವಚ ರಚಿಸಿ ನೊಬೆಲ್ ಪ್ರಶಸ್ತಿ ಪಡೆದ ಮಾರಿಯಾ ಜಾಪರ್ಟ್, ಅಮೆರಿಕಕ್ಕೆ ನೊಬೆಲ್ ಪ್ರಶಸ್ತಿ ಗಳಿಸಿಕೊಟ್ಟ ಮೊದಲ ಮಹಿಳೆ ಗೆರ್ಟಿಕೋರಿ, ಭಾರತದ ಮಿಸ್ಸೈಲ್ ವುಮನ್ ಟೆಸ್ಸಿ ಥಾಮಸ್, ಅಬೆಲ್ ಪ್ರಶಸ್ತಿ ಪಡೆದ ಮೊದಲ ಮಹಿಳೆ ಕರೆನ್ ಲೆಹನ್‌ಬೆಕ್ ಅವರ್‍ಯಾರೂ ನಮ್ಮ ಮಕ್ಕಳಿಗೆ ಗೊತ್ತಿರುವುದಿಲ್ಲ. ಮಾಧ್ಯಮಗಳೂ ಇದಕ್ಕೆ ಹೊರತಲ್ಲ. ಇದೇ ಹೊತ್ತಿನಲ್ಲಿ ವಿಜ್ಞಾನ ಕ್ಷೇತ್ರದಲ್ಲಿ ಮಹಿಳೆಯರ ಸಾಧನೆ ಗುರುತಿಸುವ 'ಇಂಟರ್‌ನ್ಯಾಷನಲ್ ಡೇ ಆಫ್ ವಿಮೆನ್ ಆ್ಯಂಡ್ ಗರ್ಲ್ಸ್ ಇನ್ ಸೈನ್ಸ್' (ಫೆ. 11) ಮತ್ತೆ ಬಂದಿದೆ.

ಪ್ರಶಸ್ತಿಗಳ ವಿಷಯದಲ್ಲೂ ಅಷ್ಟೆ. ನೊಬೆಲ್, ಅಬೆಲ್, ಫೀಲ್ಡ್ಸ್ ಮೆಡಲ್ ಯಾವುದೇ ಇರಲಿ, ಅಲ್ಲಿ ಪುರುಷರ ಹೆಸರುಗಳೇ ಹೆಚ್ಚು. ಈವರೆಗೆ ನೀಡಲಾಗಿರುವ ವಿಜ್ಞಾನ ವಿಭಾಗದ 624 ನೊಬೆಲ್ ಪ್ರಶಸ್ತಿಗಳ ಪೈಕಿ ಮಹಿಳೆಯರ ಪಾಲು ಬರೀ 23. ಗಗನಯಾನದ ವಿಷಯದಲ್ಲೂ ಮಹಿಳೆಯರನ್ನು ಎರಡನೇ ಆಯ್ಕೆಯಂತೆ ನೋಡಲಾಗುತ್ತಿದೆ. ಇದುವರೆಗೂ ಅಂತರಿಕ್ಷಯಾನ ಕೈಗೊಂಡಿರುವ ಸುಮಾರು 600 ಗಗನಯಾತ್ರಿಗಳಲ್ಲಿ ಮಹಿಳೆಯರ ಸಂಖ್ಯೆ ಬರೀ 71. ಬಾಹ್ಯಾಕಾಶಯಾನ ಮತ್ತು ವಾಸ್ತವ್ಯ ಎರಡಕ್ಕೂ ಮಹಿಳೆಯರು ಪುರುಷರಿಗಿಂತ ಬಹುಬೇಗ ಮತ್ತು ಉತ್ತಮವಾಗಿ ಹೊಂದಿಕೊಳ್ಳುತ್ತಾರೆ ಎಂಬುದು ಸಂಶೋಧನೆಗಳಿಂದ ಬೆಳಕಿಗೆ ಬಂದಿದೆಯಾದರೂ ಸ್ಪೇಸ್ ಏಜೆನ್ಸಿ ಮತ್ತು ಸರ್ಕಾರಗಳು ಮಹಿಳೆಯರನ್ನು ಆಯ್ಕೆ ಮಾಡುವಲ್ಲಿ ಹಿಂದೇಟು ಹಾಕುತ್ತಿರುವುದು ಕಳವಳಕಾರಿಯಾಗಿದೆ.

ವಿಶ್ವದ ಒಟ್ಟು ಸಂಶೋಧಕರಲ್ಲಿ ಮಹಿಳೆಯರ ಪ್ರಮಾಣ ಶೇ 28ರಷ್ಟಿದೆ. ಸಂಶೋಧನೆ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿರುವ ಮಹಿಳೆ ಮತ್ತು ಪುರುಷರಿಬ್ಬರೂ ಸಮಾನವಾಗಿ ತಂತ್ರಜ್ಞಾನ ಕೌಶಲ ಸಂಪಾದಿಸುತ್ತಾರೆ. ಆದರೆ ಸೈನ್ಸ್, ಟೆಕ್ನಾಲಜಿ, ಎಂಜಿನಿಯರಿಂಗ್ ಮತ್ತು ಮ್ಯಾಥಮ್ಯಾಟಿಕ್ಸ್ (STEM) ಕ್ಷೇತ್ರಗಳಲ್ಲಿ ಕೆಲಸ ಮಾಡುವ ಸಂಶೋಧಕಿಯರಿಗೆ ಕಡಿಮೆ ಸಂಬಳ, ಕಡಿಮೆ ಬಡ್ತಿ ನೀಡಲಾಗುತ್ತಿದೆ ಮತ್ತು ಮಂಡಿಸಿರುವ ಪ್ರಬಂಧಗಳನ್ನು ಪರಿಶೀಲಿಸಲು ಬೇಕೆಂದೇ ದೀರ್ಘ ಸಮಯ ತೆಗೆದುಕೊಳ್ಳಲಾಗುತ್ತದೆ ಎಂಬ ಆರೋಪಗಳಿವೆ. ಸಂಶೋಧನಾ ಕೆಲಸಗಳಿಗೆ ಕಡಿಮೆ ಅನುದಾನ ನೀಡುತ್ತಿರುವುದು ಬೆಳಕಿಗೆ ಬಂದಿದೆ. ವಿಜ್ಞಾನ ಸಮ್ಮೇಳನಗಳನ್ನು ಉದ್ಘಾಟಿಸಲು ಪುರುಷ ವಿಜ್ಞಾನಿಗಳನ್ನೇ ಹೆಚ್ಚಾಗಿ ಆಯ್ಕೆ ಮಾಡಲಾಗುತ್ತದೆ.

ಈಗ್ಗೆ 20 ವರ್ಷಗಳ ಹಿಂದೆ ಸಂಶೋಧನೆ ಕೈಗೊಂಡಿದ್ದ ಸ್ವೀಡನ್ನಿನ ವೈದ್ಯಕೀಯ ಸಂಶೋಧನಾ ಘಟಕ, ಪುರುಷರಿಗಿಂತ ಮಹಿಳೆಯರು ಎರಡರಷ್ಟು ಹೆಚ್ಚು ಸಂಶೋಧನಾ ಪ್ರವೃತ್ತಿಯುಳ್ಳವರು ಎಂದು ವರದಿ ನೀಡಿತ್ತು. 'ಅಮೆರಿಕನ್ ಅಸೋಸಿಯೇಷನ್ ಆಫ್ ಯೂನಿವರ್ಸಿಟಿ ವಿಮೆನ್' ಸಂಘಟನೆಯು ಪರಿಸರ ಮತ್ತು ಸಾಮಾಜಿಕ ಕಟ್ಟುಪಾಡುಗಳಿಂದಾಗಿಯೂ ಹಲವು ಹೆಣ್ಣು ಮಕ್ಕಳು ವಿಜ್ಞಾನ ಕ್ಷೇತ್ರದಿಂದ ದೂರವುಳಿದಿದ್ದಾರೆ ಎಂದಿತ್ತು. 'ಕ್ಯಾಂಪಸ್ ರೆಕ್ರೂಟ್‌ಮೆಂಟ್ ಡ್ರೈವ್'ಗಳಲ್ಲೂ ಮಹಿಳೆಯರ ಆಯ್ಕೆಯು ಪುರುಷರಿಗೆ ಹೋಲಿಸಿದರೆ ನಾಲ್ಕು ಪಟ್ಟು ಕಡಿಮೆ ಇದೆ. ಮನೆ ಮತ್ತು ಹೊರಗೆ ಎರಡು ಕಡೆಯಲ್ಲೂ ದುಡಿಯಬೇಕಾದ ಅನಿವಾರ್ಯ, ಕೆಲಸ ಮಾಡುವ ಸ್ಥಳಗಳಲ್ಲಿ ಸಹೋದ್ಯೋಗಿ ಮಹಿಳೆಯರ ಕೊರತೆಯಿಂದ ಉದ್ಭವಿಸುವ ಒಂಟಿತನ, ಶೋಷಣೆ, ಕೆಲಸದ ಸಮಯದ ನಂತರ ನಡೆಯುವ ನೆಟ್‌ವರ್ಕಿಂಗ್ ಕೂಟಗಳಲ್ಲಿ ಭಾಗವಹಿಸಲು ಆಗದಿರುವುದರಿಂದ ಮಹಿಳೆಯರು ಪುರುಷರಷ್ಟು ಸುಲಭವಾಗಿ ಸಂಶೋಧನೆಗಳಲ್ಲಿ ತೊಡಗಿಕೊಳ್ಳಲಾಗುವುದಿಲ್ಲ.

ಆದರೂ ಸಮಾಜ-ಸಂಸ್ಥೆಗಳು ಮತ್ತು ವ್ಯಕ್ತಿಗಳು ಒಡ್ಡಿದ ಅಡ್ಡಿ, ಅಪಮಾನ, ತಿರಸ್ಕಾರಗಳನ್ನು ಯಶಸ್ವಿಯಾಗಿ ಎದುರಿಸಿ ತಮ್ಮ ಸಂಶೋಧನಾ ಪ್ರವೃತ್ತಿ, ಕಠಿಣ ಶ್ರಮದಿಂದ ವಿಜ್ಞಾನ ಕ್ಷೇತ್ರದಲ್ಲಿ ಮಹತ್ವದ ಸಂಶೋಧನೆ ಮಾಡಿ, ದೊಡ್ಡ ಹೆಸರು ಸಂಪಾದಿಸಿರುವ ಅನೇಕರು ನಮ್ಮ ನಡುವೆ ಇದ್ದಾರೆ. ಎರಡೆರಡು ನೊಬೆಲ್ ಪ್ರಶಸ್ತಿಗಳನ್ನು ಗಳಿಸಿ ಮೇಲ್ಪಂಕ್ತಿ ಹಾಕಿದ ಮೇರಿ ಕ್ಯೂರಿ, ಗಣಿತದ ಅಬೆಲ್ ಬಹುಮಾನ ಪಡೆದ ಕರೆನ್ ಲೆಹನ್‌ಬೆಕ್, ಮಸಾಚುಸೆಟ್ಸ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಐದು ಎಂಜಿನಿಯರಿಂಗ್ ವಿಭಾಗಗಳಿಗೆ ಮಹಿಳೆಯರೇ ಮುಖ್ಯಸ್ಥರಾಗಿರುವುದು... ಮಹಿಳಾ ಸಾಧನೆಗೆ ನಿದರ್ಶನ.

ವಾಚಕರ ವಾಣಿ

ಪುಸ್ತಕ ಪ್ರಶಸ್ತಿ: ಪ್ರತಿಗಳಿಗೇಕೆ ನಿಬಂಧನೆ?

ಉತ್ತಮ ಸಾಹಿತ್ಯ ಕೃತಿಗಳಿಗೆ ಪ್ರಶಸ್ತಿ ಕೊಡುತ್ತೇವೆಂಬ ಪ್ರಕಟಣೆ ಪತ್ರಿಕೆಗಳಲ್ಲಿ ಆಗಾಗ ಕಣ್ಣಿಗೆ ಬೀಳುತ್ತಿರುತ್ತದೆ. ಹೀಗೆಂದು ಘೋಷಿಸಿಕೊಳ್ಳುವ ಸಂಘ ಸಂಸ್ಥೆಗಳ ಸಂಖ್ಯೆ ಕೂಡಾ ಇತ್ತೀಚೆಗೆ ಜಾಸ್ತಿಯಾಗುತ್ತಿದೆ. ಉತ್ತಮ ಸಾಹಿತ್ಯವನ್ನು ಬೆಂಬಲಿಸುವ, ಉದಯೋನ್ಮುಖ ಬರಹಗಾರರನ್ನು ಹುರಿದುಂಬಿಸುವ ಇಂತಹ ಕೆಲಸ ಒಳ್ಳೆಯದೇನೊ ಸರಿ. ಆದರೆ ಪ್ರಶಸ್ತಿ ಆಯ್ಕೆಯ ಪ್ರಕ್ರಿಯೆಗೆಂದು ಪ್ರತೀ ಪುಸ್ತಕದ ಮೂರು–ನಾಲ್ಕು ಪುಸ್ತಕಗಳನ್ನು ಕಳಿಸಬೇಕೆಂಬ ನಿಬಂಧನೆ ಯಾಕೆ? ಪ್ರತೀ ಪುಸ್ತಕಕ್ಕೆ ಅಂಚೆ/ ಕೊರಿಯರ್ ವೆಚ್ಚ ಸೇರಿ ನೂರಾರು ರೂಪಾಯಿ ವೆಚ್ಚ ಮಾಡಬೇಕೆ? (ಕವಿ ಎಸ್.ಜಿ. ಸಿದ್ಧರಾಮಯ್ಯ ಅವರ ಇತ್ತೀಚಿನ ಪುಸ್ತಕದ ಬೆಲೆಯೇ ₹ 750 ಇದೆ!) ಆ ವೆಚ್ಚದ ಹೊರೆ ಹೊತ್ತು ಪುಸ್ತಕಗಳನ್ನು ಕಳಿಸಿದರೆ ಕೊನೆಯಲ್ಲಿ ಪ್ರಶಸ್ತಿ ಯಾರಿಗೆ ಬಂತು ಎಂದು ಹೇಳುವುದು ಹಾಗಿರಲಿ, ಬಹಳಷ್ಟು ಸಂಘಟನೆಗಳು ಪುಸ್ತಕಗಳು ತಲುಪಿದ್ದನ್ನೂ ತಿಳಿಸುವುದಿಲ್ಲ.

ಪುಸ್ತಕಗಳನ್ನು ಗುಡ್ಡೆ ಹಾಕಿಕೊಳ್ಳುವ ಹಂಬಲವೇನೂ ಇಲ್ಲವಾದರೆ ಕೃತಿಯ ಒಂದೊಂದೇ ಪ್ರತಿಯನ್ನು ಪರಿಶೀಲನೆಗೆ ಆಹ್ವಾನಿಸಲಿ. ಮೊದಲ ಸುತ್ತಿನ ಪರಿಶೀಲನೆಯಲ್ಲಿ ಆಯ್ಕೆಯಾದ ಹತ್ತೋ ಇಪ್ಪತ್ತೋ ಪುಸ್ತಕಗಳ ಲೇಖಕರಿಗೆ ಇನ್ನೆರಡು ಪ್ರತಿಗಳನ್ನು ಕಳಿಸುವಂತೆ ತಿಳಿಸಲಿ. ತೀರ್ಪುಗಾರರಿಗೆ ಹಂಚಲು ಬೇಕಾಗುವ ಹೆಚ್ಚುವರಿ ಪುಸ್ತಕಗಳನ್ನು ಸಾಹಿತ್ಯ ಅಕಾಡೆಮಿ ತಾನೇ ಖರೀದಿ ಮಾಡುತ್ತದೆ. ಈ ಸಂಘಟನೆಗಳು ಹಾಗೇನೂ ಮಾಡುವುದು ಬೇಡ, ಪುಸ್ತಕದ ಒಂದು ಪ್ರತಿಯನ್ನು ಕಳಿಸಿದ ಲೇಖಕರಿಗೆ ಮೊದಲ ಸುತ್ತಿನಲ್ಲಿ ಇಂತಿಷ್ಟು ಕೃತಿಗಳು ಆಯ್ಕೆಯಾಗಿವೆ ಎಂಬ ಪಟ್ಟಿಯನ್ನು ಕೊಡಬಹುದಲ್ಲ?

ವಿಶಾಲಾಕ್ಷಿ ಶರ್ಮಾ, ನಾಗೇಶ ಹೆಗಡೆ, ದಿವ್ಯಾ, ಆನಂದತೀರ್ಥ ಪ್ಯಾಟಿ, ಮಲ್ಲಿಕಾರ್ಜುನ ಹೊಸಪಾಳ್ಯ

ನಿಮ್ಮಲ್ಲೇ ಉದಾಹರಣೆ ಇರುವಾಗ...

'ವಂಶಪಾರಂಪರ್ಯ ರಾಜಕಾರಣವು ಪ್ರಜಾಪ್ರಭುತ್ವ ವಿರೋಧಿ ನಿಲುವು' ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ಹಾಗಿದ್ದರೆ ಮೋದೀಜಿ ನೀವು ಬಿ.ಎಸ್.ಯಡಿಯೂರಪ್ಪ ಅವರ ಪುತ್ರನನ್ನೇಕೆ ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷರನ್ನಾಗಿ ಆಯ್ಕೆ ಮಾಡಿದಿರಿ? ಮಾಜಿ ಮುಖ್ಯಮಂತ್ರಿ ಜಗದೀಶ ಶೆಟ್ಟರ್ ಅವರ ಸಹೋದರನನ್ನೇಕೆ ವಿಧಾನ ಪರಿಷತ್ ಸದಸ್ಯರನ್ನಾಗಿ ಮಾಡಿದಿರಿ? ಶಶಿಕಲಾ ಜೊಲ್ಲೆ ಅವರ ಕುಟುಂಬಕ್ಕೆ ಸಂಸದ ಸ್ಥಾನ ಹಾಗೂ ಶಾಸಕ ಸ್ಥಾನ ಎರಡಕ್ಕೂ ಹೇಗೆ ಅವಕಾಶ ಕಲ್ಪಿಸಿದಿರಿ? ಕುಟುಂಬ ರಾಜಕಾರಣಕ್ಕೆ ಸಂಬಂಧಿಸಿದಂತೆ ಬಿಜೆಪಿಯಲ್ಲೇ ಇಂತಹ ಹತ್ತು ಹಲವು ಉದಾರಣೆಗಳು ನಮ್ಮ ಕಣ್ಣ ಮುಂದೆ ಇರುವಾಗ, ವಂಶಪಾರಂಪರ್ಯ ರಾಜಕಾರಣದ ಬಗ್ಗೆ ಮಾತನಾಡುವ ನೈತಿಕತೆ ನಿಮಗೆ ಇಲ್ಲ.

ವಿ.ಜಿ.ಇನಾಮದಾರ, ಸಾರವಾಡ, ವಿಜಯಪುರ

ಜಲಜೀವನ್: ಕಲ್ಯಾಣ ಕರ್ನಾಟಕಕ್ಕೆ ಅನ್ಯಾಯ

ಸರ್ಕಾರ ಯಾವುದೇ ಅಭಿವೃದ್ಧಿ ಯೋಜನೆಯನ್ನು ಆರಂಭಿಸಿದರೂ ಅದರಲ್ಲಿ ಕಲ್ಯಾಣ ಕರ್ನಾಟಕ ಭಾಗಕ್ಕೆ ಅನ್ಯಾಯ ಮಾಡುವುದು ರೂಢಿಯಾಗಿ ಬಿಟ್ಟಿದೆ. ಇದೀಗ ಜಲಜೀವನ್ ಎನ್ನುವ ಯೋಜನೆಗೆ ₹ 4,400 ಕೋಟಿ ಅನುದಾನಕ್ಕೆ ಸಚಿವ ಸಂಪುಟ ಮಂಜೂರಾತಿ ನೀಡಿದೆ (ಪ್ರ.ವಾ., ಫೆ. 10). ಇದರಲ್ಲಿ ಸಿಂಹಪಾಲು ಮೈಸೂರು ವಿಭಾಗಕ್ಕೆ (₹ 2,690 ಕೋಟಿ: ಶೇ 61) ಮತ್ತು ಬೆಂಗಳೂರು ವಿಭಾಗಕ್ಕೆ (₹ 1,323 ಕೋಟಿ: ಶೇ 30) ನೀಡಿ, ಬೆಳಗಾವಿ (₹ 253 ಕೋಟಿ: ಶೇ 5.7) ಮತ್ತು ಕಲ್ಯಾಣ ಕರ್ನಾಟಕಕ್ಕೆ (₹ 131 ಕೋಟಿ: ಶೇ 2.98) ಕನಿಷ್ಠ ಅನುದಾನ ನೀಡಿ ತಾರತಮ್ಯ ಎಸಗಲಾಗಿದೆ.

ಜಗಜ್ಜಾಹೀರಾಗಿರುವ ಸಂಗತಿಯೆಂದರೆ, ರಾಜ್ಯದಲ್ಲಿ ಕುಡಿಯುವ ನೀರಿನ ಸಮಸ್ಯೆಯು ಸಾಪೇಕ್ಷವಾಗಿ ಕಲ್ಯಾಣ ಕರ್ನಾಟಕ ವಿಭಾಗದ ಗ್ರಾಮಗಳಲ್ಲಿ ಭೀಕರವಾಗಿದೆ. ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲ್ಲೂಕಿನ ನೂರಾರು ಹಳ್ಳಿಗಳಲ್ಲಿ ಫ್ಲೋರೈಡ್ ಹಾವಳಿ ಭಯಂಕರವಾಗಿ ಇರುವುದರಿಂದ ಜನರು ಹತ್ತಾರು ಮೈಲಿ ದೂರದಿಂದ ವಾಹನಗಳ ಮೇಲೆ ಕೊಡ ಇಟ್ಟುಕೊಂಡು ನೀರು ತರುತ್ತಾರೆ. ಸನಿಹದಲ್ಲಿಯೇ ಬೃಹತ್ ತುಂಗಭದ್ರಾ ಕಟ್ಟೆಯಿದ್ದರೂ ಜನರು ಕಳೆದ 70 ವರ್ಷಗಳಿಂದಲೂ ನೀರಿಗಾಗಿ ಹೈರಾಣಾಗುತ್ತಿದ್ದಾರೆ. ನೀರಿನ ದುಃಸ್ಥಿತಿ ಎದುರಿಸುತ್ತಿರುವವರ ಬಗ್ಗೆ ಸರ್ಕಾರ ರವಷ್ಟಾದರೂ ಕರುಣೆ ತೋರಬೇಕಾದುದು ಧರ್ಮ. ಎಲ್ಲರಿಗೂ ನೀರು ನೀಡಬೇಕಾದುದು ನ್ಯಾಯ. ಆದರೆ ಹೆಚ್ಚು ನೀರಿನ ದಾಹವನ್ನು 6-7 ದಶಕಗಳಿಂದ ಎದುರಿಸುತ್ತಿರುವ ಭಾಗಕ್ಕೆ ಹೆಚ್ಚು ಅನುದಾನ ನೀಡುವುದು ಪ್ರಾದೇಶಿಕ ಸಮತೋಲನದ ದೃಷ್ಟಿಯಿಂದ ಅಪೇಕ್ಷಣೀಯ.

ಟಿ.ಆರ್.ಚಂದ್ರಶೇಖರ, ಬೆಂಗಳೂರು

ಅತಂತ್ರದ ಕತ್ತಿ ತೂಗುತ್ತಲೇ ಇರುತ್ತದೆ

ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ಭರ್ತಿಗಾಗಿ 2011ರಲ್ಲಿ ಕೆಪಿಎಸ್‌ಸಿ ಸಿದ್ಧಪಡಿಸಿದ್ದ ಆಯ್ಕೆ ಪಟ್ಟಿ ದೋಷಪೂರಿತವೆಂಬ ಕಾರಣದಿಂದ ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್ ಅನೂರ್ಜಿತಗೊಳಿಸಿದ್ದರಿಂದ ಬಾಧಿತರಾಗಿದ್ದ 362 ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡಲು ಅನುಕೂಲವಾಗುವಂತೆ, ಮುಂಬರುವ ವಿಧಾನಮಂಡಲ ಅಧಿವೇಶನದಲ್ಲಿ ಮಂಡಿಸಲಿರುವ ಉದ್ದೇಶಿತ ಮಸೂದೆಗೆ ಸಚಿವ ಸಂಪುಟ ಸಭೆ ಅನುಮೋದನೆ ನೀಡಿದೆ (ಪ್ರ.ವಾ., ಫೆ. 10). ಈ ಆಯ್ಕೆಯಲ್ಲಿ ಗುರುತರ ಅಕ್ರಮಗಳು ನಡೆದಿವೆಯೆಂಬ ಆಪಾದನೆಗಳ ಹಿನ್ನೆಲೆಯಲ್ಲಿ, 2013ರಲ್ಲಿ ಪ್ರಕಟವಾಗಿದ್ದ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಅಂದಿನ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ರದ್ದುಗೊಳಿಸಿತ್ತು. ದೂರುಗಳಲ್ಲಿ ಸತ್ಯಾಂಶವಿರುವುದಾಗಿ ಸಿಐಡಿ ಸಹ ಹೇಳಿತ್ತು. ನೇಮಕಾತಿ ಪ್ರಕಟಣೆಯನ್ನು ಹಿಂಪಡೆಯುವ ಮುನ್ನ ಅಂದಿನ ಸರ್ಕಾರವು ವಿಧಾನಮಂಡಲದ ಅನುಮೋದನೆ ಪಡೆದಿಲ್ಲವೆಂಬ ಮತ್ತು ಸಿಐಡಿಯ ಅಂತಿಮ ವರದಿಯನ್ನು ಆಧರಿಸದೆ ಮಧ್ಯಂತರ ವರದಿಯನ್ನು ಆಧರಿಸಿ ಆಯ್ಕೆ ಪಟ್ಟಿಯನ್ನು ರದ್ದುಗೊಳಿಸಿದೆಯೆಂಬ ತಾಂತ್ರಿಕ ಕಾರಣಗಳ ಹಿನ್ನೆಲೆಯಲ್ಲಿ ಈ ಮಸೂದೆಯನ್ನು ತರಲಾಗುತ್ತಿದೆ ಎಂಬುದು ಸರ್ಕಾರದ ಸಮರ್ಥನೆ.

ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್ ಮುಂದೆ ವಾದ ಮಂಡಿಸುವಾಗ ಈ ತಾಂತ್ರಿಕ ಕಾರಣಗಳನ್ನು ಸರ್ಕಾರ ಅವುಗಳ ಗಮನಕ್ಕೆ ತಂದಿರಲಿಲ್ಲವೇ ಎಂಬುದು ಮೂಲಭೂತ ಪ್ರಶ್ನೆ. ಈ ಆಯ್ಕೆ ಪಟ್ಟಿಯಲ್ಲಿ ಎಲ್ಲ ಪಕ್ಷಗಳವರಿಗೂ ಬೇಕಾಗಿರುವ ಅಭ್ಯರ್ಥಿಗಳಿರುವುದರಿಂದ, ಬಹುಶಃ ಸದನದಲ್ಲಿ ಈ ಮಸೂದೆಗೆ ಯಾರೂ ವಿರೋಧ ವ್ಯಕ್ತಪಡಿಸಲಾರರು. ಆದರೆ, ಉದ್ದೇಶಿತ ಮಸೂದೆಯನ್ನು ನ್ಯಾಯಾಲಯದಲ್ಲಿ ಪ್ರಶ್ನಿಸಿದರೆ ಅದು ಊರ್ಜಿತವಾಗುವುದೇ? ಒತ್ತಡಕ್ಕೆ ಮಣಿದಂತಿರುವ ಸರ್ಕಾರವೇನೋ ಅಭ್ಯರ್ಥಿಗಳ ಮೂಗಿಗೆ ತುಪ್ಪ ಸವರುವ ಕೆಲಸ ಮಾಡಿರಬಹುದು. ಆದರೆ ಇದರಿಂದ ಅಭ್ಯರ್ಥಿಗಳ ನೆತ್ತಿಯ ಮೇಲಿನ ಅತಂತ್ರದ ಕತ್ತಿ ತೂಗುವುದಂತೂ ನಿಲ್ಲುವುದಿಲ್ಲ.

ತಿಪ್ಪೂರು ಪುಟ್ಟೇಗೌಡ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಡಿಜಿಟಲ್ ರೂಪಾಯಿಯತ್ತ ಚಿತ್ತ

ಪ್ರಜಾವಾಣಿ ವಾರ್ತೆ

ದೇಶದಲ್ಲಿ ಡಿಜಿಟಲ್ ರೂಪಾಯಿಯನ್ನು ಜಾರಿಗೆ ತರುತ್ತೇವೆ ಎಂದು ಕೇಂದ್ರ ಸರ್ಕಾರವು ಈ ಬಾರಿಯ ಬಜೆಟ್‌ನಲ್ಲಿ ಘೋಷಿಸಿದೆ. ಭಾರತೀಯ ರಿಸರ್ವ್ ಬ್ಯಾಂಕ್ ಈ ಡಿಜಿಟಲ್ ರೂಪಾಯಿಯನ್ನು ಅಭಿವೃದ್ಧಿಪಡಿಸುವ, ಬಿಡುಗಡೆ ಮಾಡುವ ಮತ್ತು ನಿರ್ವಹಣೆ ಮಾಡುವ ಜವಾಬ್ದಾರಿ ಹೊರಲಿದೆ. ಈ ಡಿಜಿಟಲ್ ರೂಪಾಯಿಯನ್ನು 'ಕೇಂದ್ರೀಯ ಬ್ಯಾಂಕ್ ಡಿಜಿಟಲ್ ರೂಪಾಯಿ' (ಸಿಬಿಡಿಸಿ) ಎಂದು ಕರೆಯಲಾಗುತ್ತದೆ ಎಂದು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಬಜೆಟ್ ಭಾಷಣದಲ್ಲಿ ಹೇಳಿದ್ದರು. 2022–23ರ ಆರ್ಥಿಕ ವರ್ಷದ ಆರಂಭದಿಂದಲೇ ಸಿಬಿಡಿಸಿ ಬಳಕೆಗೆ ಬರಲಿದೆ ಎಂದೂ ಅವರು ಹೇಳಿದ್ದರು.

ಕೇಂದ್ರ ಸರ್ಕಾರವು ಆರ್‌ಬಿಐ ಮೂಲಕ ತರಲು ಹೊರಟಿರುವ ಡಿಜಿಟಲ್ ಕರೆನ್ಸಿಯು ಬ್ಲಾಕ್‌ಚೈನ್ ಲೆಡ್ಜರ್ ಮತ್ತು ಇತರ ತಂತ್ರಜ್ಞಾನಗಳ ಆಧಾರದಲ್ಲಿ ಕೆಲಸ ಮಾಡಲಿದೆ ಎಂದು ಕೇಂದ್ರ ಸರ್ಕಾರದ ಪತ್ರಿಕಾ ಪ್ರಕಟಣೆಯಲ್ಲಿ ಹೇಳಿದೆ. ಈಗ ಜಗತ್ತಿನ ಎಲ್ಲೆಡೆ ಬಳಕೆಯಲ್ಲಿರುವ ಕ್ರಿಪ್ಟೊಕರೆನ್ಸಿಗಳು ಬ್ಲಾಕ್‌ಚೈನ್ ಲೆಡ್ಜರ್ ತಂತ್ರಜ್ಞಾನದಲ್ಲೇ ವಹಿವಾಟು ನಡೆಸುತ್ತವೆ. ಸಿಬಿಡಿಸಿಯನ್ನು ಆರ್‌ಬಿಐ ನಿರ್ವಹಿಸಲಿದೆ ಮತ್ತು ಬ್ಲಾಕ್‌ಚೈನ್ ತಂತ್ರಜ್ಞಾನದಲ್ಲಿ ನಿರ್ವಹಣೆ ಮಾಡಲಾಗುವುದು ಎಂದಷ್ಟೇ ಸರ್ಕಾರ ಹೇಳಿದೆ.

ಆದರೆ, ಇಡೀ ವ್ಯವಸ್ಥೆ ಹೇಗೆ ಕೆಲಸ ಮಾಡುತ್ತದೆ ಎಂಬುದರ ಮಾಹಿತಿಯನ್ನು ಸರ್ಕಾರ ನೀಡಿಲ್ಲ. ಕ್ರಿಪ್ಟೊಕರೆನ್ಸಿಗಳ ವಿಷಯದಲ್ಲಿ, ಅವುಗಳ ಬ್ಲಾಕ್‌ಚೈನ್‌ಗಳನ್ನು ಮೈನರ್‌ಗಳು ನಿರ್ವಹಣೆ ಮಾಡುತ್ತಾರೆ. ಆರ್‌ಬಿಐ ಬಿಡುಗಡೆ ಮಾಡಲಿರುವ ಡಿಜಿಟಲ್ ರೂಪಾಯಿಯು ಬ್ಲಾಕ್‌ಚೈನ್ ಲೆಡ್ಜರ್ ತಂತ್ರಜ್ಞಾನದಲ್ಲೇ ಕಾರ್ಯನಿರ್ವಹಿಸುವುದಾದರೆ, ಇದಕ್ಕಾಗಿ ಆರ್‌ಬಿಐ ಪ್ರತ್ಯೇಕ ವ್ಯವಸ್ಥೆಯನ್ನೇ ರೂಪಿಸಬೇಕಾಗುತ್ತದೆ.

ಕ್ರಿಪ್ಟೊಕರೆನ್ಸಿಗಳು ಮತ್ತು ಸರ್ಕಾರವು ತರಲು ಹೊರಟಿರುವ ಡಿಜಿಟಲ್ ರೂಪಾಯಿಯ ಮಧ್ಯೆ ಬ್ಲಾಕ್‌ಚೈನ್‌ನ ಮೂಲಭೂತ ಹೋಲಿಕೆ ಇರುವಂತೆಯೇ, ಒಂದು ಮೂಲಭೂತ ವ್ಯತ್ಯಾಸವೂ ಇದೆ. ಕ್ರಿಪ್ಟೊಕರೆನ್ಸಿಗಳಿಗೆ ಯಾವುದೇ ಸಂಸ್ಥೆ ಅಥವಾ ಬ್ಯಾಂಕ್ ಅಥವಾ ಸರ್ಕಾರದ ಖಾತರಿ ಇರುವುದಿಲ್ಲ. ಆದರೆ, ಸರ್ಕಾರವು ಬಿಡುಗಡೆ ಮಾಡಲಿರುವ ಡಿಜಿಟಲ್ ರೂಪಾಯಿಗೆ ಸರ್ಕಾರ ಮತ್ತು ಬ್ಯಾಂಕ್‌ನ ಖಾತರಿ ಇರುತ್ತದೆ. ಹೀಗಾಗಿಯೇ ಸಾಮಾನ್ಯ ರೂಪಾಯಿಗೆ ಇರುವಷ್ಟೇ ಮಾನ್ಯತೆ, ಡಿಜಿಟಲ್ ರೂಪಾಯಿಗೂ ಇರುತ್ತದೆ.

ಡಿಜಿಟಲ್ ರೂಪಾಯಿಯು ಡಿಜಿಟಲ್ ಆರ್ಥಿಕತೆಯನ್ನು ಉತ್ತೇಜಿಸಲಿದೆ ಎಂದು ನಿರ್ಮಲಾ ಸೀತಾರಾಮನ್ ಅವರು ಬಜೆಟ್ ಭಾಷಣದಲ್ಲಿ ಹೇಳಿದ್ದಾರೆ. ದೇಶದಲ್ಲಿ ಈಗ ಆನ್‌ಲೈನ್ ಬ್ಯಾಂಕಿಂಗ್, ಮೊಬೈಲ್ ಬ್ಯಾಂಕಿಂಗ್, ಪೇಮೆಂಟ್ ಬ್ಯಾಂಕಿಂಗ್ ಮತ್ತು ಯುಪಿಐ ಆಧಾರಿತ ಪಾವತಿ ವ್ಯವಸ್ಥೆಗಳು ಇವೆ. ಕೇಂದ್ರ ಸರ್ಕಾರವು ಈ ವ್ಯವಸ್ಥೆಗಳನ್ನು ಡಿಜಿಟಲ್ ಆರ್ಥಿಕತೆ ಎಂದು ಕರೆದಿತ್ತು. ಈ ಎಲ್ಲಾ ವ್ಯವಸ್ಥೆಗಳಲ್ಲಿ ಬ್ಯಾಂಕ್ ಸೇವಾ ಮಾಧ್ಯಮವಾಗಿ ಕೆಲಸ ಮಾಡುತ್ತದೆ. ಅಂದರೆ ಈ ವ್ಯವಸ್ಥೆಗಳಿಗೆ ಬ್ಯಾಂಕ್ ಮೂಲಕ ಹಣವನ್ನು ವರ್ಗಾಯಿಸಬೇಕಾಗುತ್ತದೆ. ಅನಂತರ ಆ ಹಣವನ್ನು ಈ ವ್ಯವಸ್ಥೆಯ ಒಳಗೇ ಚಲಾವಣೆ ಮಾಡಬಹುದಾಗಿದೆ.

ಡಿಜಿಟಲ್ ರೂಪಾಯಿಯು ನಗದು ಬಳಕೆಯನ್ನು ಕಡಿಮೆ ಮಾಡುತ್ತದೆ ಎಂದು ಸರ್ಕಾರವು ಹೇಳಿದೆ. ಈಗ ಬಳಕೆಯಲ್ಲಿರುವ ಡಿಜಿಟಲ್ ಪಾವತಿ ವ್ಯವಸ್ಥೆಗಳು ಸಹ ನಗದು ಬಳಕೆಯನ್ನು ಕಡಿಮೆ ಮಾಡಿವೆ. ಹೀಗಿರುವಾಗ, ಈ ವ್ಯವಸ್ಥೆಗಳಿಗಿಂತ ಭಿನ್ನವಾಗಿ ಡಿಜಿಟಲ್ ರೂಪಾಯಿ ವ್ಯವಸ್ಥೆ ಹೇಗೆ ಕಾರ್ಯನಿರ್ವಹಿಸುತ್ತದೆ ಎಂಬುದನ್ನು ಸರ್ಕಾರ ಸ್ಪಷ್ಟಪಡಿಸಿಲ್ಲ. ಈ ಎಲ್ಲಾ ವ್ಯವಸ್ಥೆಗಳ ಜತೆಯಲ್ಲಿಯೇ ಡಿಜಿಟಲ್ ರೂಪಾಯಿ ವ್ಯವಸ್ಥೆ ಅಸ್ತಿತ್ವದಲ್ಲಿ ಇರುವುದಾದರೆ, ಅದು ಸಹ ಒಂದು ಪಾವತಿ ವ್ಯವಸ್ಥೆಯಾಗಿ ಮಾತ್ರವೇ ಉಳಿಯಲಿದೆ.

ಡಿಜಿಟಲ್ ರೂಪಾಯಿಯನ್ನು ಜಾರಿಗೆ ತರಲು ಕೇಂದ್ರ ಸರ್ಕಾರವು ಸ್ವತಃ 14 ತಿಂಗಳ ಗಡುವು ಹಾಕಿಕೊಂಡಿದೆ. ಆ ಗಡುವಿನೊಳಗೆ ಡಿಜಿಟಲ್ ರೂಪಾಯಿ ಜಾರಿಗೆ ಬಂದರೆ, ಈ ಬಗ್ಗೆ ಎದ್ದಿರುವ ಪ್ರಶ್ನೆಗಳಿಗೆ ಉತ್ತರ ದೊರೆಯಲಿದೆ.

ಸಮರ್ಥನೆ ಮತ್ತು ಸವಾಲುಗಳು

ಸಿಬಿಸಿಡಿ ಅಥವಾ ಡಿಜಿಟಲ್ ರೂಪಾಯಿ ವ್ಯವಸ್ಥೆ ಜಾರಿಗೆ ಬಂದರೆ, ಹಣಕಾಸು ವ್ಯವಸ್ಥೆ ನಿರ್ವಹಣೆಯ ಕಾರ್ಯದಕ್ಷತೆ ಹೆಚ್ಚುತ್ತದೆ. ಜತೆಗೆ ಹಣಕಾಸು ನಿರ್ವಹಣೆಯ ವೆಚ್ಚ ಕಡಿಮೆಯಾಗುತ್ತದೆ ಎಂದು ನಿರ್ಮಲಾ ಸೀತಾರಾಮನ್ ಅವರು ಬಜೆಟ್ ಭಾಷಣದಲ್ಲಿ ಹೇಳಿದ್ದರು.

ಡಿಜಿಟಲ್ ರೂಪಾಯಿ ವ್ಯವಸ್ಥೆಯಲ್ಲಿ ನೋಟುಗಳನ್ನು ಮುದ್ರಿಸುವ, ನಾಣ್ಯಗಳನ್ನು ಠಂಕಿಸುವ, ಅವುಗಳನ್ನು ಸುರಕ್ಷಿತವಾಗಿ ಸಂಗ್ರಹಿಸಿ ಇಡುವ, ಒಂದೆಡೆಯಿಂದ ಮತ್ತೊಂದೆಡೆಗೆ ಸಾಗಿಸುವ ಉಸಾಬರಿಗಳು ಇರುವುದಿಲ್ಲ. ಹೀಗಾಗಿ ಈ ವೆಚ್ಚಗಳೆಲ್ಲಾ ಉಳಿಯುತ್ತವೆ ಎಂಬುದು ಸರ್ಕಾರದ ವಾದ. ಆದರೆ, ರಿಸರ್ವ್ ಬ್ಯಾಂಕ್ ಡಿಜಿಟಲ್ ರೂಪಾಯಿ ನಿರ್ವಹಣೆಗೆ ಬ್ಲಾಕ್‌ಚೈನ್ ಲೆಡ್ಜರ್ ವ್ಯವಸ್ಥೆ ಅಳವಡಿಸಿಕೊಂಡರೆ ವೆಚ್ಚ ಉಳಿತಾಯದ ಲಾಭ ದೊರೆಯುವುದಿಲ್ಲ.

ಏಕೆಂದರೆ ಈಗ ಬ್ಯಾಂಕ್‌ಗಳು ಬಳಸುವ ಸರ್ವರ್‌ಗಳು, ತಂತ್ರಾಂಶಗಳು ಮತ್ತು ಕಂಪ್ಯೂಟರ್ ವ್ಯವಸ್ಥೆಗಳನ್ನು ಬ್ಲಾಕ್‌ಚೈನ್ ಆಧಾರಿತ ಡಿಜಿಟಲ್ ರೂಪಾಯಿಯ ನಿರ್ವಹಣೆಗೆ ಬಳಸಲು ಸಾಧ್ಯವಿಲ್ಲ. ಇದರ ನಿರ್ವಹಣೆಗೆ ಪ್ರತ್ಯೇಕ ಸರ್ವರ್, ಪ್ರತ್ಯೇಕ ತಂತ್ರಾಂಶ, ಅತ್ಯಂತ ಪ್ರಬಲವಾದ ಕಂಪ್ಯೂಟರ್‌ಗಳು ಮತ್ತು ಭಾರಿ ವೇಗದ ಇಂಟರ್ನೆಟ್ ಸಂಪರ್ಕ ಎಲ್ಲವೂ ಬೇಕಾಗುತ್ತದೆ. ಇವುಗಳ ನಿರ್ವಹಣೆಗೆ ಎಂಜಿನಿಯರಿಂಗ್ ಪರಿಣಿತರನ್ನು ನೇಮಕ ಮಾಡಿಕೊಳ್ಳಬೇಕಾಗುತ್ತದೆ. ರಿಸರ್ವ್ ಬ್ಯಾಂಕ್ ಈ ವ್ಯವಸ್ಥೆಯನ್ನು ಜಾರಿಗೆ ತಂದರೆ, ದೇಶದ ಎಲ್ಲಾ ಬ್ಯಾಂಕ್‌ಗಳು ಈ ವ್ಯವಸ್ಥೆಯನ್ನು ಅಳವಡಿಸಿಕೊಳ್ಳಬೇಕಾಗುತ್ತದೆ. ಇದಕ್ಕಾಗಿ ಬ್ಯಾಂಕಿಂಗ್ ಉದ್ಯಮವು ಭಾರಿ ಮೊತ್ತದ ಬಂಡವಾಳ ಹೂಡಬೇಕಾಗುತ್ತದೆ.

ನಿರ್ಮಲಾ ಸೀತಾರಾಮನ್

ಎಲ್ಲೆಲ್ಲಿ ಬಳಕೆ?

ಡಿಜಿಟಲ್ ಕರೆನ್ಸಿಗಳನ್ನು ವಿಶ್ವದ ಹಲವು ದೇಶಗಳು ಪ್ರಯೋಗಕ್ಕೆ ಒಳಪಡಿಸಿವೆ. 87 ದೇಶಗಳು ಈ ಬಗ್ಗೆ ಚಿಂತನೆ ನಡೆಸಿದ್ದು, ಈ ಪೈಕಿ 35 ದೇಶಗಳು ಕಾರ್ಯರೂಪಕ್ಕೆ ತರಲು ಅಡಿಯಿಟ್ಟಿವೆ. ಸದ್ಯ 9 ದೇಶಗಳಲ್ಲಿ ಕೇಂದ್ರೀಯ ಬ್ಯಾಂಕ್ ಡಿಜಿಟಲ್ ಕರೆನ್ಸಿ ಅಸ್ತಿತ್ವದಲ್ಲಿದೆ. ಇತ್ತೀಚೆಗೆ ನೈಜೀರಿಯಾ ದೇಶವು ಕರೆನ್ಸಿಯನ್ನು ಪರಿಚಯಿಸಿದೆ. ಇದರ ಹೆಸರು ಇ–ನೈರಾ. ಬಹಮಾಸ್‌ನಲ್ಲಿ 'ಸ್ಯಾಂಡ್ ಡಾಲರ್' ಹೆಸರಿನ ಡಿಜಿಟಲ್ ಹಣ 2020ರಲ್ಲಿ ಕಾರ್ಯಾರಂಭ ಮಾಡಿದೆ.

ಚೀನಾ, ದಕ್ಷಿಣ ಕೊರಿಯಾ, ಸೇರಿದಂತೆ 14 ದೇಶಗಳು ಡಿಜಿಟಲ್ ಕರೆನ್ಸಿಯ ಪ್ರಾಯೋಗಿಕ ಪರೀಕ್ಷೆ ನಡೆಸುತ್ತಿವೆ ಎನ್ನಲಾಗಿದ್ದು, ಪೂರ್ಣ ಪ್ರಮಾಣದ ಜಾರಿಗೆ ಮುಂದಾಗಿವೆ. ಇ–ಸಿಎನ್‌ವೈ ಹೆಸರಿನ ಕರೆನ್ಸಿಯನ್ನು ಚೀನಾ ಇದೇ ತಿಂಗಳಲ್ಲಿ ಜಾರಿ ಮಾಡಬಹುದು. 2022ರ ಕೊನೆಯ ಹೊತ್ತಿಗೆ ಕಜಕಸ್ತಾನದಲ್ಲಿ ಸಿಬಿಡಿಸಿ ಜಾರಿಗೆ ಬರಲಿದೆ.

ಜನರ ಅಭಿಪ್ರಾಯ ಪಡೆದು ಯೋಜನೆಯ ವಿನ್ಯಾಸ ಮಾಡಲಾಗುವುದು ಎಂದು ನ್ಯೂಜಿಲೆಂಡ್‌ನ ಕೇಂದ್ರೀಯ ಬ್ಯಾಂಕ್ ತಿಳಿಸಿದೆ. ರಷ್ಯಾ, ಬ್ರೆಜಿಲ್ ದೇಶಗಳು ಪ್ರಾಯೋಗಿಕ ಪರೀಕ್ಷೆಗೆ ಮುಂದಾಗಿವೆ. ಅಂತರರಾಷ್ಟ್ರೀಯ ಸಹಕಾರ ಸಿಗದಿದ್ದರೆ, ಇಂತಹ ಮಹತ್ವದ ಹಾಗೂ ಸೂಕ್ಷ್ಮ ಯೋಜನೆಗಳು ಭವಿಷ್ಯದಲ್ಲಿ ಭಾರಿ ಸಮಸ್ಯೆ ಎದುರಿಸಲಿವೆ ಎಂದು ತಜ್ಞರು ಹೇಳಿದ್ದಾರೆ.

ರಾಜನ್ ಎಚ್ಚರಿಕೆ, ಗವರ್ನರ್ ಕಳವಳ

ರಘುರಾಮ್ ರಾಜನ್


ಶಕ್ತಿಕಾಂತ್ ದಾಸ್

ಬ್ಲಾಕ್‌ಚೈನ್ ತಂತ್ರಜ್ಞಾನದ ಅಡಿಯಲ್ಲಿ ಕೆಲಸ ಮಾಡುವ ಡಿಜಿಟಲ್ ರೂಪಾಯಿಯನ್ನು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಹೊರತರಲು ಮುಂದಾಗಿರುವುದಕ್ಕೆ ಕೆಲವು ಆಕ್ಷೇಪಗಳು ವ್ಯಕ್ತವಾಗಿವೆ. ಆರ್‌ಬಿಐ ಮಾಜಿ ಗವರ್ನರ್ ರಘುರಾಮ್ ರಾಜನ್ ಅವರು ಈ ವಿಚಾರ ಚರ್ಚೆಗೆ ಬಂದ ಆರಂಭದಲ್ಲೇ ಕೇಂದ್ರಕ್ಕೆ ಎಚ್ಚರಿಕೆ ನೀಡಿದ್ದರು. ತನ್ನದೇ ಸ್ವಂತ ಡಿಜಿಟಲ್ ರೂಪಾಯಿಯನ್ನು ಹೊರತರುವ ಮುನ್ನ ಆರ್‌ಬಿಐ ಎಚ್ಚರಿಕೆ ವಹಿಸುವುದು ಅಗತ್ಯ ಎಂದು ಹೇಳಿದ್ದರು.

ಡಿಜಿಟಲ್ ರೂಪಾಯಿಯನ್ನು ಆರ್‌ಬಿಐ ಸರಿಯಾಗಿ ವಿನ್ಯಾಸ ಮಾಡದಿದ್ದರೆ, ಅದರ ಸಂಪೂರ್ಣ ದತ್ತಾಂಶಗಳು ಪರರ ಕೈಸೇರುವ ಅಪಾಯವಿರುತ್ತದೆ ಎಂದು ಅವರು ಎಚ್ಚರಿಕೆ ನೀಡಿದ್ದಾರೆ. ಸರ್ಕಾರವೇ ಇದನ್ನು ಜಾರಿ ಮಾಡುವುದರಿಂದ ಸಾಕಷ್ಟು ಸೇವೆಗಳಲ್ಲಿ ವ್ಯತ್ಯಯವಾಗುವ ಸಂಭವವಿರುತ್ತದೆ. ಗ್ರಾಹಕರಿಗೆ ಒದಗಿಸುವ ಸೇವೆ ಎಷ್ಟರ ಮಟ್ಟಿಗೆ ಲಭ್ಯವಾಗುತ್ತದೆ ಎಂಬ ಬಗ್ಗೆ ಅವರು ಸಂದೇಹ ವ್ಯಕ್ತಪಡಿಸಿದ್ದಾರೆ. ಈ ಅಪಾಯಗಳ ಬಗ್ಗೆ ಆರ್‌ಬಿಐ ಗವರ್ನರ್ ಶಕ್ತಿಕಾಂತ್ ದಾಸ್ ಸಹ ಗುರುವಾರ ಕಳವಳ ವ್ಯಕ್ತಪಡಿಸಿದ್ದಾರೆ.

ಡಿಜಿಟಲ್ ರೂಪಾಯಿ ಜಾರಿಗೊಳಿಸುವ ಮುನ್ನ ಖಾಸಗಿ ರಂಗವನ್ನು ಗಂಭೀರವಾಗಿ ಪರಿಗಣಿಸಬೇಕಿದೆ ಎಂದು ರಾಜನ್ ಸಲಹೆ ನೀಡಿದ್ದಾರೆ. ಸರ್ಕಾರ ಜಾರಿಗೊಳಿಸುವುದಕ್ಕಿಂತಲೂ ಹೆಚ್ಚು ಹೊಸತನದಿಂದ ಕೂಡಿದ ಚಿಂತನೆಗಳನ್ನು ಖಾಸಗಿ ರಂಗದವರು ಮಾಡಬಲ್ಲ ಸಾಮರ್ಥ್ಯ ಹೊಂದಿದ್ದಾರೆ. ಹೀಗಾಗಿ ಎಲ್ಲ ದಿಕ್ಕುಗಳಲ್ಲೂ ಆಲೋಚಿಸಿ ಚಟುವಟಿಕೆಗಳನ್ನು ಆರಂಭಿಸಬೇಕಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ಡಿಜಿಟಲ್ ರೂಪದ ಕರೆನ್ಸಿಯನ್ನು ಜಾರಿ ಮಾಡುವ ದೇಶಗಳಲ್ಲಿರುವ ಸರ್ಕಾರಗಳ ಸ್ವರೂಪದ ಮೇಲೆ ಅವರು ಬೆಳಕು ಚೆಲ್ಲಿದ್ದಾರೆ. ಚೀನಾದಂತಹ ದೇಶಗಳು ಇದನ್ನು ಅಕ್ರಮ ಬಿಟ್‌ಕಾಯಿನ್ ಮೈನಿಂಗ್ ಮತ್ತು ವಹಿವಾಟಿಗೆ ಬಳಸಿಕೊಂಡಿವೆ. ಭಾರತದಂತಹ ಪ್ರಜಾಪ್ರಭುತ್ವ ವ್ಯವಸ್ಥೆಯ ದೇಶದಲ್ಲಿ ಚೀನಾದ ಮಾದರಿಯನ್ನು ಅನುಸರಿಸಲು ಹೇಗೆ ಸಾಧ್ಯ ಎಂದು ಅವರು ಕೇಳಿದ್ದಾರೆ.

ಕ್ರಿಪ್ಟೊ ಕರೆನ್ಸಿಗಳ ಹಿಂದೆ ಜಗತ್ತು ಓಡುತ್ತಿರುವುದನ್ನು ವಿಶ್ಲೇಷಿಸಿರುವ ಅವರು, ಒಂದೆರಡನ್ನು ಬಿಟ್ಟು, ಈ ಸ್ವರೂಪದ ಎಲ್ಲ ಕರೆನ್ಸಿಗಳು ಸದ್ಯದಲ್ಲೇ ಅಂತ್ಯ ಕಾಣಲಿವೆ ಎಂದಿದ್ದಾರೆ. ಚಿಟ್‌ಫಂಡ್‌ಗಳು ತಂದೊಡ್ಡಿದ ಸಮಸ್ಯೆಯನ್ನು ಇವು ಪುನರಾವರ್ತಿಸಲಿವೆ ಎಂದು ಅವರು ಭವಿಷ್ಯ ನುಡಿದಿದ್ದಾರೆ.

ಸೈಬರ್ ಭದ್ರತೆ, ವಂಚನೆ ಆತಂಕ: ಆರ್‌ಬಿಐ ಗವರ್ನರ್

ಸರ್ಕಾರ ಹೊರತರಲಿರುವ ಡಿಜಿಟಲ್ ರೂಪಾಯಿ ಎಂಬ ಹೊಸ ವ್ಯವಸ್ಥೆಗೆ ಸೈಬರ್ ಭದ್ರತೆ ಹಾಗೂ ವಂಚನೆಗಳು ದೊಡ್ಡ ಸವಾಲುಗಳು ಎಂದು ಆರ್‌ಬಿಐ ಗವರ್ನರ್ ಶಕ್ತಿಕಾಂತ್ ದಾಸ್ ಕಳವಳ ವ್ಯಕ್ತಪಡಿಸಿದ್ದಾರೆ. ಈ ಬಗ್ಗೆ ಅತ್ಯಂತ ಜಾಗರೂಕವಾಗಿ ಹೆಜ್ಜೆ ಇರಿಸಲಾಗುವುದು. ಇದರಲ್ಲಿ ಯಾವುದೇ ತರಾತುರಿ ಇಲ್ಲ ಎಂದು ಅವರು ತಿಳಿಸಿದ್ದಾರೆ.

ಕೆಲವು ವರ್ಷಗಳ ಹಿಂದೆ ನಕಲಿ ನೋಟುಗಳ ಹಾವಳಿ ಇತ್ತು. ಆರ್‌ಬಿಐನ ಅಧಿಕೃತ ನೋಟುಗಳನ್ನು ನಕಲಿ ಮಾಡಲಾಗುತ್ತಿತ್ತು. ಸಿಬಿಡಿಸಿಯಲ್ಲೂ ಅಂತಹ ಯತ್ನಗಳು ನಡೆಯುವ ಬಗ್ಗೆ ಎಚ್ಚರ ವಹಿಸಲಾಗಿದ್ದು, ಅಗತ್ಯ ಸೈಬರ್ ಭದ್ರತೆಯನ್ನು ಒದಗಿಸಲಾಗುತ್ತಿದೆ ಎಂದು ಹೇಳಿದ್ದಾರೆ. ಸಂಕೀರ್ಣ ವಿಚಾರವಾಗಿರುವ ಕಾರಣ, ಇದರ ಜಾರಿಗೆ ಕಾಲಮಿತಿ ನಿಗದಿಪಡಿಸಲಾಗದು ಎಂದು ಅವರು ಈ ಹಿಂದೆ ಹೇಳಿದ್ದರು. ಮೂಲಗಳ ಪ್ರಕಾರ, ಮುಂದಿನ 2023ರ ಹೊತ್ತಿಗೆ ಇದು ಜಾರಿಗೊಳ್ಳಬಹುದು.

'ಟ್ಯುಲಿಪ್ ಮೇನಿಯಾ' ಉಲ್ಲೇಖ: ಖಾಸಗಿ ಕ್ರಿಪ್ಟೊಕರೆನ್ಸಿಗಳಿಂದ ಆರ್ಥಿಕ ಭದ್ರತೆಗೆ ಅಪಾಯವಿದೆ ಎಂದೂ ದಾಸ್ ಹೇಳಿದ್ದಾರೆ. ಇವುಗಳಲ್ಲಿ ಹೂಡಿಕೆ ಮಾಡಬೇಕಾದಲ್ಲಿ ಎಚ್ಚರಿಕೆ ವಹಿಸಿ ಎಂದು ಅವರು ಸಲಹೆ ನೀಡಿದ್ದಾರೆ. ಹಾಲೆಂಡ್‌ನಲ್ಲಿ ನಡೆದ 'ಟ್ಯುಲಿಪ್ ಮೇನಿಯಾ'ವನ್ನು ಅವರು ಉಲ್ಲೇಖಿಸಿದ್ದಾರೆ.

17ನೇ ಶತಮಾನದಲ್ಲಿ ಹಾಲೆಂಡ್‌ನಲ್ಲಿ ಟ್ಯುಲಿಪ್ ಗಡ್ಡೆಯ ಬೆಲೆ ಇದ್ದಕ್ಕಿದ್ದಂತೆ ಸಾರ್ವಕಾಲಿಕ ಮಟ್ಟಕ್ಕೆ ಹೆಚ್ಚಾಯಿತು. ಈ ಏರಿಕೆಯು ಆ ವಸ್ತುವಿನ ಮೌಲ್ಯ ಆಧರಿಸಿ ಆಗಿದ್ದಲ್ಲ. ಆದರೆ ಮಾರಾಟಗಾರರು ಊಹಾಪೋಹ ಹಬ್ಬಿಸಿ ಮಾರಾಟವನ್ನು ಹೆಚ್ಚಿಸುವ ಯತ್ನ ಮಾಡಿದ್ದರು. ಆದರೆ ಇದು ಸಾರ್ವಕಾಲಿಕ ಪತನವನ್ನೂ ದಾಖಲಿಸಿತ್ತು. ಹಣಕಾಸು ಮಾರುಕಟ್ಟೆಯಲ್ಲಿ ದಿಢೀರ್ ಏರಿ, ದಿಢೀರ್ ಇಳಿಯುವ ವಿದ್ಯಮಾನಗಳನ್ನು ಟ್ಯುಲಿಪ್ ಮೇನಿಯಾ ಎಂದು ಕರೆಯಲಾಗುತ್ತದೆ.

ಭಾರತದಲ್ಲಿ ಇಂತಹ ಕರೆನ್ಸಿ ವ್ಯವಸ್ಥೆಯನ್ನು ಜಾರಿಗೊಳಿಸುವ ಮುನ್ನ ವಿಶ್ವದ ಇತರ ಭಾಗಗಳಲ್ಲಿ ಜಾರಿಯಲ್ಲಿರುವ ಅಥವಾ ಜಾರಿಗೆ ತರಲು ಮುಂದಾಗಿರುವ ಡಿಜಿಟಲ್ ಕರೆನ್ಸಿಗಳ ಸ್ವರೂಪವನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ ಎಂದು ಆರ್‌ಬಿಐ ತಿಳಿಸಿತ್ತು. ಅತ್ಯಂತ ಸಂಕೀರ್ಣ ವ್ಯವಸ್ಥೆಯ ಜಾರಿಯಲ್ಲಿ ಹಲವು ಅಡಚಣೆಗಳಿದ್ದು, ಜಾರಿ ವಿಳಂಬವಾಗುವ ಸಾಧ್ಯತೆಯಿದೆ ಎಂದೂ ಮಾಹಿತಿ ನೀಡಿತ್ತು.

ಆಧಾರ: ಪಿಐಬಿ ಪತ್ರಿಕಾ ಪ್ರಕಟಣೆಗಳು, ಪಿಟಿಐ, ಎಎಫ್‌ಪಿ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 42

ವಾರದ ದಿನಗಳ ಪುಣ್ಯಫಲಗಳು

ಋಷಿಗಳು ಅಗ್ನಿಯಜ್ಞ, ಬ್ರಹ್ಮಯಜ್ಞ, ದೇವಯಜ್ಞಗಳ ಬಗ್ಗೆ ಮತ್ತಷ್ಟು ವಿವರವಾಗಿ ಹೇಳುವಂತೆ ಸೂತಮುನಿಯನ್ನು ಕೋರುತ್ತಾರೆ. 'ಅಗ್ನಿಯಲ್ಲಿ ಹವಿಸ್ಸನ್ನು ಹೋಮ ಮಾಡುವುದು ಅಗ್ನಿಯಜ್ಞ. ವೇದಾಧ್ಯಯನ ಮಾಡುವುದು ಬ್ರಹ್ಮಯಜ್ಞ. ಸ್ಥಾಲೀಪಾಕ ಮುಂತಾದ ಕರ್ಮಗಳಿಗೆ ದೇವಯಜ್ಞವೆಂದು ಹೆಸರು' ಅಂತ ಸೂತಮುನಿ ಮುನಿಗಳಿಗೆ ತಿಳಿಸುತ್ತಾನೆ.

ಸಾಯಂಕಾಲ ಅಗ್ನಿಯಲ್ಲಿ ಸಮರ್ಪಿಸಿದ ಆಹುತಿಯು ಸಂಪತ್ತನ್ನುಂಟುಮಾಡುವುದು. ಪ್ರಾತಃಕಾಲ ಅಗ್ನಿಯಲ್ಲಿ ಸೂರ್ಯನಿಗರ್ಪಿಸಿದ ಆಹುತಿಯು ಆಯುಸ್ಸನ್ನುಂಟುಮಾಡುವುದು. ಹಗಲು ಸೂರ್ಯನಿರುವುದರಿಂದ ಅವನನ್ನುದ್ದೇಶಿಸಿ ಅಗ್ನಿಯಲ್ಲಿ ಹವಿಸ್ಸನ್ನ ಅರ್ಪಿಸಿದರೆ ಅದೇ ಅಗ್ನಿಯಜ್ಞವಾಗುತ್ತದೆ. ಇಂದ್ರ ಮೊದಲಾದ ದೇವತೆಗಳನ್ನುದ್ದೇಶಿಸಿ ಅಗ್ನಿಯಲ್ಲಿ ಹೋಮ ಮಾಡುವಂತಹ ಸ್ಥಾಲೀಪಾಕ ಮುಂತಾದ ಕರ್ಮಗಳಿಗೆ ದೇವಯಜ್ಞವೆಂದು ಹೆಸರು. ಚೂಡಾಕರ್ಮ ಮುಂತಾದವು ಲೌಕಿಕಾಗ್ನಿಯಲ್ಲಿ ಮಾಡುವಂತಹ ಕರ್ಮಗಳು. ನಿತ್ಯಕರ್ಮವನ್ನು ಮಾಡಿದ ಮೇಲೆ ಸಾಯಂಕಾಲದವರೆಗೂ ವೇದಾಧ್ಯಯನವನ್ನು ಮಾಡಬೇಕು. ಸಾಯಂಕಾಲದ ಮೇಲೆ ಮಾಡಬಾರದು.

ಸರ್ವಜ್ಞನೂ ದಯಾಮಯನೂ ಜಗದೊಡೆಯನೂ ಆದಂತಹ ಮಹಾದೇವನು, ಆದಿಸೃಷ್ಟಿಯಲ್ಲಿ ಸಕಲ ಲೋಕಗಳ ಉಪಕಾರಕ್ಕಾಗಿ 7 ದಿನಗಳ ವಾರಗಳನ್ನು ಕಲ್ಪಿಸಿದ್ದಾನೆ. ಸಂಸಾರಬಂಧವನ್ನು ಹೋಗಲಾಡಿಸಲು ಆರೋಗ್ಯಪ್ರದವಾದಂತಹ ಭಾನುವಾರ ಕಲ್ಪಿಸಿದ. ಆಮೇಲೆ ಸಂಪತ್ಕರವೂ ಸೃಷ್ಟಿಗನುಕೂಲವೂ ಕಷ್ಟವನ್ನು ಹೋಗಲಾಡಿಸುವಂತಹ ಸೋಮವಾರವನ್ನು ನೀಡಿದ. ಬಳಿಕ ಆಲಸ್ಯ ಪಾಪಗಳನ್ನು ಹೋಗಲಾಡಿಸುವಂತಹ ಷಣ್ಮುಖನ ವಾರವಾಗಿ ಮಂಗಳವಾರ. ಜಗತ್ತನ್ನು ರಕ್ಷಿಸುವ ವಿಷ್ಣುವಿನ ವಾರವಾಗಿ ಬುಧವಾರ. ಬ್ರಹ್ಮನ ಆಯುಷ್ಕರವಾದಂತಹ ಗುರುವಾರವನ್ನು ಜನಗಳ ಆಯುಸ್ಸುಸಿದ್ಧಿಸಲು ಸೃಷ್ಟಿಸಿದ. ಪುಣ್ಯಪಾಪಗಳ ಕರ್ತೃಗಳಾದ ಇಂದ್ರ ಮತ್ತು ಯಮರಿಗೆ ಕ್ರಮವಾಗಿ ಶುಕ್ರ ಮತ್ತು ಶನಿ ಎಂಬ ವಾರಗಳೆರಡನ್ನು ಶಿವ ಅನುಗ್ರಹಿಸಿದ. ಆದ್ದರಿಂದ ಆಯಾಯ ವಾರದಲ್ಲಿ ಬರುವ ಗ್ರಹಗಳನ್ನು ಪೂಜಿಸಿದರೆ ಆ ಗ್ರಹಗಳಿಂದಾಗುವ ಫಲವು ಲಭಿಸುವುದು. ವಾರದೇವತೆಗಳನ್ನು ಆಯಾಯ ವಾರಗಳಲ್ಲಿ ಪೂಜಿಸಿದರೆ ಕ್ರಮವಾಗಿ ಆರೋಗ್ಯ, ಸಂಪತ್ತು, ರೋಗನಿವೃತ್ತಿ, ಪುಷ್ಟಿ, ಆಯುಸ್ಸು, ಭೋಗ, ಮೃತ್ಯುನಾಶ ಎಂಬ ಏಳು ಫಲಗಳು ಲಭಿಸುವುದು. ಈ ಎಲ್ಲ ದೇವತೆಗಳ ಪೂಜೆಗೂ ಫಲವನ್ನು ಕೊಡುವವನು ಶಿವನೇ ಆಗಿರುತ್ತಾನೆ; ವಾರದ ಗ್ರಹದೇವತೆಗಳು ನಿಮಿತ್ತವಷ್ಟೇ.

ಮೊದಲನೆಯದಾದ ಭಾನುವಾರದಂದು ಪಾಪಶಾಂತಿಗಾಗಿ ಆದಿತ್ಯದೇವನನ್ನು ಆರಾಧಿಸಬೇಕು. ಸೋಮವಾರದಂದು ಸಂಪತ್ತು ವೃದ್ಧಿಸಲು ಲಕ್ಷ್ಮೀಯನ್ನು ಪೂಜಿಸಬೇಕು. ಮಂಗಳವಾರದಂದು ರೋಗನಾಶವಾಗಲು ಕಾಳೀದೇವತೆಯರನ್ನರ್ಚಿಸಬೇಕು. ಬುಧವಾರದಂದು ಮೊಸರನ್ನದಿಂದ ವಿಷ್ಣುವನ್ನರ್ಚಿಸಬೇಕು. ಆಯುಸ್ಸನ್ನ ಅಪೇಕ್ಷಿಸುವವರು ಗುರುವಾರದಲ್ಲಿ ಉಪವೀತ, ವಸ್ತ್ರ, ತುಪ್ಪ, ಹಾಲುಗಳಿಂದ ದೇವತೆಗಳಿಗೆ ಅರ್ಪಿಸಿ ಸಂತೋಷಗೊಳಿಸಬೇಕು. ಸುಖವನ್ನು ಬಯಸುವವರು ಶುಕ್ರವಾರದಂದು ದೇವತೆಗಳನ್ನು ವಿಧಿವತ್ತಾಗಿ ಅರ್ಚಿಸಬೇಕು. ಅಕಾಲಮೃತ್ಯು ತಡೆಯಲು ಶನಿವಾರದಂದು ತಿಲಹೋಮದಿಂದ ರುದ್ರದೇವತೆಗಳನ್ನರ್ಚಿಸಬೇಕು. ಈ ದೇವಯಜ್ಞವನ್ನು ಏಳು ವಾರಗಳಲ್ಲಿ ಮಾಡಿದರೆ ಸಕಲ ಇಷ್ಟಾರ್ಥಗಳೂ ನೆರವೇರುವುದು.

ಪ್ರಾರಬ್ಧಕರ್ಮವು ಪ್ರಬಲವಾಗಿದ್ದರೆ, ಒಂದು ದಿನ ಅಥವಾ ಒಂದು ತಿಂಗಳು, ಇಲ್ಲವೇ ಒಂದು ವರ್ಷ ಅಥವಾ ಮೂರು ವರ್ಷದವರೆಗೂ ಆದಿತ್ಯನನ್ನು ಪೂಜಿಸಬೇಕು. ಇಷ್ಟದೇವತೆಗಳ ಜಪ ಮುಂತಾದವುಗಳನ್ನು ಆಯಾಯ ವಾರಗಳಲ್ಲಿ ಮಾಡಿದರೆ ಆಯಾಯ ಫಲಗಳು ಲಭಿಸುವುದು. ನೇತ್ರರೋಗ, ಶಿರಸ್ಸಿನ ರೋಗ, ಕುಷ್ಠರೋಗಗಳು ನಾಶವಾಗಲು ಆದಿತ್ಯನನ್ನು ಪೂಜಿಸಿ, ಜನರಿಗೆ ಭೋಜನ ಮಾಡಿಸಬೇಕು. ಶುಭಕರ್ಮದ ಆದಿಯಲ್ಲೂ, ಮೃತಸಂಸ್ಕಾರಕರ್ಮದ ಕೊನೆಯಲ್ಲಿಯೂ, ಜನ್ಮನಕ್ಷತ್ರದಲ್ಲಿಯೂ ಗೃಹಸ್ಥನು ಆರೋಗ್ಯ ಮುಂತಾದ ಫಲಗಳಿಗಾಗಿ ಆದಿತ್ಯ ಮತ್ತಿತರ ಗ್ರಹಗಳನ್ನರ್ಚಿಸಬೇಕು. ನಿತ್ಯವೂ ಮಾಡುವ ದೇವಪೂಜೆ, ನವರಾತ್ರಿ ಮುಂತಾದವುಗಳಲ್ಲಿ ಮಾಡುವ ವಿಶೇಷ ಪೂಜೆ ಮತ್ತು ಆದಿತ್ಯವಾರ ಮೊದಲಾದ ವಾರಗಳಲ್ಲಿ ಮಾಡುವ ಆಯಾಯ ದೇವತೆಗಳ ಪೂಜೆಗಳಲ್ಲಿ ಸರ್ವಜ್ಞನಾದ ಪರಮೇಶ್ವರನೇ ಆಯಾಯ ದೇವತಾ ರೂಪದಿಂದ ಫಲಗಳನ್ನು ಕೊಡುವನು.

ಬಡವನು ತಪಸ್ಸಿನಿಂದ ದೇವತೆಗಳನ್ನು ಪೂಜಿಸಬೇಕು. ಶ್ರೀಮಂತನು ಧನದಿಂದ ಪೂಜಿಸಬೇಕು. ಇದಕ್ಕಾಗಿ ಹಣವಂತರು ಜನರ ಜೀವನಕ್ಕೆ ನೆರವಾಗುವ ಸಾಲುಮರಗಳನ್ನ ಹಾಕಿಸುವುದು, ಕೆರೆಬಾವಿ ತೋಡಿಸುವುದು, ದೇವಪ್ರತಿಷ್ಠಾಪನೆಯಂಥ ಧರ್ಮಕಾರ್ಯಗಳನ್ನು ಮಾಡಬೇಕು. ಇಂಥ ಪುಣ್ಯಬಲದಿಂದ ಬ್ರಹ್ಮಜ್ಞಾನವು ಸಿದ್ಧಿಸುವುದು ಎಂದು ಸೂತಮುನಿ ಹೇಳುವುದರೊಂದಿಗೆ ವಿದ್ಯೇಶ್ವರಸಂಹಿತೆಯ ಹದಿನಾಲ್ಕನೆ ಅಧ್ಯಾಯ ಮುಗಿಯುತ್ತದೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

ಸಮಾಜವಾದಿ ಪಕ್ಷದ ಅಧ್ಯಕ್ಷ ಅಖಿಲೇಶ್ ಯಾದವ್ ಇರುವ 14 ಸೆಕೆಂಡ್‌ಗಳ ವಿಡಿಯೊವೊಂದು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ಗ್ರಾಮಸ್ಥರ ಜೊತೆ ಅಖಿಲೇಶ್ ಮಾತನಾಡುತ್ತಿರುವುದು ವಿಡಿಯೊದಲ್ಲಿ ಸೆರೆ ಆಗಿದೆ. ಅಖಿಲೇಶ್ ಚುನಾವಣಾ ಪ್ರಚಾರಕ್ಕೆ ತೆರಳಿದ್ದ ವೇಳೆ ವೃದ್ಧರೊಬ್ಬರು 'ನೀವು ಮಸೀದಿಗಳನ್ನು ನಿರ್ಮಿಸಿದ್ದೀರಿ. ಹಾಗಾಗಿ ನಿಮ್ಮ ಪಕ್ಷಕ್ಕೆ ಮತ ನೀಡುವುದಿಲ್ಲ' ಎಂದು ಅಖಿಲೇಶ್‌ಗೆ ನೇರವಾಗಿ ಹೇಳಿದ್ದಾರೆ ಎಂದು ಈ ವಿಡಿಯೊವನ್ನು ಬಿಂಬಿಸಲಾಗಿದೆ. ಬಿಜೆಪಿ ಸಾಮಾಜಿಕ ಜಾಲತಾಣ ಉಸ್ತುವಾರಿ ಪ್ರೀತಿ ಗಾಂಧಿ ಸೇರಿ ಬಿಜೆಪಿಯ ಹಲವು ನಾಯಕರು ಈ ವಿಡಿಯೊವನ್ನು ಹಂಚಿಕೊಂಡಿದ್ದಾರೆ.

ಈಗ ವೈರಲ್ ಆಗಿರುವ ವಿಡಿಯೊ ಎರಡು ವರ್ಷ ಹಿಂದಿನದ್ದು ಎಂದು ದಿ ಲಾಜಿಕಲ್ ಇಂಡಿಯನ್ ವೇದಿಕೆ ವರದಿ ಮಾಡಿದೆ. ವೃದ್ಧರು ಮಸೀದಿಗಳ ಕುರಿತು ಮಾತನಾಡಿಲ್ಲ, ಅವರು ಇವಿಎಂ ಕುರಿತು ಮಾತನಾಡಿದ್ದಾರೆ. 2019ರ ನ.12ರಂದೇ ಈ ವಿಡಿಯೊವನ್ನು ಎಸ್‌ಪಿ ವಕ್ತಾರೆ ರೋಲಿ ತಿವಾರಿ ಮಿಶ್ರಾ ಅವರು ಸಾಮಾಜಿಕ ಜಾಲತಾಣಗಳಲ್ಲಿ ಪೋಸ್ಟ್ ಮಾಡಿದ್ದರು. ಅಖಿಲೇಶ್‌ರನ್ನು ಉದ್ದೇಶಿಸಿ ವೃದ್ಧ ವ್ಯಕ್ತಿ, 'ಮಷಿನ್‌ಗಳಿಗೆ ಬೆಂಕಿ ಹಚ್ಚಿ' ಎಂದು ಹೇಳುತ್ತಿರುವುದು ಮೂಲ ವಿಡಿಯೊದಲ್ಲಿ ಕೇಳುತ್ತದೆ. ಅದನ್ನೇ ತಿರುಚಿ, ಬಿಜೆಪಿ ನಾಯಕರು ಹಂಚಿಕೊಂಡಿದ್ದಾರೆ ಎಂದು ದಿ ಲಾಜಿಕಲ್ ಇಂಡಿಯನ್ ಹೇಳಿದೆ.

ಗುಂಡಣ್ಣ

ಬೆರಗಿನ ಬೆಳಕು

ಗುರುರಾಜ ಕರಜಗಿ

ಶಾಶ್ವತವಾದ ಸ್ಪಂದನೆ

ಒಂದು ಕಡೆ ಚಿಗುರುತಲಿ, ಒಂದು ಕಡೆ ಬಾಡುತಲಿ |
ಕಂದುತಿರೆ ಕೊಂಬೆ, ಮುಂಡದಲಿ ಹಬ್ಬುತಲಿ ||
ಎಂದೆಂದುಮಶ್ವತ್ಥ ಹಳೆ ಹೊಸದು; ತಾನದಾ |
ಸ್ಪಂದನವೊ ಬ್ರಹ್ಮನದು – ಮಂಕುತಿಮ್ಮ || 561 ||

ಪದ-ಅರ್ಥ: ಕಂದುತಿರೆ = ಬಾಡುತಿರೆ, ಎಂದೆಂದುಮಶ್ವತ್ಥ = ಎಂದೆಂದುಂ + ಅಶ್ವತ್ಥ, ತಾನದಾ ಸ್ಪಂದನವೊ = ತಾನದ (ಲಯದ) + ಆ + ಸ್ಪಂದನವೊ.

ವಾಚ್ಯಾರ್ಥ: ಒಂದು ಕಡೆಗೆ ಚಿಗುರುತ್ತ, ಮತ್ತೊಂದೆಡೆಗೆ ಒಣಗುತ್ತ, ಒಂದು ಕೊಂಬೆಯಲ್ಲಿ ಬಾಡುತ್ತ, ಮುಂಡದಲ್ಲಿ ಹಬ್ಬುತ್ತ ಈ ಅಶ್ವತ್ಥವೃಕ್ಷ ಎಂದೆಂದಿಗೂ ಹಳೆಯದು ಮತ್ತು ಹೊಸದು. ಯಾಕೆಂದರೆ ಅದರ ಸ್ಪಂದನೆ ಬ್ರಹ್ಮನದು.

ವಿವರಣೆ: ವೇದಕಾಲದಿಂದಲೂ ಪ್ರಸಿದ್ಧವಾದದ್ದು ಅಶ್ವತ್ಥವೃಕ್ಷದ ಹೋಲಿಕೆ. ಯಾಕೆ ಅವರು ಈ ಮರವನ್ನು ಉದಾಹರಣೆಯಾಗಿ ಬಳಸಿದರು? ಪ್ರಪಂಚಕ್ಕೆ ಹೋಲಿಕೆಯಾಗಿ ಈ ಮರವನ್ನು ಬಳಸಿದ್ದರ ಕಾರಣವೆಂದರೆ ಇದು ಎಲ್ಲ ಸಂದರ್ಭಗಳಲ್ಲಿಯೂ ಸರಿಯಾಗಿ ಹೊಂದುತ್ತದೆ. ಮಹಾವೃಕ್ಷಕ್ಕೆ ನಾಲ್ಕು ವಿಶೇಷ ಲಕ್ಷಣಗಳಿವೆ. ಅವು ಸಂಸಾರಕ್ಕೂ ಸಮಾನವಾದವು.

1. ಬಹುಕಾಲಿತ್ವ: ಅಶ್ವತ್ಥವೃಕ್ಷ ದೀರ್ಘಕಾಲ ಬಾಳುತ್ತದೆ. ಒಂದು ಕಡೆಗೆ ಬಾಡುತ್ತ, ಒಂದು ಕಡೆಗೆ ಚಿಗುರುತ್ತ ಇದ್ದರೂ ಬದುಕಿಯೇ ಇರುತ್ತದೆ. ಪ್ರಪಂಚವೂ ಹಾಗೆಯೇ. ಕೆಲವು ಪ್ರದೇಶಗಳು, ಜನಸಮೂಹಗಳು ನಾಶವಾದರೂ, ಮತ್ತೊಂದೆಡೆಗೆ ವೃದ್ಧಿಸುತ್ತ ದೀರ್ಘಜೀವಿಯಾಗಿದೆ.

2. ಬಹುವಿಸ್ತೃತತ್ವ: ಮರದ ಕೊಂಬೆಗಳು, ಬಿಳಲುಗಳಾಗಿ ದೂರದೂರ ಹರಡಿಕೊಂಡಿರುತ್ತವೆ. ಸಂಸಾರದ ಶಾಖೆಗಳೂ ಹಾಗೆಯೇ ಎಲ್ಲೆಡೆಯಲ್ಲಿಯೂ ಪಸರಿಸುತ್ತವೆ.

3. ಬಹುಗ್ರಂಥಿಲತ್ವ: ಅಶ್ವತ್ಥವೃಕ್ಷದ ಕೊಂಬೆಗಳು, ಬಿಳಲುಗಳು ಸೊಟ್ಟುಸೊಟ್ಟಾಗಿ, ಗಂಟುಗಂಟಾಗಿ ಇರುತ್ತವೆ. ಸಂಸಾರದ ತೊಡಕುಗಳೂ, ಸಿಕ್ಕುಗಳೂ ಹಾಗೆಯೇ ಗಂಟುಗಂಟಾಗಿ ಸೆಳೆಯುತ್ತವೆ.

4. ಬಹುಪೋಷಕತ್ವ: ಬೃಹತ್‌ಮರ ಅನೇಕ ಬಗೆಯ ಪಕ್ಷಿಗಳಿಗೆ, ಕ್ರಿಮಿಕೀಟಗಳಿಗೆ ನೆಲೆನೀಡಿ ಕಾಪಾಡುತ್ತದೆ. ಅಂತೆಯೇ ಸಂಸಾರ ವೃಕ್ಷವೂ ಬಂಧುಮಿತ್ರರಿಗೆ, ಅತಿಥಿಗಳಿಗೆ ಪೋಷಕವಾಗುತ್ತದೆ.

ಇಷ್ಟು ದೊಡ್ಡ ವೃಕ್ಷದಲ್ಲಿ ಕೆಲ ಕೊಂಬೆಗಳು ಬಾಡುವುದು ಕೆಲಕೊಂಬೆಗಳು ಚಿಗುರುವುದು ಸ್ವಾಭಾವಿಕ. ಇದೇ ರೀತಿ ಪ್ರಪಂಚದಲ್ಲಿ ಬದಲಾವಣೆಗಳಾಗುವುದನ್ನು ಇತಿಹಾಸ ಕಂಡಿದೆ. ಒಂದು ಕಾಲದಲ್ಲಿ ಅತ್ಯಂತ ಶಕ್ತಿಶಾಲಿಯಾಗಿದ್ದ ಡೈನಾಸಾರಸ್‌ಗಳು ಇಂದು ಇಲ್ಲವಾಗಿವೆ. ಕೆಲವು ದ್ವೀಪಗಳು ಸಮುದ್ರದಲ್ಲಿ ಮುಳುಗಿಹೋಗಿವೆ, ಮತ್ತೆ ಕೆಲವು ಸಾಗರಗರ್ಭದಿಂದ ಹೊರಬಂದು ಮೈತಳೆದು ನಿಂತಿವೆ. ಪ್ರಕೃತಿ ವಿಕೋಪಗಳಲ್ಲಿ ಸಹಸ್ರಾರು ವರ್ಷಗಳಿಂದ ಇದ್ದ ಜನಸಮೂಹಗಳೇ ನಾಶವಾಗಿವೆ. ಅತ್ಯಂತ ಸಮೃದ್ಧವಾಗಿದ್ದ ನಾಗರಿಕತೆಗಳು ಪಳಿಯುಳಿಕೆಗಳಾಗಿವೆ. ಹೊಸ ಜನಸಮೂಹಗಳು ಪ್ರಬಲವಾಗಿ ಬೆಳೆಯುತ್ತಿವೆ. ಇವೆಲ್ಲ ಆದರೂ ಪ್ರಪಂಚ ಮಾತ್ರ ನಡೆದೇ ಇದೆ.

ಹೀಗೆ ಸದಾಕಾಲ ಹಳೆಯದು ಮತ್ತು ಹೊಸದಾದ ಪ್ರಪಂಚ ದೀರ್ಘವಾಗಿ ಬದುಕಿದ್ದು ಏಕೆ ಎನ್ನುವುದಕ್ಕೆ ಕಗ್ಗ ಸುಂದರ ವಿವರಣೆ ಕೊಡುತ್ತದೆ. ವೃಕ್ಷದ ಬದುಕಿನ ಎಲ್ಲ ಹಂತಗಳಲ್ಲಿ ಅದಕ್ಕೆ ಮೂಲಸ್ಪಂದನ ದೊರಕುವುದು ಬ್ರಹ್ಮದಿಂದ. ಮೇಲೆ ಸದಾಕಾಲ ಬದಲಾಗುತ್ತಿದ್ದರೂ ವೃಕ್ಷದ ಬೇರು ಹಸಿರಾಗಿರುವಂತೆ, ಇಡೀ ಪ್ರಪಂಚದ ಮೂಲವಾದ ಬ್ರಹ್ಮಸತ್ವ ಹುಟ್ಟಿಲ್ಲದ್ದು, ಸಾವಿಲ್ಲದ್ದು, ಲೋಕದ ಪ್ರಸಂಗಗಳಿಗೆ ಬದಲಾಗದ್ದು, ಏಕೈಕರೂಪದಲ್ಲಿರತಕ್ಕದ್ದು ಮತ್ತು ಸದಾಕಾಲ ಶಾಂತವಾಗಿರುವಂಥದ್ದು. ಆದ್ದರಿಂದ ಈ ವಿಶ್ವಜೀವಾಶ್ವತ್ಥ ಹಳೆಯದು, ಹೊಸದು ಮತ್ತು ಶಾಶ್ವತವಾದದ್ದು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ | ಶುಕ್ರವಾರ ಫೆಬ್ರುವರಿ 11, 2022

ಶ್ರೀ ಪ್ಲವನಾಮ ಸಂವತ್ಸರ ಉತ್ತರಾಯಣ –ಶಿಶಿರ ಋತು ಮಕರ ಮಾಸದ 28 ನೇ ದಿನ ತಿಥಿ: (ಮಾಘ ಶುಕ್ಲ) ದಶಮಿ ಗಂ. 13-53 ನಕ್ಷತ್ರ: ಮೃಗಶಿರ ಅಹೋರಾತ್ರ ಯೋಗ: ವೈಧೃತಿ ಗಂ. 19-48, ಕರಣ: ಗರಜೆ ಗಂ. 13-53.
ರಾಹುಕಾಲ: ಮಧ್ಯಾಹ್ನ 10:30 – 12:00 ಸೂರ್ಯೋದಯ : 06-58 ಸೂರ್ಯಾಸ್ತ : 06-31 ಮುಸ್ಲಿಂ ದಿನಾಂಕ : 09 ರಜಬ್ ಅದೃಷ್ಟ ಸಂಖ್ಯೆ: 1, 4

ಮೇಷ: ನಿಂತು ಹೋಗಿದ್ದ ಕುಟುಂಬ ಅಭಿವೃದ್ಧಿಯ ಕಾರ್ಯಗಳು ಪುನಃ ಆರಂಭಗೊಳ್ಳುವುದು. ವ್ಯಾಪಾರ ವ್ಯವಹಾರದಲ್ಲಿ ಲಾಭ, ನಷ್ಟ ಏನೇ ಆದರೂ ಅದನ್ನು ಮುಕ್ತವಾಗಿ ಸ್ವೀಕರಿಸುವ ಭಾವನೆ ಇರಲಿ. ದ್ವಿಚಕ್ರ ವಾಹನ ಯೋಗವಿದೆ.

ವೃಷಭ: ಮನೆಯ ಆಗುಹೋಗುಗಳ ವಿಷಯಗಳನ್ನು ತಂದೆಯೊಡನೆ ಚರ್ಚಿಸುವಿರಿ. ಅಭಿಪ್ರಾಯ ವಿನಿಮಯಗಳಿಂದ ವಿಷಯಗಳಿಗೆ ಸಂಬಂಧಿಸಿದಂತೆ ಸೂಕ್ತ ತೀರ್ಮಾನ ಸಿಗುವುದು. ಅದರಿಂದಾಗಿ ಮನಸ್ಸಿಗೆ ನೆಮ್ಮದಿ.

ಮಿಥುನ: ನಿರೀಕ್ಷಿಸಿದ ಕಾರ್ಯಗಳು ನೆರವೇರಿ ಮನಸ್ಸಿಗೆ ನೆಮ್ಮದಿ. ಬಿಡಿ ಯಂತ್ರೋಪಕರಣಗಳ ಮಾರಾಟದಿಂದ ಲಾಭವಾಗುವುದು. ನಿಮ್ಮ ಅಭಿರುಚಿಗೆ ಹೊಂದುವಂತಹ ಜನರೊಂದಿಗೆ ಒಡನಾಟ ಬೆಳೆಸಿಕೊಳ್ಳುವಿರಿ.

ಕರ್ಕಾಟಕ: ಕೆಲವೊಂದು ಕಠಿಣ ನಿರ್ಧಾರಗಳನ್ನು ಕೈಗೊಳ್ಳುವ ಪ್ರಸಂಗ ಬರಬಹುದು. ಇದಕ್ಕಾಗಿ ವಿಚಲಿತರಾಗಬೇಕಾಗಿಲ್ಲ. ಸಮಸ್ಯೆ ಬಗೆಹರಿಸಲು ಜಾಣತನ, ಬುದ್ಧಿವಂತಿಕೆಯನ್ನು ಬಳಸಿಕೊಳ್ಳಿ.

ಸಿಂಹ: ವಿದೇಶದಲ್ಲಿರುವ ಮಕ್ಕಳಿಂದ ಅಚ್ಚರಿಯ ಸುದ್ದಿಯೊಂದನ್ನು ಕೇಳುವಿರಿ. ಉದ್ಯೋಗ ಬದಲಿಸುವ ವಿಚಾರದಲ್ಲಿ ಚೆನ್ನಾಗಿ ಯೋಚಿಸಿ. ಸಂಗೀತ-ನಾಟ್ಯ ಸಾಧಕರಿಗೆ ಉತ್ತಮವಾದ ವೇದಿಕೆ ದೊರೆತು ವಿದ್ವತ್ ಪ್ರದರ್ಶನವಾಗುವುದು.

ಕನ್ಯಾ: ಉದ್ಯೋಗಸ್ತ ಮಹಿಳೆಯರಿಗೆ ಈ ದಿನ ಅಧಿಕ ಕೆಲಸದ ಜೊತೆಯಲ್ಲಿ ಹೆಚ್ಚಿನ ಆದಾಯ. ಕುಟುಂಬ ವರ್ಗದವರಲ್ಲಿ ಸುಖ, ಸಂತೋಷ ಮತ್ತು ನೆಮ್ಮದಿ ಕಂಡು ಬರುವುದು. ಮಕ್ಕಳು ಮಾಡಿದ ಸಣ್ಣಪುಟ್ಟ ತಪ್ಪುಗಳನ್ನು ಕ್ಷಮಿಸಿ.

ತುಲಾ: ಕೋರ್ಟಿನಲ್ಲಿರುವ ಹಳೆಯ ವ್ಯಾಜ್ಯಗಳು ಈ ದಿನ ಇತ್ಯರ್ಥಗೊಳ್ಳುವ ಸಂಭವ. ನಿಮ್ಮ ಆರೋಗ್ಯ ಸ್ಥಿತಿಯು ಉತ್ತಮವಿದ್ದು, ದಾಂಪತ್ಯ ಜೀವನವು ಸುಖಮಯವಾಗಿರುವುದು. ಮಕ್ಕಳ ಒತ್ತಾಯಕ್ಕೆ ಮಣಿದು ಪ್ರವಾಸ ಒಪ್ಪಿಕೊಳ್ಳುವಿರಿ.

ವೃಶ್ಚಿಕ: ರಬ್ಬರ್ ಮತ್ತು ಪ್ಲಾಸ್ಟಿಕ್ ವ್ಯಾಪಾರಗಳಿಂದ ಲಾಭವಿದೆ. ಮುಖ್ಯವಾದ ಮತ್ತು ಮಹತ್ವದ್ದೆನಿಸಿದ ಕೆಲಸಗಳ ಬಗ್ಗೆ ಸುದೀರ್ಘ ಸಮಾಲೋಚನೆ ನಡೆಸಬೇಕಾಗುವುದು. ಭೋಜನದ ಸಮಯವನ್ನು ಸ್ನೇಹಿತರೊಂದಿಗೆ ಕಳೆಯುವಿರಿ.

ಧನು: ಈ ಹಿಂದೆ ಕೈಗೊಂಡ ನಿರ್ಧಾರಗಳನ್ನು ಕೆಲ ಮಾರ್ಪಾಟು ಮಾಡಿಕೊಂಡಲ್ಲಿ ನಿಮ್ಮ ವ್ಯಾಪಾರ ವ್ಯವಹಾರವು ಉತ್ತಮ ಧನಲಾಭವನ್ನು ಕಾಣುವುದು. ಪ್ರೀತಿಪಾತ್ರರೊಂದಿಗೆ ಮನಬಿಚ್ಚಿ ಮಾತನಾಡುವ ಇಚ್ಛೆ ಆಗಲಿದೆ.

ಮಕರ: ನಿಮ್ಮ ವಿಶಿಷ್ಟ ರೀತಿಯ ವೃತ್ತಿ ಕೌಶಲ್ಯದ ಸೂಕ್ಷ್ಮ ವಿಚಾರಗಳನ್ನು ತಿಳಿಯಲು ಸಹೋದ್ಯೋಗಿಯೊಬ್ಬರು ಅಪೇಕ್ಷಿಸುವರು. ನಿಮ್ಮ ಉದ್ಯೋಗದ ಗೌಪ್ಯತೆಯನ್ನು ಬಿಟ್ಟುಕೊಡುವುದು ಸರಿಯಲ್ಲ. ಓದಿನಲ್ಲಿ ಆಸಕ್ತಿ ಮೂಡುವುದು.

ಕುಂಭ: ನಿಮ್ಮೆಲ್ಲಾ ಕಾರ್ಯಗಳಿಗೂ ಹಿರಿಯರ ಆಶೀರ್ವಾದ ಲಭಿಸುವುದು. ಹಲವಾರು ಅವಕಾಶಗಳು ನಿಮಗೆದುರಾಗಿದ್ದರೂ ಗೊಂದಲಗೊಳ್ಳದೆ ಸರಿಯಾಗಿರುವುದನ್ನೇ ಆಯ್ಕೆ ಮಾಡಿಕೊಳ್ಳುವಿರಿ.

ಮೀನ: ಒಂಟಿತನ ಹೋಗಲಾಡಿಸಿಕೊಳ್ಳಲು ಮನಸ್ಸನ್ನು ಅಧಿಕ ಸಮಯದಲ್ಲಿ ಕೆಲಸಗಳತ್ತ ಹರಿಸುವಿರಿ. ಅನಗತ್ಯ ಚಿಂತೆಗಳನ್ನು ಮೈಮೇಲೆ ಎಳೆದುಕೊಳ್ಳದಿರಿ. ಆತ್ಮಸ್ಥೈರ್ಯ ಹೆಚ್ಚಲಿದೆ. ಮನಸ್ಸಿನ ದುಗುಡ ನಿವಾರಣೆಗೆ ತಾಳ್ಮೆ ಅತ್ಯವಶ್ಯ.

ಪದಬಂಧ 4866

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಹಿಂದೆ ನಡೆದದ್ದನ್ನು ಮತ್ತೊಮ್ಮೆ ವಿವರವಾಗಿ ನೋಡುವುದು (6)
4.ಕತ್ತಿಯ ಅಲುಗು (4)
5.ಸಭೆಯ ಸದಸ್ಯ (3)
7.ನೆನಪು ಮಾಡಿಕೊಂಡು ತೋರಿದ ಬಿನ್ನಾಣ! (3)
10.ಕರದಲ್ಲಿ ಹಿಡಿದಿರುವ ಚಿಪ್ಪು (3)
12.ಒಳ್ಳೆಯ ಅದೃಷ್ಟ (3)
13.ಮರದ ಬೊಂಬೆ ಕೆತ್ತನೆಗಾರ (4)
15.ಅರಣ್ಯದಲ್ಲಿ ಸಸಿ ನೆಡುವ ಕಾರ್ಯಕ್ರಮ (6)

ಮೇಲಿಂದ ಕೆಳಕ್ಕೆ
1.ರಾಜನು ಕುಳಿತುಕೊಳ್ಳುವ ಗದ್ದುಗೆ (4)
2.ನಖರಾ ತೋರಿದವನ ಉಗುರು! (2)
3.ಆಮಂತ್ರಣ ಪತ್ರಿಕೆ (4)
6.ಕನ್ನಡಿಗನ ಚಾಳೀಸು! (4)
7.ನಯ ನಾಜೂಕಿಲ್ಲದವನು (3)
8.ಚಿಲ್ಲರೆ ಹಣವಿದು (4)
9.ಕೆಟ್ಟ ಗುಣವಿದು (4)
11.ಕೊನೆಗೆ ಭಾವನಿದ್ದಾಗ ತೋರಿದ ಶೃಂಗಾರ ಚೇಷ್ಟೆ! (4)
14.ವರನಿಗೆ ಕೇಳಿದ ಧ್ವನಿ (2)



4865ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಮಾರ್ಗದರ್ಶಕ 4.ಓಜಸ್ಸು 5.ಮಾತುಲ 6.ಗರುಡ 8.ವನ 9.ಮಿತ 11.ಪಾನಕ 14.ಸಾಕ್ಷರ 15.ಬಡಾಯಿ 16.ಗರಡಿಮನೆ
ಮೇಲಿಂದ ಕೆಳಕ್ಕೆ: 1.ಮಾರ್ಗಶಿರ 2.ದಕ್ಷಿಣಾಯನ 3.ಕಮಾನು 4.ಓಲಗ 7.ರುವತ 8.ವಚನ 9.ಮಿಟಕಲಾಡಿ 10.ಸೆರೆಮನೆ 12.ಕಸಾಯಿ 13.ಉರಗ

ಸುಡೊಕು 5252

	4				1		2	6
8		7		3				9
		5			9		8	
	6			4		3		8
	7	4	1	8	3			
3						5		1
	8		3		4			5
		1		9		8		4
4			5			2		

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5251 ಸುಡೊಕು

8	3	1	6	7	2	5	4	9
6	9	2	5	4	1	8	7	3
5	4	7	3	8	9	2	1	6
4	7	8	9	6	5	3	2	1
3	6	9	2	1	8	4	5	7
2	1	5	4	3	7	9	6	8
1	5	6	8	2	3	7	9	4
7	2	3	1	9	4	6	8	5
9	8	4	7	5	6	1	3	2

ಮಲೇಬೆನ್ನೂರಿನಲ್ಲಿ ಯುವಕನ ಮೇಲೆ ಹಲ್ಲೆ ಪ್ರಕರಣ: ತಲೆಮರೆಸಿಕೊಂಡವರ ಪತ್ತೆಗಾಗಿ ಪೊಲೀಸರ ತಂಡ ರಚನೆ

ಹಿಜಾಬ್–ಶಾಲು ವಿವಾದ: 20 ಮಂದಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಿಜಾಬ್-ಕೇಸರಿ ಶಾಲು ವಿವಾದದ ಹಿನ್ನೆಲೆಯಲ್ಲಿ ನಡೆದ ದಾಂಧಲೆ, ಹಲ್ಲೆ ಪ್ರಕರಣಗಳಿಗೆ ಸಂಬಂಧಿಸಿ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಪೊಲೀಸರು ಗುರುವಾರ ಒಟ್ಟು 20 ಜನರನ್ನು ಬಂಧಿಸಿದ್ದಾರೆ,

ಬಾಗಲಕೋಟೆ ಜಿಲ್ಲೆಯ ನವನಗರದ ಸೆಕ್ಟರ್ ನಂ 38ರಲ್ಲಿನ ಮಸೀದಿ ಬಳಿ ಪ್ರಚೋದನಕಾರಿ ವರ್ತನೆ ಹಾಗೂ ನಂತರ ನಡೆದ ಥಳಿತ ಪ್ರಕರಣಕ್ಕೆ ಸಂಬಂಧಿಸಿದಂತೆ 10 ಮಂದಿಯನ್ನು ಪೊಲೀಸರು ಗುರುವಾರ ಬಂಧಿಸಿದ್ದಾರೆ.

ಮಸೀದಿ ಎದುರು ಬುಧವಾರ ಸಂಜೆ ಕೇಸರಿ ಬಾವುಟ ಕಟ್ಟಿದ್ದ ಎರಡು ಬೈಕ್ ಗಳಲ್ಲಿ ಬಂದಿದ್ದ ನಾಲ್ವರು ಪ್ರಚೋದನಕಾರಿಯಾಗಿ ವರ್ತಿಸಿದ್ದರು. ಈ ವೇಳೆ ಅವರಲ್ಲಿ ಒಬ್ಬನನ್ನು ಹಿಡಿದು ಸ್ಥಳೀಯರು ಥಳಿಸಿದ್ದರು. ವಿಷಯ ತಿಳಿದು ಸ್ಥಳಕ್ಕೆ ತೆರಳಿದ್ದ ಪೊಲೀಸರು ಥಳಿತಕ್ಕೆ ಒಳಗಾಗಿದ್ದ ವ್ಯಕ್ತಿಯನ್ನು ರಕ್ಷಿಸಿದ್ದರು.

ಈ ವೇಳೆ ಮಸೀದಿ ಮೇಲೆ ಕಲ್ಲು ತೂರಾಟ ನಡೆಸಲಾಗಿದೆ ಎಂಬ ಸುದ್ದಿ ಹರಡಿ ಉದ್ವಿಗ್ನ ವಾತಾವರಣ ನಿರ್ಮಾಣವಾಗಿತ್ತು. ಸ್ಥಳದಲ್ಲಿ ಜಮಾಯಿಸಿದ್ದ ಹಿಂದೂ ಹಾಗೂ ಮುಸ್ಲಿಂ ಸಮುದಾಯದವರ ಗುಂಪುಗಳು ಪರಸ್ಪರ ವಾಗ್ವಾದದಲ್ಲಿ ತೊಡಗಿದ್ದವು. ಅವರನ್ನು ಚದುರಿಸಲು ಪೊಲೀಸರು ಲಘು ಲಾಠಿ ಪ್ರಹಾರ ನಡೆಸಿದ್ದರು. ಪ್ರಚೋದನ ಕಾರಿಯಾಗಿ ವರ್ತಿಸಿದ ಹಿಂದೂ ಸಮುದಾಯದ ನಾಲ್ವರು ಹಾಗೂ ಆ ಗುಂಪಿನಲ್ಲಿದ್ದ ಯುವಕನ ಮೇಲೆ ಹಲ್ಲೆ ನಡೆಸಿದ್ದ ಆರು ಮಂದಿ ಮುಸ್ಲಿಮರನ್ನು ಬಂಧಿಸಿ ನ್ಯಾಯಾಂಗ ವಶಕ್ಕೆ ಒಪ್ಪಿಸಲಾಗಿದೆ. 'ಮಸೀದಿ ಎದುರು ಅಳವಡಿಸಿದ್ದ ಸಿಸಿ ಟಿವಿ ಕ್ಯಾಮೆರಾದಲ್ಲಿನ ದೃಶ್ಯಾವಳಿ ಪರಿಶೀಲಿಸಿದ್ದು, ಕಲ್ಲು ತೂರಾಟ ನಡೆದಿಲ್ಲ. ಬದಲಿಗೆ ಯುವಕರ ಗುಂಪು ಸ್ಥಳೀಯರನ್ನು ಪ್ರಚೋದಿಸಿದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಲೋಕೇಶ ಜಗಲಾಸರ್ ತಿಳಿಸಿದರು.

ವ್ಯಕ್ತಿ ಬಂಧನ–ಮತ್ತಷ್ಟು ಜನರಿಗಾಗಿ ಶೋಧ

ರಬಕವಿ ಬನಹಟ್ಟಿ (ಬಾಗಲಕೋಟೆ ಜಿಲ್ಲೆ): ಸ್ಥಳೀಯ ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ ಕೇಸರಿ ಶಾಲು-ಹಿಜಾಬ್ ವಿವಾದದ ಪ್ರತಿಭಟನೆ ಹಾಗೂ ಶಿಕ್ಷಕನ ಮೇಲಿನ ಹಲ್ಲೆ ಪ್ರಕರಣಕ್ಕೆ ಸಂಬಂಧಪಟ್ಟಂತೆ ಮತ್ತೊಬ್ಬ ಆರೋಪಿಯನ್ನು ಗುರುವಾರ ಪೊಲೀಸರು ಬಂಧಿಸಿದ್ದಾರೆ.

ಈ ಘಟನೆಯಲ್ಲಿ ಪಾಲ್ಗೊಂಡ ಇನ್ನಷ್ಟು ಜನರನ್ನು ತನಿಖೆಗೆ ಒಳಪಡಿಸಲಾಗುತ್ತಿದ್ದು ಅವರಿಗಾಗಿ ಶೋಧಕಾರ್ಯ ಮುಂದುವರಿದಿದೆ. ಪಟ್ಟಣದಲ್ಲಿ ಮುಂಜಾಗ್ರತಾ ಕ್ರಮವಾಗಿ ಫೆ.12ರವರೆಗೆ ಬೆಳಗ್ಗೆ 6 ಗಂಟೆ ವರೆಗೆ ಸೆಕ್ಷನ್ 144ರಡಿ ನಿಷೇಧಾಜ್ಞೆಯನ್ನು ಮುಂದುವರಿಸಲಾಗಿದೆ ಎಂದು ತಹಶೀಲ್ದಾರ್ ಸಂಜಯ ಇಂಗಳೆ ತಿಳಿಸಿದರು. ಗುರುವಾರವೂ ಮಾರುಕಟ್ಟೆ ಸಂಪೂರ್ಣ ಬಂದ್ ಆಗಿತ್ತು.

ದಾಂದಲೆ: ಐವರ ಬಂಧನ

ಹರಿಹರ: ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಮುಂಭಾಗದಲ್ಲಿ ಮಂಗಳವಾರ ನಡೆದ ದಾಂದಲೆಗೆ ಸಂಬಂಧಿಸಿ ನಗರ ಠಾಣೆ ಪೊಲೀಸರು ಗುರುವಾರ ಐವರನ್ನು ಬಂಧಿಸಿ, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

'ಅಮಾಯಕರನ್ನು ಬಂಧಿಸುವುದಿಲ್ಲ, ಆರೋಪಿಗಳನ್ನು ಬಿಡುವುದಿಲ್ಲ' ಎಂದು ಪೊಲೀಸ್ ವರಿಷ್ಠಾಧಿಕಾರಿ ಸಿ.ಬಿ. ರಿಷ್ಯಂತ್ ಈ ಹಿಂದೆ ಹೇಳಿಕೆ ನೀಡಿದ್ದರು. 'ಘಟನೆಯ ವಿಡಿಯೊ–ಫೋಟೊಗಳಿದ್ದು, ಅವುಗಳನ್ನು ಪರಿಶೀಲಿಸಿ ಆರೋಪಿಗಳನ್ನು ಬಂಧಿಸಲಾಗುವುದು' ಎಂದು ತಿಳಿಸಿದ್ದರು.

ಅದರಂತೆ ಬಂಧನದ ಪ್ರಕ್ರಿಯೆ ಆರಂಭಿಸಲಾಗಿದೆ. ಕೆಲವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದು, ಬಂಧಿತರ ಸಂಖ್ಯೆ ಇನ್ನಷ್ಟು ಏರಿಕೆಯಾಗಲಿದೆ. ಎರಡೂ ಕಡೆಯ ಹಲವರು ಬಂಧನದ ಭಯದಲ್ಲಿ ಈಗಾಗಲೇ ಊರು ಬಿಟ್ಟಿದ್ದಾರೆ ಎಂದು ತಿಳಿದುಬಂದಿದೆ.

ನಾಲ್ವರ ಬಂಧನ: ಹರಿಹರ ತಾಲ್ಲೂಕಿನ ಮಲೇಬೆನ್ನೂರಿನಲ್ಲಿ ಬುಧವಾರ ನಡೆದ ಯುವಕನ ಮೇಲೆ ಹಲ್ಲೆ ಘಟನೆಗೆ ಸಂಬಂಧಿಸಿ ಎರಡೂ ಗುಂಪಿನ 23 ಜನರ ವಿರುದ್ಧ ಪ್ರಕರಣ ದಾಖಲಾಗಿದೆ. ನಾಲ್ವರನ್ನು ಬಂಧಿಸಲಾಗಿದೆ.

'ವಿವಾದ ಮರೆತು ನ್ಯಾಯಾಲಯದ ಆದೇಶ ಪಾಲಿಸೋಣ'

ರಘುಪತಿ ಭಟ್

ಉಡುಪಿ: 'ಹಿಜಾಬ್ ವಿವಾದ ವಿಚಾರದಲ್ಲಿ ಹಿಂದಿನ ಘಟನೆಗಳನ್ನು ಮರೆತು ಕಾಲೇಜುಗಳನ್ನು ಪ್ರಾರಂಭಿಸಲು ಸಹಕರಿಸೋಣ' ಎಂದು ಶಾಸಕ ಹಾಗೂ ಉಡುಪಿ ಸರ್ಕಾರಿ ಪದವಿಪೂರ್ವ ಕಾಲೇಜು ಅಭಿವೃದ್ಧಿ ಸಮಿತಿ ಅಧ್ಯಕ್ಷರೂ ಆಗಿರುವ ರಘುಪತಿ ಭಟ್ ಮನವಿ ಮಾಡಿದರು.

ಗುರುವಾರ ಮಾಧ್ಯಮ ಪ್ರತಿನಿಧಿಗಳ ಜತೆ ಮಾತನಾಡಿದ ಅವರು, 'ಮಕ್ಕಳ ಶೈಕ್ಷಣಿಕ ಭವಿಷ್ಯದ ದೃಷ್ಟಿಯಿಂದ ಧಾರ್ಮಿಕ ಆಚರಣೆಗಳು ಮನೆಗಳಿಗೆ ಸೀಮಿತವಾಗಿರಲಿ. ಅಂತರರಾಷ್ಟ್ರೀಯ ಮಟ್ಟದಲ್ಲಿ ಹಿಜಾಬ್ ವಿವಾದ ಚರ್ಚೆಯಾಗಿದ್ದು, ಎಲ್ಲರೂ ಒಟ್ಟಾಗಿದ್ದೇವೆ ಎಂಬ ಸಂದೇಶ ನೀಡುವುದು ಅಗತ್ಯ' ಎಂದರು.

'ಹಿಜಾಬ್ ಹಾಗೂ ಕೇಸರಿ ಶಾಲು ವಿವಾದ ಪ್ರಕರಣದಲ್ಲಿ ಹೈಕೋರ್ಟ್ ಸೂಚನೆ ಉತ್ತಮವಾಗಿದ್ದು, ಜವಾಬ್ದಾರಿಯುತ ನಿರ್ಣಯವಾಗಿದೆ. ನ್ಯಾಯಾಲಯದ ಆದೇಶವನ್ನು ಎಲ್ಲರೂ ಪಾಲಿಸಬೇಕು' ಎಂದರು.

'ಮುಂದಿನ ವಾರದಿಂದ ಹೈಕೋರ್ಟ್‌ನಲ್ಲಿ ನಿರಂತರವಾಗಿ ಪ್ರಕರಣದ ವಿಚಾರಣೆ ನಡೆಯಲಿದೆ. ಒಂದೂವರೆ ತಿಂಗಳಲ್ಲಿ ವಿದ್ಯಾರ್ಥಿಗಳಿಗೆ ಪರೀಕ್ಷೆ ಎದುರಾಗಲಿದ್ದು, ಶಾಲಾ ಕಾಲೇಜುಗಳಿಗೆ ರಜೆ ನೀಡಿದರೆ ವಿದ್ಯಾರ್ಥಿಗಳ ಭವಿಷ್ಯಕ್ಕೆ ತೊಂದರೆಯಾಗುತ್ತದೆ ಎಂಬ ಉದ್ದೇಶದಿಂದ ನ್ಯಾಯಾಲಯ ಸೂಕ್ತ ನಿರ್ಧಾರ ತೆಗೆದುಕೊಂಡಿದೆ. ವಿದ್ಯಾರ್ಥಿಗಳು ಕಾಲೇಜಿನಲ್ಲಿ ಕೇಸರಿ ಶಾಲು ಹಾಗೂ ಹಿಜಾಬ್ ಧರಿಸಬಾರದು' ಎಂದರು.

'ಬಿಜೆಪಿ ನಾಯಕರ ಮಕ್ಕಳು ಕೇಸರಿ ಶಾಲು ಹಾಕಿದ್ದಾರಾ?'

ಎಚ್‌.ಡಿ. ಕುಮಾರಸ್ವಾಮಿ

ರಾಮನಗರ: 'ಬಿಜೆಪಿ ನಾಯಕರ ಮಕ್ಕಳ್ಯಾರೂ ಕಳೆದ 15 ದಿನದಿಂದ ಕೇಸರಿ ಶಾಲು ಹಾಕಿಕೊಂಡು ಹೋರಾಟ ಮಾಡುತ್ತಿಲ್ಲ. ಅಮಾಯಕ ಮಕ್ಕಳಿಗೆ ಕೇಸರಿ ಶಾಲು ಹಾಕಿಸಿ ಗದ್ದಲ ಎಬ್ಬಿಸುವುದು ಸರಿಯಲ್ಲ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ.ಕುಮಾರಸ್ವಾಮಿ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಚನ್ನಪಟ್ಟಣದಲ್ಲಿ ಗುರುವಾರ ಪತ್ರಕರ್ತರಿಗೆ ಅವರು ಪ್ರತಿಕ್ರಿಯೆ ನೀಡಿದರು. ಉಡುಪಿಯ ಒಂದು ಶಾಲೆಯಲ್ಲಿ ಆರಂಭವಾದ ಈ ಪ್ರಕರಣ ಈಗ ಅಂತರರಾಷ್ಟ್ರೀಯ ಮಟ್ಟದಲ್ಲಿ ಚರ್ಚೆ ಆಗುತ್ತಿದೆ. ದೊಡ್ಡ ದೊಡ್ಡ ಖಾಸಗಿ ಶಾಲೆಗಳಲ್ಲಿ ಈ ಸಂಘರ್ಷ ನಡೆದಿಲ್ಲ. ಸರ್ಕಾರಿ ಶಾಲೆಗಳಲ್ಲೇ ಈ ವಿವಾದ ಭುಗಿಲೆದ್ದಿದೆ. ಬಿಜೆಪಿ–ಕಾಂಗ್ರೆಸ್ ನಾಯಕರ ಮಕ್ಕಳ್ಯಾರೂ ಈ ಶಾಲೆಗಳಲ್ಲಿ ಓದುತ್ತಿಲ್ಲ. ಅವರೆಲ್ಲ ಕಂಡವರ ಮಕ್ಕಳನ್ನು ಬಾವಿಗೆ ತಳ್ಳಿ ತಮಾಷೆ ನೋಡುತ್ತಿದ್ದಾರೆ. ಸರ್ಕಾರಿ ಶಾಲೆಗೆ ಕಳುಹಿಸಿದ ತಮ್ಮ ಮಕ್ಕಳನ್ನು ಈ ರೀತಿ ದುರುಪಯೋಗಪಡಿಸಿಕೊಳ್ಳುವುದನ್ನು ಪೋಷಕರು ಅರ್ಥ ಮಾಡಿಕೊಳ್ಳಬೇಕಿದೆ ಎಂದರು.

ಸುದ್ದಿ 2 ನಿಮಿಷ

'ಶ್ರೀರಾಮನ ಫ್ಯಾಕ್ಟರಿಯಿಂದ ಕೇಸರಿ ಶಾಲು ತರಿಸಿದ್ದೇವೆ'

ಚಿತ್ರದುರ್ಗ: 'ಅಯೋಧ್ಯೆಯ ಶ್ರೀರಾಮನ ಫ್ಯಾಕ್ಟರಿಯಿಂದ ಕೇಸರಿ ಶಾಲುಗಳನ್ನು ಹನುಮಾನ್ ಟ್ರಾನ್ಸ್‌ಪೋರ್ಟ್ ಮೂಲಕ ಕರ್ನಾಟಕಕ್ಕೆ ತರಿಸಿದ್ದೇವೆ' ಎಂದು ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್. ಈಶ್ವರಪ್ಪ ಅವರು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರಿಗೆ ತಿರುಗೇಟು ನೀಡಿದರು.

ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಸೂರತ್‌ನಿಂದ ಸಚಿವರ ಪುತ್ರ ಕೇಸರಿ ಶಾಲುಗಳನ್ನು ತರಿಸಿದ್ದಾರೆ ಎಂದು ಶಿವಕುಮಾರ್ ಹೇಳಿದ್ದಾರೆ. ಅವರಿಗೆ ಕನಕಪುರದ ಬಂಡೆ ಫ್ಯಾಕ್ಟರಿ ಬಗ್ಗೆ ಮಾತ್ರ ಗೊತ್ತಿದೆ. ಕೇಸರಿ ಶಾಲುಗಳನ್ನು ಎಲ್ಲಿಂದ ತರಿಸುತ್ತಾರೆ ಎಂಬುದು ಗೊತ್ತಿಲ್ಲ. ಅಯೋಧ್ಯೆಯಿಂದ ಬಂದ ಕೇಸರಿ ಶಾಲುಗಳು ರಾಜ್ಯದ ಕೋಟಿ ಕೋಟಿ ಯುವಕರ ಹೃದಯ ತಲುಪಿವೆ' ಎಂದರು.

'ರಾಷ್ಟ್ರಧ್ವಜದ ಮೇಲೆ ಗೌರವ ಇಲ್ಲದವರು ರಾಜಕೀಯದಲ್ಲಿ ಇರಬಾರದು ಎಂದು ಹೇಳಿಕೆ ನೀಡಿರುವ ಸಿದ್ದರಾಮಯ್ಯ ಅವರ ತಲೆಯಲ್ಲಿ ಸೆಗಣಿ ಇದೆಯೋ ಗೊತ್ತಿಲ್ಲ. ಕೇಸರಿ ಎಂದರೆ ತ್ಯಾಗ, ಬಲಿದಾನದ ಸಂಕೇತ. ಅವರಿಗೆ ಕೇಸರಿ ಎಂದರೆ ಹಿಂದೂ ಅನ್ನುವುದು ಬಿಟ್ಟರೆ ಬೇರೆ ಗೊತ್ತಿಲ್ಲ' ಎಂದರು.

'ಕುಂದಾಪುರದಲ್ಲಿ ಕೇವಲ ಆರು ವಿದ್ಯಾರ್ಥಿಗಳು ಹಿಜಾಬ್ ಧರಿಸಿ ಕಾಲೇಜಿಗೆ ಹೋಗಿದ್ದೇ ಸಮಸ್ಯೆಗೆ ಕಾರಣವಾಗಿದೆ. ಅವರಿಗೆ ತಿಳಿವಳಿಕೆ ನೀಡುವ ಕೆಲಸ ಆಗಬೇಕಿತ್ತು. ಆದರೆ ಕಾಂಗ್ರೆಸ್ ಮುಸ್ಲಿಂ ನಾಯಕರು ವ್ಯವಸ್ಥಿತ ಸಂಚು ರೂಪಿಸಿದ್ದಾರೆ. ಇದರ ವಿರುದ್ಧ ಹೋರಾಟ ಮಾಡುತ್ತೇವೆ' ಎಂದರು.

'ಭಯೋತ್ಪಾದಕ ಸಂಘಟನೆಗಳ ಕೈವಾಡ'

ಬೆಂಗಳೂರು: 'ಹಿಜಾಬ್ ವಿವಾದದ ಹಿಂದೆ ಅಂತರರಾಷ್ಟ್ರೀಯ ಭಯೋತ್ಪಾದಕ ಸಂಸ್ಥೆಗಳ ಕೈವಾಡವಿದೆ. ಈ ವಿವಾದಕ್ಕೆ ಕಾಂಗ್ರೆಸ್ ಬೆಂಬಲವೂ ಇದೆ' ಎಂದು ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿ ಎಂ.ಪಿ.ರೇಣುಕಾಚಾರ್ಯ ದೂರಿದ್ದಾರೆ.

'ಅಮಾಯಕ ವಿದ್ಯಾರ್ಥಿನಿಯರನ್ನು ಈ ಸಂಘಟನೆಗಳು ಬಳಸಿಕೊಳ್ಳುತ್ತಿವೆ. ಬಿಜೆಪಿ ಸರ್ಕಾರದ ವರ್ಚಸ್ಸು ಹಾಳು ಮಾಡಲು ಈ ವಿಷಯವನ್ನು ಬಡಿದೆಬ್ಬಿಸಲಾಗಿದೆ. ವಿದ್ಯಾರ್ಥಿಗಳ ಮನಸ್ಸು ಹಾಳು ಮಾಡಲಾಗಿದೆ' ಎಂದು ಅವರು ಸುದ್ದಿಗಾರರಿಗೆ ಗುರುವಾರ ತಿಳಿಸಿದರು.

'ಶಾಲಾ- ಕಾಲೇಜುಗಳಲ್ಲಿ ಸಮವಸ್ತ್ರ ವ್ಯವಸ್ಥೆ ಮೊದಲಿನಿಂದಲೂ ಇದೆ. ವಿವಾದದಿಂದಾಗಿ ಅಮಾಯಕ ವಿದ್ಯಾರ್ಥಿಗಳ ಶಿಕ್ಷಣ ಹಾಳಾಗಬಾರದು. ಆದ್ದರಿಂದ ಸಮವಸ್ತ್ರ ಧರಿಸಿ ಶಾಲೆಗೆ ಬರಬೇಕು. ನಾನು ಅಲ್ಪಸಂಖ್ಯಾತರ ವಿರೋಧಿಯಲ್ಲ. ಅಮಾಯಕ ವಿದ್ಯಾರ್ಥಿಗಳ ಶಿಕ್ಷಣಕ್ಕೆ ಭಂಗ ಆಗಬಾರದು. ಆದ್ದರಿಂದ ವಿದ್ಯಾರ್ಥಿನಿಯರು ಸಮವಸ್ತ್ರ ಧರಿಸಿ ಶಾಲೆಗೆ ಬರಬೇಕು' ಎಂದು ಅವರು ಮನವಿ ಮಾಡಿದರು.

ಸ್ವಾಮೀಜಿ ಪಟ್ಟಾಭಿಷೇಕ

ಹೊಸದುರ್ಗ ತಾಲ್ಲೂಕಿನ ಬ್ರಹ್ಮವಿದ್ಯಾನಗರ ಭಗೀರಥ ಪೀಠದಲ್ಲಿ ಗುರುವಾರ ನಡೆದ ಪುರುಷೋತ್ತಮಾನಂದ ಪುರಿ ಸ್ವಾಮೀಜಿ ಪಟ್ಟಾಭಿಷೇಕ ಮಹೋತ್ಸವ ಅಂಗವಾಗಿ ಆಗಮಿಕರಾದ ರಾಜಗೋಪಾಲಾಚಾರ್ ಅವರು ಶ್ರೀಗಳಿಗೆ ಕಿರೀಟಧಾರಣೆ ನೆರವೇರಿಸಿದರು. ಉಪ್ಪಾರ ಅಭಿವೃದ್ಧಿ ನಿಗಮದ ಅಧ್ಯಕ್ಷ ಗಿರೀಶ್ ಉಪ್ಪಾರ, ಸಾಹಿತಿ ಬಾ. ಮೈಲಾರಪ್ಪ ಹಾಗೂ ಸಮಾಜದ ಮುಖಂಡರು ಇದ್ದರು.

ವಾಲ್ಮೀಕಿ ಶ್ರೀ ನಿರಶನ ಆರಂಭ

ಪರಿಶಿಷ್ಟ ಪಂಗಡಕ್ಕೆ ಮೀಸಲಾತಿ ಹೆಚ್ಚಳಕ್ಕೆ ಒತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಶಿಷ್ಟ ಪಂಗಡದ ಮೀಸಲಾತಿಯನ್ನು ಶೇ 7.5ಕ್ಕೆ ಹೆಚ್ಚಿಸುವುದು ಸೇರಿದಂತೆ ವಾಲ್ಮೀಕಿ ನಾಯಕ ಸಮುದಾಯದ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ವಾಲ್ಮೀಕಿ ಗುರುಪೀಠದ ಪ್ರಸನ್ನಾನಂದ ಸ್ವಾಮೀಜಿ ಗುರುವಾರ ಇಲ್ಲಿನ ಫ್ರೀಡಂ ಪಾರ್ಕ್‌ನಲ್ಲಿ ಏಕಾಂಗಿಯಾಗಿ ಅನಿರ್ದಿಷ್ಟಾವಧಿ ಉಪವಾಸ ಸತ್ಯಾಗ್ರಹ ಆರಂಭಿಸಿದರು.

'ಪರಿಶಿಷ್ಟ ಪಂಗಡದಲ್ಲಿ ಹೊಸ ಜಾತಿಗಳನ್ನು ಸೇರ್ಪಡೆಗೊಳಿಸಲಾಗುತ್ತಿದೆ. ಈಗಿನ ಶೇ 3ರ ಮೀಸಲಾತಿ 1956ರ ಜನಗಣತಿ ಆಧರಿಸಿದೆ. ಹೀಗಾಗಿ, 2001ರ ಜನಗಣತಿಯ ಆಧಾರದ ಮೇಲೆ ಮೀಸಲಾತಿ ಹೆಚ್ಚಿಸಬೇಕು ಎಂದು ಒತ್ತಾಯಿಸುತ್ತಿದ್ದೇವೆ. ಈಗಿನ ಜನಗಣತಿಯ ಪ್ರಕಾರ ಪರಿಶಿಷ್ಟ ಪಂಗಡದ ಮೀಸಲು ಪ್ರಮಾಣವನ್ನು ಶೇ 8.5 ಅಥವಾ ಶೇ 9ರಷ್ಟು ನಿಗದಿ ಮಾಡಬೇಕು' ಎಂದು ಸ್ವಾಮೀಜಿ ಪ್ರತಿಪಾದಿಸಿದರು.

'ಈ ಹಿಂದೆಯೇ ಧರಣಿ ನಡೆಸಲು ನಿರ್ಧರಿಸಲಾಗಿತ್ತು. ಮುಖ್ಯಮಂತ್ರಿಯಾಗಿದ್ದ ಬಿ.ಎಸ್. ಯಡಿಯೂರಪ್ಪ ಅವರ ಭರವಸೆ ಮೇರೆಗೆ ಕೈಬಿಡಲಾಗಿತ್ತು. ಆದರೆ, ಇದುವರೆಗೂ ಭರವಸೆ ಈಡೇರಿಲ್ಲ. ಈಗಿನ ಮುಖ್ಯಮಂತ್ರಿ ಅವರು ಸಹ ಸ್ಪಂದಿಸುತ್ತಿಲ್ಲ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

'ಸರ್ಕಾರಗಳು ಕೇವಲ ಭರವಸೆ ನೀಡುವುದರಲ್ಲಿ ಸಮಯ ವ್ಯರ್ಥ ಮಾಡುತ್ತಿವೆ. ಆದರೆ, ಸಮಾಜದ ಬೇಡಿಕೆಗಳಿಗೆ ಸ್ಪಂದಿಸುತ್ತಿಲ್ಲ. ಕೋವಿಡ್ ಕಾರಣದಿಂದ ಈಗ ಏಕಾಂಗಿಯಾಗಿ ಹೋರಾಟ ಆರಂಭಿಸಿದ್ದೇವೆ. ಮುಂದಿನ ದಿನಗಳಲ್ಲಿ ಸಮಾಜ ಬಾಂಧವರ ಜತೆ ಬೃಹತ್ ಹೋರಾಟ ರೂಪಿಸಲಾಗುವುದು' ಎಂದರು.

'ಮೀಸಲಾತಿಗೆ ಸಂಬಂಧಿಸಿದಂತೆ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ್ ದಾಸ್ ವರದಿಯನ್ನು ಅನುಷ್ಠಾನಗೊಳಿಸಬೇಕು. ನಕಲಿ ಜಾತಿ ಪ್ರಮಾಣ ಪತ್ರದ ಹಾವಳಿಗೆ ಕಡಿವಾಣ ಹಾಕಬೇಕು ಮತ್ತು ತಕ್ಷಣ ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡಬೇಕು ಹಾಗೂ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮಕ್ಕೆ ಬೇಡಿಕೆಗೆ ತಕ್ಕಂತೆ ಅನುದಾನ ಮಂಜೂರು ಮಾಡಬೇಕು' ಎಂದು ಆಗ್ರಹಿಸಿದರು.

ಶಾಸಕ ರಾಜುಗೌಡ ಸೇರಿಸಮಾಜದ ಹಲವು ಮುಖಂಡರು ಧರಣಿ ಸ್ಥಳಕ್ಕೆ ಭೇಟಿ ನೀಡಿ ಸ್ವಾಮೀಜಿಗಳಿಗೆ ಬೆಂಬಲ ಸೂಚಿಸಿದರು.



ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಗುರುವಾರ ವಾಲ್ಮೀಕಿ ಗುರುಪೀಠದ ಪ್ರಸನ್ನಾನಂದ ಸ್ವಾಮೀಜಿ ಉಪವಾಸ ಸತ್ಯಾಗ್ರಹ ಆರಂಭಿಸಿದರು –ಪ್ರಜಾವಾಣಿ ಚಿತ್ರ

ವಿದ್ಯಾರ್ಥಿಗಳ ಮಾಹಿತಿ ಸೋರಿಕೆ: ಕ್ರಮಕ್ಕೆ ಮನವಿ

ಬೆಂಗಳೂರು: ಉಡುಪಿ ಕಾಲೇಜಿನ ವಿದ್ಯಾರ್ಥಿಗಳ ವೈಯಕ್ತಿಕ ಮಾಹಿತಿಗಳ ಸೋರಿಕೆ ಮತ್ತು ಸಂಬಂಧಿಸಿದ ವಿದ್ಯಮಾನಗಳನ್ನು ಗಂಭೀರವಾಗಿ ಪರಿಗಣಿಸಿ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳುವಂತೆ ಒತ್ತಾಯಿಸಿ ರಾಜ್ಯ ಮಹಿಳಾ ಆಯೋಗಕ್ಕೆ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ನಿಯೋಗ ಮನವಿ ಸಲ್ಲಿಸಿದೆ.

'ನ್ಯಾಯಾಲಯಕ್ಕೆ ಹೋದ ಮುಸ್ಲಿಂ ಸಮುದಾಯದ ಹೆಣ್ಣುಮಕ್ಕಳ ಖಾಸಗಿ ವಿವರಗಳನ್ನು ಸಾರ್ವಜನಿಕರಿಗೆ ಒದಗಿಸಿದ ಕಾಲೇಜಿನ ಮೇಲೆ ಕ್ರಮ ಜರುಗಿಸಲು, ಹೆಣ್ಣುಮಕ್ಕಳು ಮತ್ತವರ ಪೋಷಕರ ಸುರಕ್ಷತೆಯ ಬಗ್ಗೆ ಗಮನವಹಿಸಲು ಹಾಗೂ ಕರ್ನಾಟಕದ ಹೆಣ್ಣುಮಕ್ಕಳ ಶಿಕ್ಷಣದ ಹಕ್ಕು ರಕ್ಷಿಸಬೇಕು' ಎಂದೂ ಮಹಿಳಾ ಆಯೊಗದ ಅಧ್ಯಕ್ಷರಿಗೆ ನೀಡಿದ ಮನವಿಯಲ್ಲಿ ನಿಯೋಗ ಆಗ್ರಹಿಸಿದೆ.

ನಿಯೋಗದಲ್ಲಿ ಸಂಘಟನೆಯ ರಾಜ್ಯ ಘಟಕದ ಅಧ್ಯಕ್ಷೆ ದೇವಿ, ಉಪಾಧ್ಯಕ್ಷರಾದ ವಿಮಲಾ.ಕೆ.ಎಸ್. ಮತ್ತು ಲಕ್ಷ್ಮಿ ಕೆ.ಎಸ್ ಮತ್ತು 'ಗಮನ' ಮಹಿಳಾ ಸಂಘಟನೆಯ ಮಧು ಭೂಷಣ್ ಇದ್ದರು.

ಸರ್ವಪಕ್ಷ ಸಭೆಗೆ ಹೊರಟ್ಟಿ ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಿಜಾಬ್ ಮತ್ತು ಕೇಸರಿ ವಸ್ತ್ರ ವಿವಾದ ರಾಜ್ಯದಲ್ಲಿ ಮುಂದಿನ ದಿನಗಳಲ್ಲಿ ಗಂಭೀರ ಪರಿಸ್ಥಿತಿ ನಿರ್ಮಾಣ ಮಾಡುವ ಅಪಾಯವಿರುವುದರಿಂದ, ಅದನ್ನು ತಿಳಿಗೊಳಿಸಲು ಪಾಲಕರು, ಸರ್ವಪಕ್ಷಗಳ ಮುಖಂಡರು ಮತ್ತು ಸಾರ್ವಜನಿಕ ಜೀವನದಲ್ಲಿ ಒಳ್ಳೆಯದನ್ನು ಬಯಸುವ ವ್ಯಕ್ತಿಗಳನ್ನು ಒಳಗೊಂಡವರ ತುರ್ತುಸಭೆ ಕರೆಯಬೇಕು ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಮುಖ್ಯಮಂತ್ರಿಗೆ ಮನವಿ ಮಾಡಿದ್ದಾರೆ.

ಈ ಸಂಬಂಧ ಪತ್ರ ಬರೆದಿರುವ ಅವರು, 'ಕುವೆಂಪು ಅವರು ಹೇಳಿದಂತೆ ನಮ್ಮ ರಾಜ್ಯ ಸರ್ವಜನಾಂಗದ ಶಾಂತಿಯ ತೋಟವಾಗಿ ಉಳಿಯಬೇಕು. ಯಾವುದೇ ಕಾರಣಕ್ಕೂ ಸಮಾಜ ಸ್ವಾಸ್ಥ್ಯ ಹಾಳಾಗಬಾರದು ಎಂಬುದೇ ನನ್ನ ಉದ್ದೇಶ. ನಾನು ಹೇಳಿದ ಎಲ್ಲ ವಿಚಾರಗಳನ್ನು ಗಂಭೀರವಾಗಿ ಪರಿಗಣಿಸಿ ಇದಕ್ಕೆ ಒಂದು ಶಾಂತಿಯುತ ಸಮಾಧಾನಕರ ದಾರಿ ಹುಡುಕಿ ರಾಜ್ಯದಲ್ಲಿ ಒಳ್ಳೆಯ ವಾತಾವರಣ ನಿರ್ಮಾಣ ಮಾಡಬೇಕು' ಎಂದು ಒತ್ತಾಯಿಸಿದ್ದಾರೆ.

'ಈಗ ಪ್ರಕರಣವು ನ್ಯಾಯಾಲಯದ ಮುಂದಿದೆ. ನ್ಯಾಯಾಲಯವು ನೀಡುವ ತೀರ್ಪಿನ ಮೇಲೆ ನಂಬಿಕೆ ಇಡಬೇಕಾಗುತ್ತದೆ. ಆದರೆ, ಈ ವಿವಾದದಿಂದ ಮಕ್ಕಳ ಮನಸ್ಸಿನ ಮೇಲೆ ಗಂಭೀರ ಪರಿಣಾಮ ಆಗಲಿದೆ. ದ್ವೇಷ, ಸಿಟ್ಟು ಮನಸ್ಸಿನಲ್ಲಿ ಉಳಿಯಬಹುದು. ಅದು ಯಾವುದಾದರೂ ಒಂದು ದಿನ ಸ್ಫೋಟಗೊಳ್ಳುವ ಅಪಾಯವೂ ಇದೆ. ಮುಂದಾಲೋಚನೆಯಿಂದ ಚರ್ಚಿಸಿ ಸೂಕ್ತ ಪರಿಹಾರ ಕಂಡುಕೊಳ್ಳುವುದು ಸೂಕ್ತ. ಎಲ್ಲರೂ ಒಟ್ಟಾಗಿ ಶಾಂತಿ ಕಾಪಾಡುವುದು, ಮಕ್ಕಳ ಭವಿಷ್ಯದ ಬಗ್ಗೆ ಚಿಂತನೆ ನಡೆಸುವುದು ಅತಿ ಮುಖ್ಯ. ಮಕ್ಕಳ ಮಧ್ಯೆ ದ್ವೇಷ, ಅಸೂಯೆ ಬೆಳೆಯಲು ಅವಕಾಶ ನೀಡಬಾರದು' ಎಂದು ಹೇಳಿದ್ದಾರೆ.

ಬಸವರಾಜ ಹೊರಟ್ಟಿ

'ತಂದೆ-ತಾಯಿ ತಮ್ಮ ಮಕ್ಕಳ ಸಲುವಾಗಿ ಸರ್ವಸ್ವವನ್ನು ತ್ಯಾಗ ಮಾಡಿರುತ್ತಾರೆ. ಆ ತ್ಯಾಗದ ಪ್ರತಿಫಲ ಮಕ್ಕಳ ಭವಿಷ್ಯ ಉಜ್ವಲವಾಗಲಿ, ತಮ್ಮ ಮಕ್ಕಳು ನಾಡಿನ ಶ್ರೇಷ್ಠ ವ್ಯಕ್ತಿಗಳ ಸಾಲಿನಲ್ಲಿ ನಿಲ್ಲುವುದನ್ನು ಕಾತರದಿಂದ ನೋಡಿ ಆನಂದಪಡಬೇಕೆನ್ನುತ್ತಾರೆ. ಅಂತಹ ಆಸೆಗೆ ನಾವು ಮಣ್ಣೆರೆಚಿದಂತಾಗುತ್ತದೆ. ಪಾಲಕರು ರಾಜಕೀಯ ಬದಿಗಿಟ್ಟು ತಮ್ಮ ಮಕ್ಕಳಿಗೆ ಜವಾಬ್ದಾರಿಯಿಂದ ಇರುವಂತೆ ಮಾರ್ಗದರ್ಶನ ಮಾಡಬೇಕು. ಇಲ್ಲವಾದರೆ ಶಾಲಾ–ಕಾಲೇಜುಗಳು ರಣರಂಗವಾಗಿ ಮಾರ್ಪಾಡಾಗುವ ಎಲ್ಲ ಸೂಚನೆಗಳಿವೆ' ಎಂದು ಆತಂಕ ವ್ಯಕ್ತಪಡಿಸಿದ್ದಾರೆ.

ವಿವಾದಿತ ಚಿತ್ರ ಹಾಕಿದ್ದ ಯುವಕನಿಗೆ ಚೂರಿ ಇರಿತ

ನಲ್ಲೂರು (ಚನ್ನಗಿರಿ ತಾ.): ತಾಲ್ಲೂಕಿನ ನಲ್ಲೂರು ಗ್ರಾಮದಲ್ಲಿ ಬುಧವಾರ ರಾತ್ರಿ ವಾಟ್ಸ್‌ಆ್ಯಪ್ ಸ್ಟೇಟಸ್‌ನಲ್ಲಿ ವಿವಾದಾತ್ಮಕ ಚಿತ್ರವಿದ್ದ ಸ್ಟೇಟಸ್ ಹಾಕಿದ್ದ ಯುವಕನ ಮನೆಯ ಮೇಲೆ 300 ಜನರಿದ್ದ ಗುಂಪು ದಾಳಿ ನಡೆಸಿ, ಯುವಕನಿಗೆ ಚೂರಿಯಿಂದ ಇರಿದಿದೆ.

ಗ್ರಾಮದ ಕ್ಯಾಂಪ್ ನಿವಾಸಿ ನವೀನ್ (25) ಗಾಯಗೊಂಡಿದ್ದಾರೆ. ಮುಸ್ಲಿಮರು ಬುಧವಾರ ರಾತ್ರಿ ಬಡಿಗೆ, ಮಾರಕಾಸ್ತ್ರಗಳೊಂದಿಗೆ ಯುವಕನ ಮನೆಯ ಮುಂದೆ ಸೇರಿದ್ದರು. ಪಕ್ಕದ ಮನೆಯ ಸರೋಜಮ್ಮ (60) ಎಂಬುವರ ಮೇಲೆಯೂ ಹಲ್ಲೆ ಮಾಡಿದ್ದಾರೆ. ಮನೆಯಲ್ಲಿದ್ದ ಇನ್ನೂ ಮೂವರಿಗೆ ಗಾಯಗಳಾಗಿವೆ. ನವೀನ್ ಹಾಗೂ ಸರೋಜಮ್ಮ ಅವರನ್ನು ಹೆಚ್ಚಿನ ಚಿಕಿತ್ಸೆಗಾಗಿ ದಾವಣಗೆರೆಯ ಆಸ್ಪತ್ರೆಗೆ ದಾಖಲಿಸಲಾಗಿದೆ.

ಪೊಲೀಸರು ಸ್ಥಳಕ್ಕೆ ಬಂದು ಮನೆಯ ಮುಂದೆ ಸೇರಿದ್ದ ಮುಸ್ಲಿಂ ಯುವಕರನ್ನು ಚದುರಿಸಿದರು. ಶಾಸಕ ಮಾಡಾಳ್ ವಿರೂಪಾಕ್ಷಪ್ಪ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿ.ಬಿ. ರಿಷ್ಯಂತ್, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ರಾಮಗೊಂಡ ಬಸರಗಿ, ಡಿವೈಎಸ್‌ಪಿ ಡಾ. ಸಂತೋಷ್ ಗ್ರಾಮಕ್ಕೆ ಭೇಟಿ ನೀಡಿ ಶಾಂತಿ ಸಭೆ ನಡೆಸಿದರು.

'ಸಮವಸ್ತ್ರ ನೀತಿ ಧಿಕ್ಕರಿಸಿದ್ದು ಸರಿಯೇ'

ಚಿತ್ರದುರ್ಗ: 'ಒಬ್ಬರು ಸೂಟು–ಬೂಟು ಧರಿಸಿದರೆ, ಬಡವ ಹರಕು ಬಟ್ಟೆ ಧರಿಸುತ್ತಾನೆ. ಆ ಕಾರಣಕ್ಕೆ ಸಮಾನತೆ ಉದ್ದೇಶದಿಂದ ಸಮವಸ್ತ್ರ ನೀತಿ ರೂಪಿಸಲಾಗಿದೆ. ಆದರೆ ಸಮವಸ್ತ್ರ ನೀತಿಯನ್ನು ಧಿಕ್ಕರಿಸಿ ಧರ್ಮದ ಹಿಜಾಬ್ ಧರಿಸುವುದು ಎಷ್ಟರ ಮಟ್ಟಿಗೆ ಸರಿ. ರಾಜ್ಯದ ಕಾಲೇಜುಗಳಲ್ಲಿ ಇಷ್ಟು ದಿನ ಇಲ್ಲದ ವ್ಯವಸ್ಥೆಗೆ ಪ್ರೇರಣೆ ಕೊಟ್ಟವರು ಯಾರು' ಎಂದು ಲೋಕೋಪಯೋಗಿ ಸಚಿವ ಸಿ.ಸಿ.ಪಾಟೀಲ ಪ್ರಶ್ನಿಸಿದರು.

ನಗರದಲ್ಲಿ ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಹಿಜಾಬ್, ಕೇಸರಿ ಶಾಲು ವಿವಾದ ನ್ಯಾಯಾಲಯದಲ್ಲಿರುವ ಕಾರಣ ಆ ವಿಷಯವನ್ನು ವಿಮರ್ಶಿಸಲು ಹೋಗುವುದಿಲ್ಲ. ಕೋರ್ಟ್ ತೀರ್ಪಿಗೆ ಬದ್ಧರಾಗಿ ಕೆಲಸ ನಿರ್ವಹಣೆ ಮಾಡುತ್ತೇವೆ' ಎಂದರು.

'ಹಿಜಾಬ್, ಕೇಸರಿ ಶಾಲು ಗಲಾಟೆಗೆ ಕಾರಣ ಯಾರೆಂದು ಎಲ್ಲರಿಗೂ ಗೊತ್ತಿದೆ. ಆದ್ದರಿಂದ ವಿದ್ಯಾರ್ಥಿಗಳು ವಿದ್ಯಾಭ್ಯಾಸದ ಕಡೆ ಗಮನಹರಿಸಬೇಕು' ಎಂದು ಮನವಿ ಮಾಡಿದರು.

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳ ಚರಂಡಿ ಮಂಡಳಿ
ಮುಖ್ಯ ಅಭಿಯಂತರರವರ ಕಾರ್ಯಾಲಯ,
ಜಲಮಂಡಳಿ ಆವರಣ, ಸರ್.ಎಂ. ವಿಶ್ವೇಶ್ವರಯ್ಯ ರಸ್ತೆ, ಧಾರವಾಡ–580001.
ದೂರವಾಣಿ :0836–2447090 ಫ್ಯಾಕ್ಸ್ : 0836–2446890

ಅಲ್ಪಾವಧಿ ಟೆಂಡರ್ ಪ್ರಕಟಣೆ (ಎಲೆಕ್ಟ್ರಾನಿಕ್ ಟೆಂಡರಿಂಗ್ ವಿಧಾನ ಮುಖಾಂತರ ಮಾತ್ರ)

ಈ ಕೆಳಗಿನ ಕಾಮಗಾರಿಗೆ ಅರ್ಹ ಏಜೆನ್ಸಿ/ಗುತ್ತಿಗೆದಾರರಿಂದ ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ (http://eproc.karntaka.gov.in) ಮೂಲಕ ಕೆಳಕಂಡ ಇಡುಗಂಟು ಟೆಂಡರ್ ಆಹ್ವಾನಿಸಲಾಗಿದೆ.
ಕಾಮಗಾರಿಯ ಹೆಸರು: ಮಾನ್ಯ ರಾಷ್ಟ್ರೀಯ ಹಸಿರು ನ್ಯಾಯಾಧೀಕರಣ ಕಾರ್ಯಕ್ರಮದಡಿಯಲ್ಲಿ ಕಾರವಾರ ನಗರಕ್ಕೆ ಅಲ್ಪಾವಧಿ ಒಳಚರಂಡಿ ವ್ಯವಸ್ಥೆ ಕಲ್ಪಿಸುವುದು ಹಾಗೂ ಒಂದು ವರ್ಷದ ದೋಷ ಮತ್ತು ಹೊಣೆಗಾರಿಕೆ ಸೇರಿ 5 ವರ್ಷಗಳಿಗೆ ನಿರ್ವಹಣೆ ಮತ್ತು ದುರಸ್ತಿ ಕಾಮಗಾರಿ, ಬಿಡ್‌ಗೆ ಇಟ್ಟ ಬಂಡವಾಳ ಮೊತ್ತ ರೂ.1735.35 ಲಕ್ಷಗಳು; ನಿರ್ವಹಣೆ ಮತ್ತು ದುರಸ್ತಿ ಮೊತ್ತ ರೂ.162.89 ಲಕ್ಷಗಳು. ಹೆಚ್ಚಿನ ವಿವರಗಳಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಡುವುದು.
ವರ್ಕ್–ಇಂಡೆಂಟ್/3046/4ನೇ ಕರೆ
ಟೆಂಡರ್ ದಿನಾಂಕಗಳು:
1) ಬಿಡ್ ದಾಖಲೆಗಳನ್ನು ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಡೌನಲೋಡ್ ಮಾಡಿಕೊಳ್ಳುವ ದಿನಾಂಕ ಮತ್ತು ಸಮಯ 11–02–2022 11:00 ಗಂಟೆಯ ನಂತರ 2) ಟೆಂಡರ್ ಆಕ್ಷೇಪಣೆ / ಸ್ಪಷ್ಟೀಕರಣಗಳಿಗಾಗಿ ನಿಗದಿಪಡಿಸಿದ ದಿನಾಂಕ ಮತ್ತು ಸಮಯ 18–02–2022 11:00 ಗಂಟೆಗೆ 3) ಟೆಂಡರ್ ಪೂರ್ವ ಸಭೆ ದಿನಾಂಕ 18–02–2022 11:00 ಗಂಟೆಗೆ 4) ಬಿಡ್ ಸಲ್ಲಿಸಲು / ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ಸಮಯ25–02–2022 17:30 ಗಂಟೆಯ ವರೆಗೆ 5) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ 28–02–2022 11:00 ಗಂಟೆಯ ನಂತರ
ಹೆಚ್ಚಿನ ವಿವರಗಳಿಗಾಗಿ ಮುಖ್ಯ ಅಭಿಯಂತರು, ಕನನೀಸ ಮತ್ತು ಒಚ ಮಂಡಳಿ, ಧಾರವಾಡ ಕಚೇರಿಯನ್ನು ದಯವಿಟ್ಟು ಸಂಪರ್ಕಿಸಬಹುದು.
ಸಹಿ/–(ಕೆ. ವಿ. ಶ್ರೀಕೇಶವ)
ಮುಖ್ಯ ಅಭಿಯಂತರು
ಕ.ನ.ನೀ.ಸ. ಮತ್ತು ಒ.ಚ. ಮಂಡಳಿ, ಧಾರವಾಡ
ವಾ.ಸಾ.ಇ./ಧಾರವಾಡ/1008/2021–22ದೇಶಪಾಂಡೆಪಬ್ಲಿಸಿಟಿ

ರಾಯಚೂರು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ ನಿ.,ರಾಯಚೂರು
ಕ್ರ.ಸಂ:ಆರ್‌ಡಿಸಿಸಿ: ಪ್ರ.ಕಾ/ಆ:ಸಿ/2021–22/4618 ದಿನಾಂಕ:10/02/2022
"ಇ–ಪ್ರೊಕ್ಯೂರ್‌ಮೆಂಟ್‌ಟೆಂಡರ್ ಪ್ರಕಟಣೆ"
Tender No. DOC/2021-22/BD/WORK_INDENT512and DOC/2021-22/BD/WORK_INDENT513
ಟೆಂಡರ ಸಂಖ್ಯೆ: DOC/2021-22/BD/WORK_INDENT512 ಮತ್ತು DOC/2021-22/BD/WORK_INDENT 513ರ ಮೂಲಕ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ರಾಯಚೂರು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ (ನಿ) ರಾಯಚೂರು ಇವರು ಈ ಕೆಳಕಂಡ ಕಾಮಗಾರಿಗಾಗಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಟೆಂಡರ್ ಸಂಖ್ಯೆ	ಕಾಮಗಾರಿ ವಿವರ	ಟೆಂಡರ್ ಶೆಡ್ಯೂಲ್
DOC/2021-22/BD/ WORK_INDENT512	Construction of Branch Banking Building for RDCC Bank in Plot No. 01 Of Sy. No. 59 Situated At APMC Yard Kukanur Dist: Koppal	ಇ–ಟೆಂಡರ್ ಸಲ್ಲಿಸಲು ಪ್ರಾರಂಭ ದಿನಾಂಕ :10–02–2022. ಇ–ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 11–03–2022.
DOC/2021-22/BD/ WORK_INDENT513	Construction of Branch Banking Building for RDCC Bank in Plot No. 93A Of Sy. No. 4/1 &5/E Situated At APMC Yard Kushtagi Dist : Koppal	ಇ–ಟೆಂಡರ್ ಪ್ರಾರಂಭ ದಿನಾಂಕ: 10–02–2022. ಇ–ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 11–03–2022.

ಟೆಂಡದಾರರು ಅನ್‌ಲೈನ್ ಮುಖಾಂತರ e-Procurement ಪೋರ್ಟಲ್‌ನಲ್ಲಿ ಪ್ರಕಟಿಸಿದ ನಿಗದಿತ ದಿನಾಂಕದೊಳಗೆ ಟೆಂಡರ್‌ನ್ನು ಸಲ್ಲಿಸತಕ್ಕದ್ದುಮತ್ತುಹೆಚ್ಚಿನ ವಿವರಗಳಿಗಾಗಿ http://eproc.karnataka.gov.in ರ ಪೋರ್ಟಲ್‌ನಿಂದ ಟೆಂಡರ ಡಾಕ್ಯೂಮೆಂಟನ್ನು ಡೌನ್‌ಲೋಡ್ ಮಾಡಿಕೊಳ್ಳತಕ್ಕದ್ದು.
ಸಹಿ/– (ಐ.ಎಸ್. ಗಿರಡ್ಡಿ) ಮುಖ್ಯಕಾರ್ಯನಿರ್ವಹಣಾಧಿಕಾರಿಗಳು,
ಅರ್.ಡಿ.ಸಿ.ಸಿ ಬ್ಯಾಂಕ್ ನಿ.,ರಾಯಚೂರು

ಗೋಸಾಯಿ ಮಹಾಸಂಸ್ಥಾನ ಮಠ ನಗರದಲ್ಲಿ ಗುರುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ (ಎಡದಿಂದ) ಅಯೋಧ್ಯೆಯ ವೇದಾಂತಾಚಾರ್ಯ ಸತ್ಯನಾರಾಯಣ ಮಹಾರಾಜ್, ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ, ಕಾಶಿಯ ವೇದಾಂತಾಚಾರ್ಯ ಸ್ವಾಮಿ ಸೋಹಂಚೈತನ್ಯ ಪುರಿ ಮಹಾರಾಜ್ ಹಾಗೂ ಎಲ್‌.ಎ.ರವಿಸುಬ್ರಹ್ಮಣ್ಯ ಅವರು ಮಂಜುನಾಥ ಸ್ವಾಮೀಜಿ ಅವರಿಗೆ ಪುಷ್ಪಾರ್ಚನೆ ಮಾಡಿದರು –ಪ್ರಜಾವಾಣಿ ಚಿತ್ರ

'ಸಹೋದರ ಭಾವನೆಯಿಂದ ದೇಶಕ್ಕೆ ಭವಿಷ್ಯ'

ಬೆಂಗಳೂರು: 'ಭಾರತದಲ್ಲಿ ಇರುವವರೆಲ್ಲ ಅಣ್ಣ–ತಮ್ಮಂದಿರು, ಅಕ್ಕ–ತಂಗಿಯರು ಎಂಬ ಭಾವನೆಯಲ್ಲಿ ಬದುಕಿದರೆ ಮಾತ್ರ ದೇಶಕ್ಕೆ ಭವಿಷ್ಯ ಇರಲಿದೆ' ಎಂದು ಹುಕ್ಕೇರಿ ಮಠದ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ ತಿಳಿಸಿದರು.

ಗವಿಪುರದ ಗೋಸಾಯಿ ಮಹಾ ಸಂಸ್ಥಾನ ಮಠದ ನೂತನ ಪೀಠಾಧಿಪತಿ ಮಂಜುನಾಥ ಸ್ವಾಮೀಜಿ ಅವರ ಪಟ್ಟಾಭಿಷೇಕ ಮಹೋತ್ಸವ ಸಮಾರಂಭದಲ್ಲಿ ಮಾತನಾಡಿದರು. 'ಧರ್ಮದ ವಿಚಾರವಾಗಿ ಕೆಲ ದಿನಗಳಿಂದ ನಡೆಯುತ್ತಿರುವ ಬೆಳವಣಿಗೆ ಕಳವಳಕಾರಿಯಾಗಿದೆ. ಎಲ್ಲರೂ ಸಹೋದರ ಭಾವನೆಯಿಂದ ಬದುಕಬೇಕು. ಧರ್ಮಕ್ಕೆ ಅನ್ಯಾಯವಾದಾಗ ತಲವಾರು ಎತ್ತಲೂ ಮರಾಠರು ಹಿಂಜರಿಯುವುದಿಲ್ಲ. ಶಿವಾಜಿ ಮಹಾರಾಷ್ಟ್ರಕ್ಕೆ ಮಾತ್ರ ಸೀಮಿತ ಆದವರಲ್ಲ. ಅವರು ಇಡೀ ರಾಷ್ಟ್ರಕ್ಕೆ ಪ್ರೇರಣೆಯಾಗಿದ್ದಾರೆ' ಎಂದರು.

ಶಾಸಕ ಎಲ್‌.ಎ.ರವಿಸುಬ್ರಹ್ಮಣ್ಯ, 'ಹಿಂದಿನ ಜನ್ಮದ ಸುಕೃತದಿಂದ ಮಾನವ ಜನ್ಮ ಲಭ್ಯವಾಗಿದೆ. ನಾವು ಹೇಗೆ ನಡೆದುಕೊಳ್ಳಬೇಕು ಎನ್ನುವುದನ್ನು ತಿಳಿಯಲು ಗುರುಗಳ ಮಾರ್ಗದರ್ಶನ ಅಗತ್ಯ. ಆಧುನಿಕ ಪ್ರಪಂಚದಲ್ಲಿ ಪರಿಸ್ಥಿತಿ ಬದಲಾಗುತ್ತಿದೆ. ಜನರು ಬೇರೆ ಬೇರೆ ದಾರಿ ಹಿಡಿಯುತ್ತಿದ್ದಾರೆ. ನಮ್ಮ ಸಂಸ್ಕೃತಿ ಮತ್ತು ಪರಂಪರೆ ಉಳಿಯಬೇಕು. ನಾವು ಆಚಾರವಂತರಾಗಿ ಮಕ್ಕಳಿಗೆ ಸಂಸ್ಕಾರ ನೀಡಬೇಕು' ಎಂದು ತಿಳಿಸಿದರು.

ಗವಿಗಂಗಾಧರೇಶ್ವರ ದೇವಸ್ಥಾನದ ಪ್ರಧಾನ ಅರ್ಚಕ ಸೋಮಸುಂದರ್ ದೀಕ್ಷಿತ, 'ಮಠಕ್ಕೆ ನೂತನ ಸ್ವಾಮೀಜಿ ಅವರ ಪಟ್ಟಾಭಿಷೇಕ ಮಹೋತ್ಸವಕ್ಕೆ ಚಾಲನೆ ದೊರೆತಿದೆ. ಇದೇ 14ರಂದು ಪಟ್ಟಾಭಿಷೇಕ ನೆರವೇರುತ್ತದೆ. ಜ್ಞಾನೇಶ್ವರಿ ಪಾರಾಯಣ ಸೇರಿದಂತೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳನ್ನು ನಡೆಸಲಾಗುತ್ತದೆ. ಕಾಶಿ, ಹರಿದ್ವಾರ ಸೇರಿದಂತೆ ದೇಶದ ವಿವಿಧೆಡೆಯಿಂದ ಮಠಾಧೀಶರು ಬರಲಿದ್ದಾರೆ' ಎಂದು ಹೇಳಿದರು.

ಸಂಕ್ಷಿಪ್ತ ಸುದ್ದಿ

ಮೈಸೂರಿನಲ್ಲಿ ನಿಷೇಧಾಜ್ಞೆ ಜಾರಿ

ಮೈಸೂರು: ನಗರದಲ್ಲಿ ಫೆ. 11ರಂದು ಬೆಳಿಗ್ಗೆ 6 ರಿಂದ ರಾತ್ರಿ 10 ಗಂಟೆಯವರೆಗೂ ನಿಷೇಧಾಜ್ಞೆಯನ್ನು ಜಾರಿಗೊಳಿಸಲಾಗಿದೆ. ಈ ಅವಧಿಯಲ್ಲಿ ಎಲ್ಲ ರೀತಿಯ ಪ್ರತಿಭಟನೆ ಹಾಗೂ ಮೆರವಣಿಗೆಗಳನ್ನು ನಿಷೇಧಿಸಿ ಕಮಿಷನರ್ ಡಾ.ಚಂದ್ರಗುಪ್ತ ಆದೇಶ ಹೊರಡಿಸಿದ್ದಾರೆ.

'ಗೊಮ್ಮಟೇಶ್ವರ ಮೂರ್ತಿ ಕುರಿತು ದಿ ನ್ಯೂ ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಪಕ್ಷದ ಅಧ್ಯಕ್ಷ ಅಯೂಬ್‌ಖಾನ್ ಅವರು ಅವಹೇಳನಕಾರಿಯಾಗಿ ಮಾತನಾಡಿದ್ದಾರೆ ಎಂದು ಆರೋಪಿಸಿ ನಗರದಲ್ಲಿ ಬೃಹತ್ ಪ್ರತಿಭಟನಾ ಜಾಥಾಗೆ ಕರೆ ನೀಡಿರುವ ಸಂದೇಶ ವೈರಲ್ ಆಗಿರುವುದು ಹಾಗೂ ಹಿಜಾಬ್ ಬೆಂಬಲಿಸಿ ಈದ್ಗಾ ಮೈದಾನದಲ್ಲಿ ಪ್ರತಿಭಟನೆ ನಡೆಯಲಿದೆ ಎಂಬ ವದಂತಿ ಆಧರಿಸಿ ನಿಷೇಧಾಜ್ಞೆ ಹೊರಡಿಸಲಾಗಿದೆ' ಎಂದು ಮೂಲಗಳು ತಿಳಿಸಿವೆ.

ಮುಸ್ಕಾನ್‌ಗೆ ಬಹುಮಾನ: ದೂರು

ಮಂಡ್ಯ: 'ಪಿಇಎಸ್ ಕಾಲೇಜು ಆವರಣದಲ್ಲಿ ಅಲ್ಲಾಹು ಅಕ್ಬರ್ ಘೋಷಣೆ ಕೂಗಿದ ವಿದ್ಯಾರ್ಥಿನಿ ಬೀಬಿ ಮುಸ್ಕಾನ್ ಖಾನ್‌ಗೆ ಬಹುಮಾನ ಘೋಷಿಸಿದ ಸಂಘಟನೆಗಳ ವಿರುದ್ಧ ಕ್ರಮ ಜರುಗಿಸಬೇಕು' ಎಂದು ಒತ್ತಾಯಿಸಿ ನರೇಂದ್ರ ಮೋದಿ ವಿಚಾರ ಮಂಚ್ ಕಾರ್ಯಕರ್ತರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗೆ ಬುಧವಾರ ದೂರು ನೀಡಿದ್ದಾರೆ.

'ಹಿಜಾಬ್– ಕೇಸರಿ ಶಾಲು ವಿವಾದದ ಹಿಂದೆ ಜಮಾತೆ ಹಿಂದ್ ಸೇರಿ ಹಲವು ಸಂಘಟನೆಗಳ ಕೈವಾಡವಿದೆ. ವಿದ್ಯಾರ್ಥಿನಿಗೆ ಬಹುಮಾನ ನೀಡಲು ವಿದೇಶಿ ಹಣ ಬಳಕೆಯಾಗುತ್ತಿರುವ ಶಂಕೆ ಇದೆ. ಹೀಗಾಗಿ ಸಮಗ್ರ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಬೇಕು' ಎಂದು ಒತ್ತಾಯಿಸಿ ವಿಚಾರ ಮಂಚ್ ಸದಸ್ಯರಾದ ಸಿ.ಟಿ.ಮಂಜುನಾಥ್, ಶಿವಕುಮಾರ್ ಆರಾಧ್ಯ, ಶಿವು ಅವರು ಒತ್ತಾಯಿಸಿದ್ದಾರೆ.

ವಿದ್ಯಾರ್ಥಿನಿಗೆ ಕೇರಳ ಮುಸ್ಲಿಂ ಕಲ್ಚರಲ್ ಸೆಂಟರ್ (ಜೆಎಂಸಿಸಿ) ಸಂಘಟನೆಯು 'ಐಕಾನ್ ಲೇಡಿ ಆಫ್ ಹಿಜಾಬ್' ಬಿರುದು ಪ್ರದಾನ ಮಾಡಿದ್ದು ಜೊತೆಗೆ ₹ 1 ಲಕ್ಷ ಬಹುಮಾನವನ್ನೂ ನೀಡಿದೆ. ನಗರದ ಗುತ್ತಲು ಬಡಾವಣೆಯಲ್ಲಿರುವ ವಿದ್ಯಾರ್ಥಿನಿ ಮನೆಗೆ ಬುಧವಾರ ಭೇಟಿ ನೀಡಿದ್ದ ಸಂಘಟನೆ ಅಧ್ಯಕ್ಷ ನೌಷಾದ್ ಪ್ರಶಸ್ತಿ ಪತ್ರ ಹಾಗೂ ಚೆಕ್ ವಿತರಣೆ ಮಾಡಿದರು.

ಜಮಾತೆ ಹಿಂದ್ ಸಂಘಟನೆ ಕೂಡ ₹ 5 ಲಕ್ಷ ಬಹುಮಾನ ಘೋಷಿಸಿ ಸಾಮಾಜಿಕ ಜಾಲತಾಣಗಳಲ್ಲಿ ಸಂದೇಶ ಪ್ರಕಟಿಸಿದೆ. ಆದರೆ ಬಹುಮಾನ ವಿದ್ಯಾರ್ಥಿನಿಯ ಕೈಸೇರಿಲ್ಲ.

ಕೆ.ಆರ್.ಪೇಟೆ: ಕಾಲೇಜು ತರಗತಿಗೆ ತಡೆ

ಕೆ.ಆರ್‌.ಪೇಟೆ ಪಟ್ಟಣದ ಕ್ರೈಸ್ಟ್ ಕಿಂಗ್ ಕಾಲೇಜಿನಲ್ಲಿ ನಡೆಯುತಿದ್ದ ತರಗತಿಯಿಂದ ಹೊರಹೋಗುವಂತೆ ಅಧಿಕಾರಿಗಳು ವಿದ್ಯಾರ್ಥಿಗಳಿಗೆ ಸೂಚಿಸಿದರು

ಕೆ.ಆರ್.ಪೇಟೆ (ಮಂಡ್ಯ): ಸರ್ಕಾರ ಮೂರು ದಿನ ರಜೆ ನೀಡಿದ್ದರೂ ಗುರುವಾರ ತರಗತಿಗಳನ್ನು ನಡೆಸುತ್ತಿದ್ದ ಪಟ್ಟಣದ ಕ್ರೈಸ್ಟ್ ಕಿಂಗ್ ಕಾಲೇಜಿಗೆ ತೆರಳಿದ ಉಪ ತಹಶೀಲ್ದಾರ್ ಲಕ್ಷ್ಮೀಕಾಂತ್ ಅವರು ಸಿಬ್ಬಂದಿಗೆ ಎಚ್ಚರಿಕೆ ನೀಡಿ, ವಿದ್ಯಾರ್ಥಿಗಳನ್ನು ಮನೆಗೆ ಕಳಿಸಿದರು. ಸಾರ್ವಜನಿಕರು ನೀಡಿದ ದೂರು ಆಧರಿಸಿ ಕ್ರಮ ಕೈಗೊಳ್ಳುವಂತೆ ತಹಶೀಲ್ದಾರ್ ರೂಪಾ ಸೂಚಿಸಿದ್ದರು.

'ದ್ವಿತೀಯ ಪಿಯು ವಿದ್ಯಾರ್ಥಿಗಳಿಗೆ ವಿಶೇಷ ತರಗತಿಗಳನ್ನು ನಡೆಸಲಾಗುತ್ತಿತ್ತು' ಎಂದು ಪ್ರಾಂಶುಪಾಲ ಅಂತೋನಿ ಸ್ವಾಮಿ ತಿಳಿಸಿದರು.

ಉತ್ತರ ಪ್ರದೇಶ ಪ್ರಚಾರ ರ‍್ಯಾಲಿಯಲ್ಲಿ ಎಸ್‌ಪಿ ವಿರುದ್ಧ ಮೋದಿ ವಾಗ್ದಾಳಿ • ಕರ್ನಾಟಕದ ಹಿಜಾಬ್ ವಿವಾದ ಪ್ರಸ್ತಾಪ

‘ಮುಜಫ್ಫರ್‌ನಗರ ಗಲಭೆಕೋರರಿಗೆ ಟಿಕೆಟ್’

ಸಹರನ್‌ಪುರ (ಉತ್ತರ ಪ್ರದೇಶ) (ಪಿಟಿಐ): ಉತ್ತರ ಪ್ರದೇಶ ವಿಧಾನಸಬಾ ಚುನಾವಣೆಯ ಮೊದಲ ಹಂತದಲ್ಲಿ ಮುಜಫ್ಫರ್‌ನಗರದಲ್ಲಿ ಮತದಾನ ನಡೆಯುತ್ತಿರುವ ಸಂದರ್ಭದಲ್ಲಿಯೇ, ರಾಜ್ಯದ ಸಹರನ್‌ಪುರದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು 2013ರ ಮುಜಫ್ಫರ್‌ನಗರ ಗಲಭೆಯ ಬಗ್ಗೆ ಮಾತನಾಡಿದ್ದಾರೆ. ಕರ್ನಾಟಕದಲ್ಲಿನ ಹಿಜಾಬ್ ವಿವಾದವನ್ನೂ ಅವರು ತಮ್ಮ ಚುನಾವಣಾ ಪ್ರಚಾರದಲ್ಲಿ ಪ್ರಸ್ತಾಪಿಸಿದ್ದಾರೆ.

ಇಲ್ಲಿ ನಡೆದ ಭೌತಿಕ ಪ್ರಚಾರ ರ‍್ಯಾಲಿಯಲ್ಲಿ ಮೋದಿ ಅವರು ಮಾತನಾಡಿದ್ದಾರೆ. ‘ಸಮಾಜವಾದಿ ಪಕ್ಷವು ಅಧಿಕಾರದಲ್ಲಿ ಇದ್ದಾಗ ರಾಜ್ಯದಲ್ಲಿ ಕೋಮುಗಲಭೆಗಳು ನಡೆಯುತ್ತಿದ್ದವು. 2013ರ ಮುಜಫ್ಫರ್‌ನಗರದ ಗಲಭೆಯನ್ನು ಯಾರು ಮರೆಯಲು ಸಾಧ್ಯ? ಕೈರಾನಾದಿಂದ ಹಿಂದೂಗಳನ್ನು ಓಡಿಸಿದ್ದನ್ನು ಯಾರೂ ಮರೆತಿಲ್ಲ. ಕರ್ಫ್ಯೂ ಎಂಬುದು ಸಾಮಾನ್ಯ ಎಂಬಂತಾಗಿತ್ತು. ಹಬ್ಬಗಳನ್ನು ಆಚರಿಸಲೂ ಅವಕಾಶವಿರಲಿಲ್ಲ. ಆ ಸರ್ಕಾರವು ಕನ್ವರ್ ಯಾತ್ರೆಯನ್ನು ನಿಷೇಧಿಸಿತ್ತು. ನಾವು ಕನ್ವರ್ ಯಾತ್ರೆಗೆ ಮತ್ತೆ ಚಾಲನೆ ನೀಡಿದ್ದೇವೆ. ಈಗ ಅದನ್ನು ತಡೆಯುವ ಧೈರ್ಯ ಯಾರಿಗೂ ಇಲ್ಲ’ ಎಂದು ಮೋದಿ ಹೇಳಿದ್ದಾರೆ.

ಕರ್ನಾಟಕದಲ್ಲಿನ ಹಿಜಾಬ್ ವಿವಾದದ ಬಗ್ಗೆ ಮಾತನಾಡಿರುವ ಮೋದಿ ಅವರು, ‘ಹಿಜಾಬ್ ವಿಚಾರದಲ್ಲಿ ಮುಸ್ಲಿಂ ವಿದ್ಯಾರ್ಥಿಗಳನ್ನು ವಿರೋಧ ಪಕ್ಷಗಳು ಪ್ರಚೋದಿಸುತ್ತಿವೆ. ನಮ್ಮ ಮುಸ್ಲಿಂ ಸೋದರಿಯರು ಮತ್ತು ಪುತ್ರಿಯರು ಪ್ರಗತಿ ಸಾಧಿಸುವುದು ವಿರೋಧ ಪಕ್ಷಗಳಿಗೆ ಬೇಕಾಗಿಲ್ಲ. ಮುಸ್ಲಿಂ ಸೋದರಿಯರು ಹಿಂದುಳಿಯಬೇಕು ಎಂದು ವಿರೋಧ ಪಕ್ಷಗಳು ಬಯಸುತ್ತಿವೆ. ಆದರೆ ನಾವು ಎಲ್ಲಾ ಮುಸ್ಲಿಂ ಮಹಿಳೆಯರ ಬೆಂಬಲಕ್ಕೆ ನಿಂತಿದ್ದೇವೆ’ ಎಂದು ಹೇಳಿದ್ದಾರೆ.

‘ಮುಸ್ಲಿಂ ಮಹಿಳೆಯರಿಗೆ ರಕ್ಷಣೆ ದೊರೆಯಬೇಕು ಎನ್ನುವುದಾದರೆ, ಉತ್ತರ ಪ್ರದೇಶದಲ್ಲಿ ಮತ್ತೆ ಯೋಗಿಜೀ ಅವರ ಸರ್ಕಾರ ಬರಬೇಕು. ತ್ರಿವಳಿ ತಲಾಖ್ ನಿಷೇಧಿಸುವ ಮೂಲಕ ನಾವು ಮುಸ್ಲಿಂ ಮಹಿಳೆಯರ ಹಕ್ಕುಗಳನ್ನು ರಕ್ಷಿಸಿದ್ದೇವೆ. ಬಿಜೆಪಿ ಸರ್ಕಾರವಿದ್ದರೆ ಮಾತ್ರ ರಾಜ್ಯದಲ್ಲಿ ಮಹಿಳೆಯರಿಗೆ ರಕ್ಷಣೆ ಇರುತ್ತದೆ ಮತ್ತು ಅಪರಾಧಿಗಳು ಜೈಲಿನಲ್ಲಿ ಇರುತ್ತಾರೆ’ ಎಂದು ಮೋದಿ ಹೇಳಿದ್ದಾರೆ.

ಕೇಂದ್ರ ಸರ್ಕಾರದ ವಿವಿಧ ಯೋಜನೆಗಳು ಮತ್ತು ಕಾರ್ಯಕ್ರಮಗಳ ಬಗ್ಗೆ ಪ್ರಚಾರದ ವೇಳೆ ಮಾತನಾಡಿದ್ದಾರೆ. ಬಿಜೆಪಿ ಅಧಿಕಾರಕ್ಕೆ ಬಂದರೆ ಅಭಿವೃದ್ಧಿ ಕಾರ್ಯಗಳನ್ನು ಮುಂದುವರೆಸುತ್ತದೆ ಎಂದು ಅವರು ಹೇಳಿದ್ದಾರೆ.

ಸಹರನ್‌ಪುರದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಬಿಜೆಪಿ ನಾಯಕರು ನೇಗಿಲ ಪ್ರತಿಕೃತಿಯನ್ನು ಉಡುಗೊರೆಯಾಗಿ ನೀಡಿದರು –ಪಿಟಿಐ ಚಿತ್ರ

ಮುಜಫ್ಫರ್‌ನಗರ ಗಲಭೆಯ ಸಂಚುಕೋರರನ್ನು ವಿರೋಧ ಪಕ್ಷಗಳು ಉದ್ದೇಶಪೂರ್ವಕವಾಗಿಯೇ ಕಣಕ್ಕೆ ಇಳಿಸಿವೆ. ಅವರು ಗೆದ್ದರೆ ನಿಮ್ಮ ಮೇಲೆ ಸೇಡು ತೀರಿಸಿಕೊಳ್ಳುತ್ತಾರೆ
ನರೇಂದ್ರ ಮೋದಿ, ಪ್ರಧಾನಿ

ಉತ್ತರಾಖಂಡದಲ್ಲಿ ಬಡವರು ಮತ್ತು ನಿರುದ್ಯೋಗಿಗಳ ಸರ್ಕಾರ ಬರಬೇಕು ಎಂದು ಕಾಂಗ್ರೆಸ್ ಬಯಸುತ್ತದೆ. ದೆಹಲಿಯಲ್ಲಿ ಕೂರುವ ದೊರೆಯ ಸರ್ಕಾರವನ್ನಲ್ಲ
ರಾಹುಲ್ ಗಾಂಧಿ, ಕಾಂಗ್ರೆಸ್ ನಾಯಕ

ರಾಜಕೀಯ ಪಕ್ಷಗಳು ಯಾವ ಭರವಸೆ ನೀಡಿವೆ ಎಂಬುದಲ್ಲ, ಈ ಹಿಂದೆ ಏನು ಮಾಡಿದ್ದವು ಎಂಬುದನ್ನು ಆಧರಿಸಿ ಮತ ನೀಡಿ
ಜೆ.ಪಿ.ನಡ್ಡಾ,
ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ

‘ಮೋದಿಯ ಸಿಬಿಐಗೆ ಹೆದರುವುದಿಲ್ಲ’

ಹರಿದ್ವಾರದಲ್ಲಿ ಕಾಂಗ್ರೆಸ್ ಪ್ರಚಾರ ಸಭೆಯನ್ನು ಉದ್ದೇಶಿಸಿ ರಾಹುಲ್ ಗಾಂಧಿ ಮಾತನಾಡಿದರು –ಪಿಟಿಐ ಚಿತ್ರ

ಹರಿದ್ವಾರ (ಪಿಟಿಐ): ‘ಪ್ರಧಾನಿ ನರೇಂದ್ರ ಮೋದಿ ಅವರ ಸಿಬಿಐ ಮತ್ತು ಜಾರಿ ನಿರ್ದೇಶನಾಲಯಕ್ಕೆ ನಾನು ಹೆದರುವುದಿಲ್ಲ’ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಹೇಳಿದ್ದಾರೆ.

ಇಲ್ಲಿ ಪಕ್ಷದ ಅಭ್ಯರ್ಥಿಗಳ ಪರವಾಗಿ ರ‍್ಯಾಲಿ ನಡೆಸಿದ ರಾಹುಲ್ ಅವರು, ಮೋದಿ ವಿರುದ್ಧ ಹರಿಹಾಯ್ದಿದ್ದಾರೆ. ‘ನಾನು ಮೋದಿ ಅವರ ಮಾತನ್ನು ಕೇಳುವುದಿಲ್ಲ ಎಂದು ಅವರು ಈಚೆಗೆ ಒಂದು ಸಂದರ್ಶನದಲ್ಲಿ ಹೇಳಿದ್ದಾರೆ. ಮೋದಿ ಹೇಳಿದ್ದು ಸರಿ. ನಾನು ಖಂಡಿತಾ ಅವರ ಮಾತನ್ನು ಕೇಳುವುದಿಲ್ಲ. ಏಕೆಂದರೆ ನಾನು ಅವರ ಸಿಬಿಐ ಮತ್ತು ಜಾರಿ ನಿರ್ದೇಶನಾಲಯಕ್ಕೆ ಹೆದರುವುದಿಲ್ಲ’ ಎಂದು ರಾಹುಲ್ ಹೇಳಿದ್ದಾರೆ.

‘ದೇಶದಲ್ಲಿ 70 ವರ್ಷಗಳಲ್ಲಿ ಏನೂ ಆಗೇ ಇಲ್ಲ ಎನ್ನುವ ಮೋದಿ ಅವರ ಅಹಂಕಾರ ನೋಡಿದರೆ ಆಶ್ಚರ್ಯವಾಗುತ್ತದೆ. ಈ 70 ವರ್ಷದಲ್ಲಿ ದೇಶ ನಿದ್ರೆಯಲ್ಲಿತ್ತು ಮತ್ತು ಮೋದಿ ಅಧಿಕಾರಕ್ಕೆ ಬಂದ ನಂತರವೇ ಎಚ್ಚೆತ್ತುಕೊಂಡಿತು ಎಂಬುದು ಅವರ ಮಾತಿನ ಅರ್ಥವೇ? ಹಾಗಿದ್ದಲ್ಲಿ ಈ ರಸ್ತೆಗಳೆಲ್ಲಾ ನಿರ್ಮಾಣವಾಗಿದ್ದು ಹೇಗೆ? ಈ ರೈಲು ಮಾರ್ಗಗಳೆಲ್ಲಾ ನಿರ್ಮಾಣವಾಗಿದ್ದು ಹೇಗೆ? ಇವೆಲ್ಲಾ ಜಾದೂವಿನಿಂದ ಆದದ್ದೇ’ ಎಂದು ರಾಹುಲ್ ಪ್ರಶ್ನಿಸಿದ್ದಾರೆ.

‘ಕೇಂದ್ರ ಸರ್ಕಾರವು ಕೃಷಿ ಕಾಯ್ದೆಗಳನ್ನು ವಾಪಸ್ ಪಡೆಯುವುದರ ಹಿಂದೆ, ಶ್ರಮ ಇರುವುದು ದೇಶದ ರೈತರು ಮತ್ತು ಕಾಂಗ್ರೆಸ್‌ನದ್ದು. ಕಾಂಗ್ರೆಸ್ ಮಾತ್ರವೇ ಮೋದಿಯ ಬಿಜೆಪಿ ವಿರುದ್ಧ ಹೋರಾಡಬಲ್ಲದು. ಉತ್ತರಾಖಂಡದಲ್ಲಿ ಬಿಜೆಪಿ ಅತ್ಯಂತ ಭ್ರಷ್ಟರಾಗಿದ್ದ ಮೂವರು ಮುಖ್ಯಮಂತ್ರಿಗಳನ್ನು ಬದಲಿಸಿದೆ. ಒಬ್ಬ ಕಳ್ಳನ ಬದಲಿಗೆ ಮತ್ತೊಬ್ಬ ಕಳ್ಳನನ್ನು ಗದ್ದುಗೆಯ ಮೇಲೆ ಕೂರಿಸಿದೆ’ ಎಂದು ರಾಹುಲ್ ಟೀಕಿಸಿದ್ದಾರೆ.

ಕಾಂಗ್ರೆಸ್‌ನಿಂದ ರಾವತ್ ಚಿತ್ರ ದುರ್ಬಳಕೆ: ಮೋದಿ

ಶ್ರೀನಗರ್ (ಉತ್ತರಾಖಂಡ) (ಪಿಟಿಐ): ‘ದೇಶದ ಮೊದಲ ಸೇನಾಪಡೆಗಳ ಮುಖ್ಯಸ್ಥ (ಸಿಡಿಎಸ್) ಜನರಲ್ ಬಿಪಿನ್ ರಾವತ್ ಅವರು ಜೀವಂತವಿದ್ದಾಗ ಕಾಂಗ್ರೆಸ್ ಅವರನ್ನು ಹಿಗ್ಗಾಮುಗ್ಗಾ ಟೀಕಿಸುತ್ತಿತ್ತು. ಈಗ ಮರಣಾನಂತರ ಅವರ ಕಟೌಟ್‌ಗಳನ್ನು ಬಳಸಿಕೊಂಡು ಮತ ಯಾಚಿಸುತ್ತಿದೆ’ ಎಂದು ಪ್ರಧಾನಿ ನರೇಂದ್ರ ಮೋದಿ ಆರೋಪಿಸಿದ್ದಾರೆ.

ಚುನಾವಣಾ ರ‍್ಯಾಲಿಉದ್ದೇಶಿಸಿ ಮಾತನಾಡಿದ ಅವರು, ‘ರಾವತ್ ನೇತೃತ್ವದಲ್ಲಿ ಸೇನೆಯು ನಿರ್ದಿಷ್ಟ ದಾಳಿ ನಡೆಸಿದಾಗ, ಕಾಂಗ್ರೆಸ್ ನಾಯಕರು ಪುರಾವೆ ಕೇಳಿದ್ದರು. ರಾವತ್ ಅವರನ್ನು ಸಿಡಿಎಸ್ ಆಗಿ ನೇಮಕ ಮಾಡಿದಾಗ ಕಾಂಗ್ರೆಸ್ ಆಕ್ಷೇಪ ವ್ಯಕ್ತಪಡಿಸಿತ್ತು. ಆದರೆ ಈಗ ಮತಕ್ಕಾಗಿ ಅವರ ಕಟೌಟ್ ಅನ್ನು ದುರ್ಬಳಕೆ ಮಾಡಿಕೊಳ್ಳುತ್ತಿದೆ’ ಎಂದು ಟೀಕಿಸಿದ್ದಾರೆ.

‘ಕಾಂಗ್ರೆಸ್ ಎಸಗಿದ ಈ ತಪ್ಪುಗಳಿಗೆ ರಾಜ್ಯದ ಜನ ಸರಿಯಾದ ಉತ್ತರವನ್ನು ಮತದಾನದ ಮೂಲಕ ನೀಡಬೇಕು. ರಾಜ್ಯದ ಅಭಿವೃದ್ಧಿಯನ್ನು ಆರಂಭಿಸಿರುವ ಬಿಜೆಪಿಯನ್ನೇ ಮತ್ತೆ ಅಧಿಕಾರಕ್ಕೆ ತನ್ನಿ’ ಎಂದರು.

ಬಹು ಮಾಧ್ಯಮ ಪ್ರಜಾವಾಣಿ www.prajavani.net LIVE
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ
ಇಂದು
ಪ್ರಜಾವಾಣಿ ಕನ್ನಡ ಧ್ವನಿ
ಪಾಡ್‌ಕಾಸ್ಟ್: ಬೆಳಿಗ್ಗೆ 9 ಪ್ರಚಲಿತ, ಬೆಳಿಗ್ಗೆ 9.30 ಸಂಪಾದಕೀಯ. ಬೆಳಿಗ್ಗೆ 8, ಮಧ್ಯಾಹ್ನ 2, ರಾತ್ರಿ 8 ಪ್ರಜಾವಾಣಿ ವಾರ್ತೆ ಬುಲೆಟಿನ್.
ಪ್ರಜಾಮತ: ರಾತ್ರಿ 9 ಚುನಾವಣೆ ವಾರ್ತೆ
ನಾಳೆ
ಸೆಲೆಬ್ರಿಟಿ LIVE
ಮಾತುಕತೆ

ಗಾನ ಧ್ಯಾನಿಯ ಆಲಾಪ
ಪಂಡಿತ್ ವೆಂಕಟೇಶ್ ಕುಮಾರ್
ಹಿಂದೂಸ್ತಾನಿ ಶಾಸ್ತ್ರೀಯ ಗಾಯಕ ಅವರೊಂದಿಗೆ ಮಾತುಕತೆ
ಬೆಳಿಗ್ಗೆ 11 ರಿಂದ 12
ಗಾನ ನಮನ
ಸಂಜೆ 6.30 ರಿಂದ
ಮೇರಿ ಅವಾಜ್ ಹಿ ಪೆಹಚಾನ್ ಹೈ
ನನ್ನ ದನಿಯೇ ನನ್ನ ಗುರುತು
ಗಾನ ಕೋಗಿಲೆ, ಸ್ವರ ಸಾಮ್ರಾಜ್ಞಿ ಲತಾ ಮಂಗೇಶ್ಕರ್‌ಗೆ ಗಾನ ನಮನ

ಗಾಯಕರು: ಶೈಲಜಾ ಹಾಗೂ ಎಚ್.ಆರ್.ಕೆ. ಪ್ರಸಾದ್
ಸಂಘಟನೆ: ಶ್ರೀನಿವಾಸ ಜಿ.ಕಪ್ಪಣ್ಣ

ಉತ್ತರ ಪ್ರದೇಶವು ಕೇರಳವಾದರೆ ಉತ್ತಮ: ಪಿಣರಾಯಿ ತಿರುಗೇಟು

ಒಂದನೇ ಪುಟದಿಂದ

‘ಸಮಾಜವು ಸೌಹಾರ್ದಯುತ ಆಗಲಿದ್ದು ಧರ್ಮ ಮತ್ತು ಜಾತಿಯ ಹೆಸರಿನಲ್ಲಿ ಜನರ ಹತ್ಯೆ ಆಗುವುದಿಲ್ಲ. ಉತ್ತರ ಪ್ರದೇಶದ ಜನರಿಗೆ ಬೇಕಾಗಿರುವುದು ಇದುವೇ’ ಎಂದೂ ಅವರು ಅವರು ಟ್ವೀಟ್ ಮಾಡಿದ್ದಾರೆ.

‘ಉತ್ತರ ಪ್ರದೇಶರ ಜನರೇ, ಕೇರಳದಂತೆ ಆಗುವುದಕ್ಕಾಗಿ ಮತ ಹಾಕಿ. ಮಧ್ಯಯುಗದ ಧರ್ಮಾಂಧತೆಯ ಬದಲು ಬಹುತ್ವ, ಸಾಮರಸ್ಯ, ಎಲ್ಲರನ್ನೂ ಒಳಗೊಂಡ ಅಭಿವೃದ್ಧಿಯನ್ನು ಆಯ್ಕೆ ಮಾಡಿ. ಕೇರಳಿಗರು, ಕಾಶ್ಮೀರಿಗಳು ಮತ್ತು ಬಂಗಾಳಿಗಳೆಲ್ಲರೂ ಹೆಮ್ಮೆಯ ಭಾರತೀಯರೇ’ ಎಂದು ಸತೀಶನ್ ಹೇಳಿದ್ದಾರೆ.

‘ಆದಿತ್ಯನಾಥ ಅವರು ಹತಾಶರಾಗಿದ್ದು, ಜನರನ್ನು ವಿಭಜಿಸಲು ಯತ್ನಿಸುತ್ತಿದ್ದಾರೆ. ಕಷ್ಟ ಇದೆ ಅನ್ನಿಸಿದಾಗ ಹೀಗೆ ಮಾಡುವುದು ಬಿಜೆಪಿಯ ಹಳೆಯ ಆಟ. ಉತ್ತರ ಪ್ರದೇಶ ವಿಧಾನಸಭೆ ಚುನಾವಣೆಯಲ್ಲಿ ಸೋಲು ಖಚಿತ ಎಂಬುದು ಬಿಜೆಪಿಗೆ ಮನವರಿಕೆ ಆಗಿದೆ.

ಪಶ್ಚಿಮ ಬಂಗಾಳವು ಎಂದಿಗೂ ಆದಿತ್ಯನಾಥ ಅವರ ಉತ್ತರ ಪ್ರದೇಶ ಆಗದು. ಬದಲಿಗೆ, ಅವರನ್ನು ಅಧಿಕಾರದಿಂದ ಇಳಿಸಿ ಉತ್ತರ ಪ್ರದೇಶವು ಸಾಮರಸ್ಯಕ್ಕೆ ಮಾದರಿಯಾಗಲಿದೆ
ಸಂತನು ಸೇನ್, ಟಿಎಂಸಿ ಸಂಸದ

ಪಶ್ಚಿಮ ಬಂಗಾಳದಲ್ಲಿರುವ ಶಾಂತಿ ಮತ್ತು ಸೌಹಾರ್ದವನ್ನು ನಕಾರಾತ್ಮಕವಾಗಿ ತೋರಿಸಿ ಜನರಲ್ಲಿ ಸಂಘರ್ಷದ ಬೀಜ ಬಿತ್ತಲು ಬಿಜೆಪಿ ಶ್ರಮಿಸುತ್ತಿದೆ’ ಎಂದು ಟಿಎಂಸಿಯ ರಾಜ್ಯಸಭಾ ಸದಸ್ಯ ಸಂತನು ಸೇನ್ ಹೇಳಿದ್ದಾರೆ.

‘ಆದಿತ್ಯನಾಥ ಅವರು ಪ್ರತಿಪಾದಿಸುವ ಭಾರತದ ದೃಷ್ಟಿಕೋನವನ್ನು ನಾವು ಒಪ್ಪುವುದಿಲ್ಲ. ಈ ದೃಷ್ಟಿಕೋನವು ವಿವಿಧ ಧರ್ಮಗಳು ಮತ್ತು ನಂಬಿಕೆಗಳಿಗೆ ಕುಂದು ಉಂಟು ಮಾಡುತ್ತದೆ. ಹಿಂದೂ ರಾಷ್ಟ್ರ ಕಲ್ಪನೆಯನ್ನು ನಾವು ವಿರೋಧಿಸುತ್ತೇವೆ’ ಎಂದು ಸಿಪಿಎಂ ಮುಖಂಡ ಸುಜನ್ ಚಕ್ರವರ್ತಿ ಹೇಳಿದ್ದಾರೆ.

ನುಡಿ-ಕಿಡಿ

ಬಿಜೆಪಿ ಹಾಗೂ ಕಾಂಗ್ರೆಸ್‌ಗೆ ಮತ್ತೆ ಅಧಿಕಾರ ನೀಡಿದರೆ ಅವು ಗೋವಾವನ್ನು ಲೂಟಿ ಹೊಡೆಯಲಿವೆ. ರಾಜ್ಯ ಸರ್ಕಾರವು ಈಗ ₹24 ಸಾವಿರ ಕೋಟಿ ಸಾಲದ ಹೊರೆ ಹೊತ್ತಿದೆ. ಈ ಪಕ್ಷಗಳು ಅಧಿಕಾರಕ್ಕೆ ಬಂದರೆ ಸಾಲವನ್ನು ₹50 ಸಾವಿರ ಕೋಟಿಗೆ ಹೆಚ್ಚಿಸುವುದು ಖಚಿತ.

ಅರವಿಂದ ಕೇಜ್ರಿವಾಲ್, ಎಎಪಿ ಮುಖ್ಯಸ್ಥ

ಡಬಲ್ ಎಂಜಿನ್ ಸರ್ಕಾರವು ಉತ್ತರ ಪ್ರದೇಶದಲ್ಲಿ ದುಪ್ಪಟ್ಟು ಭ್ರಷ್ಟಾಚಾರ ಮಾಡಿದೆ. ರಾಜ್ಯದಿಂದ ಭ್ರಷ್ಟಾಚಾರ ಕಿತ್ತೊಗೆಯಲು ಮತ ಹಾಕಿ. ಆಗ, ಬಾಬಾಜಿ (ಯೋಗಿ ಆದಿತ್ಯನಾಥ) ಮನೆಗೆ ಹೋಗುತ್ತಾರೆ. ಕೋವಿಡ್ ಸಮಯದಲ್ಲಿ ಸರ್ಕಾರ ತೀವ್ರ ನಿರ್ಲಕ್ಷ್ಯ ವಹಿಸಿತ್ತು. ಗರ್ಭಿಣಿಯೊಬ್ಬರು ರಸ್ತೆಯಲ್ಲೇ ಮಗುವಿಗೆ ಜನ್ಮ ನೀಡಿದ್ದು ನನಗೆ ನೆನಪಿದೆ. ಆ ಸಮಯದಲ್ಲಿ ನಮ್ಮ ಸರ್ಕಾರ ಅಧಿಕಾರದಲ್ಲಿ ಇದ್ದಿದ್ದರೆ, ಮಹಿಳೆಯನ್ನು ಕರೆತರಲು ಜಿಲ್ಲಾಧಿಕಾರಿಯ ಕಾರನ್ನು ಕಳುಹಿಸುತ್ತಿದ್ದೆ

ಅಖಿಲೇಶ್ ಯಾದವ್, ಎಸ್‌ಪಿ ಮುಖ್ಯಸ್ಥ

ಉತ್ತರ ಪ್ರದೇಶದ ಮುಜಫ್ಫರ್‌ನಗರಲ್ಲಿ 2013ರಲ್ಲಿ ಉಂಟಾದ ಪರಿಸ್ಥಿತಿ ಈಗಿಲ್ಲ. ಇಲ್ಲಿ ಶಾಂತಿ ನೆಲೆಸಿದ್ದು, ಈ ಬಾರಿಯ ಚುನಾವಣಾ ಫಲಿತಾಂಶ ಸಾಕಷ್ಟು ಭಿನ್ನವಾಗಿರಲಿದೆ. ಆಟ ಈಗಾಗಲೇ ಶುರುವಾಗಿದ್ದು, ಸದ್ಯದಲ್ಲೇ ಫಲಿತಾಂಶ ಹೊರಬರಲಿದೆ

ರಾಕೇಶ್ ಟಿಕಾಯತ್, ರೈತ ಮುಖಂಡ

ಬಿಜೆಪಿಗೆ ಖಲಿ ಬಲ

ವೃತ್ತಿಪರ ಕುಸ್ತಿಪಟು ದಿಲೀಪ್ ಸಿಂಗ್ ರಾಣಾ (ಗ್ರೇಟ್ ಖಲಿ) ಅವರು ಗುರುವಾರ ಬಿಜೆಪಿಗೆ ಸೇರ್ಪಡೆಯಾದರು. ಬಿಜೆಪಿ ಪ್ರಧಾನ ಕಾರ್ಯದರ್ಶಿ ಅರುಣ್ ಸಿಂಗ್ ಹಾಗೂ ಕೇಂದ್ರ ಸಚಿವ ಜಿತೇಂದ್ರ ಸಿಂಗ್ ಅವರು ಖಲಿ ಅವರನ್ನು ಪಕ್ಷಕ್ಕೆ ಬರಮಾಡಿಕೊಂಡರು –ಪಿಟಿಐ ಚಿತ್ರ

ಚುನಾವಣಾ ಕಣದಲ್ಲಿ...

- **‘ಎಎಪಿಗೆ ಏಕೆ ಮತ?’:** ಕೋವಿಡ್‌ನಂತಹ ಬಿಕ್ಕಟ್ಟಿನ ಸಂದರ್ಭ ಸೇರಿದಂತೆ ಕಳೆದ ಐದು ವರ್ಷಗಳಲ್ಲಿ ಎಎಪಿ ಮುಖ್ಯಸ್ಥ ಅರವಿಂದ ಕೇಜ್ರಿವಾಲ್ ಅವರು ಪಂಜಾಬ್‌ಗೆ ಭೇಟಿ ನೀಡಿಲ್ಲ ಎಂದು ಶಿರೋಮಣಿ ಅಕಾಲಿದಳ ಮುಖ್ಯಸ್ಥ ಸುಖ್‌ಬೀರ್ ಸಿಂಗ್ ಬಾದಲ್ ಅವರು ಆರೋಪಿಸಿದ್ದಾರೆ. ಕಳೆದ ಚುನಾವಣೆಯಲ್ಲಿ ಎಎಪಿ 20 ಸ್ಥಾನಗಳಲ್ಲಿ ಗೆದ್ದು ಎರಡನೇ ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮಿದ್ದರೂ, ಕೇಜ್ರಿವಾಲ್ ಅವರು ಪಂಜಾಬ್ ಅನ್ನು ನಿರ್ಲಕ್ಷಿಸಿದ್ದಾರೆ ಎಂದಿರುವ ಬಾದಲ್, ಪಂಜಾಬಿಗಳು ಎಎಪಿಗೆ ಏಕೆ ಮತ ಹಾಕಬೇಕು ಎಂದು ಪ್ರಶ್ನಿಸಿದ್ದಾರೆ.
- **ಚನ್ನಿ ವಿರುದ್ಧ ಉಗೋಕ್:** ಪಂಜಾಬ್ ವಿಧಾನಸಭಾ ಚುನಾವಣೆಯಲ್ಲಿ ಭದೌರ್ ಮೀಸಲು ಕ್ಷೇತ್ರದಿಂದ ಕಣಕ್ಕಿಳಿದಿರುವ ಕಾಂಗ್ರೆಸ್‌ನ ಮುಖ್ಯಮಂತ್ರಿ ಅಭ್ಯರ್ಥಿ ಚರಣ್‌ಜಿತ್ ಸಿಂಗ್ ಚನ್ನಿ ವಿರುದ್ಧ ಅಭ್ಯರ್ಥಿಯನ್ನು ಆಮ್ ಆದ್ಮಿ ಪಕ್ಷ ಪ್ರಕಟಿಸಿದೆ. 2013ರಲ್ಲಿ ಎಎಪಿ ಸೇರಿದ್ದ ಲಭ ಸಿಂಗ್ ಉಗೋಕ್ ಎಂಬುವರನ್ನು ಪಕ್ಷ ಕಣಕ್ಕಿಳಿಸಿದೆ. ಇವರ ತಂದೆ ಟ್ರಕ್ ಚಾಲಕರಾಗಿದ್ದು, ತಾಯಿ ಸರ್ಕಾರಿ ಶಾಲೆಯಲ್ಲಿ ಕಸಗುಡಿಸುವ ಕೆಲಸ ಮಾಡುತ್ತಿದ್ದಾರೆ. ಎರಡು ಕ್ಷೇತ್ರಗಳಿಂದ ಸ್ಪರ್ಧೆಗೆ ಇಳಿದಿರುವ ಚನ್ನಿ ನಿಲುವನ್ನು ಉಗೋಕ್ ಪ್ರಶ್ನಿಸಿದ್ದಾರೆ
- **ಬಿಜೆಪಿ ಬಿಟ್ಟ ಶಾಸಕ:** ಉತ್ತರ ಪ್ರದೇಶದ ಬೈರಿಯಾ ವಿಧಾನಸಭಾ ಕ್ಷೇತ್ರದ ಬಿಜೆಪಿ ಶಾಸಕ ಸುರೇಂದ್ರ ಸಿಂಗ್ ಅವರಿಗೆ ಟಿಕೆಟ್ ನಿರಾಕರಿಸಲಾಗಿದೆ. ಹೀಗಾಗಿ ಅವರು ವಿಕಾಸಶೀಲ ಇನ್ಸಾನ್ ಪಕ್ಷವನ್ನು (ವಿಐಪಿ) ಗುರುವಾರ ಸೇರ್ಪಡೆಯಾದರು. ಟಿಕೆಟ್ ನಿರಾಕರಿಸಿದ್ದರಿಂದ ಸಿಂಗ್ ಅವರು ಬಿಜೆಪಿಯ ಪ್ರಾಥಮಿಕ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದ್ದರು.

ಮಣಿಪುರ ಮತದಾನ ದಿನಾಂಕ ಪರಿಷ್ಕರಣೆ

ನವದೆಹಲಿ (ಪಿಟಿಐ): ಮಣಿಪುರ ವಿಧಾನಸಭಾ ಚುನಾವಣೆ ಎರಡು ಹಂತಗಳ ಮತದಾನ ದಿನಾಂಕವನ್ನು ಚುನಾವಣಾ ಆಯೋಗವು ಪರಿಷ್ಕರಿಸಿದೆ. ಫೆಬ್ರುವರಿ 28 ಹಾಗೂ ಮಾರ್ಚ್ 5ರಂದು ಮತದಾನ ನಡೆಯಲಿದೆ. ಸ್ಥಳೀಯ ಪರಿಸ್ಥಿತಿ ಹಾಗೂ ಇತರೆ ಅಂಶಗಳನ್ನು ಗಮನದಲ್ಲಿರಿಸಿಕೊಂಡು ಈ ಬದಲಾವಣೆ ಮಾಡಲಾಗಿದೆ ಎಂದು ಆಯೋಗ ತಿಳಿಸಿದೆ.

ಫೆ.27 ಹಾಗೂ ಮಾರ್ಚ್ 3ರಂದು ಮತದಾನ ನಡೆಸಲು ಆಯೋಗ ಈ ಮೊದಲು ನಿರ್ಧರಿಸಿತ್ತು.

ಆಯೋಗವು ಪಂಜಾಬ್ ವಿಧಾನಸಭಾ ಚುನಾವಣಾ ದಿನಾಂಕವನ್ನು ಫೆ. 14ರ ಬದಲಾಗಿ ಫೆ.20ರಂದು ನಡೆಸಲು ನಿರ್ಧರಿಸಿತ್ತು.

ವಿದ್ಯಾವರ್ಧಕ ಸಂಘ, ಬಿ. ಪುರುಷೋತ್ತಮ ಮಾಸ್ತರ್‌ಗೆ ಗಡಿನಾಡ ಚೇತನ ಪ್ರಶಸ್ತಿ

ಮಕ್ಕಳ ಸಾಹಿತ್ಯಕ್ಕೆ ಬಜೆಟ್‌ನಲ್ಲಿ ಆದ್ಯತೆ: ಸಿ.ಎಂ.

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕನ್ನಡದ ಕಾರ್ಯಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಮಕ್ಕಳ ಸಾಹಿತ್ಯ ರಚನೆಗೆ ಮತ್ತು ಬೇರೆ ಭಾಷೆಯ ಮಕ್ಕಳು ಕನ್ನಡದಲ್ಲಿ ಸಾಹಿತ್ಯ ರಚಿಸಿದರೆ ಪ್ರಶಸ್ತಿ ಹಾಗೂ ಮಕ್ಕಳ ಸಾಹಿತ್ಯ ಜಿಲ್ಲಾ ಸಮ್ಮೇಳನಗಳನ್ನು ಆಯೋಜಿಸಲು ಬಜೆಟ್‌ನಲ್ಲಿ ಆದ್ಯತೆ ನೀಡಲಾಗುವುದು’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರವು ಕರ್ನಾಟಕ ಏಕೀಕರಣದ ಧೀಮಂತ ಹೋರಾಟಗಾರರಾದ ಡಾ. ಜಯದೇವಿ ತಾಯಿ ಲಿಗಾಡೆ ಹಾಗೂ ಕಯ್ಯಾರ ಕಿಂಞ್ಞಣ್ಣ ರೈ ಹೆಸರಿನಲ್ಲಿ ಸ್ಥಾಪಿಸಿರುವ ಗಡಿನಾಡ ಚೇತನ ಪ್ರಶಸ್ತಿಯನ್ನು ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘ ಹಾಗೂ ಗಡಿನಾಡ ಸಂತ ಬಿ. ಪುರುಷೋತ್ತಮ ಮಾಸ್ತರ್ ಕಾಸರಗೋಡು ಅವರಿಗೆ ಗುರುವಾರ ಪ್ರದಾನ ಮಾಡಿ ಮಾತನಾಡಿದ ಅವರು, ಕನ್ನಡ ಭಾಷೆಯನ್ನು ವಿಶ್ವಮಟ್ಟಕ್ಕೇರಿಸಬೇಕಾದ ಅಗತ್ಯವನ್ನು ಪ್ರತಿಪಾದಿಸಿದರು.

‘ಬಾಲಕರಿಂದ ಹಿರಿಯರವರೆಗಿನ ಸಾಧಕರನ್ನು ಕನ್ನಡದ ರಾಯಭಾರಿಗಳನ್ನು ನೇಮಿಸಲಾಗುವುದು. ಜತೆಗೆ, ಧಾರವಾಡದ ವಿದ್ಯಾವರ್ಧಕ ಸಂಘದಂತಹ ಕನ್ನಡದ ಸಂಸ್ಥೆಗಳಿಗೆ ಶಕ್ತಿ ತುಂಬಲಾಗುವುದು ಮತ್ತು ಗಡಿಭಾಗದಲ್ಲಿ ಸಾಹಿತ್ಯ ಸಮ್ಮೇಳನಗಳನ್ನು ಆಯೋಜಿಸಲು ಪ್ರಾಮುಖ್ಯತೆ ನೀಡಲಾಗುವುದು’ ಎಂದು ಹೇಳಿದರು.

‘ಕನ್ನಡ ವಿಚಾರಗಳನ್ನು ಗಟ್ಟಿಯಾಗಿ ಹೇಳುವ ಕಾರ್ಯಗಳು ನಡೆಯಬೇಕು. ಕನ್ನಡದ ಚಿಂತನೆಗಳು ವಿಶ್ವಕ್ಕೆ ಪರಿಚಯವಾಗಬೇಕು. ಕನ್ನಡಕ್ಕೆ 21ನೇ ಶತಮಾನದಲ್ಲಿ ಮೇರು ಸ್ಥಾನ ದೊರೆಯಬೇಕು. ಈ ನಿಟ್ಟಿನಲ್ಲಿ ಕನ್ನಡ ಮತ್ತು ಸಂಸ್ಕೃತಿಗೆ ಬಜೆಟ್‌ನಲ್ಲಿ ಆದ್ಯತೆ ನೀಡುವ ಬಗ್ಗೆ ಚರ್ಚಿಸಲಾಗಿದೆ. ಈ ನಿಟ್ಟಿನಲ್ಲಿ ಕಾರ್ಯಕ್ರಮಗಳನ್ನು ರೂಪಿಸಲಾಗುತ್ತಿದೆ. ಗಡಿ ನಾಡು ಪ್ರದೇಶದಲ್ಲಿ ಮೂಲಸೌಕರ್ಯಗಳನ್ನು ಕಲ್ಪಿಸಲು ಯೋಜನೆಗಳನ್ನು ರೂಪಿಸಲಾಗುವುದು’ ಎಂದು ಹೇಳಿದರು.

‘ಕನ್ನಡದ ಸಾಹಿತ್ಯ, ಸಂಸ್ಕೃತಿ, ಇತಿಹಾಸ ರೋಚಕವಾಗಿದೆ. ತಮಿಳರು ಅಚ್ಚುಕಟ್ಟಾಗಿ ತಮ್ಮ ಇತಿಹಾಸವನ್ನು ಹೇಳುವುದರಿಂದ ಆ ಭಾಷೆಗೆ ಆದ್ಯತೆ ದೊರೆಯುತ್ತಿದೆ. ಅವರಿಗಿಂತಲೂ ಕನ್ನಡದ ಇತಿಹಾಸ ಪುರಾತನವಾಗಿದೆ. ಹೀಗಾಗಿ, ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಮುನ್ನುಗ್ಗಿ ಹೇಳಿದರೆ ಮಾತ್ರ ನಮ್ಮ ವಿಚಾರಗಳನ್ನು ಕೇಳುತ್ತಾರೆ’ ಎಂದು ಹೇಳಿದರು.

‘ಗಡಿಯಿಂದಾಚೆಗೆ ಹೋದರೆ ಮಾತ್ರ ನಿಜವಾದ ಕನ್ನಡ ಅಭಿಮಾನ ಗೊತ್ತಾಗುತ್ತದೆ. ಕಾಸರಗೋಡಿಗೆ ನಾನು ಭೇಟಿ ನೀಡಿದಾಗ ಅಲ್ಲಿನ ಸ್ಥಳೀಯರೂ ಮಲೆಯಾಳಿ ಮಾತನಾಡಲಿಲ್ಲ. ಅಲ್ಲಿನವರು ಶುದ್ಧ ಕನ್ನಡದಲ್ಲಿ ಮಾತನಾಡುತ್ತಾರೆ. ಸೊಲ್ಲಾಪುರ, ಜತ್ತದಲ್ಲೂ ಅತ್ಯಂತ ಆತ್ಮೀಯವಾಗಿ ಕನ್ನಡದಲ್ಲಿ ಮಾತನಾಡುತ್ತಾರೆ. ಇವರ ಬಗ್ಗೆ ನಾವೆಲ್ಲರೂ ಹೆಮ್ಮೆ ಪಡಬೇಕು’ ಎಂದರು.

ಬೆಂಗಳೂರಿನಲ್ಲಿ ಗುರುವಾರ ‘ಗಡಿನಾಡ ಚೇತನ’ ಪ್ರಶಸ್ತಿಯನ್ನು ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದ ಪರವಾಗಿ ಅಧ್ಯಕ್ಷ ಚಂದ್ರಕಾಂತ ಬೆಲ್ಲದ ಮತ್ತು ಗಡಿನಾಡ ಸಂತ ಬಿ.ಪುರುಷೋತ್ತಮ ಮಾಸ್ತರ್ ಅವರಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರದಾನ ಮಾಡಿದರು. ರಂಗಕರ್ಮಿ ಕೆ.ವಿ. ನಾಗರಾಜಮೂರ್ತಿ, ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ. ಸಿ. ಸೋಮಶೇಖರ್, ಸಾಹಿತಿ ಪ್ರೊ. ಹಂಪ ನಾಗರಾಜಯ್ಯ, ‘ಪ್ರಜಾವಾಣಿ’ ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ ಮತ್ತು ವಿದ್ಯಾವರ್ಧಕ ಸಂಘದ ಸದಸ್ಯ ಶಂಕರ್ ಇದ್ದರು ಪ್ರಜಾವಾಣಿ ಚಿತ್ರ

ಪಂಚಮಸಾಲಿ 3ನೇ ಪೀಠ: ಪೀಠಾರೋಹಣಕ್ಕೆ ಸಿದ್ಧತೆ

ಆಲಗೂರ ಗ್ರಾಮದಲ್ಲಿ ಫೆ.13 ರಂದು ಜಗದ್ಗುರು ಪೀಠಾರೋಹಣ

ಪ್ರಜಾವಾಣಿ ವಾರ್ತೆ

ಜಮಖಂಡಿ (ಬಾಗಲಕೋಟೆ ಜಿಲ್ಲೆ): ಕೃಷ್ಣಾ ನದಿ ತೀರದ ಆಲಗೂರ ಗ್ರಾಮದಲ್ಲಿ ಪಂಚಮಸಾಲಿ ಮೂರನೇ ಪೀಠಾರೋಹಣ ಕಾರ್ಯಕ್ರಮದ ಸಿದ್ಧತೆ ಜೋರಾಗಿದ್ದು, ಇದೇ 13 ರಂದು ಬೆಳಿಗ್ಗೆ 10ಕ್ಕೆ ಜಗದ್ಗುರು ಪೀಠಾರೋಹಣ, ಧರ್ಮ ಸಮ್ಮೇಳನ ಮತ್ತು ರೈತ ಸಮಾವೇಶ ಕಾರ್ಯಕ್ರಮ ಜರುಗಲಿದೆ.

ವೀರಶೈವ ಪಂಚಮಸಾಲಿ ಜಗದ್ಗುರು ಪೀಠ, ಆಲಗೂರ-ಜಮಖಂಡಿಯ ಭಾವಿ ಪೀಠಾಧಿಕಾರಿ ಡಾ.ಮಹಾದೇವ ಶಿವಾಚಾರ್ಯ ಶ್ರೀಗಳು ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ‘ರಾಜ್ಯದಲ್ಲಿ ಈಗ ಇರುವ ಎರಡು ಪಂಚಮಸಾಲಿ ಪೀಠಗಳು ಬಾಕಿ ಉಳಿಸಿರುವ ಇನ್ನು ಹಲವಾರು ಕಾರ್ಯಗಳನ್ನು ಪೂರ್ಣಗೊಳಿಸಲು ಮೂರನೇ ಪೀಠವನ್ನು ಸ್ಥಾಪನೆ ಮಾಡಲಾಗುತ್ತಿದೆ. ಮಕ್ಕಳಿಗೆ ಧರ್ಮ ಸಂಸ್ಕಾರ ನೀಡುವುದು, ರೈತರ ಬೆನ್ನೆಲುಬಾಗಿ ನಿಲ್ಲುವುದು ಸೇರಿದಂತೆ ವಿವಿಧ ಹೊಸ ಯೋಜನೆಗಳನ್ನು ಹಾಕಿಕೊಳ್ಳಲಾಗಿದೆ’ ಎಂದರು.

ಬಾಗಲಕೋಟೆ ಜಿಲ್ಲೆಯ ಜಮಖಂಡಿಯ ಆಲಗೂರ ಗ್ರಾಮದಲ್ಲಿ ವೀರಶೈವ ಪಂಚಮಸಾಲಿ ಜಗದ್ಗುರು ಪೀಠಾರೋಹಣ ಕಾರ್ಯಕ್ರಮ ಫೆ.13ರಂದು ನಡೆಯಲಿದ್ದು ಗುರುವಾರ ವಿವಿಧ ಸ್ವಾಮೀಜಿಗಳು, ಮುಖಂಡರು ಸ್ಥಳ ಪರಿಶೀಲನೆ ಮಾಡಿದರು

‘ಕಾರ್ಯಕ್ರಮದಲ್ಲಿ 500ಕ್ಕೂ ಹೆಚ್ಚು ಶ್ರೀಗಳು ಭಾಗವಹಿಸಲಿದ್ದಾರೆ. ರಾಜ್ಯದ ಸಚಿವರು, ಶಾಸಕರು, ಪ್ರಮುಖ ರಾಜಕೀಯ ಪಕ್ಷಗಳ ಮುಖಂಡರು ಭಾಗವಹಿಸಲಿದ್ದಾರೆ. ಒಂದು ಲಕ್ಷ ಜನರು ಸೇರುವ ನಿರೀಕ್ಷೆಯಿದೆ. 4 ಎಕರೆ ಜಾಗದಲ್ಲಿ ಶಾಮಿಯಾನ ಹಾಕಲಾಗಿದ್ದು, ಎರಡು ಎಕರೆ ಸ್ಥಳದಲ್ಲಿ ಪಾರ್ಕಿಂಗ್ ಹಾಗೂ ಎರಡು ಎಕರೆ ಸ್ಥಳದಲ್ಲಿ ಊಟದ ವ್ಯವಸ್ಥೆ ಮಾಡಲಾಗಿದೆ’ ಎಂದರು.

ವೀರಶೈವ ಲಿಂಗಾಯತ ಪಂಚಮಸಾಲಿ ಮಠಾಧೀಶರ ಒಕ್ಕೂಟದ ಕಾರ್ಯದರ್ಶಿ ಮನಗೂಳಿ ಸಂಗನಬಸವ ಶ್ರೀಗಳು ಮಾತನಾಡಿ, ‘ನಮ್ಮ ಒಕ್ಕೂಟದಲ್ಲಿ 70-80 ಶ್ರೀಗಳು ವಿವಿಧ ಪರಂಪರೆಯನ್ನು ಹೊಂದಿದವರಿದ್ದಾರೆ. ಅವರ ಅನುಭವನ್ನು ತೆಗೆದುಕೊಂಡು ಮೂರನೇ ಪೀಠ ರಚನೆ ಮಾಡಲಾಗುತ್ತಿದೆ. ಕೂಡಲಸಂಗಮದ ಪಂಚಮಸಾಲಿ ಪೀಠದ ಜಗದ್ಗುರು ಬಸವಜಯ ಮೃತ್ಯುಂಜಯ ಶ್ರೀಗಳನ್ನು ಆಹ್ವಾನಿಸುತ್ತಿದ್ದೇವೆ. ಈ ಪೀಠ ಯಾರ ಪರವೂ ಅಲ್ಲ,ವಿರುದ್ಧವೂ ಅಲ್ಲ’ ಎಂದರು.

ಸ್ವಾಗತ ಸಮಿತಿಯ ಅಧ್ಯಕ್ಷ ಸಂಗಮೇಶ ನಿರಾಣಿ ಮಾತನಾಡಿ, ‘ಹತ್ತು ಹಲವು ಧ್ಯೇಯಗಳೊಂದಿಗೆ ವೀರಶೈವ ಲಿಂಗಾಯತ ಪಂಚಮಸಾಲಿ ಜಗದ್ಗುರು ಪೀಠ ಸ್ಥಾಪನೆಯಾಗುತ್ತಿದೆ. ಅದಕ್ಕೆ ನಾವು ಬೆಂಬಲವನ್ನು ಸೂಚಿಸಿದ್ದೇವೆ’ ಎಂದರು.

ಮೂರನೇ ಪೀಠದ ಬಗ್ಗೆ ವಿಜಯಪುರ ಶಾಸಕ ಬಸನಗೌಡ ಯತ್ನಾಳ, ‘ಇದು ನಿರಾಣಿ ಪೀಠ’, ಅವರ ಸ್ವಾರ್ಥಕ್ಕಾಗಿ ಬಳಸಿಕೊಳ್ಳುತ್ತಿದ್ದಾರೆ’ ಎಂಬ ಮಾತಿಗೆ ಉತ್ತರಿಸಿದ ಅವರು, ‘ಸ್ವಾಮಿಜೀಗಳನ್ನು, ಪೀಠವನ್ನು ನಮ್ಮ ಸ್ವಂತಕ್ಕಾಗಲಿ, ರಾಜಕೀಯಕ್ಕಾಗಲಿ ಬಳಸಿಕೊಂಡಿಲ್ಲ, ಯತ್ನಾಳ ಕುಡಿದ ನಶೆಯಲ್ಲಿ ಮಾತನಾಡುತ್ತಾರೆ. ಅವರ ಹೇಳಿಕೆಗೆ ಪ್ರತಿಕ್ರಿಯೆ ನೀಡಿ ನಾವು ಸಣ್ಣವರಾಗುವುದಿಲ್ಲ’ ಎಂದರು. ಬೆಂಡವಾಡ ರೇವಣಸಿದ್ದೇಶ್ವರ ಶ್ರೀಗಳು, ಆಲಗೂರ ಧರಿದೇವರ ಶ್ರೀಗಳು ಇದ್ದರು.

ದೆಹಲಿ ಕರ್ನಾಟಕ ಭವನದ ಮುಂದೆ ಪ್ರತಿಭಟನೆ

ನವದೆಹಲಿ: ಹಿಜಾಬ್–ಕೇಸರಿ ಶಾಲು ವಿವಾದಕ್ಕೆ ಕರ್ನಾಟಕ ಸರ್ಕಾರವೇ ಕಾರಣ ಎಂದು ಆರೋಪಿಸಿ ಗುರುವಾರ ಪ್ರತಿಭಟನೆ ನಡೆಸಿದ ವಿವಿಧ ಸಂಘಟನೆಗಳ ಕಾರ್ಯಕರ್ತರು ಹಾಗೂ ವಿದ್ಯಾರ್ಥಿಗಳನ್ನು ವಶಕ್ಕೆ ಪಡೆದ ಪೊಲೀಸರು ನಂತರ ಬಿಡುಗಡೆ ಮಾಡಿದರು.

ಸರ್ದಾರ್ ಪಟೇಲ್ ಮಾರ್ಗದಲ್ಲಿರುವ ಕರ್ನಾಟಕ ಭವನ–2ರ ಮುಂದೆ ರಾಜ್ಯ ಸರ್ಕಾರದ ವಿರುದ್ಧ ಪ್ರತಿಭಟನೆ ನಡೆಸಲು ಪ್ರತ್ಯೇಕವಾಗಿ ಬಂದ 100ಕ್ಕೂ ಹೆಚ್ಚು ಪ್ರತಿಭಟನಾಕಾರರನ್ನು ವಶಕ್ಕೆ ಪಡೆಯಲಾಯಿತು.

‘ನ್ಯಾಯಕ್ಕಾಗಿ ಅಖಿಲ ಭಾರತ ವಕೀಲರ ಸಂಘಟನೆ’ (ಎಐಎಲ್‌ಎಜೆ) ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ ಎಐಎಸ್‌ಎ ಹಾಗೂ ಕೆವೈಎಸ್ ಸದಸ್ಯರು, ದೆಹಲಿ ವಿ.ವಿ. ಮತ್ತು ಜಾಮಿಯಾ ಮಿಲಿಯಾ ಇಸ್ಲಾಮಿಯಾ ವಿ.ವಿಯ ವಿದ್ಯಾರ್ಥಿಗಳು ಇದ್ದರು.

ವಿವಿಧ ಕ್ಷೇತ್ರಗಳ ಪ್ರಮುಖರಿಂದ ಬಹಿರಂಗ ಪತ್ರ

‘ಮುಸ್ಲಿಮರ ಮೇಲಿನ ದಾಳಿಗೆ ಹಿಜಾಬ್ ನೆಪ’

ಪ್ರಜಾವಾಣಿ ವಾರ್ತೆ

ನವದೆಹಲಿ: ಹಿಜಾಬ್ ವಿರುದ್ಧ ಕರ್ನಾಟಕದಲ್ಲಿ ವ್ಯಕ್ತವಾಗಿರುವ ವಿರೋಧವು ‘ವರ್ಣಭೇದ ನೀತಿ ಜಾರಿಗೊಳಿಸುವ ಹೊಸ ಹುನ್ನಾರ ಮತ್ತು ಮುಸ್ಲಿಂ ಮಹಿಳೆಯ ಮೇಲಿನ ದಾಳಿಗೆ ನೆಪವಾಗಿದೆ’ ಎಂಬ ಆಕ್ರೋಶ ವ್ಯಕ್ತವಾಗಿದೆ.

ಹಿಜಾಬ್ ಕುರಿತ ಬೆಳವಣಿಗೆಗಳನ್ನು ತೀವ್ರವಾಗಿ ಖಂಡಿಸಿ ಹಲವು ಮಹಿಳಾವಾದಿಗಳು, ಶಿಕ್ಷಣ ತಜ್ಞರು, ಪ್ರಜಾಸತ್ತಾತ್ಮಕ ಸಂಘಟನೆಗಳು, ವಕೀಲರು, ಕಾರ್ಯಕರ್ತರು ಗುರುವಾರ ಬಹಿರಂಗಪತ್ರ ಬಿಡುಗಡೆ ಮಾಡಿದ್ದಾರೆ.

ಮಂಡ್ಯದ ಘಟನೆಯನ್ನು ಪ್ರಮುಖವಾಗಿ ಉಲ್ಲೇಖಿಸಿರುವ ಪ್ರಮುಖರು, ‘ಮುಸ್ಲಿಂ ಮಹಿಳೆ ಮೇಲಿನ ಹಲ್ಲೆಗೆ ಹಿಜಾಬ್ ಹೇಗೆ ಒಂದು ನೆಪವಾಗಬಹುದು ಎಂಬುದಕ್ಕೆ ಈ ಘಟನೆಯೇ ಸ್ಪಷ್ಟ ಎಚ್ಚರಿಕೆಯಾಗಿದೆ’ ಎಂದು ಹೇಳಿದ್ದಾರೆ.

ಈ ಬಹಿರಂಗ ಪತ್ರಕ್ಕೆ 1,750 ಮಂದಿ ಸಹಿ ಹಾಕಿದ್ದಾರೆ. ಅರುಣಾ ರಾಯ್, ರಾಧಿಕಾ ವೇಮುಲ, ಕವಿತಾ ಕೃಷ್ಣನ್, ಧಾವಲೆ, ಆ್ಯನಿ ರಾಜಾ, ಸಫೂರಾ ಜರ್ಗರ್, ವೃಂದಾ ಗ್ರೋವರ್, ನಿವೇದಿತಾ ಮೆನನ್, ಪ್ರಭಾತ್ ಪಟ್ನಾಯಕ್ ಇವರಲ್ಲಿ ಕೆಲವರು. 15 ರಾಜ್ಯಗಳ 130ಕ್ಕೂ ಹೆಚ್ಚು ಸಂಘಟನೆಗಳು ಪತ್ರದ ಅಡಕವನ್ನು ಅನುಮೋದಿಸಿವೆ.

ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆ, ಅಖಿಲ ಭಾರತ ಪ್ರಗತಿಪರ ಮಹಿಳಾ ಸಂಘಟನೆ, ಭಾರತೀಯ ಮಹಿಳೆಯರ ರಾಷ್ಟ್ರೀಯ ಒಕ್ಕೂಟ, ಬೆಬಾಕ್ ಕಲೆಕ್ಟಿವ್, ಸಹೇಲಿ ಮಹಿಳಾ ಸಂಪನ್ಮೂಲ ಕೇಂದ್ರ, ಆವಾಜ್ ಇ ನಿಜ್ವಾನ್, ರಾಷ್ಟ್ರೀಯ ಜನಾಂದೋಲನ ಮೈತ್ರಿ ಸೇರಿ ಹಲವು ಸಂಘಟನೆಗಳು ಸಹಿ ಹಾಕಿವೆ.

ಕ್ಯಾಂಪಸ್‌ಗಳಲ್ಲಿ ಹಿಜಾಬ್ ನಿಷೇಧಿಸುವುದು ‘ದ್ವೇಷದ ಅಪರಾಧ’. ಮುಸ್ಲಿಂ ಮಹಿಳೆಯರ ‘ಆನ್‌ಲೈನ್ ಹರಾಜು’ ಕುರಿತ ಇತ್ತೀಚಿನ ಘಟನೆ ನಂತರ ಹಿಂದೂ ಪರಮಾಧಿಕಾರ ದ್ಯೋತಕದ ಈ ಬೆಳವಣಿಗೆ ನಡೆದಿದೆ. ಹಿಜಾಬ್ ಧರಿಸಿದವರನ್ನು ಪ್ರತ್ಯೇಕವಾಗಿ ಕೂರಿಸುವುದು, ಕಾಲೇಜಿನಿಂದ ಹೊರಗಿರುವಂತೆ ಸೂಚಿಸುವುದು ವರ್ಣಭೇದ ನೀತಿಯ ಮನಸ್ಥಿತಿಯಲ್ಲದೇ ಮತ್ತೇನೂ ಅಲ್ಲ ಎಂದು ಆಕ್ರೋಶ ವ್ಯಕ್ತಪಡಿಸಲಾಗಿದೆ.

ಸಂವಿಧಾನವು ಶಾಲೆ, ಕಾಲೇಜುಗಳಲ್ಲಿ ಬಹುತ್ವ ಬೆಳೆಸಬೇಕು ಎನ್ನುತ್ತದೆ, ಏಕರೂಪತೆಯಲ್ಲ. ಇದೇ ಕಾರಣಕ್ಕಾಗಿ ಸಿಖ್ಖರಿಗೆ ತರಗತಿಯಷ್ಟೇ ಅಲ್ಲದೆ, ಸೇನೆ, ಪೊಲೀಸ್ ಇಲಾಖೆಯಲ್ಲಿಯೂ ರುಮಾಲು ಧರಿಸಲು ಅವಕಾಶವಿದೆ. ಇದೇ ಕಾರಣಕ್ಕೆ ಹಿಂದೂ ವಿದ್ಯಾರ್ಥಿಗಳು ಬಿಂದಿ, ತಿಲಕ, ವಿಭೂತಿ ಧರಿಸಬಹುದಾಗಿದೆ. ಅದೇ ಪ್ರಕಾರ, ಮುಸಲ್ಮಾನ ವಿದ್ಯಾರ್ಥಿನಿಯರು ಸಮವಸ್ತ್ರದ ಜೊತೆಗೆ ಹಿಜಾಬ್ ಧರಿಸಬಹುದಾಗಿದೆ ಎಂದು ಪ್ರತಿಪಾದಿಸಿದ್ದಾರೆ.

ಬೀಬಿ ಮುಸ್ಕಾನ್‌ಗೆ ಆರ್‌ಎಸ್‌ಎಸ್‌ನ ಮುಸ್ಲಿಂ ಘಟಕದ ಬೆಂಬಲ

‘ಪರ್ದಾ ಪದ್ಧತಿಯ ಭಾಗ ಹಿಜಾಬ್’

ಅಯೋಧ್ಯಾ (ಪಿಟಿಐ): ‘ಹಿಜಾಬ್’, ಭಾರತೀಯ ಸಂಸ್ಕೃತಿಯ ಅಂಗವಾಗಿರುವ ‘ಪರ್ದಾ’ ಪದ್ಧತಿಯ ಒಂದು ಭಾಗವೇ ಆಗಿದೆ. ಹಿಂದೂ ಮಹಿಳೆಯರಲ್ಲೂ ಕೆಲವರು ‘ಪರ್ದಾ’ ಧರಿಸುತ್ತಾರೆ. ಹಿಂದೂ ಮಹಿಳೆಯರು ತಮ್ಮ ವಸ್ತ್ರಸಂಹಿತೆಯನ್ನು ಆಯ್ಕೆ ಮಾಡಿಕೊಳ್ಳಲು ಸ್ವತಂತ್ರರಿರುವಾಗ, ಬೀಬಿ ಮುಸ್ಕಾನ್‌ಗೂ ಅದು ಅನ್ವಯಿಸುತ್ತದೆ ಎಂದು ಆರ್‌ಎಸ್‌ಎಸ್‌ನ ಮುಸ್ಲಿಂ ಘಟಕವಾದ ಮುಸ್ಲಿಂ ರಾಷ್ಟ್ರೀಯ ಮಂಚ್ (ಎಂಆರ್‌ಎಂ) ಹೇಳಿದೆ.

ಕರ್ನಾಟಕದ ಮಂಡ್ಯದ ಕಾಲೇಜೊಂದರಲ್ಲಿ ಬುರ್ಖಾ ಧರಿಸಿಕೊಂಡು ಹೋಗುತ್ತಿದ್ದ ವಿದ್ಯಾರ್ಥಿನಿ ಮುಸ್ಕಾನ್ ಸುತ್ತಲು, ಯುವಕರ ಗುಂಪು ‘ಜೈ ಶ್ರೀರಾಮ್’ ಘೋಷಣೆಗಳನ್ನು ಕೂಗುತ್ತ ಹೆದರಿಸಿದ್ದು ಸ್ವೀಕಾರಾರ್ಹವಲ್ಲ. ಇಂಥ ಚಟುವಟಿಕೆಗಳು ಹಿಂದೂ ಧರ್ಮಕ್ಕೆ ವಿರುದ್ಧವಾದದು. ಆ ಗುಂಪಿನ ಭಾಗವಾಗಿದ್ದವರು ಹಿಂದೂ ಸಂಸ್ಕೃತಿಯನ್ನು ಅವಮಾನಿಸಿದ್ದಾರೆ ಎಂದು ಎಂಆರ್‌ಎಂ ಪ್ರಾಂತ ಸಂಚಾಲಕ ಅನಿಲ್ ಸಿಂಗ್ (ಅವಧ್) ದೂರಿದ್ದಾರೆ.

‘ಮುಸ್ಕಾನ್ ನಮ್ಮ ಸಮುದಾಯದ ಮಗಳು ಮತ್ತು ಸಹೋದರಿ. ಈ ವಿವಾದದ ಸಂದರ್ಭದಲ್ಲಿ ನಾವು ಮುಸ್ಕಾನ್ ಪರ ನಿಲ್ಲುತ್ತೇವೆ’ ಎಂದು ಅವರು ತಿಳಿಸಿದ್ದಾರೆ. ಹಿಂದೂ ಸಂಸ್ಕೃತಿಯು ಮಹಿಳೆಯರನ್ನು ಗೌರವಿಸುವ ಕುರಿತು ಹೇಳುತ್ತದೆ, ಆದರೆ ‘ಜೈ ಶ್ರೀರಾಮ್’ ಘೋಷಣೆಯೊಂದಿಗೆ ವಿದ್ಯಾರ್ಥಿನಿಯನ್ನು ಬೆದರಿಸಿದ್ದು ತಪ್ಪು ಎಂದು ಅವರು ಹೇಳಿದ್ದಾರೆ.

ಸಂವಿಧಾನವು ಹೆಣ್ಣು ಮಗುವಿಗೆ ‘ಹಿಜಾಬ್’ ಧರಿಸುವ ಹಕ್ಕನ್ನು ನೀಡಿದೆ. ವಿದ್ಯಾರ್ಥಿನಿ ಶಿಕ್ಷಣಸಂಸ್ಥೆಯ ವಸ್ತ್ರ ಸಂಹಿತೆ ಉಲ್ಲಂಘಿಸಿದ್ದರೆ, ಸಂಬಂಧಿಸಿದ ಶಿಕ್ಷಣ ಸಂಸ್ಥೆ ಕ್ರಮ ತೆಗೆದುಕೊಳ್ಳಬಹುದು ಎಂದು ಅವರು ತಿಳಿಸಿದ್ದಾರೆ.

ಪೆಟ್ರೋಲ್ ಬಾಂಬ್ ಎಸೆತ ಪ್ರಕರಣ: ಎನ್ಐಎ ತನಿಖೆಗೆ ಬಿಜೆಪಿ ಆಗ್ರಹ

ಚೆನ್ನೈ (ಪಿಟಿಐ): ಬಿಜೆಪಿಯ ನೀಟ್ ಪರ ನಿಲುವನ್ನು ವಿರೋಧಿಸಿ 38 ವರ್ಷದ ವ್ಯಕ್ತಿಯೊಬ್ಬ ತಮಿಳುನಾಡಿನ ಬಿಜೆಪಿ ಘಟಕದ ಕಚೇರಿ ಮೇಲೆ ಪೆಟ್ರೋಲ್ ಬಾಂಬ್ ಎಸೆದಿದ್ದು ಪ್ರಕರಣದ ತನಿಖೆಯನ್ನು ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್ಐಎ) ವಹಿಸಬೇಕು ಎಂದು ಬಿಜೆಪಿ ಆಗ್ರಹಿಸಿದೆ. ಈ ದಾಳಿಯನ್ನು ಖಂಡಿಸಿದ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಕೆ. ಅಣ್ಣಾಮಲೈ, ರಾಷ್ಟ್ರ ವಿರೋಧಿ ಶಕ್ತಿಗಳು ಮತ್ತು ಮೂಲಭೂತವಾದಿಗಳನ್ನು ಬಂಧಿಸಬೇಕು ಎಂದು ಆಗ್ರಹಿಸಿದರು.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ವೈಕುಂಠ ಸಮಾರಾಧನೆ



ಲೇಟ್ ಶ್ರೀ ಶೇಂದಿ ವೇಮಣ್ಣರವರು ಮತ್ತು ಶ್ರೀಮತಿ ನರಸಮ್ಮ ಅವರ ದ್ವಿತೀಯ ಪುತ್ರ ನಟ, ನಿರ್ದೇಶಕ, ನಿರ್ಮಾಪಕ ಮತ್ತು ಬಾರ್ ಮಾಲೀಕರಾದ
ಶ್ರೀಯುತ ಹಾ.ವೇ.ಶಾಮಣ್ಣರವರು
ಹೃದಯಾಘಾತದಿಂದ ದಿನಾಂಕ 01.02.2022 ರಂದು ರಾತ್ರಿ 10.18ಕ್ಕೆ ದೈವಾದೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ಮೃತರ ವೈಕುಂಠ ಸಮಾರಾಧನೆ 11.02.2022 (ಶುಕ್ರವಾರ) ಹಾರಗದ್ದೆಯಲ್ಲಿರುವ ನಮ್ಮ ಸ್ವಗೃಹದಲ್ಲಿ ಏರ್ಪಡಿಸಲಾಗಿದೆ. ಪುಣ್ಯಾಹ : ಬೆಳಿಗ್ಗೆ 8.30.
ವೈಕುಂಠ ಸಮಾರಾಧನೆ ಮಧ್ಯಾಹ್ನ 12.00
ಆತ್ಮೀಯರಾದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಶಾಂತಿ ಕೋರಬೇಕಾಗಿ ಪ್ರಾರ್ಥನೆ
ಇಂತಿ ದುಃಖತಪ್ತರು : ಹಾ.ವೇ.ವೆಂಕಟೇಶ್, ಹಿರಿಯ ಕಾಂಗ್ರೆಸ್ ಮುಖಂಡರು, ಹಾರಗದ್ದೆ
ಅನಿತಾ ಶಾಮಣ್ಣ ಮತ್ತು ಕುಟುಂಬದವರು, ಹಾರಗದ್ದೆ
ವಿ.ಜಯಣ್ಣ, ನಿವೃತ್ತ ಎಲ್ಐಸಿ ಅಭಿವೃದ್ಧಿ ಅಧಿಕಾರಿಗಳು (ಹುಣಸೂರು) ಮೈಸೂರು
ಹಾ.ವೇ.ಮಂಜುನಾಥ್, ಮಾಜಿ ಉಪಾಧ್ಯಕ್ಷರು ಹಾರಗದ್ದೆ ಗ್ರಾಮ ಪಂಚಾಯಿತಿ
ಶ್ರೀಮತಿ ಲೀಲಾವತಿ ಮತ್ತು ಡಾ.ಎನ್.ವೆಂಕಟೇಶ್, ಸುಬ್ಬರಾಯಣಪೇಟೆ ಹೆಚ್.ಕ್ರಾಸ್
ವಿ.ಆನಂದ್ (ನಿಸರ್ಗ) ಹಾರಗದ್ದೆ ಮತ್ತು ಮಕ್ಕಳು ಹಾಗೂ ಮೊಮ್ಮಕ್ಕಳು

20ನೇ ವರ್ಷದ ಸವಿನೆನಪು
ನನ್ನ ಹೆಸರು ಗೌತಮ್
ನನ್ನ ತಂದೆ ತಾಯಿಯ
ಮಡಿಲಲ್ಲಿ ಬೆಳೆಯುವ
ನನ್ನನ್ನು ದೇವರ ಮಡಿಲಿಗೆ
ಕಳಿಸಿದರು. ದೇವರಲ್ಲೂ
ಮತ್ತು ನಿಮ್ಮಲ್ಲಿಯೂ
ಸದಾ ಮಗುವಾಗಿರುವೆ
ಇಂತಿ: ಪಿ.ವಿ. ವೆಂಕಟಸ್ವಾಮಿರೆಡ್ಡಿ, ಪಾರ್ವತಮ್ಮ, ಚಂದನ್ ವಿ. ರೆಡ್ಡಿ, ಶ್ವೇತಾ ಪಿ.ಸಿ. ಅಬ್ಬಯ್ಯ ರೆಡ್ಡಿ, ಸುಶೀಲಮ್ಮ.
ಗೌತಮ್ ವಿ.ಪಣತೂರು
ಜನನ: 27-09-1993 ನಿಧನ:11-02-2002

ಕೋವಿಡ್: ವಿದೇಶಗಳಿಂದ ಬರುವವರಿಗೆ ಹೊಸ ಮಾರ್ಗಸೂಚಿ

ನವದೆಹಲಿ (ಪಿಟಿಐ): ವಿದೇಶಗಳಿಂದ ಭಾರತಕ್ಕೆ ಆಗಮಿಸುವವರಿಗೆ ಕೇಂದ್ರ ಆರೋಗ್ಯ ಸಚಿವಾಲಯವು ಗುರುವಾರ ಹೊಸ ಮಾರ್ಗಸೂಚಿಗಳನ್ನು ಪ್ರಕಟಿಸಿದೆ. ಈ ಹಿಂದೆ ಕಡ್ಡಾಯಗೊಳಿಸಿದ್ದ ಏಳು ದಿನಗಳ 'ಹೋಮ್ ಕ್ವಾರಂಟೈನ್' ಅನ್ನು ರದ್ದುಗೊಳಿಸಲಾಗಿದೆ. ಬದಲಿಗೆ, 14 ದಿನಗಳ ಸ್ವಯಂ ನಿಗಾ ವಹಿಸುವಂತೆ ಸೂಚನೆ ನೀಡಲಾಗಿದೆ.

ಹೊಸ ಮಾರ್ಗಸೂಚಿ ಫೆ. 14ರಿಂದ ಜಾರಿಗೆ ಬರಲಿದೆ. ಅಪಾಯವಿರುವ ರಾಷ್ಟ್ರಗಳು ಮತ್ತು ಇತರ ರಾಷ್ಟ್ರಗಳು ಎಂಬ ಪಟ್ಟಿಯನ್ನು ಮಾರ್ಗಸೂಚಿಯಲ್ಲಿ ತೆಗೆದುಹಾಕಲಾಗಿದೆ.

ಆರ್‌ಟಿಪಿಸಿಆರ್ ನೆಗೆಟಿವ್ ವರದಿಯನ್ನು 'ಏರ್ ಸುವಿಧಾ' ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡುವುದರ ಜೊತೆಗೆ (ಪ್ರಯಾಣಕ್ಕೆ 72 ಗಂಟೆಗಳ ಮೊದಲು ಮಾಡಿಸಿದ ಪರೀಕ್ಷೆ), ಪೂರ್ಣ ಲಸಿಕೆ ಪಡೆದ ಪ್ರಮಾಣಪತ್ರವನ್ನು ಅಪ್‌ಲೋಡ್ ಮಾಡುವ ಆಯ್ಕೆಯನ್ನು 82 ರಾಷ್ಟ್ರಗಳಿಂದ ಬರುವವರಿಗೆ ನೀಡಲಾಗಿದೆ ಎಂದು ಆರೋಗ್ಯ ಇಲಾಖೆ ತಿಳಿಸಿದೆ.

ಸೋಂಕು ದೃಢ ಪ್ರಮಾಣ ಇಳಿಕೆ

ನವದೆಹಲಿ (ಪಿಟಿಐ): ಕೊರೊನಾ ಸೋಂಕಿನ ದೃಢ ಪ್ರಮಾಣ ಮತ್ತು ಅದರ ಪರಿಣಾಮ ಕೇರಳ ಮತ್ತು ಮಿಜೋರಾಂನಲ್ಲಿ ಕಳವಳಕಾರಿಯಾಗಿದ್ದರೂ, ಕೆಲವು ರಾಜ್ಯಗಳು ಸೇರಿ ದೇಶದಲ್ಲಿ ಕೋವಿಡ್– 19 ಸೋಂಕು ಹರಡುವಿಕೆ ಸುಧಾರಿಸುತ್ತಿದೆ ಎಂದು ಕೇಂದ್ರ ಸರ್ಕಾರ ಗುರುವಾರ ತಿಳಿಸಿದೆ.

3 ವಾರಗಳ ಹಿಂದೆ ಮೂರನೇ ಅಲೆ ಗರಿಷ್ಠ ಮಟ್ಟದಲ್ಲಿದ್ದಾಗ ಶೇಕಡಾ 20.75ರಷ್ಟಿದ್ದ ಸೋಂಕು ದೃಢ ಪ್ರಮಾಣವು ಈಗ ಶೇಕಡಾ 5ಕ್ಕಿಂತ ಕಡಿಮೆಯಾಗಿದೆ. ಆದರೆ ಸುಮಾರು 40 ಜಿಲ್ಲೆಗಳಲ್ಲಿ ಪ್ರಕರಣಗಳ ಸಂಖ್ಯೆಯಲ್ಲಿ ಏರಿಕೆಯಾಗುತ್ತಿದೆ. ಹಾಗಾಗಿ ಮತ್ತಷ್ಟು ಜಾಗರೂಕತೆಯಿಂದ ಇರಬೇಕು ಎಂದು ಹೇಳಿದೆ.

ಕೇರಳ, ಮಹಾರಾಷ್ಟ್ರ, ತಮಿಳುನಾಡು ಮತ್ತು ಕರ್ನಾಟಕದಲ್ಲಿ 50,000ಕ್ಕೂ ಹೆಚ್ಚು ಸಕ್ರಿಯ ಪ್ರಕರಣಗಳಿವೆ. ಕೇರಳದಲ್ಲಿ ಅತಿ ಹೆಚ್ಚು ಪ್ರಕರಣಗಳಿದ್ದು ಇಲ್ಲಿ ದೃಢ ಪ್ರಮಾಣ ಶೇಕಡಾ 29.57 ರಷ್ಟು ಇದೆ. ಮಿಜೋರಾಂ, ಹಿಮಾಚಲ ಪ್ರದೇಶ, ಅರುಣಾಚಲ ಪ್ರದೇಶ ಮತ್ತು ಸಿಕ್ಕಿಂನಲ್ಲಿ ವರದಿಯಾಗುತ್ತಿರುವ ಸೋಂಕಿನ ಪ್ರಮಾಣವೂ ಸಹ ಕಳವಳಕಾರಿಯಾಗಿದೆ' ಎಂದಿದೆ.

15-18 ವರ್ಷ ವಯಸ್ಸಿನ ಶೇ 69ರಷ್ಟು ಮಂದಿ ಕೋವಿಡ್ ಲಸಿಕೆಯ ಮೊದಲ ಡೋಸ್ ಪಡೆದಿದ್ದಾರೆ. ಹಾಗೂ ಶೇ 14 ರಷ್ಟು ಯುವಕರು ಎರಡೂ ಡೋಸ್‌ಗಳನ್ನು ಪಡೆದಿದ್ದಾರೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

ರಷ್ಯಾ ಸಮರಾಭ್ಯಾಸ

ಮಾಸ್ಕೊ (ಎಪಿ): ಬೆಲಾರಸ್‌ನಲ್ಲಿ ರಷ್ಯಾವು ಸಮರಾಭ್ಯಾಸ ನಡೆಸಿರುವುದರಿಂದ ಉಕ್ರೇನ್ ಮೇಲೆ ದಾಳಿ ನಡೆಯುವ ಭೀತಿ ಹೆಚ್ಚಿದೆ ಎಂದು ಪಾಶ್ಚಿಮಾತ್ಯ ರಾಷ್ಟ್ರಗಳು ಭಾವಿಸಿವೆ. ಇದೇ ವೇಳೆ ರಾಜತಾಂತ್ರಿಕ ಪ್ರಯತ್ನಗಳಿಂದ ಉದ್ವಿಗ್ನ ವಾತಾವರಣ ಶಮನಗೊಳಿಸುವ ಯತ್ನ ಬಿರುಸುಗೊಂಡಿದೆ.

ಬ್ರಿಟನ್‌ನ ವಿದೇಶಾಂಗ ಕಾರ್ಯದರ್ಶಿ ಲಿಜ್ ಟ್ರಸ್ ರಷ್ಯಾದ ವಿದೇಶಾಂಗ ಸಚಿವರೊಂದಿಗೆ ಚರ್ಚಿಸಿ, ಉಕ್ರೇನ್ ಮೇಲೆ ಆಕ್ರಮಣ ನಡೆಸಿದ್ದೇ ಆದರೆ ರಷ್ಯಾವು ಭಾರಿ ಬೆಲೆ ತೆರಬೇಕಾಗಿ ಬರುತ್ತದೆ ಎಂದು ಎಚ್ಚರಿಸಿದರು.

ಲಖೀಂಪುರ ಖೇರಿ ಹಿಂಸಾಚಾರ ಪ್ರಕರಣ: ಆಶಿಶ್ ಮಿಶ್ರಾ ನಿರಾಳ

ಕೇಂದ್ರ ಸಚಿವರ ಪುತ್ರನಿಗೆ ಜಾಮೀನು

ಲಖನೌ (ಪಿಟಿಐ): ಲಖೀಂಪುರ ಖೇರಿ ಹಿಂಸಾಚಾರ ಪ್ರಕರಣದ ಪ್ರಮುಖ ಆರೋಪಿ, ಕೇಂದ್ರ ಸಚಿವ ಅಜಯ್ ಮಿಶ್ರಾ ಅವರ ಪುತ್ರ ಆಶಿಶ್ ಮಿಶ್ರಾಗೆ ಅಲಹಾಬಾದ್ ಹೈಕೋರ್ಟ್‌ನ ಲಖನೌ ಪೀಠ ಗುರುವಾರ ಜಾಮೀನು ನೀಡಿದೆ.

ಜಿಲ್ಲಾ ನ್ಯಾಯಾಲಯದಲ್ಲಿ ಜಾಮೀನು ಅರ್ಜಿ ತಿರಸ್ಕೃತಗೊಂಡ ಬಳಿಕ ಆರೋಪಿ ಅಲಹಾಬಾದ್ ಹೈಕೋರ್ಟ್ ಮೊರೆ ಹೋಗಿದ್ದರು. ವಿಡಿಯೊ ಕಾನ್ಫರೆನ್ಸ್ ಮೂಲಕ ನಡೆಸಿದ ವಿಚಾರಣೆ ಮುಕ್ತಾಯಗೊಂಡ ಬಳಿಕ ನ್ಯಾಯಮೂರ್ತಿ ರಾಜೀವ್ ಸಿಂಗ್ ನೇತೃತ್ವದ ಏಕ ಸದಸ್ಯತ್ವ ಪೀಠವು ಜ. 18ರಂದು ತೀರ್ಪನ್ನು ಕಾಯ್ದಿರಿಸಿತ್ತು.

ಉತ್ತರಪ್ರದೇಶದಲ್ಲಿ ಮೊದಲ ಹಂತದ ಮತದಾನ ನಡೆದ ಸಂದರ್ಭದಲ್ಲೇ ಕೋರ್ಟ್ ತೀರ್ಪು ಹೊರಬಿದ್ದಿದೆ. ಲಖೀಂಪುರ ಖೇರಿಯಲ್ಲಿ ಮೂರನೇ ಹಂತದಲ್ಲಿ ಈ ತಿಂಗಳ 20ರಂದು ಚುನಾವಣೆ ನಡೆಯಲಿದೆ.

ಕಳೆದ ವರ್ಷ ಅಕ್ಟೋಬರ್ 3ರಂದು ಕೇಂದ್ರದ ಕೃಷಿ ಕಾಯ್ದೆಗಳ ವಿರುದ್ಧ ಪ್ರತಿಭಟನೆ ನಡೆಸುತ್ತಿದ್ದ ರೈತರ ಮೇಲೆ ಆಶಿಶ್ ಮಿಶ್ರಾ ಹಾಗೂ ಅವರ ಬೆಂಗಾವಲು ಪಡೆಯ ವಾಹನಗಳು ಚಲಿಸಿದ್ದವು ಎಂದು ಆರೋಪಿಸಲಾಗಿತ್ತು. ಬಳಿಕ ಹಿಂಸಾಚಾರವೂ ನಡೆದಿತ್ತು.

'ನೈತಿಕ ಹೊಣೆಗಾರಿಕೆ ಇಲ್ಲವೇ'

'ಕೇಂದ್ರ ಸಚಿವ ಅಜಯ್ ಮಿಶ್ರಾ ಅವರ ಪುತ್ರ ಲಖೀಂಪುರ ಖೇರಿ ಹಿಂಸಾಚಾರ ಪ್ರಕರಣದ ಪ್ರಮುಖ ಆರೋಪಿ. ಹಾಗಿದ್ದರೂ ಪ್ರಧಾನಿ ಮೋದಿ ಅವರು ಸಚಿವರಿಂದ ರಾಜೀನಾಮೆಯನ್ನು ಏಕೆ ಕೇಳಲಿಲ್ಲ' ಎಂದು ವಾಗ್ದಾಳಿ ನಡೆಸಿದ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ಅವರು, 'ಪ್ರಧಾನಿಗೆ ದೇಶದ ಬಗ್ಗೆ ನೈತಿಕ ಹೊಣೆಗಾರಿಕೆ ಇಲ್ಲವೇ' ಎಂದು ಪ್ರಶ್ನಿಸಿದ್ದಾರೆ.

ಈ ವೇಳೆ ನಾಲ್ವರು ರೈತರು, ಸ್ಥಳೀಯ ಪತ್ರಕರ್ತ ಸೇರಿದಂತೆ 8 ಮಂದಿ ಮೃತಪಟ್ಟಿದ್ದರು.

ಕೃಷಿ ಕಾಯ್ದೆ ವಿರೋಧಿಸುವುದನ್ನು ಮುಂದುವರಿಸಿದರೆ ತಕ್ಕ ಪರಿಣಾಮ ಎದುರಿಸಬೇಕಾಗುತ್ತದೆ ಎಂದು ಬೆದರಿಕೆ ಹಾಕಿದ್ದ ಸಚಿವ ಅಜಯ್ ಮಿಶ್ರಾ ವಿರುದ್ಧ ರೈತರು ಪ್ರತಿಭಟನೆ ನಡೆಸುತ್ತಿದ್ದಾಗ ಈ ದುರ್ಘಟನೆ ನಡೆದಿತ್ತು. ರೈತರ ಮೇಲೆ ಹರಿದ ಒಂದು ವಾಹನದಲ್ಲಿ ಸಚಿವರ ಮಗ ಕುಳಿತಿದ್ದರು ಎಂದು ರೈತರು ಹೇಳಿದ್ದರು.

ರೈತರ ಮೇಲೆ ವಾಹನ ಹರಿಸಲು ಚಾಲಕನಿಗೆ ಪ್ರಚೋದನೆ ನೀಡಿದ ಬಗ್ಗೆ ಆಶಿಶ್ ಮಿಶ್ರಾ ವಿರುದ್ಧ ಸಾಕ್ಷ್ಯಾಧಾರ ಇಲ್ಲ, ತಮ್ಮ ಕಕ್ಷಿದಾರ ಅಮಾಯಕ ಎಂದು ಸಚಿವರ ಮಗನ ಪರ ಹಾಜರಿದ್ದ ವಕೀಲರು ಕೋರ್ಟ್‌ಗೆ ಹೇಳಿದ್ದರು.

'ಘಟನೆಯಲ್ಲಿ ಮೃತಪಟ್ಟವರಿಗೆ ಅಥವಾ ಬೇರೆ ಯಾರಿಗೂ ಗುಂಡಿನೇಟು ಬಿದ್ದಿಲ್ಲ. ವಾಹನ ಡಿಕ್ಕಿ ಹೊಡೆದಿದ್ದರಿಂದ ಆಗಿರುವ ಗಾಯದ ಕೆಲ ಗುರುತುಗಳಿವೆ. ಘಟನೆ ನಡೆದಿದ್ದ ಸ್ಥಳದಲ್ಲಿ ಸಾವಿರಾರು ಮಂದಿ ಪ್ರತಿಭಟನಕಾರರು ಜಮಾಯಿಸಿದ್ದರು. ಚಾಲಕ ತನ್ನನ್ನು ತಾನು ರಕ್ಷಿಸಿಕೊಳ್ಳಲು ವೇಗವಾಗಿ ವಾಹನ ಚಲಾಯಿಸಿರುವ ಸಾಧ್ಯತೆಯಿದ್ದು, ಇದೇ ಕಾರಣದಿಂದಲೂ ಘಟನೆ ಸಂಭವಿಸಿರಬಹುದು' ಎಂದು ಕೋರ್ಟ್ ಹೇಳಿತು.

'ಚಾಲಕ ಸೇರಿದಂತೆ ವಾಹನದಲ್ಲಿ ಕುಳಿತಿದ್ದ ಮೂವರ ಸಾವಿನ ಬಗ್ಗೆಯೂ ಕೋರ್ಟ್ ಕಣ್ಣುಮುಚ್ಚಿರುವುದಿಲ್ಲ. ಘಟನೆಗೆ ಸಂಬಂಧಿಸಿ ಹಾಜರುಪಡಿಸಿರುವ ಛಾಯಾಚಿತ್ರಗಳು ಪ್ರತಿಭಟನಕಾರರ ಕ್ರೂರತನವನ್ನು ತಿಳಿಸುತ್ತವೆ' ಎಂದಿತು.

ಇದನ್ನು ವಿರೋಧಿಸಿದ ಅಡಿಷನಲ್ ಅಡ್ವೊಕೇಟ್ ಜನರಲ್ ವಿ.ಕೆ. ಷಾಹಿ ಅವರು ರೈತರ ಮೇಲೆ ಹರಿದ ಕಾರಿನಲ್ಲಿ ಆಶಿಶ್ ಮಿಶ್ರಾ ಇದ್ದರು ಎಂದು ವಾದಿಸಿದ್ದರು. ವಾದ– ಪ್ರತಿವಾದ ಆಲಿಸಿದ ಬಳಿಕ ತೀರ್ಪು ಕಾಯ್ದಿರಿಸಲಾಗಿತ್ತು.

ಪ್ರಕರಣಕ್ಕೆ ಸಂಬಂಧಿಸಿ ಬಂಧನದಲ್ಲಿರುವವರ ಮೇಲೆ ಭಾರತೀಯ ದಂಡ ಸಂಹಿತೆಯ ಸೆಕ್ಷನ್ 279 (ಅಜಾಗರೂಕತೆಯಿಂದ ವಾಹನ ಚಾಲನೆ), 338 (ನಿರ್ಲಕ್ಷ್ಯದಿಂದ ಗಂಭೀರ ಗಾಯಗೊಳ್ಳಲು ಕಾರಣವಾಗುವುದು) ಹಾಗೂ 340 ಎ (ನಿರ್ಲಕ್ಷ್ಯದಿಂದ ಸಾವಿಗೆ ಕಾರಣರಾಗುವುದು) ಅಡಿ ಪ್ರಕರಣ ದಾಖಲಿಸಿಕೊಳ್ಳಲಾಗಿತ್ತು. ಇದರ ಬದಲಾಗಿ ಭಾರತೀಯ ದಂಡ ಸಂಹಿತೆಯ ಸೆಕ್ಷನ್ 307ರ (ಕೊಲೆ ಯತ್ನ) ಅಡಿ ಪ್ರಕರಣ ದಾಖಲಿಸಬೇಕು ಎಂದು ಎಸ್ಐಟಿ ವಿನಂತಿ ಮಾಡಿತ್ತು.

ಮಿಶ್ರಾ ಅವರನ್ನು ಬಂಧಿಸಿದ್ದ ವಿಶೇಷ ತನಿಖಾ ತಂಡ (ಎಸ್ಐಟಿ) ಲಖಿಂಪುರ ಖೇರಿ ಹಿಂಸಾಚಾರ ಪೂರ್ವಯೋಜಿತ ಎಂದು ಹೇಳಿತ್ತು. ಘಟನೆಯ ಮಾರನೇ ದಿನ ನಂತರ ಆಶಿಶ್ ಮಿಶ್ರಾರನ್ನು ಸುದೀರ್ಘ ಕಾಲ ವಿಚಾರಣೆ ನಡೆಸಿದ್ದ ವಿಶೇಷ ತನಿಖಾ ತಂಡವು, ತದನಂತರ ರೈತರ ಕೊಲೆ ಪ್ರಕರಣದ ಸಂಬಂಧ ಬಂಧಿಸಿತ್ತು.

ಜಮ್ಮು –ಕಾಶ್ಮೀರದಲ್ಲಿ ಲಘು ಭೂಕಂಪ

ಪ್ರಜಾವಾಣಿ ವಾರ್ತೆ

ಶ್ರೀನಗರ: ಜಮ್ಮು ಮತ್ತು ಕಾಶ್ಮೀರದಲ್ಲಿ ಗುರುವಾರ ಲಘು ಭೂಕಂಪ ಸಂಭವಿಸಿದ್ದು, ಕಣಿವೆಯ ಪ್ರಸಿದ್ಧ ಪ್ರವಾಸಿ ತಾಣ ಗುಲ್‌ಮಾರ್ಗ್,ಬಂಡಿಪೋರಾ, ಸೋಪುರೆ, ಗಂದರ್‌ಬಲ್, ರಾಜೌರಿ ಸೇರಿ ವಿವಿಧ ಪ್ರದೇಶಗಳಲ್ಲಿ ಕಂಪನದ ಅನುಭವ ಉಂಟಾಗಿದ್ದು, ಯಾವುದೇ ಹಾನಿಯ ಬಗ್ಗೆ ವರದಿಯಾಗಿಲ್ಲ.

'ಗುರುವಾರ ಮಧ್ಯಾಹ್ನ 12.25ಕ್ಕೆ ಭೂಕಂಪ ಸಂಭವಿಸಿದ್ದು, ಪಾಕಿಸ್ತಾನದ ಗಿಲ್ಗಿಟ್ ಬಾಲಿಸ್ತಾನ್ ಎಂಬ ಪ್ರದೇಶದ 20 ಕಿ.ಮೀ ಆಳದಲ್ಲಿ ಭೂಕಂಪನದ ಕೇಂದ್ರ ಬಿಂದುವನ್ನು ಗುರುತಿಸಲಾಗಿದೆ. ಭೂಕಂಪನದ ತೀವ್ರತೆಯು ರಿಕ್ಟರ್ ಮಾಪಕದಲ್ಲಿ 3.8 ದಾಖಲಾಗಿದೆ.' ಎಂದು ರಾಷ್ಟ್ರೀಯ ಭೂಕಂಪಶಾಸ್ತ್ರ ಕೇಂದ್ರವು ಟ್ವೀಟ್ ಮಾಡಿದೆ.

ಹಿಮ ಜಲಪಾತ! ಕಾಶ್ಮೀರದ ತಂಗ್‌ಮಾರ್ಗ್‌ನಲ್ಲಿರುವ ಡ್ರ್ಯಾಂಗ್ ಕಣಿವೆ ಪ್ರದೇಶದಲ್ಲಿ ಹೆಪ್ಪುಗಟ್ಟಿದ ಜಲಪಾತದ ಎದುರು ಗುರುವಾರ ಫೋಟೊಗೆ ಪೋಸು ನೀಡಿದ ಯುವತಿ– ಪಿಟಿಐ ಚಿತ್ರ

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Part-Time Jobs

ಕನ್ನಡ ಮತ್ತುಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

WORK FROM HOME ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000ವರೆಗೆ ಸಂಪಾದಿಸಿ. ಕನ್ನಡ/ ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8139955155/ 8139988588

Engg/ Production Technical

URGENT REQUIREMENT: LED-TECHNICIAN, Looking For Candidates From any ITI/ Diploma, Freshers Can Apply. 9739320044.

ಕಂಪನಿಗಳಿಗೆ ಬೇಕಾಗಿದ್ದಾರೆ. ಟಾಟಾಮೋಟಾರ್ಸ್, TVS, ಬ್ರಿಟಾನಿಯಾಗಳಿಗೆ SSLC, PUC, Degree ಯವರು ITIನವರುಗಳು (ವಿದ್ಯಾರ್ಹತೆಯಿಲ್ಲದವರಿಗೂ) 18,100-56,000/- ವಸತಿಯೂಟದೊಂದಿಗೆ. 7899778278, 9611715755

ತಕ್ಷಣ ಬೇಕಾಗಿದ್ದಾರೆ ಕರ್ನಾಟಕದ ಎಲ್ಲಾಜಿಲ್ಲೆಗಳಲ್ಲಿನ ಕಂಪನಿಗಳಿಗೆ ಆಫೀಸಗಳಿಗೆ 7th,SSLC,PUC, ಡಿಗ್ರಿಯಾದವರಿಗೆ, (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟದೊಂದಿಗೆ ESI/PF ನೊಂದಿಗೆ 16,800-48,000/- 9739066244, 7406066011

General

MULTIPLE STAFF REQUIRED, ITI, DIPLOMA, BE, Experienced ELECTRICAL, ELECTRONICS & FITTERS Contact: 9066662685/ 86/ 99

TVS ಬ್ರಿಟಾನಿಯಾ ವಿಡಿಯೋಕಾನ್ ಗಳಿಗೆ 7th,SSLC,PUC, ಡಿಗ್ರಿಯವರು ITI ನವರುಗಳು ಕರ್ನಾಟಕದ ಎಲ್ಲಾ ಜಿಲ್ಲೆಗಳಿಗೆ ನೇರನೇಮಕಾತಿಯಿರುತ್ತದೆ. ESI, PF ನೊಂದಿಗೆ 16,600- 60,000/- ವಸತಿಯೂಟವಿರುತ್ತದೆ. ಸಂಪರ್ಕಿಸಿ: 7760014526, 9739544856

TOYOTA, ಟಾಟಾಮೋಟಾರ್ಸ್, ಬಿಗ್ ಬಜಾರ್ಸ ಬ್ರಿಟಾನಿಯಾಗಳಿಗೆ 5th,SSLC, Degree, ITI,Diploma ದವರು ನೇರನೇಮಕಾತಿಯಿದೆ.18,000-60,000 /- ವಸತಿಯೂಟವಿದೆ. 7795837319, 9901312461

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆಕೆಲಸಕ್ಕೆ, ಅಡುಗೆಗೆ, ಮಹಿಳೆಯರು, ಹೋಂನರ್ಸಗಳು ಹುಡುಗಿಯರು ಬೇಕಾಗಿದ್ದಾರೆ. ಊಟವಸತಿವಿದೆ. 10.000 - 15,000. 8951315839, 9880545002

ಕಂಪ್ಯೂಟರ್

Printer

EPSON EXCEED YOUR VISION
ಹೊಚ್ಚಹೊಸ A3 ಮೊನೋ ಎಕೋಟ್ಯಾಂಕ್ ಪ್ರಿಂಟರ್ SMART MFP ಫೋಟೋಕಾಪಿ ಮತ್ತು ಸ್ಟೇಷನರಿ ಶಾಪ್‌ಗಳಿಗೆ
12 ಪೈಸೆ ಪ್ರತಿ ಪ್ರಿಂಟ್‌ಗೆ*
ವಿದ್ಯುತ್ ಬಳಕೆ 19W* ನಷ್ಟು ಕಡಿಮೆ

ಮೊನೋಕ್ರೋಮ್ ಎಕೋಟ್ಯಾಂಕ್ M15140
*Conditions apply.
CALL 88700 00768 FOR MORE INFO

ಬಿಲ್ಡರ್ ಎಸೆನ್ಷಿಯಲ್

Water Proofing Materials

ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

ರಿಯಲ್ ಎಸ್ಟೇಟ್ ಸೆಲ್ಲಿಂಗ್

Mysore

GOVIANU LUXURIA, High end Luxury Flats in Mysore, Zoo Road, near Mysore-Mall, Rera-003588, www.govianu.com. 8103990990

ವ್ಯಾಪಾರ

Business Offers

Finance

COMPANY PROVIDES All Types of Loan Personal, Property, Project & Business. ROI 4% (Per annum) Required DSA & Agents, 55000/- Salary & 4% Commission: 7404326304

ಭವಿಷ್ಯ

Astrology

"ಶ್ರೀಆದಿಶಕ್ತಿ ಜ್ಯೋತಿಷ್ಯಂ" ಎಲ್ಲಿಯೂ ಪರಿಹಾರವಾಗದ ಕಠಿಣ ನಿಗೂಢ ಗುಪ್ತಸಮಸ್ಯೆಗಳಿಗೆ ಬ್ರಾಹ್ಮಿತಂತ್ರ ವಿದ್ಯೆಯಿಂದ, ಶ್ರೀರಾಘವೇಂದ್ರಶರ್ಮರವರಿಂದ 2ದಿನದಲ್ಲಿ ಗ್ಯಾರಂಟಿ ಪರಿಹಾರ. ಶ್ರೀಬಂಡೆಮಹಾಕಾಳಿ ದೇವಸ್ಥಾನದ ಪಕ್ಕದಲ್ಲಿ, ಗವೀಪುರಂ ಗುಟ್ಟಹಳ್ಳಿ. ಬೆಂ.9620201188

★॥ವಶೀಕರಣ ಸ್ಪೆಷಲಿಸ್ಟ್॥★ ಸ್ತ್ರೀ_ಪುರುಷ ವಶೀಕರಣ, ಸಂಭೋಗ ವಶೀಕರಣ, ಗಂಡ_ಹೆಂಡತಿ ಸಮಸ್ಯೆ ಇನ್ನೂಯಾವುದೇ ಸಮಸ್ಯೆಗಳಿಗೆ 27 ನಿಮಿಷಗಳಲ್ಲಿ ಶಾಶ್ವತ ಪರಿಹಾರ. 9008968867

'ನಂ.1 ಸ್ತ್ರೀಪುರುಷ ವಶೀಕರಣ' ಸ್ಪೆಷಲಿಸ್ಟ್ ನಿಮ್ಮ ಯಾವುದೇ ಸಮಸ್ಯೆಗಳಿದ್ದರು ಶ್ರೀಕ್ಷೇತ್ರದಿಂದ ಪಂಡಿತ್.ದೇವೇಂದ್ರಭಟ್ ಅವರಿಂದ ನೇರಪರಿಹಾರ ಒಮ್ಮೆ ಕರೆಮಾಡಿ.ನಿಮ್ಮ_ಜೀವನ ಬದಲಾಯಿಸಿಕೊಳ್ಳಿ. 9845919804

ಜನ್ಮಾಂತರ ಸಮ್ಮೋಹಿನಿ ಚಿಕಿತ್ಸೆ: ಎಲ್ಲಾ ರೀತಿಯ ದೈಹಿಕ, ಮಾನಸಿಕ ಕಾಯಿಲೆಗಳು, ನಿಮ್ಮೆಲ್ಲಾ ರೀತಿಯ ಪರಿಹಾರವಾಗದ ಸಮಸ್ಯೆಗಳು, ಜನ್ಮಜನ್ಮಾಂತರ ದೋಷಗಳ ನಿವಾರಣೆಗೆ ಕೂಡಲೇ ಸಂಪರ್ಕಿಸಿ: 7676750280

★ಅಂಭಾಭವಾನಿ ಜ್ಯೋತಿಷ್ಯಾಲಯ★ ಕೊಳ್ಳೆಗಾಲದ ನಂ.1 'ವಶೀಕರಣ ಸ್ಪೆಷಲಿಸ್ಟ್' ದೇವಿಪ್ರಸಾದ್. (ಉಚಿತ ಭವಿಷ್ಯ ಖಚಿತ ಪರಿಹಾರ)ನಿಮ್ಮ ಸಮಸ್ಯೆಗಳೇನೇಯಿರಲಿ 2 ದಿನದಲ್ಲಿ ಪರಿಹಾರ.9886755306

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 9591580089.

ವೈಯಕ್ತಿಕ

Lost

LOST
"NOTICE is hereby given that foll. Share Certificates issued by Canfin Homes Ltd. are lost or misplaced or stolen. 1. Share Certificate Nos. 204326/ 2. Distinctive Nos. 205906 to 206405/ 3. Folio No. 000232A; 4. Name of Regd. Holder: ARUN VIKRAM GOEL. Any person who has any information in respect of the said Share Certificates should contact me Arun Vikram Goel at the mobile +919986819978 within 15 days of publication of this notice."

ಪ್ರವಾಸ

Travel

15 ದಿನಗಳ ಕಾಶಿ, ದೆಹಲಿ. 16 ದಿನಗಳ ಕಾಶಿ,ವೈಷ್ಣೋದೇವಿ, ದೆಹಲಿ,ಅಮೃತ್ಸರ್. 17 ದಿನಗಳ ಬದರಿನಾಥ್, ಕೇದಾರನಾಥ್, ಗಂಗೋತ್ರಿ, ಯಮುನೋತ್ರಿ, ಚಾರ್‌ಧಾಮ್ ಮತ್ತು ಜುಲೈ ತಿಂಗಳಲ್ಲಿ ಅಮರನಾಥ್ ಯಾತ್ರೆ ಸಂಪರ್ಕಿಸಿ: ನವಕರ್ನಾಟಕ ಕಿಸಾನ್ ಯಾತ್ರ ಸೇವಸಂಘ, ಗಿರಿನಗರ ಬೆಂಗಳೂರು-86. 9916473906, 8861111568

10/03/2022, 11/15 ದಿನಗಳು ದೆಹಲಿ, ಆಗ್ರ, ಅಲಹಾಬದ್,ಕಾಶಿ, ಗಯಾ, ಅಯೋಧ್ಯ, ಹರಿದ್ವರ, ಇತ್ಯಾದಿ. (ಕೆಲವೇ ಸೀಟುಗಳಿವೆ) ಪೆಬ್ರವರಿ, ಮಾರ್ಚ ಏಪ್ರಿಲ್‌ನಲ್ಲಿ ಅಂಡಮಾನ್ ಹವಳದ್ವೀಪ Royal Package 'ಶ್ರೀಸಾಯಿ ರಾಘವೇಂದ್ರ ಟ್ರಾವೆಲ್ಸ್' 9845560219/ 9739847429.

06.04.2022, 10 ದಿನಗಳು ದೆಹಲಿ, ಅಮೃತ್ಸರ್, ವೈಷ್ಣೋದೇವಿ, ಕುಲುಮನಾಲಿ/ 25.04.2022, 8 ದಿನಗಳು ಕಾಶಿ,ಗಯಾ,ಕಲ್ಕತ್ತಾ, ಭುವನೇಶ್ವರ್ ಸಂಪರ್ಕಿಸಿ: ವಿಜಯ ಟ್ರಾವೆಲ್ಸ್ ಮಲ್ಲೇಶ್ವರಂ, ಬೆಂಗಳೂರು-03. 9448294477

Pilgrimage Tours

ಶ್ರೀಮಹಾಲಕ್ಷ್ಮಿ ಟ್ರಾವೆಲ್ಸ್. 17/03/22 ನೇಪಾಳ ಮುಕ್ತಿನಾಥ್, 12/05/22 ಚಾರ್ಧಾಮ್ ಯಾತ್ರಾ, 21/03/22 ಕಾಶಿ, ಗಯ. 24/02/22 ಶಿರಡಿ ಪಂಡರಾಪುರ. 9964527782

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

DH DECCAN HERALD
BOOK YOUR CLASSIFIEDS ONLINE
ಪ್ರಜಾವಾಣಿ
5 EASY STEP
5 Easy steps to book your ads
LOG INTO WWW.DHCLASSIFIEDS.COM
CHOOSE THE CATEGORY
CHOOSE THE AD DATES
COMPOSE THE MATTER
CONFIRM AND PAY
TO BOOK YOUR CLASSIFIEDS ADS ONLINE
JOB LOST REAL ESTATE NAME CHANGE EDU HEALTH
MATRI AUTO ASTRO NOTICE TRAVEL
condition apply*
WWW.DHCLASSIFIEDS.COM
For more information Contact:
9880856233 | 9731810277 | 9901641752 | 9845114560 | 9886213331
Email: dhclassifieds@deccanherald.co.in

ಪಕ್ಷದ ವಿರುದ್ಧ ಪ್ರಧಾನಿ ಮೋದಿ ಟೀಕೆಗೆ ಕಾಂಗ್ರೆಸ್ ತಿರುಗೇಟು

'ಗುಜರಾತ್ ಗಲಭೆ ವೇಳೆ ಅಧಿಕಾರದಲ್ಲಿದ್ದವರು ಯಾರು?'

ಪ್ರಜಾವಾಣಿ ವಾರ್ತೆ

ನವದೆಹಲಿ: 'ಕಾಂಗ್ರೆಸ್ ಇಲ್ಲದಿದ್ದರೆ ಏನಾಗುತ್ತಿತ್ತು' ಎಂಬ ಪ್ರಧಾನಿ ನರೇಂದ್ರ ಮೋದಿ ಅವರ ಟೀಕೆಗೆ, ರಾಜ್ಯಸಭೆಯಲ್ಲಿ ಪ್ರಧಾನ ವಿರೋಧ ಪಕ್ಷವಾದ ಕಾಂಗ್ರೆಸ್ ಗುರುವಾರ ತಿರುಗೇಟು ನೀಡಿತು.

'2002ರಲ್ಲಿ ಗುಜರಾತ್‌ನಲ್ಲಿ ಗಲಭೆ ನಡೆದ ಸಮಯದಲ್ಲಿ ಯಾರು ಅಧಿಕಾರದಲ್ಲಿದ್ದರು. ಗಲಭೆಗೆ ಸಂಬಂಧಿಸಿ ಆಂದಿನ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಏನು ಹೇಳಿದ್ದರು' ಎಂದು ಪ್ರಶ್ನಿಸುವ ಮೂಲಕ ಮೋದಿ ವಿರುದ್ಧ ಕಾಂಗ್ರೆಸ್ ಸದಸ್ಯರು ಹಾರಿಹಾಯ್ದರು.

ಬಜೆಟ್ ಮೇಲಿನ ಚರ್ಚೆ ವೇಳೆ ಮಾತನಾಡಿದ ಕಾಂಗ್ರೆಸ್ ಹಾಗೂ ಮಿತ್ರಪಕ್ಷಗಳು, ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ (ನರೇಗಾ), ನಿರುದ್ಯೋಗ ಹಾಗೂ ಕೃಷಿ ಕ್ಷೇತ್ರದ ಸಮಸ್ಯೆಗಳನ್ನು ಪ್ರಸ್ತಾಪಿಸಿ, ಕೇಂದ್ರ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದವು.

ರಾಷ್ಟ್ರಪತಿಗಳ ಭಾಷಣಕ್ಕೆ ವಂದನಾ ನಿರ್ಣಯದ ಮೇಲಿನ ಚರ್ಚೆ ವೇಳೆ ಮೋದಿ ನೀಡಿದ್ದ ಉತ್ತರವನ್ನು ಕಾಂಗ್ರೆಸ್‌ನ ಛಾಯಾ ಶರ್ಮಾ ಪ್ರಸ್ತಾಪಿಸಿದರು. '2002ರಲ್ಲಿ ಗುಜರಾತ್‌ನಲ್ಲಿ ಏನು ಸಂಭವಿಸಿತು ಎಂಬುದನ್ನು ನೀವು ಮರೆತಿರುವಿರಾ. ರಾಜ್ಯದಲ್ಲಿ ಆಗ ಬಿಜೆಪಿ ಸರ್ಕಾರ ಇತ್ತು. ಅಟಲ್ ಬಿಹಾರಿ ವಾಜಪೇಯಿ ಅವರು ಪ್ರಧಾನಿಯಾಗಿದ್ದರು' ಎಂದು ಹೇಳಿದರು.

'ನಾನು ವಿದೇಶ ಪ್ರವಾಸ ಸಂದರ್ಭದಲ್ಲಿ, ಇಲ್ಲಿ (ಗುಜರಾತ್) ನಡೆದ ಘಟನೆಗಳಿಂದಾಗಿ ನಾಚಿಕೆಪಟ್ಟುಕೊಳ್ಳುವಂತಾಗಿದೆ ಎಂದು ವಾಜಪೇಯಿ ಹೇಳಿದ್ದರು' ಎಂದ ಅವರು, 'ವಾಜಪೇಯಿ ಅವರಿಂದ ಒಂದಿಷ್ಟು ಕಲಿತುಕೊಳ್ಳಿ' ಎಂದು ಹೇಳಿದರು.

ಕರ್ನಾಟಕದ ಸಂಸದ ಸೈಯದ್ ನಾಸಿರ್ ಹುಸೇನ್, 'ಬುಲೆಟ್ ಟ್ರೇನ್‌ಗಳ ಸಂಚಾರ ಆರಂಭ, ಎಲ್ಲರಿಗೂ ಮನೆ ಹಾಗೂ 2022ರ ವೇಳೆಗೆ ರೈತರ ಆದಾಯವನ್ನು ದ್ವಿಗುಣಗೊಳಿಸುವುದಾಗಿ ಬಿಜೆಪಿ ಭರವಸೆ ನೀಡಿತ್ತು. ಈ ಭರವಸೆಗಳನ್ನು ಈಡೇರಿಸುವಲ್ಲಿ ವಿಫಲವಾಗಿರುವ ಕಾರಣ ಬಿಜೆಪಿ ಈಗ ಕಾಂಗ್ರೆಸ್ ವಿರುದ್ಧ ದಾಳಿ ನಡೆಸುತ್ತಿದೆ' ಎಂದರು.

ನಿಧನ ವಾರ್ತೆ

ಮಹಾದೇವ ವೇಳಿಪ



ಜೊಯಿಡಾ: 'ರಾಜ್ಯೋತ್ಸವ' ಪ್ರಶಸ್ತಿ ಪುರಸ್ಕೃತ ಪರಿಸರ ತಜ್ಞ, ಜಾನಪದ ಕಲಾವಿದ ಜೊಯಿಡಾ ತಾಲ್ಲೂಕಿನ ಕಾರ್ಟೋಳಿ ಗ್ರಾಮದ ಮಹಾದೇವ ಬುದ್ದೋ ವೇಳಿಪ (92) ಗುರುವಾರ ಬೆಳಿಗ್ಗೆ ನಿಧನರಾದರು.

ಅವರಿಗೆ ಮೂವರು ಪುತ್ರರು ಹಾಗೂ ನಾಲ್ವರು ಪುತ್ರಿಯರು ಇದ್ದಾರೆ. ಪತ್ನಿ ಮತ್ತು ಹಿರಿಯ ಮಗ ಕೆಲವು ವರ್ಷಗಳ ಹಿಂದೆ ನಿಧನರಾಗಿದ್ದಾರೆ.

ನಾಗೋಡಾ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕಾರ್ಟೋಳಿಯವರಾದ ಅವರು, ಪರಿಸರದ ಬಗ್ಗೆ ಅಪಾರ ಜ್ಞಾನ ಹೊಂದಿದ್ದರು. ಅವರ ಸಾಧನೆಯನ್ನು ಪರಿಗಣಿಸಿ 2021ರ 'ರಾಜ್ಯೋತ್ಸವ ಪ್ರಶಸ್ತಿ' ಪ್ರದಾನ ಮಾಡಿ ರಾಜ್ಯ ಸರ್ಕಾರ ಗೌರವಿಸಿತ್ತು. ಈ ಪುರಸ್ಕಾರಕ್ಕೆ ಜೊಯಿಡಾ ತಾಲ್ಲೂಕಿನಿಂದ ಪಾತ್ರರಾದ ಮೊದಲ ವ್ಯಕ್ತಿ ಎಂಬ ಹೆಗ್ಗಳಿಕೆಗೂ ಅವರು ಭಾಜನರಾಗಿದ್ದರು.

ಕೃಷಿ ಕುಟುಂಬದವರಾದ ಅವರು, ಹಲವು ವರ್ಷಗಳಿಂದ ಬುಡಕಟ್ಟು ಸಂಸ್ಕೃತಿ ಹಾಗೂ ಕಲೆಯನ್ನು ಬೆಳೆಸಿ ಉಳಿಸುವ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದರು. ಬುಡಕಟ್ಟು ಕುಣಬಿ ಸಂಸ್ಕೃತಿಯ ಬಗ್ಗೆ ಹಾಡುಗಳ ಮೂಲಕ ಅರಿವು ಮೂಡಿಸುತ್ತಿದ್ದರು.

ಹಕ್ಕಿಗಳ ಕೂಗನ್ನು ಆಧರಿಸಿ ನಿಖರವಾದ ಸಮಯ ಹೇಳುವುದು ಅವರಿಗೆ ಕರಗತವಾಗಿತ್ತು. ಕಾಡಿನಿಂದ ಒಣ ಎಲೆಗಳನ್ನು ತರುವುದನ್ನು ಅವರು ವಿರೋಧಿಸುತ್ತಿದ್ದರು. ಪರಿಸರ ಸಮತೋಲನದಲ್ಲಿ ಉಣುಗು (ಉಣ್ಣಿ), ಉಂಬಳಗಳೂ ಮಹತ್ವದ ಪಾತ್ರ ಹೊಂದಿವೆ, ಅವುಗಳನ್ನು ನಾಶ ಮಾಡಬಾರದು ಎಂದು ತಿಳಿವಳಿಕೆ ಮೂಡಿಸುತ್ತಿದ್ದರು. ಜೇನುನೊಣಗಳ ರಕ್ಷಣೆಗೆ ಹೆಚ್ಚಿನ ಒತ್ತು ನೀಡುತ್ತಿದ್ದರು. 38 ಜಾತಿಯ ಗೆಡ್ಡೆ, ಗೆಣಸುಗಳನ್ನು ಗುರುತಿಸುವುದನ್ನು ಅವರು ಅರಿತಿದ್ದರು.

ಕುಣಬಿ ಸಮುದಾಯದ ವಿಧಿ ವಿಧಾನದಂತೆ ಅಂತ್ಯಕ್ರಿಯೆಯು ಕಾರ್ಟೋಳಿಯಲ್ಲಿ ನೆರವೇರಿತು.

ನಿರುದ್ಯೋಗ: 9,140 ಮಂದಿ ಆತ್ಮಹತ್ಯೆ

ನವದೆಹಲಿ(ಪಿಟಿಐ) : ದಿವಾಳಿ ಅಥವಾ ಸಾಲಬಾಧೆಯಿಂದಾಗಿ ದೇಶದಲ್ಲಿ 2018 ರಿಂದ 2020ರ ಅವಧಿಯಲ್ಲಿ 16,000ಕ್ಕೂ ಅಧಿಕ ಜನರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಕೇಂದ್ರ ಸರ್ಕಾರ ರಾಜ್ಯಸಭೆಗೆ ತಿಳಿಸಿದೆ.

ಇದೇ ಅವಧಿಯಲ್ಲಿ, ನಿರುದ್ಯೋಗದಿಂದಾಗಿ ಆತ್ಮಹತ್ಯೆ ಮಾಡಿಕೊಂಡವರ ಸಂಖ್ಯೆ 9,140 ಎಂದು ಕೇಂದ್ರ ಗೃಹ ಖಾತೆ ರಾಜ್ಯ ಸಚಿವ ನಿತ್ಯಾನಂದ ರಾಯ್ ಮಾಹಿತಿ ನೀಡಿದ್ದಾರೆ.

ಸಾಲಬಾಧೆ ಪರಿಣಾಮ 2018ರಲ್ಲಿ 4,970 ಜನರು ಆತ್ಮಹತ್ಯೆ ಮಾಡಿಕೊಂಡಿದ್ದು, 2019ರಲ್ಲಿ 5,908 ಹಾಗೂ 2020ರಲ್ಲಿ 5,213 ಮಂದಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದೂ ಅವರು ರಾಜ್ಯಸಭೆಗೆ ತಿಳಿಸಿದರು. ನಿರುದ್ಯೋಗದ ಕಾರಣದಿಂದ 2020ರಲ್ಲಿ ಆತ್ಮಹತ್ಯೆ ಮಾಡಿಕೊಂಡವರ ಸಂಖ್ಯೆ 3,548. 2019ರಲ್ಲಿ 2,851 ಹಾಗೂ 2018ರಲ್ಲಿ 2,741 ಜನರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಸಚಿವ ರಾಯ್ ತಿಳಿಸಿದ್ದಾರೆ.

ಸೌರ ಮಾರುತಕ್ಕೆ ಸಿಲುಕಿರುವ ಸ್ಪೇಸ್ ಎಕ್ಸ್‌ನ 40 ಉಪಗ್ರಹಗಳು ಪತನ

ಕೇಪ್ ಕೆನವೆರಲ್ (ಅಮೆರಿಕ) (ಎಪಿ): ಸೌರ ಮಾರುತಕ್ಕೆ ಸಿಲುಕಿರುವ ಸ್ಪೇಸ್ ಎಕ್ಸ್‌ನ ಸುಮಾರು 40 ಉಪಗ್ರಹಗಳು ಕಕ್ಷೆಯಿಂದ ಪತನಗೊಂಡಿವೆ ಎಂದು ಕಂಪನಿಯು ಪ್ರಕಟಣೆಯಲ್ಲಿ ತಿಳಿಸಿದೆ.

ಕಳೆದ ವಾರ ಉಡಾವಣೆಗೊಂಡ 49 ಸಣ್ಣ ಉಪಗ್ರಹಗಳ ಪೈಕಿ 40ರಷ್ಟು ಉಪಗ್ರಹಗಳು ವಾತಾವರಣಕ್ಕೆ ಮರು ಪ್ರವೇಶಿಸಿ ಸುಟ್ಟು ಹೋಗಿವೆ ಅಥವಾ ಪತನದ ಅಂಚಿನಲ್ಲಿವೆ ಎಂದು ತಿಳಿಸಿದೆ.

ಕಳೆದ ಶುಕ್ರವಾರ ಸೌರ ಮಾರುತದಿಂದ ಉಂಟಾದ ಭೂಕಾಂತೀಯ ಮಾರುತವು ಸ್ಟಾರ್‌ಲಿಂಕ್ ಉಪಗ್ರಹಗಳನ್ನು ನಾಶಗೊಳಿಸಿದೆ ಎಂದು ತಿಳಿಸಿದೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಹಿಂಗನ್‌ಘಾಟ್ ಪ್ರಕರಣ: ವ್ಯಕ್ತಿಗೆ ಜೀವಾವಧಿ ಶಿಕ್ಷೆ

ಮುಂಬೈ: ಎರಡು ವರ್ಷಗಳ ಹಿಂದೆ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿ ಶಿಕ್ಷಕಿಯನ್ನು ಕೊಂದಿದ್ದ ವ್ಯಕ್ತಿಗೆ ಇಲ್ಲಿನ ಹೆಚ್ಚುವರಿ ಮತ್ತು ಸೆಷನ್ಸ್ ನ್ಯಾಯಾಲಯ ಗುರುವಾರ ಜೀವಾವಧಿ ಶಿಕ್ಷೆ ವಿಧಿಸಿದೆ.

ಭಗ್ನ ಪ್ರೇಮಿ ವಿಕ್ಕಿ ನಾಗ್ರಾಳೆ 2020ರ ಫೆಬ್ರುವರಿ 3ರಂದು ವಾರ್ಧಾ ಜಿಲ್ಲೆಯ ಹಿಂಗನ್‌ಘಾಟ್‌ನಲ್ಲಿ ಶಿಕ್ಷಕಿ ಅಂಕಿತಾ ಪಿಸ್ಸುಡೆ ಅವರ ಮೇಲೆ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿದ್ದರು. ಶೇ 40ರಷ್ಟು ಸುಟ್ಟಗಾಯಗಳೊಂದಿಗೆ ಒಂದು ವಾರ ಆಸ್ಪತ್ರೆಯಲ್ಲಿ ನರಳಿದ್ದ ಸಂತ್ರಸ್ತೆ ಕೊನೆಯುಸಿರು ಎಳೆದಿದ್ದರು.

ಈ ಪ್ರಕರಣ ಮಹಾರಾಷ್ಟ್ರದಲ್ಲಿ ಭಾರಿ ಜನಾಕ್ರೋಶಕ್ಕೆ ಕಾರಣವಾಗಿತ್ತು. ಈ ಘಟನೆಯ ನಂತರ ಉದ್ಧವ್ ಠಾಕ್ರೆ ನೇತೃತ್ವದ ಮಹಾವಿಕಾಸ್ ಅಘಾಡಿ ಸರ್ಕಾರವು ಆಂಧ್ರಪ್ರದೇಶದ ದಿಶಾ ಕಾನೂನಿನ ರೀತಿಯಲ್ಲಿ ಶಕ್ತಿ ಕಾನೂನನ್ನು ತರುವ ಪ್ರಕ್ರಿಯೆಯನ್ನು ವೇಗಗೊಳಿಸಿತ್ತು.

ಎನ್‌ಎಸ್‌ಇ ಕಂಪನಿಗಳಲ್ಲಿ ಸಣ್ಣ ಹೂಡಿಕೆದಾರರ ಪಾಲು ಹೆಚ್ಚಳ

ಮುಂಬೈ (ಪಿಟಿಐ): ರಾಷ್ಟ್ರೀಯ ಷೇರುಪೇಟೆಯಲ್ಲಿ (ಎನ್‌ಎಸ್‌ಇ) ನೋಂದಾಯಿತ ಆಗಿರುವ ಕಂಪನಿಗಳಲ್ಲಿ ಸಣ್ಣ ಹೂಡಿಕೆದಾರರ ಪಾಲು 2021ರ ಡಿಸೆಂಬರ್‌ನಲ್ಲಿ ಸಾರ್ವಕಾಲಿಕ ಗರಿಷ್ಠ ಮಟ್ಟವಾದ ಶೇಕಡ 7.32ರಷ್ಟಾಗಿದೆ. ಮೌಲ್ಯದ ಲೆಕ್ಕದಲ್ಲಿಯೂ ದಾಖಲೆಯ ₹ 18.98 ಲಕ್ಷ ಕೋಟಿಗಳಿಗೆ ತಲುಪಿದೆ ಎಂದು ಪ್ರೈಮ್‌ಇನ್ಫೊಬೇಸ್ ಡಾಟ್‌ಕಾಂ ಹೇಳಿದೆ.

ಸೆಪ್ಟೆಂಬರ್‌ನಲ್ಲಿ ಸಣ್ಣ ಹೂಡಿಕೆದಾರರ ಪಾಲು ಶೇ 7.13ರಷ್ಟು ಇತ್ತು. ಮೌಲ್ಯದ ಲೆಕ್ಕದಲ್ಲಿ ಇದು ₹ 18.16 ಲಕ್ಷ ಕೋಟಿ. ಸಾಂಸ್ಥಿಕ ಹೂಡಿಕೆದಾರರ ಷೇರುಪಾಲು ಶೇ 21.46ರಿಂದ ಶೇ 20.74ಕ್ಕೆ ಇಳಿಕೆ ಆಗಿದೆ. ಇದು ಒಂಭತ್ತು ವರ್ಷಗಳ ಕನಿಷ್ಠ ಮಟ್ಟ. ₹ 38,521 ಕೋಟಿ ವಿದೇಶಿ ಬಂಡವಾಳ ಹೊರಹರಿವು ಆಗಿರುವುದೇ ಇದಕ್ಕೆ ಕಾರಣ ಎಂದು ಅದು ತಿಳಿಸಿದೆ.

ಎನ್‌ಎಸ್‌ಇನಲ್ಲಿ ನೋಂದಾಯಿಸಿಕೊಂಡಿರುವ 1,768 ಕಂಪನಿಗಳಲ್ಲಿ 1,714 ಕಂಪನಿಗಳ ಬಳಿ ಇರುವ ಹೂಡಿಕೆದಾರರನ್ನು ಪರಿಗಣಿಸಿ ಈ ವರದಿ ಸಿದ್ಧಪಡಿಸಿರುವುದಾಗಿ ಹೇಳಿದೆ. ₹ 2 ಲಕ್ಷಕ್ಕೂ ಅಧಿಕ ಹೂಡಿಕೆ ಮಾಡುವ ಸಿರಿವಂತರ (ಎಚ್‌ಎನ್‌ಐ) ಷೇರುಪಾಲು ಕೂಡಾ ಸಾರ್ವಕಾಲಿಕ ಗರಿಷ್ಠ ಮಟ್ಟವಾದ ಶೇ 2.26ಕ್ಕೆ ತಲುಪಿದೆ. ದೇಶಿ ಮ್ಯೂಚುವಲ್ ಫಂಡ್‌ಗಳ ಪಾಲು ಶೇ 7.36ರಿಂದ ಶೇ 7.47ಕ್ಕೆ ಏರಿಕೆ ಆಗಿದೆ.

ಸಣ್ಣ ಹೂಡಿಕೆದಾರರು, ಸಿರಿವಂತರು ಮತ್ತು ದೇಶಿ ಮ್ಯೂಚುವಲ್ ಫಂಡ್‌ಗಳ ಒಟ್ಟಾರೆ ಷೇರುಪಾಲು ಶೇ 16.61ರಿಂದ ಶೇ 17.05ರ ಗರಿಷ್ಠ ಮಟ್ಟಕ್ಕೆ ಏರಿಕೆ ಕಂಡಿದೆ ಎಂದು ಮಾಹಿತಿ ನೀಡಿದೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,463
ಇಂದಿನ ಅಂತ್ಯ	17,605
▲	142
ದಿನದ ಗರಿಷ್ಠ	17,639

ವಿನಿಮಯ ದರ

$ ಡಾಲರ್	74.94
£ ಪೌಂಡ್	101.37
€ ಯುರೊ	85.60
¥ ಯೆನ್ (100ಕ್ಕೆ)	65

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹440
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹440

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1320 (1320)
ಸೋಯಾ (ರಿಫೈನ್ಡ್)	₹1292 (1285)
ಸೂರ್ಯಕಾಂತಿ (ರಿಫೈನ್ಡ್)	₹1310 (1310)
ಪಾಮೋಲಿನ್	₹1237 (1232)

ಸಂಕ್ಷಿಪ್ತ ಸುದ್ದಿ

ಮಹೀಂದ್ರ ಲಾಭ ಎರಡು ಪಟ್ಟು ಹೆಚ್ಚಳ

ನವದೆಹಲಿ (ಪಿಟಿಐ): ಮಹೀಂದ್ರ ಆ್ಯಂಡ್ ಮಹೀಂದ್ರ ಕಂಪನಿಯ ನಿವ್ವಳ ಲಾಭವು ಪ್ರಸಕ್ತ ಹಣಕಾಸು ವರ್ಷದ ಮೂರನೇ ತ್ರೈಮಾಸಿಕದಲ್ಲಿ ₹ 1,353 ಕೋಟಿ ಆಗಿದೆ.

ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ಕಂಪನಿ ₹ 531 ಕೋಟಿ ನಿವ್ವಳ ಲಾಭ ಗಳಿಸಿತ್ತು. ಇದಕ್ಕೆ ಹೋಲಿಸಿದರೆ ಈ ಬಾರಿ ಲಾಭವು ಎರಡು ಪಟ್ಟು ಹೆಚ್ಚಳವಾಗಿದೆ.

ವರಮಾನವು ₹ 14,057 ಕೋಟಿ ಇದ್ದಿದ್ದು, ₹ 15,239 ಕೋಟಿಗೆ (ಶೇಕಡ 8ರಷ್ಟು) ಏರಿಕೆ ಆಗಿದೆ ಎಂದು ಕಂಪನಿಯು ಷೇರುಪೇಟೆಗೆ ಮಾಹಿತಿ ನೀಡಿದೆ. ಡಿಸೆಂಬರ್ ತ್ರೈಮಾಸಿಕದಲ್ಲಿ 1.18 ಲಕ್ಷ ವಾಹನಗಳನ್ನು ಮಾರಾಟ ಮಾಡಲಾಗಿದ್ದು, ಹಿಂದಿನ ಹಣಕಾಸು ವರ್ಷದ ಇದೇ ಅವಧಿಗೆ ಹೋಲಿಸಿದರೆ ಮಾರಾಟದಲ್ಲಿ ಶೇ 2ರಷ್ಟು ಇಳಿಕೆ ಕಂಡುಬಂದಿದೆ.

ಬಿಎಂಡಬ್ಲ್ಯು ಎಂ4 ಕಾಂಪಿಟಿಷನ್ ಕೂಪೆ ಬಿಡುಗಡೆ

ನವದೆಹಲಿ (ಪಿಟಿಐ): ಐಷಾರಾಮಿ ಕಾರು ತಯಾರಿಸುವ ಬಿಎಂಡಬ್ಲ್ಯು ಗ್ರೂಪ್ ಇಂಡಿಯಾ, ದೇಶದ ಮಾರುಕಟ್ಟೆಗೆ ಎಂ4 ಕಾಂಪಿಟಿಷನ್ ಕೂಪೆ ಬಿಡುಗಡೆ ಮಾಡಿದೆ. ಇದರ ಎಕ್ಸ್ ಷೋರೂಂ ಬೆಲೆಯು ₹ 1.43 ಕೋಟಿ ಇದೆ.

ಇದು 3 ಲೀಟರ್ ಪೆಟ್ರೋಲ್ ಎಂಜಿನ್ ಹೊಂದಿದ್ದು, ನಿಂತ ಸ್ಥಿತಿಯಿಂದ 3.5 ಸೆಕೆಂಡ್‌ಗಳಲ್ಲಿ ಗಂಟೆಗೆ 100 ಕಿಲೋ ಮೀಟರ್ ವೇಗವನ್ನು ತಲುಪುವ ಸಾಮರ್ಥ್ಯ ಹೊಂದಿದೆ ಎಂದು ಕಂಪನಿಯು ತಿಳಿಸಿದೆ.

ಹೊಸ ಬಿಎಂಡಬ್ಲ್ಯು ಎಂ4, ವಿಶಿಷ್ಟ ಸಂಯೋಜನೆಗಳೊಂದಿಗೆ ಟ್ರ್ಯಾಕ್ ಮತ್ತು ಸ್ಟ್ರೀಟ್‌ನಲ್ಲಿ ರಾಜಿಯಾಗದ ಅನುಭವವನ್ನು ನೀಡುತ್ತದೆ ಎಂದು ಬಿಎಂಡಬ್ಲ್ಯು ಗ್ರೂಪ್ ಇಂಡಿಯಾದ ಅಧ್ಯಕ್ಷ ವಿಕ್ರಂ ಪವ್ಹಾ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಾಮ್‌ರಾಜ್ ಕಾಟನ್ ಬ್ರ್ಯಾಂಡ್ ರಾಯಭಾರಿ ಆಗಿ ನಟ ಯಶ್ ನೇಮಕ

ಪ್ರಜಾವಾಣಿ ವಾರ್ತೆ

ಯಶ್

ಬೆಂಗಳೂರು: ಖ್ಯಾತ ನಟ ಯಶ್ ಅವರನ್ನು ತನ್ನ ಬ್ರ್ಯಾಂಡ್ ರಾಯಭಾರಿಯಾಗಿ ನೇಮಿಸಿಕೊಳ್ಳಲಾಗಿದೆ ಎಂದು ರಾಮ್‌ರಾಜ್ ಕಾಟನ್ ತಿಳಿಸಿದೆ.

ಯಶ್ ಅವರು ನಟನೆ ಮತ್ತು ಲೋಕೋಪಕಾರಿ ಕೆಲಸಗಳ ಮೂಲಕ ತಮ್ಮ ಸುತ್ತಲಿನ ಜನರನ್ನು ನಿರಂತರವಾಗಿ ಪ್ರೇರೇಪಿಸುತ್ತಿದ್ದಾರೆ. ಹೀಗಾಗಿ ಅವರನ್ನು ಬ್ರ್ಯಾಂಡ್ ರಾಯಭಾರಿ ಆಗಿ ನೇಮಕ ಮಾಡಿಕೊಳ್ಳಲಾಗಿದೆ ಎಂದು ಕಂಪನಿಯ ಪ್ರಕಟಣೆ ತಿಳಿಸಿದೆ. ರಾಕಿಂಗ್ ಸ್ಟಾರ್ ಯಶ್ ಅವರನ್ನು ಬ್ರ್ಯಾಂಡ್ ರಾಯಭಾರಿ ಆಗಿ ಹೊಂದುವುದು ರಾಮ್‌ರಾಜ್‌ಗೆ ಹೆಮ್ಮೆಯ ಸಂಗತಿ. ಅವರು ಕಠಿಣ ಶ್ರಮದಿಂದಲೇ ತಮ್ಮ ಕನಸುಗಳನ್ನು ನನಸಾಗಿಸಿಕೊಂಡಿದ್ದು, ಸಮಾಜಕ್ಕೆ ದೊಡ್ಡ ಮಟ್ಟದಲ್ಲಿ ಕೊಡುಗೆಯನ್ನೂ ನೀಡುತ್ತಿದ್ದಾರೆ. ಯಶ್ ಅವರೊಂದಿಗೆ ಭಾರತದ ಫ್ಯಾಷನ್ ಜಗತ್ತಿನಲ್ಲಿ ಹೊಸ ಅಧ್ಯಾಯವನ್ನು ಸೃಷ್ಟಿಸಲಿದ್ದೇವೆ ಎಂದು ಪ್ರಕಟಣೆಯಲ್ಲಿ ಹೇಳಿದೆ.

ತಗ್ಗಿದ ಜೊಮ್ಯಾಟೊ ನಷ್ಟ

ನವದೆಹಲಿ (ಪಿಟಿಐ): ಆಹಾರ ವಸ್ತುಗಳನ್ನು ಮನೆಬಾಗಿಲಿಗೆ ತಲುಪಿಸುವ ಜೊಮ್ಯಾಟೊ ಕಂಪನಿಯ ನಷ್ಟವು ಪ್ರಸಕ್ತ ಹಣಕಾಸು ವರ್ಷದ ಡಿಸೆಂಬರ್ ತ್ರೈಮಾಸಿಕದಲ್ಲಿ ₹ 67.2 ಕೋಟಿಗೆ ಇಳಿಕೆ ಆಗಿದೆ. ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ಕಂಪನಿಯ ನಷ್ಟವು ₹ 352.6 ಕೋಟಿ ಇತ್ತು.

ವರಮಾನದಲ್ಲಿ ಉತ್ತಮ ಬೆಳವಣಿಗೆ ಕಂಡಿರುವುದರಿಂದ ನಷ್ಟದ ಪ್ರಮಾಣ ಕಡಿಮೆ ಆಗಿದೆ ಎಂದು ಕಂಪನಿಯು ಹೇಳಿಕೊಂಡಿದೆ. ಡಿಸೆಂಬರ್ ತ್ರೈಮಾಸಿಕದಲ್ಲಿ ಕಂಪನಿಯ ಕಾರ್ಯಾಚರಣಾ ವರಮಾನವು ₹ 609.4 ಕೋಟಿಯಿಂದ ₹ 1,112 ಕೋಟಿಗೆ ಏರಿಕೆ ಆಗಿದೆ ಎಂದು ಷೇರುಪೇಟೆಗೆ ಮಾಹಿತಿ ನೀಡಿದೆ.

ಇದೇ ಅವಧಿಯಲ್ಲಿ ಒಟ್ಟಾರೆ ವೆಚ್ಚವು ₹ 755.7 ಕೋಟಿಯಿಂದ ₹ 1,642.6 ಕೋಟಿಗೆ ಏರಿಕೆ ಕಂಡಿದೆ ಎಂದು ಹೇಳಿದೆ. ವಹಿವಾಟಿನಲ್ಲಿ ದೀರ್ಘಾವಧಿಯ ಬೆಳವಣಿಗೆಯ ಸಾಮರ್ಥ್ಯಗಳ ಬಗ್ಗೆ ಗಮನ ಹರಿಸಲಾಗಿದೆ ಎಂದು ಕಂಪನಿಯ ಸ್ಥಾಪಕ ದೀಪೇಂದರ್ ಗೋಯಲ್ ಅವರು ಹೇಳಿದ್ದಾರೆ.

ಕಂಪನಿಯ ಆರ್ಥಿಕ ಸ್ಥಿತಿ ಉತ್ತಮವಾಗಿದೆ. ಕಂಪನಿಯ ಬಳಿ ಸದ್ಯ ₹ 12,739 ಕೋಟಿ ನಗದು ಇದ್ದು, ಹೆಚ್ಚಿನ ಬಂಡವಾಳ ಸಂಗ್ರಹಿಸುವ ಯಾವುದೇ ಆಲೋಚನೆ ಸದ್ಯಕ್ಕೆ ಇಲ್ಲ ಎಂದು ಅವರು ತಿಳಿಸಿದ್ದಾರೆ.

‘ಕಾರಿನ ಎಲ್ಲ ಮುಮ್ಮುಖ ಆಸನಗಳಿಗೆ 3 ಪಾಯಿಂಟ್ ಸೀಟ್ ಬೆಲ್ಟ್ ಕಡ್ಡಾಯ’

ನವದೆಹಲಿ: ಕಾರಿನಲ್ಲಿ ಮುಮ್ಮುಖವಾಗಿ ಕುಳಿತುಕೊಳ್ಳುವ ಎಲ್ಲ ಪ್ರಯಾಣಿಕರಿಗೆ ಮೂರು ಪಾಯಿಂಟ್ ಸೀಟ್ ಬೆಲ್ಟ್‌ಗಳನ್ನು ವಾಹನ ತಯಾರಕರು ಕಡ್ಡಾಯವಾಗಿ ಒದಗಿಸಬೇಕು ಎಂದು ಗುರುವಾರ ಕೇಂದ್ರ ರಸ್ತೆ ಸಾರಿಗೆ ಸಚಿವ ನಿತಿನ್ ಗಡ್ಕರಿ ತಿಳಿಸಿದ್ದಾರೆ.

ಈ ಸಂಬಂಧದ ಕಡತಕ್ಕೆ ಸಹಿ ಹಾಕಿರುವುದಾಗಿ ಸುದ್ದಿಗಾರರಿಗೆ ತಿಳಿಸಿದ ಸಚಿವರು, ಈ ನಿಯಮವು ಕಾರಿನ ಹಿಂದಿನ ಸಾಲಿನ ಮಧ್ಯದ ಸೀಟಿಗೂ ಅನ್ವಯವಾಗಲಿದೆ ಎಂದು ಅವರು ಹೇಳಿದ್ದಾರೆ.

ದೇಶದಲ್ಲಿ ತಯಾರಿಸುವ ಹೆಚ್ಚಿನ ಕಾರುಗಳಲ್ಲಿ ಮುಂಭಾಗದ ಸೀಟುಗಳು ಮತ್ತು ಹಿಂಭಾಗದ ಎರಡು ಸೀಟುಗಳು ಮಾತ್ರ ಮೂರು-ಪಾಯಿಂಟ್ ಸೀಟ್ ಬೆಲ್ಟ್‌ಗಳನ್ನು ಹೊಂದಿವೆ. ಈ ಕಾರುಗಳಲ್ಲಿ ಹಿಂಬದಿಯ ಕೇಂದ್ರ ಅಥವಾ ಮಧ್ಯದ ಸೀಟು ಕೇವಲ ಎರಡು- ಪಾಯಿಂಟ್ ಅಥವಾ ‘ಲ್ಯಾಪ್ ಸೀಟ್’ ಬೆಲ್ಟ್ ಅನ್ನು ಮಾತ್ರ ಹೊಂದಿವೆ. ಇದು ವಿಮಾನದ ಆಸನಗಳಲ್ಲಿ ಒದಗಿಸಿದಂತೆಯೇ ಇರುತ್ತದೆ.

ರೆಪೊ ದರದಲ್ಲಿ ಯಥಾಸ್ಥಿತಿ: ಆಶ್ಚರ್ಯ ಮೂಡಿಸಿದ ರಿಸರ್ವ್ ಬ್ಯಾಂಕ್ ನಡೆ

ಚೇತರಿಕೆಗೆ ಬೆಂಬಲ ಅಬಾಧಿತ

• ಅನ್ನಪೂರ್ಣಾ ಸಿಂಗ್

ನವದೆಹಲಿ: ಅರ್ಥ ವ್ಯವಸ್ಥೆಯಲ್ಲಿ ವಿಸ್ತೃತ ನೆಲೆಗಟ್ಟಿನ ಹಾಗೂ ದೀರ್ಘಕಾಲ ಉಳಿದುಕೊಳ್ಳುವ ಚೇತರಿಕೆಗೆ ಬೆಂಬಲ ಮುಂದುವರಿಸುವ ತೀರ್ಮಾನ ಕೈಗೊಂಡಿರುವ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ), ರೆಪೊ ದರಗಳಲ್ಲಿ ಬದಲಾವಣೆ ಮಾಡದಿರಲು ನಿರ್ಧರಿಸಿದೆ. ಇದರಿಂದಾಗಿ ಗೃಹಸಾಲ, ವಾಹನ ಸಾಲ, ವೈಯಕ್ತಿಕ ಸಾಲದ ಬಡ್ಡಿದರದಲ್ಲಿ ಸದ್ಯಕ್ಕೆ ಬದಲಾವಣೆಗಳು ಆಗುವ ಸಾಧ್ಯತೆ ಇಲ್ಲ.


ಶಕ್ತಿಕಾಂತ ದಾಸ್

ಆರ್‌ಬಿಐ ಕೈಗೊಂಡ ತೀರ್ಮಾನದ ಕಾರಣದಿಂದಾಗಿ ಬ್ಯಾಂಕ್, ಗೃಹ ನಿರ್ಮಾಣಕ್ಕೆ ಸಾಲ ನೀಡುವ ಕಂಪನಿಗಳು ಹಾಗೂ ಆಟೊಮೊಬೈಲ್ ಕಂಪನಿಗಳ ಷೇರುಗಳು ಗುರುವಾರ ಹೆಚ್ಚಿನ ಬೇಡಿಕೆ ಗಿಟ್ಟಿಸಿಕೊಂಡವು. ಆದರೆ, ಕೋವಿಡ್ ಸಾಂಕ್ರಾಮಿಕದ ವಿರುದ್ಧದ ಹೋರಾಟದ ಭಾಗವಾಗಿ ಘೋಷಿಸಿದ್ದ ತುರ್ತು ಬೆಂಬಲದ ಕ್ರಮಗಳನ್ನು ಹಿಂತೆಗೆದುಕೊಳ್ಳುವ ಬಗ್ಗೆ ಆರ್‌ಬಿಐ ಯಾವುದೇ ಮಾತು ಆಡದಿರುವುದರ ಕುರಿತು ಅರ್ಥಶಾಸ್ತ್ರಜ್ಞರು ಆಶ್ಚರ್ಯ ವ್ಯಕ್ತಪಡಿಸಿದ್ದಾರೆ.

ರೆಪೊ ದರವನ್ನು ಶೇಕಡ 4ರಲ್ಲಿ ಉಳಿಸಿಕೊಳ್ಳಲು, ಹೊಂದಾಣಿಕೆಯ ಹಣಕಾಸು ನಿಲುವನ್ನು ಮುಂದುವರಿಸಲು ಆರ್‌ಬಿಐನ ಹಣಕಾಸು ನೀತಿ ಸಮಿತಿಯ ಸದಸ್ಯರು ಒಕ್ಕೊರಲಿನಿಂದ ತೀರ್ಮಾನಿಸಿದ್ದಾರೆ ಎಂದು ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್ ಅವರು ಹಣಕಾಸು ನೀತಿ ಸಮಿತಿಯ ಸಭೆಯ ನಂತರ ಸುದ್ದಿಗಾರರಿಗೆ ತಿಳಿಸಿದರು.

‘ರೆಪೊ ದರದಲ್ಲಿ ಬದಲಾವಣೆ ಇಲ್ಲ ಎನ್ನುವುದು ಗೃಹಸಾಲ ಪಡೆಯುವವರಿಗೆ ಒಳ್ಳೆಯ ಸುದ್ದಿ. ಗೃಹಸಾಲವು ಕಡಿಮೆ ಬಡ್ಡಿ ದರಕ್ಕೆ ಸಿಗುವ ಈಗಿನ ಸ್ಥಿತಿಯು ಮುಂದುವರಿಯಲಿದೆ ಎಂಬುದು ಸ್ವಾಗತಾರ್ಹ’ ಎಂದು ಅನಾರಾಕ್ ಸಮೂಹದ ಅಧ್ಯಕ್ಷ ಅನುಜ್ ಪುರಿ ಹೇಳಿದ್ದಾರೆ. ರಿವರ್ಸ್ ರೆಪೊ ದರವನ್ನು ಕೂಡ ಈಗಿರುವ ಮಟ್ಟದಲ್ಲಿಯೇ (ಶೇ 3.35ರಷ್ಟು) ಉಳಿಸಿಕೊಳ್ಳಲು ಆರ್‌ಬಿಐ ನಿರ್ಧರಿಸಿದೆ.

ಆದರೆ, ಅರ್ಥ ವ್ಯವಸ್ಥೆಯಲ್ಲಿನ ಹೆಚ್ಚುವರಿ ನಗದಿನ ಪ್ರಮಾಣ ಕಡಿಮೆ ಮಾಡುವ ಉದ್ದೇಶದಿಂದ ಆರ್‌ಬಿಐ ರಿವರ್ಸ್ ರೆಪೊ ದರವನ್ನು ತುಸು ಹೆಚ್ಚಿಸಬಹುದು ಎಂದು ಕೆಲವು ಅರ್ಥಶಾಸ್ತ್ರಜ್ಞರು ನಿರೀಕ್ಷಿಸಿದ್ದರು.

‘ಮಾರುಕಟ್ಟೆಯಲ್ಲಿ ಖಾಸಗಿ ವಲಯದಿಂದ ಬರುವ ಬೇಡಿಕೆಗಳು ಇನ್ನಷ್ಟು ದೀರ್ಘವಾಗಬೇಕು ಎಂಬ ಕಾರಣಕ್ಕೆ ಬಡ್ಡಿ ದರಗಳನ್ನು ಕಡಿಮೆ ಮಟ್ಟದಲ್ಲಿ ಇರಿಸಿಕೊಳ್ಳುವ ತೀರ್ಮಾನ ಮಾಡಲಾಗಿದೆ’ ಎಂದು ಐಸಿಐಸಿಐ ಸೆಕ್ಯುರಿಟೀಸ್‌ನ ಮುಖ್ಯ ಅರ್ಥಶಾಸ್ತ್ರಜ್ಞ ಪ್ರಸೆನ್‌ಜಿತ್ ಕೆ. ಬಸು ಹೇಳಿದ್ದಾರೆ.

ಆರ್ಥಿಕ ಚೇತರಿಕೆಯ ವೇಗವು ಕೋವಿಡ್‌ನ ಮೂರನೆಯ ಅಲೆಯ ಕಾರಣದಿಂದಾಗಿ ತುಸು ಕಡಿಮೆ ಆಗಿರುವ ಸೂಚನೆಗಳು ಇವೆ. ವ್ಯಕ್ತಿಗಳ ನಡುವೆ ಹೆಚ್ಚು ಒಡನಾಟವನ್ನು ಬಯಸುವ ವಲಯಗಳಲ್ಲಿ ಬೇಡಿಕೆ ಹೆಚ್ಚಳ ಆಗಿಲ್ಲ ಎಂದು ದಾಸ್ ಅವರು ಹೇಳಿದರು. ಆರೋಗ್ಯಸೇವಾ ವಲಯ ಹಾಗೂ ವ್ಯಕ್ತಿಗಳ ನಡುವೆ ಹೆಚ್ಚಿನ ಒಡನಾಟದ ಅಗತ್ಯವಿರುವ ವಲಯಗಳಿಗೆ ಸಾಲದ ನೆರವನ್ನು ಜೂನ್ 30ರವರೆಗೆ ವಿಸ್ತರಿಸಲಾಗಿದೆ.

ಮಾರುಕಟ್ಟೆಯಲ್ಲಿ ಖಾಸಗಿ ವಲಯದಿಂದ ಬರುವ ಬೇಡಿಕೆಯು ಕೋವಿಡ್ ಪೂರ್ವದ ಮಟ್ಟಕ್ಕಿಂತಲೂ ಕಡಿಮೆ ಇದೆ ಎಂದು ದಾಸ್ ಹೇಳಿದರು. ಅಲ್ಲದೆ, ಮುಂದಿನ ಹಣಕಾಸು ವರ್ಷಕ್ಕೆ (2022–23) ಅರ್ಥ ವ್ಯವಸ್ಥೆಯ ಬೆಳವಣಿಗೆ ದರ ಶೇಕಡ 7.8ರಷ್ಟು ಇರಲಿದೆ, ಪ್ರಸಕ್ತ ಹಣಕಾಸು ವರ್ಷದಲ್ಲಿ ಬೆಳವಣಿಗೆಯು ಶೇ 9.8ರಷ್ಟು ಇರಲಿದೆ ಎಂದು ದಾಸ್ ಅಂದಾಜಿಸಿದರು.

ಇ-ರುಪಿ ಪ್ರಿಪೇಯ್ಡ್ ಡಿಜಿಟಲ್ ವೋಚರ್‌ಗಳ ಮೂಲಕ ₹ 1 ಲಕ್ಷದವರೆಗೆ ವಹಿವಾಟು ನಡೆಸಬಹುದು ಎಂದು ಆರ್‌ಬಿಐ ಹಣಕಾಸು ನೀತಿ ಸಮಿತಿಯು ಹೇಳಿದೆ. ಇದುವರೆಗೆ ₹ 10 ಸಾವಿರದವರೆಗೆ ವಹಿವಾಟಿಗೆ ಅವಕಾಶ ಇತ್ತು.

ಮುಖ್ಯಾಂಶಗಳು

- ರೆಪೊ, ರಿವರ್ಸ್ ರೆಪೊ ದರ ಯಥಾಸ್ಥಿತಿ
- ಇ–ರುಪಿ ಮೂಲಕ ಹೆಚ್ಚಿನ ವಹಿವಾಟಿಗೆ ಅವಕಾಶ
- ಬ್ಯಾಂಕ್, ಆಟೊಮೊಬೈಲ್ ಷೇರುಗಳ ಬೆಲೆ ಏರಿಕೆ

ಷೇರುಪೇಟೆ ಉತ್ಸಾಹ ಹೆಚ್ಚಿಸಿದ ನಿರ್ಧಾರ



ಮುಂಬೈ (ಪಿಟಿಐ): ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ಹಣಕಾಸು ನೀತಿ ಸಮಿತಿ ಸಭೆಯ ನಿರ್ಧಾರಗಳು ದೇಶದ ಷೇರುಪೇಟೆಗಳಲ್ಲಿ ಗುರುವಾರ ಸಕಾರಾತ್ಮಕ ವಹಿವಾಟು ಮುಂದುವರಿಯುವಂತೆ ಮಾಡಿದವು.

ಆರ್‌ಬಿಐ, ಬಡ್ಡಿದರಗಳಲ್ಲಿ ಯಥಾಸ್ಥಿತಿ ಕಾಯ್ದುಕೊಳ್ಳುವ ಜೊತೆಗೆ ಕೋವಿಡ್‌ನಿಂದ ಸಂಕಷ್ಟಕ್ಕೆ ಒಳಗಾಗಿರುವ ಆರ್ಥಿಕತೆಗೆ ಚೇತರಿಕೆ ನೀಡಲು ಹೊಂದಾಣಿಕೆಯ ನೀತಿಯನ್ನು ಮುಂದುವರಿಸುವುದಾಗಿಯೂ ಹೇಳಿದ್ದರಿಂದ ಸತತ ಮೂರನೇ ದಿನವೂ ಸೂಚ್ಯಂಕಗಳು ಏರಿಕೆ ಕಾಣುವಂತಾಯಿತು.

ಜಾಗತಿಕ ಷೇರುಪೇಟೆಗಳಲ್ಲಿ ನಡೆದ ಉತ್ತಮ ವಹಿವಾಟು ಸಹ ದೇಶಿ ಮಾರುಕಟ್ಟೆಗಳ ಮೇಲೆ ಪ್ರಭಾವ ಉಂಟುಮಾಡಿತು ಎಂದು ವರ್ತಕರು ಹೇಳಿದ್ದಾರೆ. ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 460 ಅಂಶ ಹೆಚ್ಚಾಗಿ 58,926 ಅಂಶಗಳಿಗೆ ತಲುಪಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 142 ಅಂಶ ಹೆಚ್ಚಾಗಿ 17,605 ಅಂಶಗಳಿಗೆ ಏರಿಕೆ ಕಂಡಿತು.

ರೂಪಾಯಿ ಮೌಲ್ಯ ಇಳಿಕೆ: ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ 10 ಪೈಸೆ ಇಳಿಕೆ ಆಗಿದ್ದು ಒಂದು ಡಾಲರ್‌ಗೆ ₹ 74.94ರಂತೆ ವಿನಿಮಯಗೊಂಡಿದೆ. ಮೂರು ವಹಿವಾಟು ಅವಧಿಗಳಲ್ಲಿ ರೂಪಾಯಿ ಮೌಲ್ಯವು 25 ಪೈಸೆಗಳಷ್ಟು ಇಳಿಕೆ ಕಂಡಿದೆ.

ರಿಲಯನ್ಸ್ ಜ್ಯುವೆಲ್ಸ್‌ನಿಂದ ಹೊಸ ಸಂಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಭರಣಗಳ ಬ್ರ್ಯಾಂಡ್ ಆಗಿರುವ ರಿಲಯನ್ಸ್ ಜ್ಯುವೆಲ್ಸ್, ಪ್ರೇಮಿಗಳ ದಿನದ ಆಭರಣ ಸಂಗ್ರಹ ‘ಫ್ಲೋರಿಯೊ’ಗೆ ಚಾಲನೆ ನೀಡಿದೆ. ಪ್ರೇಮಿಗಳ ದಿನವನ್ನು ಆಚರಿಸಲು ಆಧುನಿಕ ವಿನ್ಯಾಸಗಳನ್ನು ಹೊಂದಿರುವ ವಜ್ರದ ಆಭರಣಗಳ ಈ ಸಂಗ್ರಹ ಬಿಡುಗಡೆ ಮಾಡಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

‘ಈ ಸಂಗ್ರಹದಲ್ಲಿ ಇರುವ ವಿನ್ಯಾಸಗಳು ಸಸ್ಯಗಳು ಮತ್ತು ಹೂವುಗಳಿಂದ ಸ್ಫೂರ್ತಿ ಪಡೆದಿವೆ. ಸಂಗ್ರಹದಲ್ಲಿರುವ ಪ್ರತಿ ಆಭರಣವನ್ನೂ ಪ್ರೀತಿಯ ನಿಜವಾದ ಅರ್ಥ ಪಸರಿಸುವಂತೆ ವಿನ್ಯಾಸಗೊಳಿಸಲಾಗಿದೆ’ ಎಂದು ಕಂಪನಿ ಹೇಳಿದೆ.

ರಿಲಯನ್ಸ್ ಜ್ಯುವೆಲ್ಸ್ ಕಂಪನಿಯು ಫೆಬ್ರುವರಿ 28ರವರೆಗೆ ‘ಡ್ರೀಮ್ ಡೈಮಂಡ್ ಸೇಲ್’ ವಿಶೇಷ ಕೊಡುಗೆಯನ್ನು ಕೂಡ ಪ್ರಕಟಿಸಿದೆ. ಇದು ರಿಲಯನ್ಸ್ ಜ್ಯುವೆಲ್ಸ್‌ನಲ್ಲಿ ವಜ್ರದ ಉತ್ಪನ್ನಗಳ ಇನ್‌ವಾಯ್ಸ್ ಮೌಲ್ಯದ ಮೇಲೆ ಶೇಕಡ 25ರವರೆಗೆ ರಿಯಾಯಿತಿಯನ್ನು ಒಳಗೊಂಡಿದೆ. ಗ್ರಾಹಕರು ಚಿನ್ನದ ಆಭರಣಗಳ ಮೇಕಿಂಗ್ ಶುಲ್ಕದ ಮೇಲೆ ಶೇ 25ರವರೆಗೆ ರಿಯಾಯಿತಿ ಪಡೆಯಬಹುದು.

ದೇಶದಾದ್ಯಂತ ಇರುವ ರಿಲಯನ್ಸ್ ಜ್ಯುವೆಲ್ಸ್‌ನ ಪ್ರಮುಖ ಮಳಿಗೆಗಳಲ್ಲಿ ಈ ಸಂಗ್ರಹವು ಲಭ್ಯ. ಆಯ್ದ ಶ್ರೇಣಿಗಳು www.reliancejewels.comನಲ್ಲಿಯೂ ಸಿಗುತ್ತವೆ.

ಏರ್‌ಟೆಲ್: ಒಂದೇ ಕಡೆ 15 ಒಟಿಟಿಗಳ ಹೂರಣ

ನವದೆಹಲಿ (ಪಿಟಿಐ): ಏರ್‌ಟೆಲ್ ಕಂಪನಿಯು ‘ಏರ್‌ಟೆಲ್ ಎಕ್ಸ್‌ಟ್ರೀಂ ಪ್ರೀಮಿಯಂ’ ಹೆಸರಿನ ಹೊಸ ಸ್ಟ್ರೀಮಿಂಗ್ ಸೇವೆಯನ್ನು ಪ್ರಕಟಿಸಿದ್ದು, ಒಂದೇ ಚಂದಾದಾರಿಕೆ ಅಡಿಯಲ್ಲಿ 15 ಜನಪ್ರಿಯ ಒಟಿಟಿ ಆ್ಯಪ್‌ಗಳಲ್ಲಿನ ಕಾರ್ಯಕ್ರಮಗಳನ್ನು ಇದು ಗ್ರಾಹಕರಿಗೆ ಒದಗಿಸಲಿದೆ. ಆರಂಭಿಕ ಕೊಡುಗೆಯಾಗಿ ತಿಂಗಳಿಗೆ ₹ 149ಕ್ಕೆ ಈ ಸೇವೆಯನ್ನು ಕಂಪನಿಯು ಒದಗಿಸಲಿದೆ.

ಈ ಯೋಜನೆಗೆ ಎರಡು ಕೋಟಿ ಜನ ಚಂದಾದಾರರಾಗಲಿದ್ದಾರೆ ಎಂಬ ನಿರೀಕ್ಷೆ ಕಂಪನಿಗೆ ಇದೆ ಎಂದು ಏರ್‌ಟೆಲ್ ಡಿಜಿಟಲ್‌ನ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ಆದರ್ಶ್ ನಾಯರ್ ಹೇಳಿದ್ದಾರೆ. ಸೋನಿ ಲೈವ್, ಎರೋಸ್ ನೌ, ಲಯನ್ಸ್‌ಗೇಟ್ ಪ್ಲೇ, ಹೊಯ್‌ಚೋಯ್, ಮನೋರಮಾ ಮ್ಯಾಕ್ಸ್, ಶೆಮರೂ, ಅಲ್ಟ್ರಾ, ಹಂಗಾಮಾ ಪ್ಲೇ, ನಮ್ಮಫ್ಲಿಕ್ಸ್ ಸೇರಿದಂತೆ 15 ಒಟಿಟಿಗಳಲ್ಲಿನ ಸಿನಿಮಾಗಳು, ಕಾರ್ಯಕ್ರಮಗಳು ಗ್ರಾಹಕರಿಗೆ ಒಂದೇ ಕಡೆ ಲಭ್ಯವಾಗಲಿವೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	430-450
ನಡುಗೋಲು	500-550
ರಾಶಿ	600-650
ರಾಶಿ ಉತ್ತಮ	650-700
ಜರಡಿ	750-800
ಹೆರಕಿದ್ದು	1100-1150
ಹಸಿರು ಸಾಧಾರಣ	600-700
ಹಸಿರು ಉತ್ತಮ	900-950
ಹಸಿರು ಅತಿ ಉತ್ತಮ	1200-1250
ಕಾಳು ಮೆಣಸು	500
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-45000
ಹಳತು	46000-53000
ಕುಮಟ	
ಚಿಪ್ಪು	20102-31988
ಕೋಕ	7070-27691
ಹಳೆಚಾಲಿ	47099-48099
ಹೊಸಚಾಲಿ	33299-39111
ಕಾರ್ಕಳ	
ಹೊಸತು	40000-45000
ಹಳತು	46000-53500
ಸಿದ್ದಾಪುರ	
ಬಿಳಿಗೋಟು	21699-29099
ಚಾಲಿ	43111-46799
ಕೋಕ	20699-29299
ಹೊಸಚಾಲಿ	32411-39039
ಕೆಂಪುಗೋಟು	25691-33099
ರಾಶಿ	44689-47009
ತಟ್ಟಿಬೆಟ್ಟೆ	33699-45699
ಶಿರಸಿ	
ಬೆಟ್ಟೆ	36699-43618
ಬಿಳಿಗೋಟು	20099-33693
ಚಾಲಿ	26596-39515
ರಾಶಿ	40299-47088
ಯಲ್ಲಾಪುರ	
ಬಿಳಿಗೋಟು	24899-31440
ಕೋಕ	19899-29500
ಹಳೆಚಾಲಿ	44020-47010
ಹೊಸಚಾಲಿ	32530-39199
ಕೆಂಪುಗೋಟು	28161-36009
ರಾಶಿ	45289-49900
ತಟ್ಟಿಬೆಟ್ಟೆ	37880-44899
ರಾಮನಗರ ರೇಷ್ಮೆ	
ಮಿಶ್ರತಳಿ	400-768
ದ್ವಿತಳಿ	566-895

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	16100	16300	16100	258.35 ಸೆಂಟ್ಸ್
ಎಸಿ	7700	7400	7550	
ಆರ್‌ಪಿ	7650	7600	7600	ಲಂಡನ್
ಆರ್‌ಸಿ	4160	4000	4025	2270 ಡಾಲರ್ಸ್

ಮುಂಬೈ ಧಾರಣೆ

ಶೇಂಗಾ

10-2-2022

ಜಾವಾ 70/80(ಹೊಸ)	11200-11250
ಜಾವಾ 80/90(ಹೊಸ)	10900-10950
ದಪ್ಪ ಮಧ್ಯಪ್ರದೇಶ(ಹೊಸ)	9850-9900
ದಪ್ಪ ಗುಜರಾತ್(ಹೊಸ)	8700-8750

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1330 (1330)
ಒಂದು ವಾರದ ಡೆಲಿವರಿ	1325 (1325)
ಸೋಯಾ ಕಚ್ಚಾ	1245 (1222)
ಪಾಮ್ ವಾರದ ಡೆಲಿವರಿ	1235 (1230)
ಸೂರ್ಯಕಾಂತಿ ಎಣ್ಣೆ ಕಚ್ಚಾ	1235 (1235)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ	48,650 (48,550)
ಬೆಳ್ಳಿ ಕೆ.ಜಿ	62,800 (62,350)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಪರಸ್ಪರ ಅಂತರ ಕಾಯ್ದುಕೊಳ್ಳಿ

ಪ್ರೊ ಲೀಗ್ ಹಾಕಿ: ಭಾರತಕ್ಕೆ ಮಣಿದ ದಕ್ಷಿಣ ಆಫ್ರಿಕಾ

ಜುಗರಾಜ್ ಹ್ಯಾಟ್ರಿಕ್ ಮೋಡಿ

ಪೊಚೆಫ್‌ಸ್ಟ್ರೂಮ್, ದಕ್ಷಿಣ ಆಫ್ರಿಕಾ (ಪಿಟಿಐ): ಯುವ ಡ್ರ್ಯಾಗ್‌ಫ್ಲಿಕರ್ ಜುಗರಾಜ್ ಸಿಂಗ್ ತಾವಾಡಿದ ಎರಡನೇ ಅಂತರರಾಷ್ಟ್ರೀಯ ಪಂದ್ಯದಲ್ಲೇ ಮೋಡಿ ಮಾಡಿದರು. ಅವರು ಗಳಿಸಿದ ಹ್ಯಾಟ್ರಿಕ್ ಗೋಲುಗಳ ನೆರವಿನಿಂದ ಭಾರತ ತಂಡವು ಎಫ್‌ಐಎಚ್ ಪ್ರೊ ಲೀಗ್ ಹಾಕಿ ಟೂರ್ನಿಯಲ್ಲಿ 10–2ರಿಂದ ದಕ್ಷಿಣ ಆಫ್ರಿಕಾ ತಂಡವನ್ನು ಮಣಿಸಿತು.

ಬುಧವಾರ ತಡರಾತ್ರಿ ನಡೆದ ಹಣಾಹಣಿಯಲ್ಲಿ ಜುಗರಾಜ್, ನಾಲ್ಕು, ಆರು ಮತ್ತು 23ನೇ ನಿಮಿಷಗಳಲ್ಲಿ ದೊರೆತ ಪೆನಾಲ್ಟಿ ಕಾರ್ನರ್ ಅವಕಾಶಗಳನ್ನು ಗೋಲಿನಲ್ಲಿ ಪರಿವರ್ತಿಸಿದರು. ಗುರುಸಾಹಿಬ್‌ಜೀತ್ ಸಿಂಗ್ (24, 36ನೇ ನಿಮಿಷ), ದಿಲ್‌ಪ್ರೀತ್ ಸಿಂಗ್ (25, 58ನೇ ನಿ.), ಹರ್ಮನ್‌ಪ್ರೀತ್ ಸಿಂಗ್ (2ನೇ ನಿ.), ಅಭಿಷೇಕ್ (12ನೇ ನಿ.) ಮತ್ತು ಮನದೀಪ್ ಸಿಂಗ್ (27ನೇ ನಿ.) ಭಾರತದ ಪರ ಮಿಂಚಿದರು.

ಗೋಲು ಗಳಿಸಿದ ಭಾರತದ ಜುಗರಾಜ್ ಸಿಂಗ್ (ಎಡದಿಂದ ಎರಡನೆಯವರು) ಸಹ ಆಟಗಾರರೊಂದಿಗೆ ಸಂಭ್ರಮಿಸಿದರು– ಟ್ವಿಟರ್ ಚಿತ್ರ

ಆತಿಥೇಯ ತಂಡದ ಡೇನಿಯಲ್ ಬೆಲ್ (44ನೇ ನಿ.) ಮತ್ತು ರಿಚರ್ಡ್ ಪೌಟ್ಜ್ (45ನೇ ನಿ.) ಗೋಲು ಹೊಡೆದರು.

ಪಂದ್ಯದಲ್ಲಿ ಭಾರತ ತಂಡ ಒಟ್ಟು 12 ಪೆನಾಲ್ಟಿ ಕಾರ್ನರ್ ಗಳಿಸಿದ್ದು ತಂಡದ ಪಾರಮ್ಯಕ್ಕೆ ಸಾಕ್ಷಿಯಾಗಿತ್ತು.

ಟೆನಿಸ್: ಪ್ರಶಸ್ತಿ ಸುತ್ತಿಗೆ ರುಹಾನ್ ಲಗ್ಗೆ

ಬೆಂಗಳೂರು: ಕರ್ನಾಟಕದ ರುಹಾನ್ ಕೋಮಂದೂರ್ ಅವರು ಪಂಜಾಬ್‌ನ ಜಿರಕ್‌ಪುರದಲ್ಲಿ ನಡೆದ ಎಐಟಿಎ 14 ವರ್ಷದೊಳಗಿನವರ ಟೆನಿಸ್ ಟೂರ್ನಿಯಲ್ಲಿ ಫೈನಲ್ ತಲುಪಿದ್ದಾರೆ.

ಸೆಮಿಫೈನಲ್‌ನಲ್ಲಿ ಅವರು 6-2, 6-2ರಿಂದ ಪಂಜಾಬ್‌ನ ಹಿಮಾನಿಶ್ ಬ್ರಿಂದಾ ಅವರನ್ನು ಸೋಲಿಸಿದರು. ಬೆಂಗಳೂರಿನ ಬಿಶಪ್ ಕಾಟನ್ ಬಾಯ್ಸ್ ಶಾಲೆಯ ವಿದ್ಯಾರ್ಥಿ ರುಹಾನ್ ಅವರಿಗೆ ಫೈನಲ್‌ನಲ್ಲಿ ಸುಮುಖ್ ಮಾರ್ಯ ಸವಾಲು ಎದುರಾಗಿದೆ.

ಐಎಸ್‌ಎಲ್: ಬಿಎಫ್‌ಸಿಗೆ ಅಗ್ರಸ್ಥಾನದ ಮೇಲೆ ಕಣ್ಣು

ಬ್ಯಾಂಬೋಲಿಮ್ (ಪಿಟಿಐ): ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿಯ ಪಾಯಿಂಟ್ಸ್ ಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರುವ ತವಕದಲ್ಲಿರುವ ಬೆಂಗಳೂರು ಎಫ್‌ಸಿ (ಬಿಎಫ್‌ಸಿ) ತಂಡವು ಶುಕ್ರವಾರ ಹೈದರಾಬಾದ್ ಎಫ್‌ಸಿಗೆ ಮುಖಾಮುಖಿಯಾಗಲಿದೆ.

ಟೂರ್ನಿಯಲ್ಲಿ ನೀರಸ ಆರಂಭ ಮಾಡಿದ್ದ ಸುನಿಲ್ ಚೆಟ್ರಿ ನಾಯಕತ್ವದ ಬಿಎಫ್‌ಸಿ ಸದ್ಯ ಸತತ ಒಂಬತ್ತು ಪಂದ್ಯಗಳಲ್ಲಿ ಅಜೇಯವಾಗಿದ್ದು, ಲಯಕ್ಕೆ ಮರಳಿದೆ. ತಂಡವು 15 ಪಂದ್ಯಗಳಿಂದ 23 ಪಾಯಿಂಟ್ಸ್ ಕಲೆಹಾಕಿ ಮೂರನೇ ಸ್ಥಾನದಲ್ಲಿದೆ.

ಪಾಯಿಂಟ್ಸ್ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿರುವ ಹೈದರಾಬಾದ್ ಎದುರು ಗೆದ್ದರೆ ಉಭಯ ತಂಡಗಳ ಪಾಯಿಂಟ್ಸ್ ಸಮಬಲವಾಗಲಿವೆ.

ಕಳೆದ ಪಂದ್ಯದಲ್ಲಿ ಎಟಿಕೆ ಮೋಹನ್ ಬಾಗನ್ ಎದುರು ಎಡವಿದ್ದ ಹೈದರಾಬಾದ್ ಅಗ್ರಸ್ಥಾನ ಭದ್ರಪಡಿಸಿಕೊಳ್ಳುವ ಅವಕಾಶ ಕಳೆದುಕೊಂಡಿತ್ತು. ಈ ಪಂದ್ಯದಲ್ಲಿ ಆ ಗುರಿ ಈಡೇರಿಸಿಕೊಳ್ಳುವ ಛಲದಲ್ಲಿದೆ.

ಜಮ್ಷೆಡ್‌ಪುರ ಜಯಭೇರಿ: ಗ್ರೆಗ್ ಸ್ಟೀವರ್ಟ್ ಗಳಿಸಿದ ಎರಡು ಗೋಲುಗಳ ನೆರವಿನಿಂದ ಜಮ್ಷೆಡ್‌ಪುರ ಎಫ್‌ಸಿ ತಂಡವು ಗುರುವಾರ 3–0ಯಿಂದ ಕೇರಳ ಬ್ಲಾಸ್ಟರ್ಸ್ ತಂಡವನ್ನು ಸೋಲಿಸಿತು.

ಪಂದ್ಯ ಆರಂಭ: ರಾತ್ರಿ 7.30

ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಹಾಕಿ: ಬಿಬಿಎಚ್‌ಸಿಗೆ ಜಯ

ಬೆಂಗಳೂರು: ಉತ್ತಮ ಸಾಮರ್ಥ್ಯ ತೋರಿದ ಬೆಂಗಳೂರು ಬ್ಲ್ಯೂಸ್ ಹಾಕಿ ಕ್ಲಬ್ (ಬಿಬಿಎಚ್‌ಸಿ) ತಂಡದವರು ತಿರುವಾಂಕೂರ್ ಕಪ್ ಹಾಕಿ ಟೂರ್ನಿಯಲ್ಲಿ ಭರ್ಜರಿ ಜಯ ಗಳಿಸಿದರು.

ಗುರುವಾರ ನಡೆದ ಪಂದ್ಯದಲ್ಲಿ 6–0ಯಿಂದ ಸಾಮಂತ್ ಸ್ಪೋರ್ಟ್ಸ್ ಅಕಾಡೆಮಿ ತಂಡವನ್ನು ಸೋಲಿಸಿದರು. ಇನ್ನೊಂದು ಪಂದ್ಯದಲ್ಲಿ ಮೊಹಮ್ಮದ್ ಸಾದಿಕ್ ಗಳಿಸಿದ ಹ್ಯಾಟ್ರಿಕ್ ಗೋಲುಗಳ ಬಲದಿಂದ ಲಿಯೊಸ್ ಸ್ಪೋರ್ಟ್ಸ್ ಕ್ಲಬ್ 5–2ರಿಂದ ಜಾಯ್ಸ್ ಹಾಕಿ ಕ್ಲಬ್ ಎದುರು ಗೆದ್ದಿತು.

ಜೋಹಾನ್ಸ್ ಸ್ಟ್ರಾಲ್ಜ್ –ರಾಯಿಟರ್ಸ್ ಚಿತ್ರ

ಚಳಿಗಾಲದ ಒಲಿಂಪಿಕ್ಸ್: ಚಿನ್ನ ಗೆದ್ದ ಸ್ಕೀಯಿಂಗ್ ಪಟು

ಅಪ್ಪನ ಸಾಧನೆ ಸರಿಗಟ್ಟಿದ ಸ್ಟ್ರಾಲ್ಜ್

ಯಾನ್‌ಕಿಂಗ್ (ಎಎಫ್‌ಪಿ/ರಾಯಿಟರ್ಸ್): ಆಸ್ಟ್ರಿಯಾದ ಸ್ಕೀಯಿಂಗ್ ಪಟು ಜೋಹಾನ್ನಸ್ ಸ್ಟ್ರಾಲ್ಜ್ ಅವರು ಚಳಿಗಾಲದ ಒಲಿಂಪಿಕ್ಸ್‌ನಲ್ಲಿ ಆಸ್ಟ್ರಿಯಾಗೆ ಎರಡನೇ ಚಿನ್ನದ ಪದಕ ಗೆದ್ದುಕೊಟ್ಟರು. ಇದರೊಂದಿಗೆ 34 ವರ್ಷಗಳ ಹಿಂದೆ ತಮ್ಮ ತಂದೆ ಮಾಡಿದ ಸಾಧನೆಯನ್ನು ಅನುಸರಿಸಿದರು.

ಟ್ರಾಫಿಕ್ ಪೊಲೀಸ್ ಆಗಿ ಕಾರ್ಯನಿರ್ವಹಿಸಿದ್ದ ಸ್ಟ್ರಾಲ್ಜ್ ಅವರನ್ನು ಒಂದು ಸಂದರ್ಭದಲ್ಲಿ ತಂಡದಿಂದ ಕೈಬಿಡಲಾಗಿತ್ತು. ಕಂಬೈನ್ಡ್ ಸ್ಕೀಯಿಂಗ್ ಸ್ಪರ್ಧೆಯ ಆರಂಭದಲ್ಲಿ ನಾಲ್ಕನೇ ಸ್ಥಾನದಲ್ಲಿದ್ದ ಸ್ಟ್ರಾಲ್ಜ್, ಎರಡು ನಿಮಿಷ 31.43 ಸೆಕೆಂಡುಗಳಲ್ಲಿ ಗುರಿ ಮುಟ್ಟುವ ಮೂಲಕ ಸ್ಲಾಲೋಮ್ ವಿಭಾಗದಲ್ಲಿ ಅಗ್ರಸ್ಥಾನ ಗಳಿಸಿದರು.

1988ರ ಕ್ಯಾಲ್ಗರಿ ಒಲಿಂಪಿಕ್ ಕೂಟದಲ್ಲಿ ಸ್ಟ್ರಾಲ್ಜ್ ಅವರ ತಂದೆ ಹುಬರ್ಟ್ ಚಿನ್ನದ ಪದಕಕ್ಕೆ ಕೊರಳೊಡ್ಡಿದ್ದರು.

ನಾರ್ವೆಯ ಅಲೆಕ್ಸಾಂಡರ್ ಆಮೋಟ್ ಕಿಲ್ದೆ ಬೆಳ್ಳಿ ಮತ್ತು ಕೆನಡಾದ ಜೇಮ್ಸ್ ಕ್ರಾಫೋರ್ಡ್ ಕಂಚಿನ ಪದಕ ತಮ್ಮದಾಗಿಸಿಕೊಂಡರು.

ಮಾನಸಿಕ ಆರೋಗ್ಯ ಸಾಧಿಸಿದ ಕ್ಲೋ ಕಿಮ್‌ಗೆ ಚಿನ್ನ: ಮಾನಸಿಕ ಆರೋಗ್ಯ ಕಾಯ್ದುಕೊಳ್ಳಲು ಎರಡು ವರ್ಷಗಳಿಂದ ಕ್ರೀಡೆಯಿಂದ ದೂರವಿದ್ದ ಅಮೆರಿಕದ ಮಹಿಳಾ ಸ್ನೋಬೋರ್ಡಿಂಗ್ ಪಟು ಕ್ಲೋ ಕಿಮ್ ಈ ಒಲಿಂಪಿಕ್ಸ್‌ನಲ್ಲಿ ಎರಡನೇ ಚಿನ್ನದ ಪದಕ ಜಯಿಸಿದರು.

ಬೆಂಗಳೂರು ಓಪನ್ ಟೆನಿಸ್: ಸಿಂಗಲ್ಸ್ ವಿಭಾಗದಲ್ಲಿ ಭಾರತದ ಸವಾಲು ಅಂತ್ಯ

ವೆಸ್ಲಿ ಎದುರು ಸೋತ ಪ್ರಜ್ಞೇಶ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುನ್ನಡೆಯನ್ನು ಉಳಿಸಿಕೊಳ್ಳಲಾಗದ ಭಾರತದ ಪ್ರಜ್ಞೇಶ್ ಗುಣೇಶ್ವರನ್ ಅವರು ಅಗ್ರಶ್ರೇಯಾಂಕದ ಆಟಗಾರ ಜಿರಿ ವೆಸ್ಲಿ ಎದುರು ನಿರಾಸೆ ಅನುಭವಿಸಿದರು. ಇದರೊಂದಿಗೆ ಬೆಂಗಳೂರು ಓಪನ್ ಟೆನಿಸ್ ಟೂರ್ನಿಯ ಸಿಂಗಲ್ಸ್ ವಿಭಾಗದಲ್ಲಿ ಭಾರತದ ಸವಾಲು ಅಂತ್ಯವಾಯಿತು.

ಕರ್ನಾಟಕ ರಾಜ್ಯ ಲಾನ್ ಟೆನಿಸ್ ಸಂಸ್ಥೆಯ (ಕೆಎಸ್‌ಎಲ್‌ಟಿಎ) ಅಂಗಣದಲ್ಲಿ ನಡೆಯುತ್ತಿರುವ ಟೂರ್ನಿಯ ಪ್ರೀಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಗುರುವಾರ ಪ್ರಜ್ಞೇಶ್ 6–3, 2–6, 1–6ರಿಂದ ಜೆಕ್ ಗಣರಾಜ್ಯದ ಆಟಗಾರನ ಎದುರು ಎಡವಿದರು.

ಜಿದ್ದಾಜಿದ್ದಿನ ಪಂದ್ಯದ ಮೊದಲ ಸೆಟ್‌ನ ಎರಡು ಗೇಮ್‌ಗಳಲ್ಲಿ ಉಭಯ ಆಟಗಾರರು ಪರಸ್ಪರ ಸರ್ವ್‌ಗಳನ್ನು ಬ್ರೇಕ್ ಮಾಡಿದರು. ವೆಸ್ಲಿ ಮಾಡಿದ ಲೋಪಗಳ ಲಾಭ ಪಡೆದ ಪ್ರಜ್ಞೇಶ್ ನಾಲ್ಕನೇ ಗೇಮ್‌ನಲ್ಲೂ ಸರ್ವಿಸ್ ಬ್ರೇಕ್ ಮಾಡಿದರು. ಅದೇ ಲಯದೊಂದಿಗೆ ಸೆಟ್ ಜಯಿಸಿದರು.

2ನೇ ಸೆಟ್‌ನ ನಾಲ್ಕನೇ ಹಾಗೂ 8ನೇ ಗೇಮ್‌ಗಳಲ್ಲಿ ಪ್ರಜ್ಞೇಶ್‌ಗೆ ತಿರುಗೇಟು ನೀಡಿ ಮುನ್ನುಗ್ಗಿದ ವೆಸ್ಲಿ ಚುರುಕಿನ ಆಟದೊಂದಿಗೆ ಸೆಟ್ ವಶಡಿಸಿಕೊಂಡರು. ಆದರೆ ಮೂರನೇ ಹಾಗೂ ನಿರ್ಣಾಯಕ ಸೆಟ್‌ನಲ್ಲಿ ಜೆಕ್ ಆಟಗಾರ ಸಂಪೂರ್ಣ ಪಾರಮ್ಯ ಮೆರೆದರು. ಆರಂಭದಲ್ಲೇ 5–0 ಮುನ್ನಡೆಯೊಂದಿಗೆ ಸಾಗಿದರು. ಬಲಶಾಲಿ ರಿಟರ್ನ್‌ಗಳು ಮತ್ತು ಮುಂಗೈ ಹೊಡೆತಗಳಿಂದ ಸೆಟ್ ಗೆದ್ದರು.

ಎಂಟರಘಟ್ಟದ ಹಣಾಹಣಿಯಲ್ಲಿ ವೆಸ್ಲಿ ಅವರು ಫ್ರಾನ್ಸ್‌ನ ಎನ್‌ಜೊ ಕೌಸಾಡ್ ಅವರನ್ನು ಎದುರಿಸುವರು.

ಪ್ರಜ್ಞೇಶ್ ಎದುರಿನ ಪ್ರೀಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಜೆಕ್ ಗಣರಾಜ್ಯದ ಜಿರಿ ವೆಸ್ಲಿ ಚೆಂಡನ್ನು ರಿಟರ್ನ್ ಮಾಡಿದರು –ಪ್ರಜಾವಾಣಿ ಚಿತ್ರ/ಕೃಷ್ಣಕುಮಾರ್ ಪಿ.ಎಸ್

ಪ್ರಜ್ಞೇಶ್

ಪ್ರೀಕ್ವಾರ್ಟರ್‌ಫೈನಲ್‌ನ ಮತ್ತೊಂದು ಪಂದ್ಯದಲ್ಲಿ ಎನ್‌ಜೊ 6-4, 3-6, 6-2ರಿಂದ ಆಸ್ಟ್ರೇಲಿಯಾದ ಮ್ಯಾಕ್ಸ್ ಪರ್ಸೆಲ್ ಸವಾಲು ಮೀರಿದರು. ಸಿಂಗಲ್ಸ್ ವಿಭಾಗದ ಪ್ರೀಕ್ವಾರ್ಟರ್‌ಫೈನಲ್‌ನ ಇನ್ನುಳಿದ ಹಣಾಹಣಿಗಳಲ್ಲಿ ಟರ್ಕಿಯ ಸೆಮ್ ಇಲ್‌ಕೆಲ್ 2-6, 6-3, 7-5ರಿಂದ ರಷ್ಯಾದ ಇವ್‌ಜೆನಿ ಡಾನ್‌ಸ್ಕಿ ಎದುರು, ಫ್ರಾನ್ಸ್‌ನ ಅಲೆಕ್ಸಾಂಡರ್ ಮುಲ್ಲರ್ 7-6 (4), 6-4ರಿಂದ ಬಲ್ಗೇರಿಯಾದ ಡಿಮಿಟಾರ್ ಕುಜ್ಮನೊವ್ ವಿರುದ್ಧ ಗೆದ್ದರು.

ಸೆಮಿಗೆ ಸಾಕೇತ್– ರಾಮ್‌ಕುಮಾರ್

ಪುರುಷರ ಡಬಲ್ಸ್ ವಿಭಾಗದಲ್ಲಿ ಭಾರತದ ಸಾಕೇತ್ ಮೈನೇನಿ ಮತ್ತು ರಾಮಕುಮಾರ್ ರಾಮನಾಥನ್ ಜೋಡಿ ಮಾತ್ರ ಸೆಮಿಫೈನಲ್ ಪ್ರವೇಶಿಸಿತು. ಅವರ ಎದುರಾಳಿಗಳಾಗಿದ್ದ ಕೆನಡಾದ ಸ್ಟೀವನ್ ಡಿಯಜ್ ಮತ್ತು ಟ್ಯುನಿಷಿಯಾದ ಮಾಲೆಕ್ ಜಾಜಿರಿ ಅವರು ವಾಕ್‌ಓವರ್ ನೀಡಿದ ಕಾರಣ ಭಾರತದ ಜೋಡಿಗೆ ಈ ಅವಕಾಶ ಲಭಿಸಿತು.

ಇನ್ನುಳಿದ ಕ್ವಾರ್ಟರ್‌ಫೈನಲ್ ಪಂದ್ಯಗಳಲ್ಲಿ ಯೂಕಿ ಭಾಂಬ್ರಿ– ದಿವಿಜ್ ಶರಣ್ 4–6, 3–6ರಿಂದ ಅಸ್ಟ್ರಿಯಾದ ಅಲೆಕ್ಸಾಂಡರ್ ಎರ್ಲರ್, ಜೆಕ್ ಗಣರಾಜ್ಯದ ವಿಟ್ ಕೊಪ್ರಿವಾ ಎದುರು ಸೋತರೆ, ಜೀವನ್ ನೆಡುಂಚೇರಿಯನ್–ಪೂರವ್ ರಾಜಾ 2–6, 1–6ರಿಂದ ಬ್ರಿಟನ್‌ನ ಜಾಯ್ ಕ್ಲಾರ್ಕ್– ಆಸ್ಟ್ರೇಲಿಯಾದ ಮಾರ್ಕ್ ಪೊಲ್ಮನ್ಸ್ ಎದುರು ಎಡವಿದರು. ಎನ್. ಶ್ರೀರಾಮ್ ಬಾಲಾಜಿ– ವಿಷ್ಣುವರ್ಧನ್ ಜೋಡಿಯು 4–6, 6–7, 4–10ರಿಂದ ಫ್ರಾನ್ಸ್‌ನ ಹ್ಯೂಗೊ ಗ್ರೇನಿಯರ್– ಅಲೆಕ್ಸಾಂಡರ್ ಮುಲ್ಲರ್ ಎದುರು ಸೋತರು.

ನನ್ನ ತೀರ್ಮಾನಗಳ ಶ್ರೇಯ ಪಡೆದ ‘ಅನ್ಯರು’

ಅಜಿಂಕ್ಯ ರಹಾನೆ ಅಸಮಾಧಾನ

ನವದೆಹಲಿ (ಪಿಟಿಐ): ‘ಒಂದು ವರ್ಷದ ಹಿಂದೆ ಆಸ್ಟ್ರೇಲಿಯಾದಲ್ಲಿ ಐತಿಹಾಸಿಕ ಟೆಸ್ಟ್ ಸರಣಿ ಜಯ ಸಾಧಿಸಿದ್ದೆವು. ಆ ಸಂದರ್ಭದಲ್ಲಿ ನಾನು ತೆಗೆದುಕೊಂಡಿದ್ದ ಕೆಲವು ಪ್ರಮುಖ ತೀರ್ಮಾನಗಳ ಶ್ರೇಯವನ್ನು ಬೇರೆಯವರು ತೆಗೆದುಕೊಂಡರು’ ಎಂದು ಭಾರತ ತಂಡದ ಆಟಗಾರ ಅಜಿಂಕ್ಯ ರಹಾನೆ ಹೇಳಿದರು.

ಗುರುವಾರ ಅವರು ‘ಬ್ಯಾಕ್‌ಸ್ಟೇಜ್ ವಿಥ್ ಬೊರಿಯಾ’ ಕಾರ್ಯಕ್ರಮದಲ್ಲಿ ಅಜಿಂಕ್ಯ ಈ ವಿಷಯವನ್ನು ಬಹಿರಂಗಪಡಿಸಿದರು.

ಆಸ್ಟ್ರೇಲಿಯಾದಲ್ಲಿ 2020–21ರಲ್ಲಿ ಭಾರತವು ಟೆಸ್ಟ್ ಸರಣಿ ಜಯಿಸಿ ಚಾರಿತ್ರಿಕ ಸಾಧನೆ ಮಾಡಿದ್ದಾಗ ರಹಾನೆ ಆಕರ್ಷಣೆಯ ಕೇಂದ್ರಬಿಂದುವಾಗಿದ್ದರು. ಏಕೆಂದರೆ ಆ ಸರಣಿಯ ಮೊದಲ ಪಂದ್ಯದಲ್ಲಿ ಭಾರತ ತಂಡವು ಇನಿಂಗ್ಸ್‌ನಲ್ಲಿ ಕೇವಲ 36 ರನ್‌ಗಳನ್ನು ಗಳಿಸಿ ಹೀನಾಯ ಸೋಲನುಭವಿಸಿತ್ತು. ಅದರ ನಂತರ ವಿರಾಟ್ ಕೊಹ್ಲಿ ‘ಪಿತೃತ್ವ ರಜೆ’ಗಾಗಿ ಸ್ವದೇಶಕ್ಕೆ ಮರಳಿದ್ದರು ಉಳಿದ ಪಂದ್ಯಗಳಲ್ಲಿ ರಹಾನೆ ತಂಡವನ್ನು ಮುನ್ನಡೆಸಿದ್ದರು. ತಂಡದಲ್ಲಿ ಹಲವು ಅನುಭವಿ ಆಟಗಾರರು ಗಾಯದ ಸಮಸ್ಯೆ ಅನುಭವಿಸಿದಾಗ, ಬೆಂಚ್‌ನಲ್ಲಿದ್ದ ಯುವ ಆಟಗಾರರನ್ನು ಆಡಿದ್ದರು. ತಂಡವು ಐತಿಹಾಸಿಕ ಸಾಧನೆ ಮಾಡಿತ್ತು.

‘ಪಂದ್ಯ ನಡೆಯುವಾಗ ಮತ್ತು ಡ್ರೆಸಿಂಗ್ ಕೋಣೆಯಲ್ಲಿ ಕೆಲವು ಪ್ರಮುಖ ನಿರ್ಧಾರಗಳನ್ನು ಸಂದರ್ಭೋಚಿತವಾಗಿ ತೆಗೆದುಕೊಂಡಿದ್ದೆ. ಆದರೆ, ಅದರ ಶ್ರೇಯ ಪಡೆಯಲು ನಾನು ಹಂಬಲಿಸಲಿಲ್ಲ. ಶ್ರೇಯವನ್ನು ನನಗೇ ಕೊಡಿ ಎಂದು ಕೇಳುವ ಜಾಯಮಾನವೂ ನನ್ನದಲ್ಲ.

ಅಜಿಂಕ್ಯ ರಹಾನೆ

ಆದರೆ ಮತ್ಯಾರೋ ಅದನ್ನು ತೆಗೆದುಕೊಂಡು ಹೋದರು’ ಎಂದು ರಹಾನೆ ವಿವರಿಸಿದರು.

‘ಸರಣಿಯ ನಂತರ ಜನರಿಂದ ಮತ್ತು ಶ್ರೇಯ ಪಡೆದವರ ಮುಖೇನ ಮಾಧ್ಯಮಗಳಲ್ಲಿ ಬಂದ ಪ್ರತಿಕ್ರಿಯೆಗಳನ್ನು ನೋಡಿ. ತಾವೇ ಕೆಲವು ನಿರ್ಧಾರಗಳನ್ನು ಕೈಗೊಂಡಿದ್ದಾಗಿ ಹೇಳಿದ್ದರು. ಫೀಲ್ಡ್‌ನಲ್ಲಿ ನಾವು ತೆಗೆದುಕೊಂಡ ನಿರ್ಧಾರಗಳೇನು ಎಂಬುದು ನನಗೆ ಗೊತ್ತಿದೆ’ ಎಂದರು.

‘ಎಲ್ಲಕ್ಕೂ ಮಿಗಿಲಾಗಿ ನಾವು ಸರಣಿ ಜಯಿಸಿದ್ದು ವಿಶೇಷವಾಗಿತ್ತು ಮತ್ತು ನನಗೆ ಹೆಮ್ಮೆ, ಸಂತಸವನ್ನು ತಂದಿತ್ತು. ಅದಕ್ಕಿಂತ ಇನ್ನೇನು ಬೇಕು’ ಎಂದರು.

ಈ ಸಂದರ್ಭದಲ್ಲಿ ಅವರು ಯಾರ ಹೆಸರನ್ನೂ ಪ್ರಸ್ತಾಪ ಮಾಡಲಿಲ್ಲ.

ಆಗ ಮುಖ್ಯ ಕೋಚ್ ಆಗಿದ್ದ ರವಿಶಾಸ್ತ್ರಿ ಅವರು ಹಲವು ಸಂದರ್ಭಗಳಲ್ಲಿ ತಂಡದ ಸಾಧನೆಯ ಹಿಂದೆ ತಮ್ಮ ಶ್ರಮ ಯೋಜನೆಗಳು ಮತ್ತು ತರಬೇತಿಯ ಪಾತ್ರ ಇರುವುದನ್ನು ಹೇಳಿಕೊಂಡಿದ್ದರು.

ಸುದ್ದಿ 2 ನಿಮಿಷ

ರಿಷಭ್‌ಗೆ ಟೆಸ್ಟ್ ಬ್ಯಾಟಿಂಗ್ ಪ್ರಶಸ್ತಿ

ನವದೆಹಲಿ (ಪಿಟಿಐ): ಭಾರತ ತಂಡದ ವಿಕೆಟ್‌ಕೀಪರ್–ಬ್ಯಾಟ್ಸ್‌ಮನ್ ರಿಷಭ್ ಪಂತ್ ಅವರಿಗೆ ಇಎಸ್‌ಪಿಎನ್ ಕ್ರಿಕ್‌ಇನ್ಫೋ ಟೆಸ್ಟ್ ಬ್ಯಾಟಿಂಗ್ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

ನ್ಯೂಜಿಲೆಂಡ್ ತಂಡದ ನಾಯಕ ಕೇನ್ ವಿಲಿಯಮ್ಸನ್ ಅವರಿಗೆ ವರ್ಷದ ನಾಯಕ ಗೌರವ ನೀಡಲಾಗಿದೆ. ವರ್ಷದ ಟೆಸ್ಟ್ ಕ್ರಿಕೆಟ್ ಬೌಲರ್ ಗೌರವಕ್ಕೆ ಕಿವೀಸ್ ವೇಗಿ ಕೈಲ್ ಜೆಮಿಸನ್ (31ಕ್ಕೆ5) ಪಾತ್ರರಾಗಿದ್ದಾರೆ. ಕಿವೀಸ್ ತಂಡವು ಟೆಸ್ಟ್ ವಿಶ್ವಕಪ್ ಜಯಿಸಲು ಅವರ ಆಟ ಪ್ರಮುಖವಾಗಿತ್ತು.

ಹೋದ ವರ್ಷ ಆಸ್ಟ್ರೇಲಿಯಾ ಎದುರಿನ ಟೆಸ್ಟ್ ಸರಣಿಯಲ್ಲಿ ಕಠಿಣ ಸಂದರ್ಭದಲ್ಲಿ ಭಾರತದ ರಿಷಭ್ 89 ರನ್‌ಗಳನ್ನು ಗಳಿಸಿದ್ದರು. ಜಯದ ಕಾಣಿಕೆ ನೀಡಿದ್ದರು. ಭಾರತವು ಆಸ್ಟ್ರೇಲಿಯಾದಲ್ಲಿ ಐತಿಹಾಸಿಕ ಜಯ ಗಳಿಸಿತ್ತು.

ಇಂಗ್ಲೆಂಡ್ ತಂಡದ ವೇಗದ ಬೌಲರ್ ಒಲಿ ರಾಬಿನ್ಸನ್ ಅವರಿಗೆ ವರ್ಷದ ಪದಾರ್ಪಣೆ ಆಟಗಾರ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ. ಅವರು 2021ರಲ್ಲಿ ಒಟ್ಟು 37 ವಿಕೆಟ್ ಗಳಿಸಿ ಇಂಗ್ಲೆಂಡ್ ಪರ ಹೆಚ್ಚು ವಿಕೆಟ್ ಸಾಧನೆ ಮಾಡಿದ ಎರಡನೇ ಬೌಲರ್ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಜೊಸ್ ಬಟ್ಲರ್ ಟಿ20 ಬ್ಯಾಟಿಂಗ್ ಪ್ರಶಸ್ತಿಯನ್ನು ಗಳಿಸಿದ್ದಾರೆ. ಟಿ20 ವಿಶ್ವಕಪ್ ಟೂರ್ನಿಯಲ್ಲಿ ಅವರು ಶ್ರೀಲಂಕಾ ಎದುರಿನ ಪಂದ್ಯಲ್ಲಿ 67 ಎಸೆತಗಳಲ್ಲಿ ಶತಕ ಬಾರಿಸಿದ್ದರು.

ಏಕದಿನ ಬ್ಯಾಟಿಂಗ್ ಮತ್ತು ಟಿ20 ಬೌಲಿಂಗ್ ವಿಭಾಗಗಳ ಪ್ರಶಸ್ತಿಗಳಲ್ಲಿ ಪಾಕಿಸ್ತಾನ ಸಿಂಹಪಾಲು ಪಡೆದಿದೆ. ಫಕ್ರ್ ಜಮಾನ್ ಅಗ್ರ ಬ್ಯಾಟ್ಸ್‌ಮನ್, ಶಾಹೀನ್ ಆಫ್ರಿದಿ ಬೌಲಿಂಗ್ ಪ್ರಶಸ್ತಿ ಗೆದ್ದಿದ್ದಾರೆ.

ಎಲ್‌ಪಿಎಲ್‌ನಲ್ಲಿ ಫಿಕ್ಸಿಂಗ್: ತನಿಖೆ

ಕೊಲಂಬೊ (ಪಿಟಿಐ): ಶ್ರೀಲಂಕಾ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯಲ್ಲಿ ಪಂದ್ಯ ಫಿಕ್ಸಿಂಗ್ ಮಾಡುವ ಪ್ರಯತ್ನ ನಡೆದಿತ್ತೆನ್ನಲಾಗಿದ್ದು, ಕ್ರೀಡಾ ಸಚಿವಾಲಯದ ಭ್ರಷ್ಟಾಚಾರ ತಡೆ ಘಟಕವು ತನಿಖೆ ಆರಂಭಿಸಿದೆ.

‘ರತ್ನ ವ್ಯಾಪಾರಿಯೊಬ್ಬರ ಮಗ ಮತ್ತು ಆತನ ಗೆಳೆಯ ಪಂದ್ಯ ಫಿಕ್ಸ್ ಮಾಡುವಂತೆ ಇಲ್ಲಿಯ ಅಗ್ರಮಾನ್ಯ ಆಟಗಾರನೊಬ್ಬನನ್ನು ಸಂಪರ್ಕಿಸಿದ್ದರು. ಆ ಕುರಿತು ಆಟಗಾರ ಮಂಡಳಿಗೆ ದೂರು ನೀಡಿದ್ದಾರೆ. ಆ ಹಿನ್ನೆಯಲ್ಲಿ ತನಿಖೆ ಕೈಗೊಳ್ಳಲಾಗಿದೆ. ಅದಕ್ಕೆ ಸಂಬಂಧಿಸಿದ ಕಾಗದಪತ್ರಗಳನ್ನು ಅಟಾರ್ನಿ ಜನರಲ್‌ಗೆ ಕಳಿಸಲಾಗಿದೆ’ ಎಂದು ಘಟಕದ ಮುಖ್ಯಸ್ಥ ಜಗತ್ ಫಾನ್ಸೆಕಾ ತಿಳಿಸಿದ್ದಾರೆ.

ಕಳೆದ ಡಿಸೆಂಬರ್‌ನಲ್ಲಿ ಎಸ್‌ಪಿಎಲ್ ಲೀಗ್ ಟೂರ್ನಿಯ ಎರಡನೇ ಆವೃತ್ತಿಯು ನಡೆಯಿತು. ಇದರಲ್ಲಿ ಹಲವು ವಿದೇಶಿ ಆಟಗಾರರೂ ಆಡಿದ್ದರು.

ಕ್ಲೀನ್‌ಸ್ವೀಪ್‌ನತ್ತ ರೋಹಿತ್ ಬಳಗದ ಚಿತ್ತ

ಭಾರತ–ವೆಸ್ಟ್ ಇಂಡೀಸ್ 3ನೇ ಏಕದಿನ ಪಂದ್ಯ ಇಂದು; ಮರಳಿದ ಧವನ್

ಅಹಮದಾಬಾದ್ (ಪಿಟಿಐ): ಆರಂಭಿಕ ಆಟಗಾರ ಶಿಖರ್ ಧವನ್ ಶುಕ್ರವಾರ ಇಲ್ಲಿ ನಡೆಯಲಿರುವ ವೆಸ್ಟ್ ಇಂಡೀಸ್ ಎದುರಿನ ಸರಣಿಯ ಮೂರನೇ ಏಕದಿನ ಕ್ರಿಕೆಟ್ ಪಂದ್ಯದಲ್ಲಿ ಕಣಕ್ಕಿಳಿಯಲಿದ್ದಾರೆ.

ಮೂರು ಪಂದ್ಯಗಳ ಸರಣಿಯಲ್ಲಿ 2–0ಯಿಂದ ಮುನ್ನಡೆ ಸಾಧಿಸಿರುವ ಆತಿಥೇಯ ತಂಡವು ಕ್ಲೀನ್‌ಸ್ವೀಪ್‌ನತ್ತ ಚಿತ್ತ ನೆಟ್ಟಿದೆ. ಸರಣಿ ಆರಂಭಕ್ಕೂ ಮುನ್ನ ಕೋವಿಡ್ ಖಚಿತವಾಗಿದ್ದರಿಂದ ಶಿಖರ್ ಧವನ್ ಕಳೆದೆರಡೂ ಪಂದ್ಯಗಳಲ್ಲಿ ಆಡಿರಲಿಲ್ಲ.

ಆದ್ದರಿಂದ ರೋಹಿತ್ ಜೊತೆಗೆ ಮೊದಲ ಪಂದ್ಯದಲ್ಲಿ ಇಶಾನ್ ಕಿಶನ್ ಮತ್ತು ಎರಡನೇಯದ್ದರಲ್ಲಿ ರಿಷಭ್ ಪಂತ್ ಅವರನ್ನು ಕಣಕ್ಕಿಳಿಸಲಾಗಿತ್ತು. ಆದರೆ ಕೊನೆಯ ಪಂದ್ಯದಲ್ಲಿ ಎಡಗೈ ಬ್ಯಾಟರ್ ಶಿಖರ್ ಇನಿಂಗ್ಸ್ ಆರಂಭಿಸಿದರೆ, ಕೆ.ಎಲ್. ರಾಹುಲ್ ಮತ್ತೊಮ್ಮೆ ನಾಲ್ಕನೇ ಕ್ರಮಾಂಕದಲ್ಲಿ ಬ್ಯಾಟಿಂಗ್ ಮಾಡುವುದು ಖಚಿತ. ವಿರಾಟ್ ಕೊಹ್ಲಿ ಲಯ ಕಂಡುಕೊಳ್ಳಲು ಸಫಲರಾಗಿಲ್ಲ. ಎರಡೂ ಪಂದ್ಯಗಳಲ್ಲಿ ಅವರು ದೊಡ್ಡ ಇನಿಂಗ್ಸ್ ಆಡಿಲ್ಲ. ಕಳೆದೆರಡು ವರ್ಷಗಳಿಂದ ಒಂದೂ ಶತಕ ಗಳಿಸಿಲ್ಲ. ಆದ್ದರಿಂದ ಈ ಪಂದ್ಯದಲ್ಲಾದರೂ ಅವರು ತಮ್ಮ ಲಯಕ್ಕೆ ಮರಳುವರೇ ಎಂಬ ಕುತೂಹಲ ಮುಂದುವರಿದಿದೆ. ಬೌಲಿಂಗ್ ಪಡೆಯು ಉತ್ತಮವಾಗಿ ನಿರ್ವಹಣೆ ಮಾಡುತ್ತಿದೆ.

ಕನ್ನಡಿಗ ಪ್ರಸಿದ್ಧಕೃಷ್ಣ ಬುಧವಾರ ನಾಲ್ಕು ವಿಕೆಟ್ ಗಳಿಸಿ ಮಿಂಚಿದ್ದರು. ಸ್ಪಿನ್ನರ್‌ಗಳು ಉತ್ತಮ ಲಯದಲ್ಲಿದ್ದಾರೆ. ಆದರೆ, ಈಗಾಗಲೇ ಸರಣಿ ಕೈವಶ ಆಗಿರುವುದರಿಂದ ವಾಷಿಂಗ್ಟನ್ ಮತ್ತು ಚಾಹಲ್ ಅವರಲ್ಲಿ ಒಬ್ಬರಿಗೆ ವಿಶ್ರಾಂತಿ ಕೊಟ್ಟು, ಯುವ ಸ್ಪಿನ್ನರ್ ರವಿ ಬಿಷ್ಣೋಯಿಗೆ ಅವಕಾಶ ಕೊಡುವ ಸಾಧ್ಯತೆಯೂ ಇದೆ. ಮಧ್ಯಮವೇಗಿ ಆವೇಶ್ ಖಾನ್ ಕೂಡ ಪದಾರ್ಪಣೆಗಾಗಿ ಕಾದಿದ್ದಾರೆ.ವಿಂಡೀಸ್ ತಂಡದ ಪ್ರಮುಖ ಬ್ಯಾಟ್ಸ್‌ಮನ್‌ಗಳಾದ ಕೀರನ್ ಪೊಲಾರ್ಡ್, ಜೇಸನ್ ಹೋಲ್ಡರ್, ಬ್ರೆಂಡನ್ ಕಿಂಗ್, ನಿಕೊಲಸ್ ಪೂರನ್ ಅವರು ತಮ್ಮ ಸಾಮರ್ಥ್ಯಕ್ಕೆ ತಕ್ಕ ಆಟವಾಡಿದರೆ ಉತ್ತಮ ಮೊತ್ತ ಗಳಿಸಲು ಸಾಧ್ಯವಾಗುತ್ತದೆ. ಕೆಮರ್ ರೋಚ್ ಮತ್ತು ಅಲ್ಜರಿ ಜೋಸೆಫ್ ಅವರು ಇರುವ ಬೌಲಿಂಗ್ ಪಡೆಯು ಬ್ಯಾಟಿಂಗ್ ಪಡೆಗೆ ಸವಾಲೊಡ್ಡಬಲ್ಲದು.

ಬಲಾಬಲ	
ಪಂದ್ಯಗಳು	135
ಭಾರತ ಜಯ	66
ವೆಸ್ಟ್ ಇಂಡೀಸ್ ಜಯ	63
ಟೈ	2
ಫಲಿತಾಂಶವಿಲ್ಲ	4

ಪಂದ್ಯ ಆರಂಭ: ಮಧ್ಯಾಹ್ನ 1.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್

ಭಾರತ ತಂಡದ ಶಿಖರ್ ಧವನ್ ಮತ್ತು ಕೆ.ಎಲ್. ರಾಹುಲ್ ಓಟದ ಅಭ್ಯಾಸ ನಡೆಸಿದರು. ನಾಯಕ ರೋಹಿತ್ ಶರ್ಮಾ ಮತ್ತು ಕೋಚ್ ರಾಹುಲ್ ದ್ರಾವಿಡ್ ಇದ್ದರು –ಪಿಟಿಐ ಚಿತ್ರ

ಬೆಂಗಾಲ್–ಡೆಲ್ಲಿ ಪಂದ್ಯ ಟೈ

ಬೆಂಗಳೂರು: ಮಣಿಂದರ್ ಸಿಂಗ್ ಮತ್ತು ನವೀನಕುಮಾರ್ ಅವರ ಸಮಬಲದ ಹೋರಾಟದ ಫಲವಾಗಿ ಬೆಂಗಾಲ್ ವಾರಿಯರ್ಸ್ ಮತ್ತು ದಬಂಗ್ ಡೆಲ್ಲಿ ನಡುವಣ ಪಂದ್ಯವು ಟೈ ಆಯಿತು.

ವೈಟ್‌ಫೀಲ್ಡ್‌ನಲ್ಲಿರುವ ಗ್ರ್ಯಾಂಡ್ ಶೆರಟಾನ್ ಹೋಟೆಲ್‌ನಲ್ಲಿ ನಡೆಯುತ್ತಿರುವ ಪ್ರೊ ಕಬಡ್ಡಿ ಟೂರ್ನಿಯಲ್ಲಿ ಗುರುವಾರ ಬೆಂಗಾಲ್ ವಾರಿಯರ್ಸ್ ಮತ್ತು ದಬಂಗ್ ಡೆಲ್ಲಿ ನಡುವಣ ಪಂದ್ಯ 39–39ರಿಂದ ಟೈ ಆಯಿತು. ಅರ್ಧವಿರಾಮದ ವೇಳೆಗೆ 19–18ರಿಂದ ಡೆಲ್ಲಿ ಅಲ್ಪ ಮುನ್ನಡೆ ಗಳಿಸಿತು. ವಿರಾಮದ ನಂತರ ಎರಡೂ ಬಣಗಳ ಹೋರಾಟ ಮತ್ತಷ್ಟು ರಂಗೇ ರಿತು. ಪ್ರತಿಯೊಂದು ಅಂಕಗಳಿಸು ವಲ್ಲಿಯೂ ಆಟಗಾರರು ಸಮಬಲ ಸಾಧಿಸಿದರು.

ಬೆಂಗಾಲ್ ತಂಡದ ನಾಯಕ ಮಣಿಂದರ್ ಸಿಂಗ್ ಮತ್ತು ಡೆಲ್ಲಿ ತಂಡದ ರೇಡರ್ ತಲಾ 16 ಅಂಕಗಳನ್ನು ಗಳಿಸಿದರು.

ಇನ್ನೊಂದು ಪಂದ್ಯದಲ್ಲಿ ರೇಡರ್ ಗುಮಾನ್ ಸಿಂಗ್ (13) ಅವರ ಅಮೋಘ ಆಟದ ಬಲದಿಂದ ಪಟ್ನಾ ಪೈರೆಟ್ಸ್ 43–26 ರಿಂದ ಪುಣೇರಿ ಪಲ್ಟನ್ ವಿರುದ್ಧ ಗೆದ್ದಿತು.

ಪಟ್ನಾದ ಸಚಿನ್ (6) ಮತ್ತು ಶುಭಂ ಶಿಂಧೆ (4) ಉತ್ತಮ ಆಟವಾಡಿದರು. ಪುಣೇರಿ ತಂಡದ ಅಸ್ಲಂ ಇನಾಮದಾರ್ (9) ಮತ್ತು ಮೋಹಿತ್ ಗೋಯತ್ (6) ಅಂಕ ಗಳಿಸಿದರು.

ಶುಕ್ರವಾರ ನಡೆಯುವ ಮೊದಲ ಪಂದ್ಯದಲ್ಲಿ ಹರಿಯಾಣ ಸ್ಟೀಲರ್ಸ್– ಪುಣೇರಿ ಪಲ್ಟನ್ ಮತ್ತು 2ನೇ ಪಂದ್ಯದಲ್ಲಿ ಜೈಪುರ ಪಿಂಕ್ ಪ್ಯಾಂಥರ್ಸ್– ಯುಪಿ ಯೋಧಾ ಸೆಣಸಲಿವೆ.

ಎಐಎಸ್‌ಸಿಡಿ–ಎನ್‌ಆರ್‌ಎಐ ಒಡಂಬಡಿಕೆ

ನವದೆಹಲಿ (ಪಿಟಿಐ): ಭಾರತ ರಾಷ್ಟ್ರೀಯ ರೈಫಲ್ ಸಂಸ್ಥೆ (ಎನ್‌ಆರ್‌ಎಐ) ಮತ್ತು ಶ್ರವಣ ಮಾಂದ್ಯ ಕ್ರೀಡಾ ಕೌನ್ಸಿಲ್ (ಎಐಎಸ್‌ಸಿಡಿ) ಗುರುವಾರ ಒಡಂಬಡಿಕೆ ಮಾಡಿಕೊಂಡಿವೆ.

ಶ್ರವಣಮಾಂದ್ಯ ಕ್ರೀಡಾಪಟುಗಳಿಗೆ ಶೂಟಿಂಗ್ ಸ್ಪರ್ಧೆಗಳನ್ನು ಆಯೋಜಿಸಲಾಗುತ್ತದೆ.

ಏಳು ಆಟಗಾರರ ಶೋಧದಲ್ಲಿ ಡೆಲ್ಲಿ ಕ್ಯಾಪಿಟಲ್ಸ್

ಬೆಂಗಳೂರು (ಪಿಟಿಐ): ನಾಲ್ವರು ಪ್ರಮುಖ ಆಟಗಾರರನ್ನು ತಂಡದಲ್ಲಿ ಉಳಿಸಿಕೊಂಡಿದ್ದೇವೆ. ಇನ್ನೂ ಏಳು ಪ್ರತಿಭಾವಂತ ಆಟಗಾರರನ್ನು ಗುರಿ ಇದೆ. ತಂಡವನ್ನು ಪರಿಪೂರ್ಣವಾಗಿ ಬಲಿಷ್ಠಗೊಳಿಸಲು ಮೆಗಾ ಹರಾಜಿನಲ್ಲಿ ಆಯ್ಕೆ ಮಾಡಲಾಗುವುದು ಎಂದು ಡೆಲ್ಲಿ ಕ್ಯಾಪಿಟಲ್ಸ್ ತಂಡದ ಸಹಾಯಕ ಕೋಚ್ ಪ್ರವೀಣ ಆಮ್ರೆ ಹೇಳಿದರು.

ಪ್ರವೀಣ ಆಮ್ರೆ

ಇದೇ 12 ಮತ್ತು 13ರಂದು ನಗರದಲ್ಲಿ ಐಪಿಎಲ್ ಟೂರ್ನಿಯ ಆಟಗಾರರ ಹರಾಜು ಪ್ರಕ್ರಿಯೆ ನಡೆಯಲಿದೆ. ಡೆಲ್ಲಿ ತಂಡವು ವಿಕೆಟ್‌ಕೀಪರ್ ರಿಷಭ್ ಪಂತ್, ಸ್ಪಿನ್ನರ್ ಅಕ್ಷರ್ ಪಟೇಲ್, ಆರಂಭಿಕ ಬ್ಯಾಟರ್ ಪೃಥ್ವಿ ಶಾ ಮತ್ತು ದಕ್ಷಿಣ ಆಫ್ರಿಕಾ ವೇಗಿ ಎನ್ರಿಚ್ ನಾಕಿಯಾ ಅವರನ್ನು ಉಳಿಸಿಕೊಂಡಿದೆ.

‘ಸಮತೋಲನವಾಗಿರುವ ತಂಡವಿರಬೇಕೆಂಬ ಆಶಯ ನಮ್ಮಂತಹ ಕೋಚ್‌ಗಳಿಗಿರುತ್ತದೆ. ನಾವು ಪ್ರಮುಖ ನಾಲ್ವರನ್ನು ಉಳಿಸಿಕೊಂಡಿರುವುದು ಉತ್ತಮ ಕೆಲಸವಾಗಿದೆ. ಅದರಲ್ಲಿ ಒಬ್ಬ ಆಲ್‌ರೌಂಡರ್ ಇದ್ದಾರೆ. ಇದರಿಂದಾಗಿ ಉತ್ತಮ ಅಡಿಪಾಯ ಹಾಕಿದಂತಾಗಿದೆ’ ಎಂದು ಆಮ್ರೆ ಹೇಳಿದರು.

‘ಈಗ ಉತ್ತಮವಾಗಿರುವ ಏಳು ಆಟಗಾರರನ್ನು ಆಯ್ಕೆ ಮಾಡಬೇಕಿದೆ. ಪ್ರಾಮಾಣಿಕವಾಗಿ ಹೇಳುವುದಾದರೆ ಇದು ನಮ್ಮ ಗುರಿಯೂ ಹೌದು ಮತ್ತು ಸವಾಲು ಕೂಡ’ ಎಂದಿದ್ದಾರೆ.